ಮಾನವಿಕ ಕರ್ಣಾಟಕ

ಸಂಪುಟ ೪ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೪

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೧೨ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೪ ಸಂಚಿಕೆ ೩

೧೫

ನೇ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೪

MANAVIKA KARNATAKA, Kannada quarterly of the University of Mysore. Volume 4, Number 3, May 1974. Edited by H. S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಈ ಸಂಚಿಕೆಯ ಲೇಖನಗಾರರು

೧	ಡಾ. ಎಸ್. ಎಸ್. ವೀರಪ್ಪ	ಮೈಸೂರಿನ ಶಿಕ್ಷಣ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವಕೋಶದ ಜೀವಶಾಸ್ತ್ರ ವಿಭಾಗದ ಗೌರವ ಸಂಪಾದಕರು
೨	ಕೆ. ಮೊಹಮ್ಮದ್ ಶರೀಫ್	ಶಾಸನ ಸಹಾಯಕರು, ಎಫಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
೩	ಮು. ರಾ. ದೇವಪ್ಪ	ಸಂಶೋಧಕರು, ರಾಜ್ಯಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ
೪	ಬಿ. ನಾಗಪ್ಪ	ಅಧ್ಯಾಪಕರು, ಗ್ರಂಥಾಲಯ ವಿಜ್ಞಾನ ವಿಭಾಗ, ಮಾನಸಗಂಗೋತ್ರಿ
೫	ಡಾ. ಎಸ್. ಗುರುರಾಜಾಚಾರ್	ರೀಡರ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಮುಖ್ಯರು, ಮಹಾರಾಜ ಕಾಲೇಜು, ಮೈಸೂರು
೬	ಡಾ. ಆಂಡ್ರ್ಯೂ ಎಂ. ಕಾಮಾರ್ಕ್	ಅಂತರರಾಷ್ಟ್ರೀಯ ಬ್ಯಾಂಕಿಂಗ್ ತಜ್ಞರು, ವಾಷಿಂಗ್ಟನ್, ಡಿ.ಸಿ., ಅಮೆರಿಕ ಸಂ.ಸಂ.
೭	ಬಿ. ಎಂ. ಕುಮಾರಸ್ವಾಮಿ	ಅಧ್ಯಾಪಕರು, ಡಿ. ವಿ. ಎಸ್. ಕಾಲೇಜು, ಶಿವಮೊಗ್ಗ
೮	ಟಿ. ಎಸ್. ಸೂರ್ಯನಾರಾಯಣ	ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸಗಂಗೋತ್ರಿ
೯	ಡಾ. ಕೆ. ಉಮಾಪತಿ ಶೆಟ್ಟಿ	೫೮೯, ೧೩ನೆಯ ಮುಖ್ಯರಸ್ತೆ, ಸರಸ್ವತಿಪುರ, ಮೈಸೂರು
೧೦	ಡಾ. ಆ. ನೇ. ಉಪಾಧ್ಯೆ	ಪ್ರಾಧ್ಯಾಪಕರು, ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಮಾನಸಗಂಗೋತ್ರಿ
೧೧	ಸೀತಾರಾಮ ಜಾಗೀರ್‌ದಾರ್	ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
೧೨	ವಿ. ಎನ್. ಶೇಷಗಿರಿರಾವ್	ತತ್ತ್ವಶಾಸ್ತ್ರ ಉಪನ್ಯಾಸಕರು, ಮಹಾರಾಜ ಕಾಲೇಜು, ಮೈಸೂರು
೧೩	ಎಸ್. ನಾರಾಯಣಮೂರ್ತಿ	ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಮಲ್ಲಿಕಾ, ೩೫೭-ಬಿ, ಮಾಗಡಿ ಕಾರ್ಡ್ ರಸ್ತೆ, ಬೆಂಗಳೂರು ೫೬೦೦೪೦
೧೪	ಎಚ್. ಆರ್. ರಘುನಾಥ ಭಟ್	ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಹಾರಾಜ ಕಾಲೇಜು, ಮೈಸೂರು
೧೫	ಎಸ್. ವಿ. ಸ್ವರ್ಣಲತಾ	ನವೋದಯ ಸಾಹಿತ್ಯ ಮಂದಿರ, ೨೫ ಕಾಂತರಾಜ ಅರಸು ರಸ್ತೆ, ಮೈಸೂರು ೫೭೦೦೦೪
೧೬	ಡಾ. ಬಾ. ರಾ. ಗೋಪಾಲ್	ಶಾಸನತಜ್ಞರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
೧೭	ಡಾ. ಕೆ. ಪದ್ಮ ಉಮಾಪತಿ	ಪ್ರಾಧ್ಯಾಪಕರು, ಗೃಹವಿಜ್ಞಾನ ವಿಭಾಗ, ಮಾನಸ ಗಂಗೋತ್ರಿ

ಡಾ. ಎನ್. ಎಸ್. ವೀರಪ್ಪ

ರಾಜಾ ರಾಮಮೋಹನ ರಾಯ್

ಭಾರತದಲ್ಲಿ ಪಾಶ್ಚಾತ್ಯ ಶಿಕ್ಷಣ ಪದ್ಧತಿಯನ್ನು ನೆಲೆಗೊಳಿಸಿದ್ದರಿಂದ ಒಂದು ದೇಶದಲ್ಲಿ ಅನ್ಯದೇಶದ ಶಿಕ್ಷಣ ಪದ್ಧತಿಯನ್ನು ತಂದು ನಾಟಿಹಾಕುವುದರಿಂದ ಆಗಬಹುದಾದ ದುಷ್ಪರಿಣಾಮಗಳೇನೇ ಆಗಿದ್ದರೂ ಅದರಿಂದಾಗಿರತಕ್ಕ ಸತ್ಪರಿಣಾಮಗಳನ್ನೂ ಪರಿಗಣಿಸಬೇಕಾಗುತ್ತದೆ. ಆ ಪದ್ಧತಿ ಆಚರಣೆಗೆ ಬಂದ ಮೇಲೆ ಭಾರತದ ಆದ್ಯಂತ ಇಂಗ್ಲಿಷ್ ಭಾಷೆ ಶಿಕ್ಷಣಮಾಧ್ಯಮವೂ ಸಂಪರ್ಕಭಾಷೆಯೂ ಆಗಿ ಬಹುಬೇಗ ಪ್ರಚಾರಕ್ಕೆ ಬಂದು ದೇಶದಲ್ಲಿ ಅಗತ್ಯವೆನಿಸಿದ್ದ ಒಗ್ಗಟ್ಟನ್ನೂ ಅಖಂಡತ್ವವನ್ನೂ ಮೂಡಿಸಿತು. ಅಂದಿಗಾಗಲೆ ಪಾಶ್ಚಾತ್ಯ ಜನತೆ ಸಾಧಿಸಿದ್ದ ವಿಜ್ಞಾನ, ತತ್ವಶಾಸ್ತ್ರ, ವೈದ್ಯವಿದ್ಯೆ, ಇಂಜನಿಯರಿಂಗ್, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮುಂತಾದವುಗಳ ಪರಿಚಯವಾಗಿ ಜನತೆಯಲ್ಲಿ ನೂತನ ವಿಚಾರದೃಷ್ಟಿಯೂ ವಾಸ್ತವಿಕ ರೀತಿಯ ಆಲೋಚನಾ ಸರಣಿಯೂ ಅಂಕುರಿಸಿದುವು. ಇದರ ಫಲವಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ, ವೈಜ್ಞಾನಿಕ ಮುಂತಾದ ಜೀವನಕ್ಷೇತ್ರಗಳಲ್ಲಿ ಸುಧಾರಣೆಗಳು ಆರಂಭವಾದುವು. ಇಂಗ್ಲಿಷ್ ಭಾಷೆಯ ಪ್ರಚಾರ ದೇಶದಲ್ಲಿ ಒಗ್ಗಟ್ಟನ್ನು ಮೂಡಿಸಿದುದರ ಜೊತೆಗೆ ಇಂಗ್ಲಿಷರ ಆಳ್ವಿಕೆಯನ್ನು ವಿರೋಧಿಸುವ ಸಾಹಸವನ್ನೂ ಆವೇಶವನೂ ದೊರಕಿಸಿಕೊಟ್ಟಿತು. ಮುಂದೆ, ಪರಕೀಯ ಆಕ್ರಮಣವನ್ನು ಕೊನೆಗಾಣಿಸಿ ವಿಮುಕ್ತಿ ಪಡೆಯಲು ಅಗತ್ಯವೆನಿಸಿದ್ದ ದಿಟ್ಟತನವನ್ನೂ ಮಾರ್ಗವನ್ನೂ ತೋರಿಸಿಕೊಟ್ಟಿತು. ದೇಶೀಯ ಭಾಷೆಗಳು ಇಂಗ್ಲಿಷ್ ಸಾಹಿತ್ಯದಿಂದ ಸ್ಫೂರ್ತಿ ಪಡೆದು ನೂತನ ರೀತಿಯ ಸಾಹಿತ್ಯ ರಚಿಸಿಕೊಂಡು ಪರಿಪುಷ್ಟಿಗೊಂಡು ಅಭಿವೃದ್ಧಿ ಹೊಂದಲು ಅವಕಾಶವಾಯಿತು. ಇಷ್ಟೆಲ್ಲ ಪರಿವರ್ತನೆಗೆ ಎಡೆಮಾಡಿಕೊಟ್ಟ ಇಂಗ್ಲಿಷ್ ಶಿಕ್ಷಣ ಪದ್ಧತಿಯನ್ನು ಅನುಷ್ಠಾನಕ್ಕೆ ತರುವಾಗ ದೇಶದಲ್ಲಿ ಸಂಪ್ರದಾಯಶರಣರ ಪ್ರತಿಭಟನೆ ಪ್ರಬಲವಾಗಿಯೆ ಇತ್ತು. ಜನತೆಯ ಬೆಂಬಲವಿಲ್ಲದೆ ಅದನ್ನು ಆಚರಣೆಗೆ ತರುವುದು ಸರ್ಕಾರಕ್ಕೆ ಅಸಾಧ್ಯವೆನಿಸಿತ್ತು. ಅಂಥ ಸಮಯದಲ್ಲಿ ಇಂಗ್ಲಿಷ್ ಮಾಧ್ಯಮದ ಮೂಲಕ ಪಾಶ್ಚಾತ್ಯ ಶಿಕ್ಷಣವನ್ನು ಆಚರಣೆಗೆ ತರುವ ನೀತಿಗೆ ಜನತೆಯ ಬೆಂಬಲವನ್ನು ದೊರಕಿಸಿಕೊಟ್ಟ ಸುಧಾರಕರಲ್ಲಿ ಇಂದಿಗೆ ಎರಡು ಶತಮಾನಗಳ ಹಿಂದೆ ಜನ್ಮವೆತ್ತಿದ ರಾಜಾ ರಾಮ ಮೋಹನ ರಾಯ್ ಅಗ್ರಗಣ್ಯ.

ರಾಮಮೋಹನ ರಾಯ್ ಬಂಗಾಳದ ಖಿನಕುಲ್ ಕೃಷ್ಣಗರ್ (ಹೂಗ್ಲಿ) ಬಳಿಯ ರಾಧಾನಗರದಲ್ಲಿ ೧೭೭೪ರಲ್ಲಿ ಒಂದು ವೈದಿಕ ಬ್ರಾಹ್ಮಣ ಕುಟುಂಬದಲ್ಲಿ ಜನ್ಮವೆತ್ತಿದ.* ಅವನ ಮುತ್ತಾತ, ಕೃಷ್ಣಚಂದ್ರ ಬಂಗಾಳದ ನವಾಬನಿಂದ ರಾಯ್‌ರಾಯನ್ ಎಂಬ ಬಿರುದನ್ನು ಪಡೆದ. ಅಂದಿನಿಂದ ಈ ಮನೆತನದವರು ತಮ್ಮ ಹೆಸರಿನಮುಂದೆ ರಾಯ್ ಎಂಬ ಉಪನಾಮವನ್ನು ಧರಿಸತೊಡಗಿದರು. ಮೂರು ನಾಲ್ಕು ತಲೆಮಾರುಗಳಿಂದ ಆ ಮನೆತನ ಶ್ರೀಮಂತಿಕೆಗೆ ಹೆಸರಾಗಿದ್ದು ಪ್ರಭಾವಶಾಲಿಯಾಗಿತ್ತು. ಅವನ

---

*ರಾಮಮೋಹನ 1772ರ ಮೇ 22 ರಂದು ಜನಿಸಿದನೆಂದು ಅವನ ಕುಟುಂಬದ ಮೂಲಗಳು ಹೇಳುವುದುಂಟು.

ತಾತ ಮಹಬುತ್ ಜಂಗನ ಕಾಲದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಆಡಳಿತಾಧಿಕಾರಿಯಾಗಿದ್ದ. ತಂದೆ ರಮಾಕಾಂತ ದೊಡ್ಡ ಜಮೀನ್ದಾರಿ ಹೊಂದಿದ್ದ. ತಾಯಿ ತಾರಿಣೀದೇವಿ ವಿಷ್ಣುಭಕ್ತೆಯಾಗಿದ್ದು ಮಡಿವಂತಿಕೆಗೆ ಹೆಸರಾಗಿದ್ದಳು. ಅದರ ಫಲವಾಗಿ ರಾಮಮೋಹನ ಬಾಲ್ಯದಲ್ಲಿ ಆಚಾರವಂತನಾಗಿದ್ದು ಧಾರ್ಮಿಕ ವಾತಾವರಣದಲ್ಲಿ ಬೆಳೆದ. ಸ್ವಗ್ರಾಮದಲ್ಲಿ ಅವನು ಬಂಗಾಳಿಯನ್ನು ಕಲಿತು ಅನಂತರ ಪಾಟ್ನದಲ್ಲಿ ಪಾರಸಿ ಮತ್ತು ಅರಬ್ಬೀ ಭಾಷೆಗಳನ್ನೂ ವಾರಾಣಸಿಯಲ್ಲಿ ಸಂಸ್ಕೃತವನ್ನೂ ಅಧ್ಯಯನ ಮಾಡಿದ. ಮುಂದೆ ಗೆಳೆಯ ಆ್ಯಡಮ್ಮ್‌ನಿಂದ ಗ್ರೀಕ್, ಲ್ಯಾಟಿನ್ ಮತ್ತು ಹೀಬ್ರೂ ಭಾಷೆಗಳನ್ನು ಪರಿಚಯ ಮಾಡಿಕೊಂಡ. ತನ್ನ ೨೨ನೆಯ ವಯಸ್ಸಿನಲ್ಲಿ ತನ್ನ ಆಶ್ರಯದಾತನೆನಿಸಿದ್ದ ಜಾನ್ ಡಿಗ್ಬಿಯ ಸಹಾಯದಿಂದ ಇಂಗ್ಲಿಷನ್ನೂ ಕಲಿತ. ತೀರ ಚಿಕ್ಕಂದಿನಲ್ಲೆ ಅವನಿಗೆ ವಿವಾಹವಾಗಿತ್ತು. ಆದರೆ ಪತ್ನೀ ವಿಯೋಗವಾಗಿ ಅವನಿಗೆ ತಂದೆ ಮತ್ತೆ ಎರಡು ಮದುವೆಗಳನ್ನು ಮಾಡಿದ. ಅವನ ಆ ಪತ್ನಿಯರಿಬ್ಬರೂ ಘೋಷಾ ಪದ್ಧತಿಯನ್ನು ಅನುಸರಿಸುತ್ತಿದ್ದು ಸ್ವಗ್ರಾಮದಲ್ಲೆ ವಾಸಿಸುತ್ತಿದ್ದರು.

ರಾಮಮೋಹನ ಧಾರ್ಮಿಕ ದೃಷ್ಟಿಯ ಆಚಾರವಂತನಾಗಿದ್ದರೂ ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಪ್ರಚಾರದಲ್ಲಿದ್ದ ಮೌಢ್ಯವನ್ನೂ ಅರ್ಥಹೀನ ನಡವಳಿಕೆಗಳನ್ನೂ ಒಪ್ಪುತ್ತಿರಲಿಲ್ಲ. ೧೮೦೩ರಲ್ಲಿ ಒಂದು ಪುಸ್ತಕವನ್ನು ಪ್ರಕಟಿಸಿ, ಅದರಲ್ಲಿ ವಿಗ್ರಹಾರಾಧನೆಯನ್ನು ಖಂಡಿಸಿ ನಿಷ್ಠೆಯ ಏಕೇಶ್ವರವಾದವನ್ನು ಎತ್ತಿಹಿಡಿದ. ಇದರ ಫಲವಾಗಿ ಶುದ್ಧ ವೈದಿಕ ಪಂಥಕ್ಕೆ ಸೇರಿದ್ದ ಅವನ ಕುಟುಂಬದವರು ಅವನನ್ನು ದೂರವಿಡಬೇಕಾಯಿತು.

ರಾಮಮೋಹನನಿಗೆ ಪಿತ್ರಾರ್ಜಿತ ಆಸ್ತಿಯ ಬಹುಭಾಗ ದೊರಕಿತು. ೮೨ ಭಿಗಾ ಬತ್ತದ ಗದ್ದೆಯೂ ಕಲ್ಕತ್ತದಲ್ಲಿನ ಒಂದು ಮನೆಯೂ ಅವನ ಭಾಗಕ್ಕೆ ಬಂದುವು. ತನ್ನ ಆಸ್ತಿಪಾಸ್ತಿಗಳನ್ನು ದಕ್ಷತೆಯಿಂದ ನೋಡಿಕೊಳ್ಳುತ್ತ ತಾನೂ ಹೆಚ್ಚಿನ ಭೂಮಿಯನ್ನು ಕೊಂಡುದಲ್ಲದೆ ಕಲ್ಕತ್ತದಲ್ಲಿ ಮತ್ತೊಂದು ಮನೆಯನ್ನು ಕೊಂಡು ಬಾಡಿಗೆಗೆ ಕೊಟ್ಟಿದ್ದ.

೧೮೦೧ರಲ್ಲಿ ರಾಮಮೋಹನನಿಗೆ ಜಾನ್ ಡಿಗ್ಬಿಯೆಂಬ ಸಿವಿಲ್ ಅಧಿಕಾರಿಯ ಪರಿಚಯವಾಗಿ ೧೮೦೫ರಿಂದ ೧೮೧೪ರ ವರೆಗೆ ಅವನ ಬಳಿ ಕೆಲಸಕ್ಕೆ ಸೇರಿಕೊಂಡು ಅವನಿಂದ ಇಂಗ್ಲಿಷ್ ಭಾಷೆಯನ್ನು ಕಲಿತ. ಅನಂತರ ಕಲ್ಕತ್ತದಲ್ಲಿ ಎರಡು ಮನೆಗಳನ್ನು ಕೊಂಡುಕೊಂಡು ಅಲ್ಲೆ ನೆಲಸಿದ. ೧೮೧೫ರಲ್ಲಿ ಅಲ್ಲಿ ಆತ್ಮೀಯ ಸಭೆಯೆಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಆಶ್ರಯದಲ್ಲಿ ಹಿಂದೂಧರ್ಮ ಮತ್ತು ಸಮಾಜಗಳಲ್ಲಿ ಆಗಬೇಕಾದ ಸುಧಾರಣೆಗಳ ಬಗ್ಗೆ ಪ್ರಚಾರ ಮಾಡುತ್ತಿದ್ದ. ವೇದಾಂತಸಾರ ಮತ್ತು ವೇದಾಂತ ಗ್ರಂಥ ಎಂಬೆರಡು ಕೃತಿಗಳನ್ನು ಪ್ರಕಟಿಸಿದ. ಮುಂದಿನ ಇನ್ನೆರಡು ವರ್ಷಗಳಲ್ಲಿ ಬಂಗಾಳಿ ಭಾಷೆಯಲ್ಲಿ ಉಪನಿಷತ್ತುಗಳನ್ನು ಕುರಿತ ವಿಮರ್ಶೆಗಳನ್ನು ಪ್ರಕಟಿಸಿದ. ಅನಂತರ ೧೮೧೮ರಲ್ಲಿ ಅಂದು ಪ್ರಚಾರದಲ್ಲಿದ್ದ ಕ್ರೂರ ಸತಿ ಅಥವಾ ಸಹಗಮನ ಪದ್ಧತಿಯನ್ನು ತಪ್ಪಿಸಬೇಕೆಂದು ಪ್ರತಿಪಾದಿಸಿ ಮತ್ತೊಂದು ಗ್ರಂಥವನ್ನು ಪ್ರಕಟಿಸಿದ. ೧೮೨೦ರಲ್ಲಿ ಕ್ರಿಸ್ತನ ಉಪದೇಶಗಳ ನೈತಿಕ ದೃಷ್ಟಿಯನ್ನು ವಿಮರ್ಶಿಸುತ್ತ ಟ್ರಿನಿಟಿ ಮತ್ತು ಟ್ರಾನ್ಸ್‌ಸಬ್‌ಸ್ಟ್ಯಾನ್ಸಿಯೇಷನ್ ತತ್ತ್ವಗಳನ್ನು ವಿರೋಧಿಸಿದ್ದ. ಅಂದಿಗಾಗಲೆ ವಿಗ್ರಹಾರಾಧನೆಯನ್ನು ಖಂಡಿಸಿದ್ದರಿಂದ ಹಿಂದುಗಳು ಅವನ ಮೇಲೆ ಆಕ್ರೋಶದ ಮಳೆಗರೆಯುತ್ತಿದ್ದರು. ಈಗ ಕ್ರೈಸ್ತರೂ ಅವನ ವಾದದ ಬಗ್ಗೆ ಅಸಂತೃಪ್ತಿ ಪಟ್ಟುಕೊಂಡು ವಿರೋಧಿಸಲಾರಂಭಿಸಿದರು. ಆದ್ದರಿಂದ ಅವನು ಎರಡು ಮುಖಗಳಲ್ಲಿ ವಿರುದ್ಧ ಪಂಥಗಳನ್ನು ಎದುರಿಸುವ ವಾದಭೂಮಿಗೆ ಇಳಿಯಬೇಕಾಯಿತು.

ವಿಗ್ರಹಾರಾಧನೆಯನ್ನು ಖಂಡಿಸಿದ್ದರೂ ರಾಮಮೋಹನ ಹಿಂದೂಧರ್ಮವನ್ನೆಂದೂ ದ್ವೇಷಿಸಿದವನಲ್ಲ. ಅವನು ಯಜ್ಞೋಪವೀತವನ್ನು ಧರಿಸಿದ್ದ. ಅಲ್ಲದೆ ಬಾಲ್ಯದಿಂದಲೂ ಭಾಗವತ ಪುರಾಣದಿಂದ ಒಂದು ಅಧ್ಯಾಯವನ್ನು ಓದಿದಲ್ಲದೆ ನೀರನ್ನೂ ಕುಡಿಯುತ್ತಿರಲಿಲ್ಲವೆಂದು ಹೇಳಲಾಗಿದೆ. ಆದರೆ ರೂಢಮೂಲವಾಗಿ ಆಚರಣೆಗೆ ಬಂದುಬಿಟ್ಟಿದ್ದ ಕೆಲವು ಮೂಢನಂಬಿಕೆಗಳನ್ನೂ ಕ್ರೂರಸಂಪ್ರದಾಯಗಳನ್ನೂ ಅವನು ವಿರೋಧಿಸುತ್ತಿದ್ದ. ಅವನ್ನು ತೊಡೆದುಹಾಕಿ ಹಿಂದೂ ಸಮಾಜವನ್ನೂ ಧರ್ಮವನ್ನೂ ಸುಧಾರಿಸಬೇಕೆಂಬ ಉತ್ಕಟಾಕಾಂಕ್ಷೆ ಅವನದಾಗಿತ್ತು. ಅದಕ್ಕಾಗಿ ಪ್ರಾಚೀನ ಪವಿತ್ರ

ಗ್ರಂಥಗಳೆನಿಸಿದ ವೇದ ಉಪನಿಷತ್ತುಗಳಿಂದ ಆಧಾರಗಳನ್ನು ದೊರಕಿಸಿಕೊಂಡೇ ತನ್ನ ವಾದವನ್ನು ಬಲಪಡಿಸುತ್ತಿದ್ದ. ಸಂಸ್ಕೃತ, ಪಾರಸಿ, ಹಿಂದಿ, ಬಂಗಾಳಿ, ಇಂಗ್ಲಿಷ್ ಈ ವಿವಿಧ ಭಾಷೆಗಳಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಗ್ರಂಥಗಳನ್ನೂ ಪ್ರಚಾರ ಲೇಖನಗಳನ್ನೂ ಬರೆದು ಪ್ರಕಟಿಸಿದ. ಅವೆಲ್ಲ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಯ ಬಗ್ಗೆ ತನ್ನ ವಾದವನ್ನು ಬಲಪಡಿಸುವುದಕ್ಕಾಗಿ ಬರೆದವಾಗಿದ್ದರೂ ವಿವಿಧ ಭಾಷೆಗಳಲ್ಲಿ ಅವನಿಗಿದ್ದ ಪಾಂಡಿತ್ಯವನ್ನೂ ಪ್ರಾಚೀನ ಕೃತಿಗಳಲ್ಲಿ ಅವನು ನಡೆಸಿದ್ದ ಆಳವಾದ ಅಧ್ಯಯನವನ್ನೂ ಸೂಚಿಸುವುದಲ್ಲದೆ ಅವನ ವಾದಸರಣಿಯ ಸಫಲತೆಯನ್ನೂ ವ್ಯಕ್ತಪಡಿಸತಕ್ಕವಾಗಿವೆ.

ತಾನು ತಳೆದಿದ್ದ ಧಾರ್ಮಿಕ ದೃಷ್ಟಿಗೆ ಸಂಬಂಧಿಸಿದಂತೆ ಚಿಂತನ ಮಂಥನಗಳಿಗೂ ಪ್ರಚಾರ ಪ್ರಕಟಣೆಗಳಿಗೂ ತತ್ವಾನುಷ್ಠಾನಕ್ಕೂ ಅನುಕೂಲಿಸುವ ಉದ್ದೇಶದಿಂದ ರಾಮಮೋಹನ ೧೮೨೮ರಲ್ಲಿ ಕಲ್ಕತ್ತದಲ್ಲಿ ಬ್ರಹ್ಮಸಮಾಜವೆಂಬ ಸಂಸ್ಥೆಯನ್ನು ಸ್ಥಾಪಿಸಿದ. ಅದಕ್ಕಾಗಿ ೧೮೩೦ರಲ್ಲಿ ಪ್ರತ್ಯೇಕ ಮಂದಿರ ವೊಂದನ್ನು ತನ್ನ ಹಣದಿಂದಲೆ ಕಟ್ಟಿಸಿ ಅದನ್ನು ಧರ್ಮದರ್ಶಿಗಳಿಗೆ ಒಪ್ಪಿಸುವಾಗ ಅಲ್ಲಿ ಯಾವ ದೇವತೆಯ ವಿಗ್ರಹ ಅಥವಾ ಪ್ರತಿಮೆಯನ್ನು ಸ್ಥಾಪಿಸಕೂಡದೆಂದೂ ಪ್ರಾಣಿಬಲಿ ನರಬಲಿಗಳಿಗೆ ಸಂಬಂಧಿಸಿದ ಯಾವ ಚಿತ್ರಗಳನ್ನೂ ಇಡಲಾಗದೆಂದೂ ತನ್ನ ಇಷ್ಟಪತ್ರದಲ್ಲಿ ಸೇರಿಸಿದ್ದುದಲ್ಲದೆ ಅಲ್ಲಿ ಯಾವ ಧರ್ಮವನ್ನೇ ಆಗಲಿ ಖಂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಕೂಡದೆಂದು ಸೇರಿಸಿದ್ದ. ಹಿಂದೂಧರ್ಮದಲ್ಲಾಗಬೇಕಾದ ಸುಧಾರಣೆಗಳ ಸ್ವರೂಪವೂ ಅನ್ಯಧರ್ಮಗಳ ಬಗ್ಗೆ ಅವನಿಗಿದ್ದ ಸಹಿಷ್ಣುತೆಯೂ ಈ ಇಷ್ಟಪತ್ರದಲ್ಲಿ ವ್ಯಕ್ತಪಟ್ಟಿರುವುದನ್ನು ಕಾಣಬಹುದು. ಸಂಪ್ರದಾಯಬದ್ಧ ಹಿಂದೂಧರ್ಮೀಯರ ಮೇಲೆ ಈ ಸಂಸ್ಥೆ ಅಷ್ಟಾಗಿ ಪ್ರಭಾವ ಬೀರದಿದ್ದರೂ ರೂಢಮೂಲವಾಗಿ ಬಂದಿದ್ದ ಕೆಲವು ಮೌಢ್ಯ ದುರಾಚಾರಾದಿಗಳನ್ನು ನಿರ್ಮೂಲ ಮಾಡಲು ನೆರವಾಯಿತೆನ್ನಬಹುದು. ದೇವೇಂದ್ರನಾಥ ಟ್ಯಾಗೋರರಂಥ ಅನೇಕ ಖ್ಯಾತ ವ್ಯಕ್ತಿಗಳು ಬ್ರಹ್ಮಸಮಾಜದ ಸದಸ್ಯರಾಗಿದ್ದರು. ಭಾರತದ ಬೇರೆ ಬೇರೆ ಭಾಗಗಳಲ್ಲಿ ಪ್ರಾರ್ಥನಾ ಸಮಾಜ, ಆರ್ಯ ಸಮಾಜ ಮುಂತಾದ ವಿವಿಧ ಸಮಾಜಗಳ ಉದಯಕ್ಕೆ ಇದು ನಾಂದಿಯಾಯಿತೆನ್ನಬಹುದು.

ರಾಮಮೋಹನ ಪತ್ರಿಕೋದ್ಯಮಿಯಾಗಿಯೂ ಸೇವೆ ಸಲ್ಲಿಸಿದ. ೧೮೨೦ರಲ್ಲಿ ಮೀರತ್–ಉಲ್–ಅಕ್ಬರಿ ಎಂಬ ಪತ್ರಿಕೆಯನ್ನು ಆರಂಭಿಸಿ ಕೆಲಕಾಲ ನಡೆಸಿದ. ಅನಂತರ ೧೮೨೬ರಲ್ಲಿ ಸಂಪದ ಕೌಮುದಿ ಯೆಂಬ ಬಂಗಾಳಿ ಭಾಷೆಯ ಪತ್ರಿಕೆಯನ್ನು ಹೊರಡಿಸುತ್ತಿದ್ದ. ೧೮೨೯ರಲ್ಲಿ ಬೆಂಗಾಲ್ ಹೆರಾಲ್ಡ್ ಎಂಬ ಇಂಗ್ಲಿಷ್ ಪತ್ರಿಕೆಯನ್ನು ತನ್ನ ಸಂಪಾದಕತ್ವದಲ್ಲಿ ನಡೆಸುತ್ತಿದ್ದ. ಹಿಂದೂಧರ್ಮ ಮತ್ತು ಸಮಾಜಗಳಲ್ಲಿ ಆಗಬೇಕಾಗಿದ್ದ ಸುಧಾರಣೆಗಳ ಬಗ್ಗೆ ಅವುಗಳಲ್ಲಿ ಪ್ರಚಾರ ನಡೆಸುತ್ತಿದ್ದ. ೧೮೨೩ರಲ್ಲಿ ಸರ್ಕಾರ ವೃತ್ತಪತ್ರಿಕೆಗಳ ಮೇಲೆ ಹಾಕಿದ ನಿರ್ಬಂಧವನ್ನವನು ಬಲವಾಗಿ ಖಂಡಿಸಿ ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಮೊದಲಿಗನೆನಿಸಿದ.

ಅಂದು ಆಳರಸರು ಭಾರತೀಯರಿಗೂ ಬಿಳಿಯರಿಗೂ ತೋರುತ್ತಿದ್ದ ನ್ಯಾಯಪಕ್ಷಪಾತದ ಬಗ್ಗೆಯೂ ರಾಮಮೋಹನ ಪ್ರತಿಭಟಿಸಿ ಎಲ್ಲರಿಗೂ ನ್ಯಾಯಾಲಯ ಪಕ್ಷಪಾತವಿಲ್ಲದೆ ನ್ಯಾಯ ವನ್ನೊದಗಿಸುವ ಸಮಾನತೆಯ ದೃಷ್ಟಿಯನ್ನು ತಾಳಬೇಕೆಂದು ವಾದಿಸಿದ. ನ್ಯಾಯಾಲಯ ತನ್ನ ತೀರ್ಮಾನವನ್ನು ನೀಡುವ ಮುನ್ನ ನ್ಯಾಯದರ್ಶಿಗಳ ಅಭಿಪ್ರಾಯವನ್ನು ಪಡೆಯಬೇಕೆಂದೂ ಕಾರ್ಯಾಂಗದಿಂದ ನ್ಯಾಯಾಂಗವನ್ನು ಬೇರ್ಪಡಿಸಬೇಕೆಂದೂ ನ್ಯಾಯಶಾಸ್ತ್ರದ ಕಾನೂನುಗಳನ್ನು ಕ್ರಮವಾಗಿ ಸಂಗ್ರಹಿಸಬೇಕೆಂದೂ ಪ್ರಚಾರ ಮಾಡಿದ. ಸರ್ಕಾರ ನೂತನವಾಗಿ ಯಾವ ಕಾನೂನು ಮಾಡಬೇಕಾದರೂ ಗಣ್ಯವ್ಯಕ್ತಿಗಳ ಅಭಿಪ್ರಾಯವನ್ನು ಪೂರ್ವಭಾವಿಯಾಗಿ ಕೇಳಬೇಕೆಂದೂ ವಾದಿಸಿದ. ಒಂದೂವರೆ ಶತಮಾನಗಳ ಹಿಂದೆ ಅವನು ಪ್ರಚಾರ ಮಾಡಿದ ಈ ಸುಧಾರಣೆಗಳು ಕ್ರಮಕ್ರಮವಾಗಿ ಆಚರಣೆಗೆ ಬಂದಿರುವುದನ್ನು ಇಂದಿನವರೆಗೂ ನಾವು ಕಾಣಬಹುದು. ನ್ಯಾಯಾಲಯಗಳಿಗೂ ಇತರ ಸಾರ್ವಜನಿಕ ಉನ್ನತ ಸ್ಥಾನಗಳಿಗೂ ಭಾರತೀಯರನ್ನೂ ನೇಮಿಸಬೇಕೆಂದು ಒತ್ತಾಯ ಹಾಕುತ್ತಿದ್ದ.

ರಾಮಮೋಹನ ದೊಡ್ಡ ಜಮೀನ್ದಾರನಾಗಿದ್ದು ನೂರಾರು ಗುತ್ತಿಗೆದಾರರೊಡನೆ ವ್ಯವಹರಿಸ ಬೇಕಾಗಿತ್ತು. ಆಗ ಅವನು ಎಂದೂ ಅವರ ಬಗ್ಗೆ ಕಠಿಣವಾಗಿ ನಡೆದುಕೊಂಡವನಲ್ಲ; ಅವರ ಶೋಷಣೆ

ಯನ್ನು ತಪ್ಪಿಸುವುದರಿಂದ ರೈತಜನತೆಯ ಜೀವನ ಸುಧಾರಿಸುವುದೆಂದು ಭಾವಿಸಿ ಅವರು ಕೊಡಬೇಕಾದ ಗುತ್ತಿಗೆಯ ಬಗ್ಗೆ ಒಂದು ಗರಿಷ್ಠ ಪ್ರಮಾಣವನ್ನು ನಿಷ್ಕರ್ಷಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಹಾಕುತ್ತಲೇ ಇದ್ದ.

ಶಿಕ್ಷಣಕ್ಷೇತ್ರದಲ್ಲಿ ಸುಧಾರಣೆ

ಬ್ರಹ್ಮಸಮಾಜ ಸ್ಥಾಪನೆ, ಸಹಗಮನ ಪದ್ಧತಿಯ ನಿರ್ಮೂಲನ, ನರಬಲಿ ಪಶುಬಲಿಗಳ ನಿಷೇಧ, ಸ್ತ್ರೀಯರ ಹಕ್ಕು ಬಾಧ್ಯತೆಗಳ ಬಗ್ಗೆ ಬೆಂಬಲ ಮತ್ತು ಸಮಾಜದ ಇನ್ನಿತರ ಸುಧಾರಣೆಗಳ ಬಗ್ಗೆ ರಾಮಮೋಹನ ಸಲ್ಲಿಸಿದ ಸೇವೆಯಂತೆ ಶಿಕ್ಷಣಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯೂ ಅವನಿಗೆ ಆಧುನಿಕ ಭಾರತದ ಇತಿಹಾಸದಲ್ಲಿ ಸ್ಮರಣೀಯ ಸ್ಥಾನವನ್ನು ಗಳಿಸಿಕೊಟ್ಟಿದೆ. ಹತ್ತೊಂಬತ್ತನೆಯ ಶತಮಾನದ ನಾಲ್ಕನೆಯ ದಶಕ ಭಾರತದ ಶಿಕ್ಷಣದ ಭವಿಷ್ಯ ರೂಪರೇಷೆಗಳನ್ನು ನಿರ್ಮಿಸಿದ ಕಾಲ. ೧೮೧೩ರಲ್ಲಿ ಪಾರ್ಲಿಮೆಂಟು ಕಂಪನಿ ಸರ್ಕಾರದ ಸನ್ನದನ್ನು ಮುಂದುವರಿಸುವಾಗ ಒಂದು ಲಕ್ಷ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ಮೀಸಲಿಟ್ಟು ಅದನ್ನು ಸಾಹಿತ್ಯದ ಪುನರುಜ್ಜೀವನಕ್ಕೂ ಅಭಿವೃದ್ಧಿಗೂ ಬಳಸಬೇಕೆಂದು ಸೂಚಿಸಿತ್ತು. ಆದರೆ ಅದನ್ನು ಹೇಗೆ ಬಳಸಬೇಕೆಂಬ ಬಗ್ಗೆ ನಿರ್ದಿಷ್ಟ ಸೂಚನೆಯಿರಲಿಲ್ಲ. ಜೊತೆಗೆ ಶಿಕ್ಷಣದ ಉದ್ದೇಶ, ಶಿಕ್ಷಣ ಮಾಧ್ಯಮ. ಶಿಕ್ಷಣ ಸೇವೆಯನ್ನು ವ್ಯವಸ್ಥೆಗೊಳಿಸಬೇಕಾದ ಸಂಸ್ಥೆ—ಇವುಗಳ ಬಗ್ಗೆಯೂ ನಿರ್ದಿಷ್ಟತೆಯಿಲ್ಲದೆ ದೇಶದಲ್ಲಿ ಭಿನ್ನಾಭಿಪ್ರಾಯಗಳು ಎದ್ದುಕೊಂಡಿದ್ದುವು. ಮುಸ್ಲಿಮರ ದಾಳಿಯ ಅನಂತರ ನೂರಾರು ವರ್ಷಗಳ ಹಿಂದೆಯೆ ಮೂಲೆಗುಂಪಾಗಿದ್ದ ದೇಶೀಯ ಶಿಕ್ಷಣ ಪದ್ಧತಿಯನ್ನು ಅನುಸರಿಸಬೇಕೆ ಅಥವಾ ಅಂದಿಗಾಗಲೆ ಪ್ರಚಾರಕ್ಕೆ ಬರುತ್ತಿದ್ದ ಪಾಶ್ಚಾತ್ಯ ಶಿಕ್ಷಣ ಪದ್ಧತಿಯನ್ನು ಅನುಸರಿಸಬೇಕೆ ಎಂಬುದರ ಬಗ್ಗೆಯೂ ಜಿಜ್ಞಾಸೆ ಹುಟ್ಟಿಕೊಂಡಿತ್ತು. ಇವೆಲ್ಲದರ ಫಲವಾಗಿ ಮೇಲಿನ ಅಂಶಗಳ ಬಗ್ಗೆ ದೇಶ ಮೀನ–ಮೇಷ ನೋಡುತ್ತ ಎರಡು ದಶಕಗಳಷ್ಟು ಕಾಲಹರಣ ಮಾಡಬೇಕಾಯಿತು. ಆದರೂ ರಾಷ್ಟ್ರಾದ್ಯಂತ ಮೊಟ್ಟಮೊದಲನೆಯದಾಗಿ ಪ್ರಾಜ್ಞರು ಅಂದಿನ ಶಿಕ್ಷಣ ಸಮಸ್ಯೆಗಳ ಬಗ್ಗೆ ಗಮನಹರಿಸುವಂತಾಯಿತು. ಸಂಘಸಂಸ್ಥೆಗಳಲ್ಲೂ ಸಾರ್ವಜನಿಕವಾಗಿಯೂ ಆ ಬಗ್ಗೆ ವಾದವಿವಾದಗಳು ನಡೆಯುತ್ತಿದ್ದುವು. ಅಂದಿನ ಅಭಿಪ್ರಾಯಗಳನ್ನು ಮೂರು ವಿಧವಾಗಿ ಗುರುತಿಸಬಹುದು. ಮೊದಲನೆಯ ಪಂಥ ಭಾರತೀಯ ಸಾಹಿತ್ಯ ಸಂಸ್ಕೃತಿ ವಿಜ್ಞಾನಗಳನ್ನು ಸಂಸ್ಕೃತ ಅಥವಾ ಅರಬ್ಬೀ ಭಾಷಾ ಮಾಧ್ಯಮಗಳ ಮೂಲಕ ಪರಿಚಯ ಮಾಡಿಕೊಡುವ ಶಿಕ್ಷಣಪದ್ಧತಿಯನ್ನು ರೂಪಿಸಬೇಕೆಂದು ವಾದಿಸುತ್ತಿತ್ತು. ಸರ್ಕಾರದ ಹಿರಿಯ ಅಧಿಕಾರಿಗಳ ಬೆಂಬಲವಿದ್ದ ಈ ಪಂಥ ಬಂಗಾಳದಲ್ಲಿ ಬಲವಾಗಿತ್ತು. ವಾರನ್ ಹೇಸ್ಟಿಂಗ್ಸ್ ಮತ್ತು ಮಿಂಟೋ ಕೂಡ ಈ ಪಂಥದ ಬೆಂಬಲಿಗರಾಗಿದ್ದರು. ಎರಡನೆಯ ಪಂಥ ಭಾರತೀಯ ಸಂಸ್ಕೃತಿ ನಾಗರಿಕತೆಗಳು ಪಾಶ್ಚಾತ್ಯರವಕ್ಕಿಂತ ಮೇಲ್ಮಟ್ಟದವೆಂಬ ಕಾರಣವನ್ನು ಮುಂದೊಡ್ಡಿ ದೇಶೀಯ ಹಾಗೂ ಪ್ರಾದೇಶಿಕ ಭಾಷೆಗಳ ಮಾಧ್ಯಮದಲ್ಲಿ ಭಾರತೀಯ ಸಾಹಿತ್ಯ ಸಂಸ್ಕೃತಿಗಳ ಜ್ಞಾನರಾಶಿಯನ್ನು ಶಾಲೆಗಳಲ್ಲಿ ಬೋಧಿಸಬೇಕೆಂದು ಪ್ರತಿಪಾದಿಸುತ್ತಿತ್ತು. ಈ ಅಭಿಪ್ರಾಯದ ಪರವಾಗಿ ಮದ್ರಾಸಿನಲ್ಲಿ ಮನ್ರೋ ಮತ್ತು ಬೊಂಬಾಯಿಯಲ್ಲಿ ಎಲ್ಫಿನ್‌ಸ್ಟನ್ ಪ್ರಚಾರ ಕೈಕೊಂಡಿದ್ದರು. ಮೂರನೆಯ ಪಂಥ ಭಾರತೀಯರಿಗೆ ಇಂಗ್ಲಿಷ್ ಮಾಧ್ಯಮದ ಮೂಲಕ ಐರೋಪ್ಯ ಜ್ಞಾನವಿಜ್ಞಾನಗಳನ್ನು ಬೋಧಿಸಬೇಕೆಂದು ವಾದಿಸುತ್ತಿತ್ತು. ಈ ಪಂಥ ಅಷ್ಟು ಪ್ರಬಲವಾಗಿರದಿದ್ದರೂ ಇದಕ್ಕೆ ಸರ್ಕಾರದಲ್ಲಿ ಕೆಲಸಕ್ಕೆ ಸೇರಿದ್ದ ತರುಣ ಪೀಳಿಗೆಯ ಸಂಪೂರ್ಣ ಬೆಂಬಲವಿತ್ತು. ಮತಪ್ರಚಾರವೇ ಮುಖ್ಯ ಉದ್ದೇಶವನ್ನಾಗಿ ತಳೆದಿದ್ದ ಕ್ರೈಸ್ತಪಾದ್ರಿಗಳು ಈ ಪಂಥದ ಪ್ರಮುಖ ಪ್ರಚಾರಕರಾಗಿದ್ದುದರಿಂದ ಭಾರತೀಯ ಪ್ರಾಜ್ಞರು ಅದರ ಪರವಾಗಿ ಬೆಂಬಲವೀಯಲು ಹಿಂಜರಿಯುತ್ತಿದ್ದರು. ಬಂಗಾಳದಲ್ಲಿ ಈ ಪಂಥಕ್ಕೆ ಮೊದಮೊದಲು ಬಲವಾದ ಪ್ರತಿಭಟನೆಯಿತ್ತು. ಅಂಥ ಕಾಲದಲ್ಲಿ ರಾಮಮೋಹನ ಇಂಗ್ಲಿಷ್ ಮಾಧ್ಯಮದ ಮೂಲಕ ಐರೋಪ್ಯ ಜ್ಞಾನವಿಜ್ಞಾನಗಳನ್ನು ಬೋಧಿಸುವುದರಿಂದಲೇ ಭಾರತೀಯರ ಪ್ರಗತಿ ಸಾಧ್ಯವೆಂಬ ವಾದವನ್ನು ಪ್ರಚಾರ ಮಾಡಿ ಈ ಪಂಥಕ್ಕೆ ಬೆಂಬಲ ದೊರಕಿಸಿಕೊಟ್ಟ. ಕ್ರಮಕ್ರಮವಾಗಿ ಇತರ ಪ್ರಾಂತ್ಯಗಳಲ್ಲೂ ಈ ಪಂಥಕ್ಕೆ ಬೆಂಬಲ ದೊರಕುತ್ತ ಬಂತು.

ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದ ಮೇಲಿನ ಸಮಸ್ಯೆಗಳನ್ನು ಪರಿಶೀಲಿಸಿ ಸೂಕ್ತ ಸಲಹೆ ನೀಡಲು ಸರ್ಕಾರ ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಸಲಹಾ ಸಮಿತಿಯೊಂದನ್ನು ರಚಿಸಿದ್ದರು. ಅದರಲ್ಲಿ ಪೌರಸ್ತ್ಯ ಭಾಷಾಪಂಥದವರೇ ಹೆಚ್ಚಾಗಿದ್ದರು. ಬಂಗಾಳದ ಶಿಕ್ಷಣಶಾಖೆಯ ಕಾರ್ಯದರ್ಶಿಯಾಗಿದ್ದ ಪ್ರಿನ್ಸೆಪ್, ಮಿಂಟೋ ಮತ್ತು ವಿಲ್ಸನ್ ಆ ಪಂಥದ ಮುಖಂಡರಾಗಿದ್ದರು. ಅವರು ೧೮೧೩ರ ಸನ್ನದು ಪತ್ರದಲ್ಲಿ ಉಲ್ಲೇಖವಾಗಿದ್ದ 'ಸಾಹಿತ್ಯ'ವೆಂದರೆ ಹಿಂದೂ ಮತ್ತು ಮಹಮ್ಮದೀಯ ಸಾಹಿತ್ಯವೆಂದೂ ವಿಜ್ಞಾನದ ಪ್ರಸಾರವೆಂದರೆ ಆ ಸಾಹಿತ್ಯದಲ್ಲಿರುವ ಜ್ಞಾನವಿಜ್ಞಾನಗಳನ್ನು ಸಂಸ್ಕೃತ, ಪಾರಸಿ, ಅಥವಾ ಅರಬ್ಬೀ ಭಾಷೆಗಳಲ್ಲಿ ಬೋಧಿಸುವುದೆಂದೂ ಅರ್ಥಕಲ್ಪಿಸಿದರು. ಅವರು ಪ್ರಾಚ್ಯ ವಿದ್ಯಾಲಯಗಳ ಸ್ಥಾಪನೆಗೂ ಪ್ರಾಚ್ಯ ಸಾಹಿತ್ಯ ಕೃತಿಗಳ ರಕ್ಷಣೆಗೂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದಕ್ಕೂ ಪಾಶ್ಚಾತ್ಯ ಜ್ಞಾನವಿಜ್ಞಾನಗಳನ್ನು ಸಂಸ್ಕೃತಾದಿ ಭಾರತೀಯ ಭಾಷೆಗಳಲ್ಲಿ ಪ್ರಕಟಿಸುವುದಕ್ಕೂ ಆ ಹಣವನ್ನು ವಿನಿಯೋಗಿಸಬೇಕೆಂದು ಸಲಹೆ ಮಾಡಿದರು. ಪಾಶ್ಚಾತ್ಯ ಭಾಷಾ ಪಂಥದವರು ಸನ್ನದು ಪತ್ರದಲ್ಲಿ ಉಲ್ಲೇಖವಾಗಿದ್ದ ನಿಬಂಧನೆಗೆ ತಮ್ಮ ದೃಷ್ಟಿಯಲ್ಲಿ ಅರ್ಥ ಕಲ್ಪಿಸಿ ಪಾಶ್ಚಾತ್ಯ ಜ್ಞಾನವಿಜ್ಞಾನಗಳನ್ನು ಇಂಗ್ಲಿಷ್ ಮಾಧ್ಯಮದ ಮೂಲಕ ಪ್ರಚಾರಮಾಡಲು ಸೂಚಿಸಿ ಅದಕ್ಕಾಗಿ ಒದಗಿರುವ ಹಣವನ್ನು ಆ ಕಾರ್ಯಕ್ಕಾಗಿ ವ್ಯಯಮಾಡಬೇಕೆಂದು ಸೂಚಿಸಿದರು. ರಾಮಮೋಹನರಾಯ ಈ ಪಂಥದ ಮುಖಂಡನಾಗಿದ್ದ. ಕಲ್ಕತ್ತದ ಗಡಿಯಾರದ ವ್ಯಾಪಾರಿ ಡೇವಿಡ್ ಹೇರ್ ಎಂಬವನು ಅವನಿಗೆ ಮುಖ್ಯ ಬೆಂಬಲಿಗನಾಗಿದ್ದ.

೧೮೧೩ರ ಸನ್ನದುಪತ್ರದಲ್ಲಿ ಸೂಚಿತವಾಗಿದ್ದ ಹಣವನ್ನು ವಿನಿಯೋಗಿಸುವ ಬಗ್ಗೆ ಸಮಿತಿ ಯಾವ ತೀರ್ಮಾನಕ್ಕೂ ಬಾರದಾಗಿ ಭಾರತ ಸರ್ಕಾರ ಯಾವ ನಿರ್ದಿಷ್ಟ ನೀತಿಯನ್ನೂ ಅನುಸರಿಸಲಾರದ ಸ್ಥಿತಿಯಲ್ಲಿ ಸಿಕ್ಕಿ ಶಿಕ್ಷಣದ ಪ್ರಗತಿ ಕುಂಠಿತವಾಯಿತು.

ರಾಮಮೋಹನ ರಾಯ ಪಾಶ್ಚಾತ್ಯ ವಿಜ್ಞಾನಾದಿ ಸಾಹಿತ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ಬೋಧಿಸುವ ವಿಷಯವನ್ನು ಕೇವಲ ಆ ಸಮಿತಿಯಲ್ಲಿ ಪ್ರತಿಪಾದಿಸಲಿಲ್ಲ; ಅನೇಕ ವರ್ಷಗಳ ಹಿಂದೆಯೆ ಆ ಬಗ್ಗೆ ನಿರ್ದಿಷ್ಟ ತೀರ್ಮಾನಕ್ಕೆ ಬಂದಿದ್ದು ಆ ಕಾರ್ಯಸಾಧನೆಗಾಗಿ ಅಗತ್ಯ ಕ್ರಮಗಳನ್ನು ಕಾರ್ಯರೂಪಕ್ಕಿಳಿಸುತ್ತಿದ್ದ. ಅಂದು ಸರ್ವೋಚ್ಚನ್ಯಾಯಾಲಯದ ಮುಖ್ಯನ್ಯಾಯಾಧೀಶನಾಗಿದ್ದ ಸರ್ ಎಡ್ವರ್ಡ್ ಹೈಡ್ ಈಸ್ಟ್ ಎಂಬಾತ ಅವನ ಪರಮಮಿತ್ರನಾಗಿದ್ದು, ಅವನ ಪ್ರಗತಿದೃಷ್ಟಿಗೆ ಪ್ರೋತ್ಸಾಹ ನೀಡುತ್ತಿದ್ದ. ಅವನ ಅಧ್ಯಕ್ಷತೆಯಲ್ಲಿ ೧೮೧೬ರಲ್ಲಿ ಕಲ್ಕತ್ತದಲ್ಲಿ ಸಾರ್ವಜನಿಕ ಸಭೆಯನ್ನು ಕರೆದು ಯೂರೋಪಿನ ಮತ್ತು ಏಷ್ಯದ ಭಾಷೆಗಳಲ್ಲೂ ಯೂರೋಪಿನ ಶಾಸ್ತ್ರವಿಜ್ಞಾನಗಳಲ್ಲೂ ಶಿಕ್ಷಣ ನೀಡಲು ಒಂದು ವಿದ್ಯಾಲಯವನ್ನು ಸ್ಥಾಪಿಸಲು ತೀರ್ಮಾನಿಸಿ ಅದಕ್ಕಾಗಿ ೫೦ ಸಹಸ್ರ ರೂ.ಗಳನ್ನು ಸಂಗ್ರಹಿಸಿದ. ೧೮೧೭ರ ಜನವರಿ ೨೦ರಲ್ಲಿ ಹಿಂದೂ ಕಾಲೇಜ್ ಎಂಬ ಹೆಸರಿನಿಂದ ಆ ಸಂಸ್ಥೆ ಆರಂಭವಾಯಿತು. ಅಲ್ಲಿ ಇಂಗ್ಲಿಷ್, ನೀತಿಶಾಸ್ತ್ರ, ವ್ಯಾಕರಣ, ಹಿಂದೂಸ್ತಾನಿ, ಬಂಗಾಳಿ, ಅಂಕಗಣಿತ, ಚರಿತ್ರೆ, ಭೂವಿವರಣೆ, ಖಗೋಳವಿಜ್ಞಾನ ಮುಂತಾದ ವಿಷಯಗಳ ಬೋಧನೆಗೆ ವ್ಯವಸ್ಥೆ ಮಾಡಲಾಗಿತ್ತು. ರಾಮಮೋಹನನ ಈ ಕಾರ್ಯ ಭಾರತದ ಜನಜೀವನದ ಮೇಲೆ ಮಹತ್ತರ ಪರಿಣಾಮ ಬೀರಿತು. ಶಿಕ್ಷಣಕ್ಷೇತ್ರದಲ್ಲಿ ಕ್ರಾಂತಿಗೆ ಅರುಣೋದಯವಾಯಿತು. ಭಾರತದ ಸಮಾಜ ಸಂಸ್ಕೃತಿಗಳ ಇತಿಹಾಸದಲ್ಲಿ ಹೊಸ ಯುಗವೊಂದನ್ನು ಆರಂಭಿಸಿತು. ೧೮೨೪ರಲ್ಲಿ ಅದಕ್ಕೆ ಸರ್ಕಾರದ ಮನ್ನಣೆಯೂ ಅನುದಾನವೂ ದೊರಕಿದುವು. ಅದರ ಜನಪ್ರಿಯತೆ ದಿನದಿನಕ್ಕೂ ಹೆಚ್ಚುತ್ತ ಹೋಗಿ ೧೮೨೮ರ ವೇಳೆಗೆ ಅಲ್ಲಿ ೪೦೦ ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಆ ವಿದ್ಯಾಲಯದ ಪಠ್ಯಕ್ರಮದಲ್ಲಿ ಸಂಸ್ಕೃತ ಮತ್ತು ಪಾರಸಿ ಭಾಷೆಗಳನ್ನು ಸೇರಿಸಿರಲಿಲ್ಲ. ಅದನ್ನೇ ನೆಪಮಾಡಿಕೊಂಡು ಪೌರಸ್ತ್ಯ ವಾದಿಗಳು ರಾಮಮೋಹನನ ಶಿಕ್ಷಣ ದೃಷ್ಟಿಯನ್ನು ಖಂಡಿಸುತ್ತಲೇ ಇದ್ದರು. ಇಂಗ್ಲಿಷ್ ಶಿಕ್ಷಣ ಪಡೆದವರಿಗೆ ಸರ್ಕಾರದ ಉದ್ಯೋಗಗಳು ದೊರಕುತ್ತಿದ್ದುದರಿಂದ ತರುಣಪೀಳಿಗೆಯವರು ರಾಮಮೋಹನನ ದೃಷ್ಟಿಗೆ ಬೆಂಬಲವಿತ್ತು ಆ ಸಂಸ್ಥೆಗಳು ದೇಶದ ಇತರೆಡೆಗಳಲ್ಲಿ ಸ್ಥಾಪನೆಯಾಗಲು ಅವಕಾಶ ಕಲ್ಪಿಸಿದರು.

ಸರ್ಕಾರ ನಿರ್ದಿಷ್ಟವಾಗಿ ಶಿಕ್ಷಣದ ನೀತಿಯನ್ನು ರೂಪಿಸಲು ರಾಷ್ಟ್ರದ ಪ್ರಾಜ್ಞರ ಸಮಿತಿಯನ್ನು ಕೇಳಿದ್ದರೂ ಅದು ಯಾವ ತೀರ್ಮಾನವನ್ನೂ ಕೈಕೊಳ್ಳಲಾರದ ಸ್ಥಿತಿಯಲ್ಲಿತ್ತು. ಆ ಸಮಯದಲ್ಲಿ

ಭಾರತ ಸರ್ಕಾರದ ಗವರ್ನರ್ ಜನರಲ್ಲನ ಸಚಿವ ಮಂಡಳಿಗೆ ನ್ಯಾಯಾಂಗ ಸದಸ್ಯನಾಗಿ ನೇಮಕವಾಗಿ ಮೆಕಾಲೆ ಭಾರತಕ್ಕೆ ಆಗಮಿಸಿದ. ಸರ್ಕಾರ ಅವನನ್ನೇ ಶಿಕ್ಷಣ ಸಲಹಾ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿತು. ಮೆಕಾಲೆ ಉದ್ದಾಮ ಇಂಗ್ಲಿಷ್ ಪಂಡಿತ, ಖ್ಯಾತ ಲೇಖಕ ಮತ್ತು ಒಳ್ಳೆಯ ವಾಗ್ಮಿ. ಇಂಗ್ಲಿಷ್ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಉತ್ಕಟ ಅಭಿಮಾನವನ್ನು ತಳೆದಿದ್ದ ದೇಶಭಕ್ತ. ಜೊತೆಗೆ ಪರಿಣಾಮ ಕಾರಿಯಾಗಿ ವಿಷಯವನ್ನು ಪ್ರೋಷಿಸಬಲ್ಲ ವಾದಪಟುವೂ ಆಗಿದ್ದ. ಅವನು ನ್ಯಾಯಾಂಗ ಸಚಿವನಾಗಿದ್ದು ದರಿಂದ ಆ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿ, ೧೮೩೩ರ ಸನ್ನದು ಪತ್ರದ ೪೩ನೆಯ ನಿಬಂಧನೆಗೆ ಸೂಕ್ತ ಅರ್ಥ ಕಲ್ಪಿಸಬೇಕಾಗಿ ಕೋರಲಾಗಿತ್ತು. ಆದರೆ ಭಾರತದ ಶೈಕ್ಷಣಿಕ ನೀತಿಯನ್ನೇನೂ ನಿರ್ಧರಿಸು ವಂತೆ ಅವನಿಗೆ ಕೇಳಿರಲಿಲ್ಲ. ಸಮಿತಿಯ ಸಭೆಯಲ್ಲೂ ಅವನು ಭಾಗವಹಿಸಿರಲಿಲ್ಲ. ಆದರೆ ಸದಸ್ಯರ ಅಭಿಪ್ರಾಯಗಳನ್ನೆಲ್ಲ ಪರಿಶೀಲಿಸಿ ಅಂದು ಗವರ್ನರ್-ಜನರಲ್ ಆಗಿದ್ದ ವಿಲಿಯಂ ಬೆಂಟಿಂಕನಿಗೆ ತನ್ನ ಅಭಿಪ್ರಾಯವನ್ನು ಕ್ರೋಡೀಕರಿಸಿ ವರದಿ ಸಲ್ಲಿಸಿದ. ರಾಮಮೋಹನನ ಅಭಿಪ್ರಾಯ ಬಹುಮಟ್ಟಿಗೆ ಅವನ ವಾದಸರಣಿಯನ್ನು ಪ್ರೋಷಿಸಿತ್ತು. ಬೆಂಟಿಂಕ್ ಪ್ರಗತಿಪರ ತತ್ವದೃಷ್ಟಿಯ ಉದಾರಿ ಇಂಗ್ಲಿಷ್ ಪ್ರಜೆ; ಸಹಗಮನ ಪದ್ಧತಿಯಂಥ ಹೇಯ ಸಂಪ್ರದಾಯವನ್ನು ಶಾಸನದ ಮೂಲಕ ನಿಷೇಧಿಸಲು ರಾಜಾ ರಾಮ ಮೋಹನನಂಥ ಸುಪ್ರತಿಷ್ಠಪ್ರಜ್ಞೆಯ ಭಾರತೀಯರ ಬೆಂಬಲದ ಬಗ್ಗೆ ತುಂಬ ಗೌರವವಿತ್ತು. ಅಲ್ಲದೆ ಇಂಗ್ಲಿಷನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದು ಒಂದು ಸುಧಾರಣೆಯೆಂದು ಹಿಂದಿನಿಂದಲೂ ನಂಬಿದ್ದ. ಆದ್ದರಿಂದ ಅವನು ಮೆಕಾಲೆಯ ವರದಿಯನ್ನು ಪರಿಶೀಲಿಸಿ ೧೮೩೫ರ ಮಾರ್ಚ್ ೭ನೆಯ ದಿನ ಅದಕ್ಕೆ ಸರ್ಕಾರದ ಅಂಗೀಕಾರವನ್ನು ನೀಡಿ:

೧ ಯೂರೋಪಿನ ಸಾಹಿತ್ಯ ಮತ್ತು ವಿಜ್ಞಾನಗಳನ್ನು ಭಾರತದಲ್ಲಿ ಪ್ರಚಾರ ಮಾಡು ವುದು ಬ್ರಿಟಿಷ್ ಸರ್ಕಾರದ ಮಹೋದ್ದೇಶ: ಆದ್ದರಿಂದ ಶಿಕ್ಷಣಕ್ಕಾಗಿ ಮೀಸ ಲಾಗಿಟ್ಟಿರುವ ಹಣವನ್ನು ಇಂಗ್ಲಿಷ್ ಶಿಕ್ಷಣಕ್ಕಾಗಿ ವಿನಿಯೋಗಿಸಬೇಕು;

೨ ಪೌರಸ್ತ್ಯ ಶಿಕ್ಷಣಸಂಸ್ಥೆಗಳನ್ನು ಮುಚ್ಚಲಾಗದು: ಅಲ್ಲಿನ ಅಧ್ಯಾಪಕರಿಗೆ ಸಂಬಳ ವನ್ನೂ ವಿದ್ಯಾರ್ಥಿಗಳಿಗೆ ವೇತನವನ್ನೂ ಎಂದಿನಂತೆ ಕೊಡಬೇಕು;

೩ ಇನ್ನು ಮೇಲೆ ಪೌರಸ್ತ್ಯ ಗ್ರಂಥಗಳ ಪ್ರಕಟಣೆಯನ್ನು ನಿಲ್ಲಿಸಬೇಕು; ಏಕೆಂದರೆ ಅದಕ್ಕಾಗಿ ಮಿತಿಮೀರಿ ಹಣವನ್ನು ವಿನಿಯೋಗಿಸಲಾಗಿದೆ;

೪ ಹಾಗೆ ಉಳಿಸಲಾದ ಹಣವನ್ನು ಭಾರತದ ದೇಶೀಯ ಜನರಲ್ಲಿ ಇಂಗ್ಲಿಷ್ ಮಾಧ್ಯಮದ ಮೂಲಕ ಇಂಗ್ಲಿಷ್ ವಿಜ್ಞಾನ ಮತ್ತು ಸಾಹಿತ್ಯವನ್ನು ಪ್ರಸಾರ ಮಾಡಲು ಬಳಸಬೇಕು

ಎಂದು ಪ್ರಕಟಿಸಿದ. ಬೆಂಟಿಂಕನ ಈ ಘೋಷಣೆ ಭಾರತ ಸರ್ಕಾರ ಪ್ರಕಟಿಸಿದ ಮೊಟ್ಟಮೊದಲನೆಯ ಶೈಕ್ಷಣಿಕ ಘೋಷಣೆ. ಇದರ ಔಚಿತ್ಯದ ಬಗ್ಗೆ ವಾದ ವಿವಾದಗಳಿಗೆ ಅವಕಾಶವಿದ್ದರೂ ಡೋಲಾಯಮಾನ ಸ್ಥಿತಿಯಲ್ಲಿ ಸಿಕ್ಕಿ ಗೊಂದಲಕ್ಕೀಡಾಗಿದ್ದ ಭಾರತದ ಶಿಕ್ಷಣಕ್ಷೇತ್ರಕ್ಕೆ ಒಂದು ನಿರ್ದಿಷ್ಟ ನೀತಿ ದೊರಕಿ ದಂತಾಯಿತು. ಆ ಘೋಷಣೆ ಶಿಕ್ಷಣದ ಗುರಿ, ಮಾರ್ಗ ಮತ್ತು ಮಾಧ್ಯಮಗಳನ್ನು ಅನುಮಾನಕ್ಕೆ ಆಸ್ಪದವಿಲ್ಲದಂತೆ ನಿರ್ಧರಿಸಿತು. ಪ್ರಗತಿಪರ ತತ್ವಚಿಂತಕರನೇಕರು ಈ ಘೋಷಣೆಯನ್ನು ಸಂತೋಷ ದಿಂದ ಸ್ವಾಗತಿಸಿದರು. ಮೆಕಾಲೆಯ ಮೂಲ ವರದಿಯಲ್ಲಿ ಭಾರತೀಯರ ಮನ ನೋಯಿಸುವಂಥ ಹಲವು ಕುತ್ಸಿತ ಟೀಕೆಗಳು ಇರುವುವಾದರೂ ಅವನ ವರದಿ ನಮ್ಮ ಶಿಕ್ಷಣದ ಇತಿಹಾಸದಲ್ಲಿ ಮಹಾ ಪರಿಣಾಮವನ್ನು ಮೂಡಿಸಿದ ಪ್ರಸಿದ್ಧ ದಾಖಲೆಯಾಗಿದೆ. ಬಹುಶಃ ಅದನ್ನು ಬರೆಯುವಾಗ ಮೆಕಾಲೆ ತನ್ನ ವರದಿ ಇಂಥ ಪ್ರಸಿದ್ಧ ದಾಖಲೆಯಾಗುವುದೆಂದು ಊಹಿಸಿಯೂ ಇರಲಾರನೆಂದು ತೋರುತ್ತದೆ!

ರಾಮಮೋಹನ ರಾಯ ಶಿಕ್ಷಣದ ಬಗ್ಗೆ ತಳೆದಿದ್ದ ಪ್ರಗತಿದೃಷ್ಟಿ ಬೆಂಟಿಂಕನ ಘೋಷಣೆಯಲ್ಲಿ ಸಾರ್ಥಕ್ಯವನ್ನು ಕಂಡಿತಾದರೂ ಆ ಘೋಷಣೆಯನ್ನು ಓದುವ ಭಾಗ್ಯ ಅವನಿಗಿರಲಿಲ್ಲ. ಅಂದು ದೆಹಲಿ ಯಲ್ಲಿ ಹೆಸರಿಗೆ ಮಾತ್ರ ಚಕ್ರವರ್ತಿಯೆಂದು ಕರೆದುಕೊಳ್ಳುತ್ತಿದ್ದ ಇಮ್ಮಡಿ ಅಕ್ಬರ್ ರಾಮಮೋಹನ

ರಾಯನ ವಾದಕೌಶಲಕ್ಕೆ ತಲೆದೂಗಿ ಅವನಿಗೆ ರಾಜಾ ಎಂಬ ಬಿರುದನ್ನು ನೀಡಿದ. ೧೮೩೦ರಲ್ಲಿ ಅವನನ್ನು ಲಂಡನ್ನಿಗೆ ಸಾರ್ವಭೌಮ ಸರ್ಕಾರಕ್ಕೆ ತನ್ನ ಪ್ರತಿನಿಧಿಯಾಗಿ ಕಳಿಸಲು ತೀರ್ಮಾನಿಸಿ, ತನಗೆ ದೊರಕಬೇಕಾದ ಸೌಲಭ್ಯ ಸವಲತ್ತುಗಳ ಬಗ್ಗೆ ತನ್ನ ಪರವಾದ ವಾದವನ್ನು ಬ್ರಿಟಿಷ್ ಸರ್ಕಾರದ ಮುಂದೆ ಮಂಡಿಸುವಂತೆ ಕೇಳಿಕೊಂಡ. ಆದರೆ ಕಂಪೆನಿಯ ಸರ್ಕಾರ ಅವನು ಕೊಟ್ಟ ಬಿರುದನ್ನು ಗೌರವಿಸಲಿಲ್ಲ.ಅವನ ಪ್ರತಿನಿಧಿಯೆಂದು ಅಂಗೀಕರಿಸದೆ ಸಾಮಾನ್ಯ ಪ್ರಜೆಯಾಗಿ ಲಂಡನ್ನಿಗೆ ತೆರಳಲು ರಾಜಾ ರಾಮಮೋಹನ ರಾಯ್‌ಗೆ ಅನುಮತಿಯಿತ್ತಿತು. ಚಕ್ರವರ್ತಿ ತನಗೆ ವಹಿಸಿದ್ದ ಕಾರ್ಯದ ಜೊತೆಗೆ ಪಾರ್ಲಿಮೆಂಟಿನ ಸೆಲೆಕ್ಟ್ ಸಮಿತಿಯ ಮುಂದೆ ಭಾರತದಲ್ಲಿ ಸಮಾಜ ಸುಧಾರಣೆಯ ಬಗ್ಗೆ ಕೈಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಮಂಡಿಸಿದ ಮತ್ತು ಭಾರತದ ಧರ್ಮ ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಇಂಗ್ಲೆಂಡಿನಲ್ಲಿ ಭಾಷಣ ಲೇಖನಾದಿಗಳ ಮೂಲಕ ಪರಿಣಾಮಕಾರಿಯಾಗಿ ಪ್ರಚಾರ ಮಾಡಿದ ರಾಜಾ ರಾಮಮೋಹನ ರಾಯ್ ೧೮೩೩ರಲ್ಲಿ ಬ್ರಿಸ್ಟಲ್ ನಗರದಲ್ಲಿ ನಿಧನನಾದ. ಅವನು ತನ್ನ ಪ್ರತಿಭೆಯ ಬೆಳಕಿನಲ್ಲಿ ದರ್ಶಿಸಿ ಪ್ರತಿಪಾದಿಸಿದ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳ ದೃಷ್ಟಿ ಇಂದಿಗೂ ಪ್ರಗತಿಪರವಾಗಿಯೇ ತೋರುತ್ತದೆ. ನಮ್ಮ ಸಮಾಜಸುಧಾರಕರಲ್ಲಿ ರಾಜಾ ರಾಮಮೋಹನ ರಾಯ ಅಗ್ರಸ್ಥಾನವನ್ನು ಪಡೆದುಕೊಂಡು ಆಧುನಿಕ ಭಾರತದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದ್ದಾನೆ. .

ರಾಮಮೋಹನನ ಧಾರ್ಮಿಕ ಕಾರ್ಯ ತೀರಾ ಬೌದ್ಧಿಕವಾಗಿತ್ತು. ಅದು ಆಧುನಿಕ ವಿಚಾರಗಳಿಂದ ಬಹಳ ಪ್ರಭಾವಿತವಾಗಿದ್ದುದರಿಂದ ಹಿಂದೂಧರ್ಮದ ಸಂಪ್ರದಾಯಗಳಿಗೆ ಸಂಬಂಧವಿಲ್ಲದೆ ಇದ್ದಿತು. ಆದ್ದರಿಂದ ಅದು ಜನಸಾಮಾನ್ಯರ ಮೇಲೆ ಹೆಚ್ಚು ಪ್ರಭಾವ ಬೀರಲಾಗಲಿಲ್ಲ. ಅದು ಬಂಗಾಳದ ಮಧ್ಯಮ ವರ್ಗದ ಹಿಂದೂಗಳಿಗೆ–ಅವರು ಅತ್ಯಂತ ನಿರಾಶಾಸ್ಥಿತಿಯಲ್ಲಿ ಇದ್ದುದರಿಂದ–ಹಿಂದೂಧರ್ಮ ಅಪಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಆಧ್ಯಾತ್ಮಿಕ ಸತ್ವವನ್ನು ನೀಡಿತು. ರಾಮಮೋಹನ್ ಸ್ಥಾಪಿಸಲು ಉತ್ಸುಕನಾಗಿದ್ದ ಸಾರ್ವತ್ರಿಕ ಮತಧರ್ಮ ಅವನ ತರುವಾಯ ಉಳಿಯಲಿಲ್ಲ; ಏಕೆಂದರೆ ಮುಂದಿನ ತಲೆಮಾರಿನಲ್ಲಿ ಮಹರ್ಷಿ ದೇವೇಂದ್ರನಾಥ ಠಾಕೂರ್ ಮತ್ತು ಕೇಶವಚಂದ್ರಸೇನ ಇವರುಗಳ ಸ್ಫೂರ್ತಿಯಿಂದ ಹಿಂದೂಧರ್ಮದ ಸತ್ವ ಮತ್ತೆ ತಲೆ ಎತ್ತಿ ನಿಂತಿತು. ಬ್ರಹ್ಮ ಸಮಾಜ ಪ್ರತ್ಯೇಕ ಧಾರ್ಮಿಕ ಪಂಥವಾಗುವುದಕ್ಕೆ ಪ್ರತಿಯಾಗಿ ಒಂದು ಸಾಮಾಜಿಕ ಪ್ರಭಾವವಾಗಿ ಮಾತ್ರ ಉಳಿಯಿತು.

ಧಾರ್ಮಿಕ ಸುಧಾರಣೆಗೆ ರಾಜಾ ರಾಮಮೋಹನ ಸಲ್ಲಿಸಿದ ಸೇವೆ ದೊಡ್ಡದಾದರೂ ಭಾರತದ ಇತಿಹಾಸದಲ್ಲಿ ಆತನ ಹೆಸರು ನಿಲ್ಲುವುದು ಆತ ಆರಂಭಿಸಿದ ಹೆಚ್ಚು ಲೌಕಿಕ ಪ್ರಧಾನವಾದ ಆಂದೋಲನಗಳಿಂದ. ಅವನು ವಾಸ್ತವಿಕವಾಗಿ ಭಾರತದ ಪ್ರಥಮ ಆಧುನಿಕ ವ್ಯಕ್ತಿ ಎನ್ನಬಹುದು. ಆತ ಸತೀ ಪದ್ಧತಿಯನ್ನು ನಿಲ್ಲಿಸಲು ಮಾಡಿದ ಸೇವೆ ಚಿರಪರಿಚಿತವಾದುದು. ಸ್ತ್ರೀಯರ ಉನ್ನತಿಗಾಗಿ ಶ್ರಮಿಸಿದ ಭಾರತೀಯರಲ್ಲಿ ಆತ ಪ್ರಥಮ. ಆತ ಬರೆದ 'ಮಹಿಳೆಯರ ಪ್ರಾಚೀನ ಹಕ್ಕುಗಳ ಮೇಲೆ ಆಧುನಿಕ ಅತಿಕ್ರಮಣಗಳ ಬಗ್ಗೆ ಸಂಗ್ರಹ ವಿವೇಚನೆ' ಎಂಬ ಗ್ರಂಥದಲ್ಲಿ ಸ್ತ್ರೀಯರ ಸಮಾನತೆಯ ಬಗ್ಗೆ ತರ್ಕಬದ್ಧ ವಾದ ಮಾಡಿದ್ದಾನೆ. ಆತ ಹಿಂದೂ ಶಾಸನದ ಸುಧಾರಣೆಗೂ ಶ್ರಮಿಸಿದ. ಮುದ್ರಣಸ್ವಾತಂತ್ರ್ಯದ ಮೇಲೆ ಸರಕಾರ ಹಾಕಿದ್ದ ಪ್ರತಿಬಂಧಕಗಳ ಬಗ್ಗೆ ಪ್ರತಿಭಟನೆ ಸಲ್ಲಿಸಿದ. ದಬ್ಬಾಳಿಕೆಯ ಭೂಶಾಸನದ ವಿರುದ್ಧ ಸರಕಾರಕ್ಕೆ ಮನವಿ ಸಲ್ಲಿಸಿದ. ಸರಕಾರದ ಸೇವೆಯಲ್ಲಿ ಭಾರತೀಯರಿಗೆ ಅವಕಾಶ ನೀಡಲು ಜಂಟಿ ಆಯ್ಕೆ ಸಮಿತಿಗೆ ಮನವಿ ಸಲ್ಲಿಸಿದ್ದಲ್ಲದೆ ಅದರ ಬಗ್ಗೆ ವಾದಿಸಿದ. ಉತ್ಸಾಹಭರಿತ ಶಿಕ್ಷಣಪ್ರೇಮಿಯಾಗಿದ್ದ. ಆತ, ಭಾರತದಲ್ಲಿ ಇಂಗ್ಲಿಷ್ ಪದ್ಧತಿಯ ಶಿಕ್ಷಣ ಬೇಕೆಂದು ವಾದಿಸುತ್ತಿದ್ದವರಿಗೆ ದೃಢವಾದ ಬೆಂಬಲ ನೀಡಿದ.

—ಕೆ. ಎಂ. ಪಣಿಕ್ಕರ್[1]

---

1 ಅನುವಾದ: ಜಿ. ವಿ. ನಾರಾಯಣ ಮೂರ್ತಿ. 'ಭಾರತೀಯ ಇತಿಹಾಸ ಸಮೀಕ್ಷೆ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪು. ೨೭೨-೩

ಕೆ. ಮೊಹಮ್ಮದ್ ಶರೀಫ್

ಕವಲೇದುರ್ಗ : ಒಂದು ಐತಿಹಾಸಿಕ ಅವಲೋಕನ

ಉತ್ತುಂಗ ಪರ್ವತಶ್ರೇಣಿ ಹಾಗೂ ದಟ್ಟವಾದ ಕಾಡುಗಳಿಂದ ಕೂಡಿ ನಿಸರ್ಗಸೌಂದರ್ಯಕ್ಕೆ ಹೆಸರಾದ ಮಲೆನಾಡಿನ ಮಡಿಲಿನಲ್ಲಿರುವ ಕವಲೇದುರ್ಗ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿಗೆ ಸೇರಿದ್ದು. ಇದು ತೀರ್ಥಹಳ್ಳಿಗೆ ಪಶ್ಚಿಮದಲ್ಲಿದೆ. ಇಲ್ಲಿಂದ ಸು. ೧೩ ಮೈಲಿ ದೂರದಲ್ಲಿ, ಪೂರ್ವಕ್ಕೆ ತೀರ್ಥಹಳ್ಳಿಯೂ ಪಶ್ಚಿಮಕ್ಕೆ ನಗರವೂ (ಬಿದನೂರು) ಇವೆ. ಸಮುದ್ರಮಟ್ಟದಿಂದ ಸು. ೩,೦೫೮ ಅಡಿಗಳಷ್ಟು ಎತ್ತರದಲ್ಲಿರುವ ಇದು ಕೆಳದಿ ಅರಸರ ದುರ್ಗಗಳಲ್ಲಿಯೇ ಅತ್ಯಂತ ದುರ್ಗಮವಾದ್ದು. ಸುತ್ತಲೂ ಅರಣ್ಯ ಹಾಗೂ ವಿಶಾಲವಾದ ಗುಡ್ಡಗಾಡುಗಳಿಂದ ತುಂಬಿ ಅಚ್ಚ ಹಸಿರಾಗಿದೆ. ಈ ಸ್ಥಳಕ್ಕೆ ಕವಿಲೇದುರ್ಗ, ಕವಲೇದುರ್ಗ. ಕೌಲೇದುರ್ಗ ಎಂಬೆಲ್ಲ ಹೆಸರುಗಳು ಇವೆ. ಕೆಳದಿ ಅರಸರ ಶಾಸನಗಳಲ್ಲಿ ಇದನ್ನು ದುರ್ಗ ಭುವನಗಿರಿದುರ್ಗ ಎಂದು ಕರೆದಿದ್ದಾರೆ. ಹೈದರ್ ಅಲಿಯ ವಶವಾದ ಅನಂತರ ಈ ಭುವನಗಿರಿದುರ್ಗಕ್ಕೆ 'ಕಾವಲದುರ್ಗ' ಎಂಬ ಹೆಸರು ಬಂತು[1]. ತ್ರೇತಾಯುಗದಲ್ಲಿ ಇದನ್ನು ಅಗಸ್ತ್ಯಾಶ್ರಮವೆಂದೂ ವಾಲ್ಮೀಕಿ ಆಶ್ರಮವೆಂದೂ ಕೃತಯುಗದಲ್ಲಿ ರೇಣುಕಾಶ್ರಮವೆಂದೂ ಕರೆದರು. ಮಹಾಭಾರತದ ಕಾಲದಲ್ಲಿ ಕಾಮ್ಯಕವನವೆಂದು ಕರೆದ ಈ ಸ್ಥಳದಲ್ಲಿ ಪಾಂಡವರು ವನವಾಸ ಕಾಲದಲ್ಲಿ ತಂಗಿದ್ದರೆಂದೂ ಬೆಟ್ಟದ ಮೇಲೆ ಕೋಟೆಕೊತ್ತಲಗಳನ್ನು ಕಟ್ಟಿದರೆಂದೂ ಭೀಮ ನೀರಿಗಾಗಿ ಈ ಸ್ಥಳದ ಸಮೀಪ ಒಂದು ಕಟ್ಟೆಯನ್ನು ನಿರ್ಮಿಸಿ ತುಂಗಾನದಿಯನ್ನು ಇಲ್ಲಿಗೆ ತಿರುಗಿಸಿದುದಾಗಿಯೂ ತದನಂತರ ಋಷಿಗಳ ಪ್ರಾರ್ಥನೆಯಂತೆ ಧರ್ಮರಾಯ ಕಟ್ಟೆಯಿಂದ ನೀರು ಬಿಡಿಸಿದುದಾಗಿಯೂ ಐತಿಹ್ಯವಿದೆ.[2]

ಈ ಸ್ಥಳ ಕೆಳದಿ ಅರಸರ ನಾಲ್ಕನೆಯ ರಾಜಧಾನಿಯಾಗಿತ್ತು[3]. ಇದರ ಸಮೀಪದಲ್ಲಿರುವ ಹುಲಿಕಲ್ಲು ಘಾಟು ದಕ್ಷಿಣ ಕನ್ನಡ ಜಿಲ್ಲೆಗೆ ಸಂಪರ್ಕ ಕಲ್ಪಿಸುವುದರಿಂದ ಕೆಳದಿ ರಾಜ್ಯ ಆರ್ಥಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಹೊಂದಿತ್ತು. ಇದು ಸು. ೧೮೬೨ರ ವರೆಗೂ ತಾಲೂಕು ಕೇಂದ್ರವಾಗಿದ್ದ ಸ್ಥಳ[4]. ೧೮೧೧ರಲ್ಲಿ ದಿವಾನ್ ಪೂರ್ಣಯ್ಯ ಕವಲೇದುರ್ಗದ ಅಮಲ್‌ದಾರನಿಗೆ ಕಳುಹಿಸಿದ ನಿರೂಪದಲ್ಲಿ ಆ ಅಮಲ್‌ದಾರನಿಗೆ ಕೆಲವು ಸಲಹೆಗಳನ್ನು ಮಾಡಿರುವುದನ್ನು ನಾವು ಕಾಣಬಹುದು[5].

---

1 ಡಾ. ಜಿ. ಎಸ್. ದೀಕ್ಷಿತ, ಕೆಳದಿ ನಾಯಕರು, ಪು. ೧೮

2 ಭೀಮನಕಟ್ಟೆ ಎಂದು ಕರೆಯುವ ಈ ಕಟ್ಟೆ ಕವಲೇದುರ್ಗಕ್ಕೆ ಸು. ೧೦ ಮೈಲಿಗಳ ದೂರದಲ್ಲಿದೆ.

3 ಈ ಅರಸರ ಮೊದಲ ರಾಜಧಾನಿ ಕೆಳದಿ. ಅನಂತರ ಇಕ್ಕೇರಿ ಹಾಗೂ ಬಿದನೂರು (ನಗರ), ಆದರೆ ಇವರು ತಮ್ಮ ಶಾಸನಗಳಲ್ಲಿ ತಾವು 'ಕೆಳದಿ' ಅರಸರೆಂದೇ ಹೇಳಿಕೊಂಡಿದ್ದಾರೆ.

4 C. Hayavadana Rao, *Mysore Gazetteer*, vol v., p. 1303

5 (i) M. A. R. 1916, p. 78

(ii) ಈಗ ಈ ನಿರೂಪ ಶೃಂಗೇರಿಯ ಮಠದಲ್ಲಿದೆ

ಈ ಸ್ಥಳದ ದುರ್ಗಮವಾದ ಗುಡ್ಡದಲ್ಲಿ ಕೆಳದಿ ಅರಸರ ಭವ್ಯವಾದ ಕೋಟೆ ಇದೆ. ಅನೇಕ ಭವ್ಯವಾದ ಬಾಗಿಲುಗಳಿಂದ ಕೂಡಿದ ಈ ಕೋಟೆ ಬಹು ಸುಂದರವಾಗಿದೆ. ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟಲಾಗಿರುವ ಇದರ ಗೋಡೆಗಳಲ್ಲಿ. ಅಲ್ಲಲ್ಲಿ ಅಸಂಖ್ಯ ಕಿಂಡಿಗಳೂ ಚಿಕ್ಕಚಿಕ್ಕ ಬುರುಜುಗಳೂ ಇವೆ. ಈಗ ಈ ಗೋಡೆಗಳ ಸುತ್ತಮುತ್ತಲೂ ಮರಗಿಡಬಳ್ಳಿಗಳು ಬೆಳೆದು ನಿಂತು ಕಾಡಾಗಿ ಪರಿಣಮಿಸಿದೆ. ಕೋಟೆಯನ್ನು ಕೆಳದಿ ಅರಸ ಸದಾಶಿವ ನಾಯಕ (೧೫೩೦(?)–೧೫೬೬) ಕಟ್ಟಿಸಿದನೆಂದು ತಿಳಿದುಬರುತ್ತದೆ[6]. ಅದಲ್ಲದೆ ಈ ಕೋಟೆಯನ್ನು ಕೆಳದಿಯ ಅರಸರು ಆಗಾಗ ಭದ್ರಪಡಿಸುತ್ತಲೇ ಬಂದರು. ಎರಡನೆಯ ಸೋಮಶೇಖರನಾಯಕ (೧೭೧೪–೧೭೩೯) ಈ ಕೋಟೆಯನ್ನು ಜೀರ್ಣೋದ್ಧಾರ ಮಾಡಿಸಿದುದಲ್ಲದೆ ಗಾಳಿಯುಪ್ಪರಿಗೆಯನ್ನೂ ಕಟ್ಟಿಸಿದ[7]. ಈ ಕೋಟೆಯ ಅಂಚಿನಲ್ಲಿ (ಊರನ್ನೊಳಗೊಂಡು) ಕಲ್ಲಿನಿಂದ ಕಟ್ಟಿರುವ ಗೋಡೆಯೊಂದಿದೆ. ಕೋಟೆಯಿಂದ ಹೊರಗಡೆ ಹೋಗಲು ಚಪ್ಪೆಬಾಗಿಲು, ಕೌರಿಬಾಗಿಲು, ಭದ್ರಾಪುರದ ಬಾಗಿಲು, ದಿಡ್ಡಿ(ಗಿಡ್ಡಿ)ಬಾಗಿಲುಗಳೆಂಬ ಹಲವು ಬಾಗಿಲುಗಳಿವೆ.

ಊರೊಳಗೆ ವೆಂಕಟಪ್ಪ ನಾಯಕನಿಂದ ಪ್ರತಿಷ್ಠಿತವಾದ ವಿನಾಯಕ, ವಿರೂಪಾಕ್ಷ, ವಿಜಯ ವಿಠಲ, ವೀರಭದ್ರ, ನರಸಿಂಹ, ಗುರುನಾಥ, ಭುವನೇಶ್ವರಿ (ಮಾರಮ್ಮ) ಮುಂತಾದ ದೇವ–ದೇವತೆಗಳ ಗುಡಿಗಳಿವೆ. ಈ ಗುಡಿಗಳು ದುರ್ಗದ ಹೊರಭಾಗದಲ್ಲಿ ದುರ್ಗಕ್ಕೆ ಕಾವಲು ಇರುವಂತೆ ಸುತ್ತಲೂ ಕಂಗೊಳಿಸುತ್ತವೆ. ಅವುಗಳಲ್ಲಿ ಕೆಲವು ಈಗ ಹಾಳುಬಿದ್ದಿವೆ. ಇಂದಿಗೂ ಈ ಎಲ್ಲ ಗುಡಿಗಳಲ್ಲೂ ಪೂಜೆ ನಡೆಯುತ್ತದೆ. ಭುವನೇಶ್ವರಿ ಅಥವಾ ಮಾರಮ್ಮ ಎಂದು ಕರೆಯುವ ಈ ದೇವತೆಯ ಹೆಸರಲ್ಲಿ ಎರಡು ವರ್ಷಕ್ಕೊಂದಾವರ್ತಿ ಬಹು ವಿಜೃಂಭಣೆಯಿಂದ ಜಾತ್ರೆ (ಮಾರಮ್ಮನ ಜಾತ್ರೆ) ನಡೆಯುತ್ತದೆ. ಸುತ್ತಮುತ್ತಲಿನ ಜನರೆಲ್ಲ ಬಂದು ಈ ಜಾತ್ರೆಯಲ್ಲಿ ತುಂಬ ಸಡಗರದಿಂದ ಪಾಲ್ಗೊಳ್ಳುತ್ತಾರೆ. ಇಲ್ಲಿ ಪುರಾತನವಾದ ಮಸೀದಿಯೂ ಇದೆ. ಕವಲೇದುರ್ಗದ ಹಾಜಿ ಸೈಯದ್ ಹಸನ್ ಸಾಹೇಬ್ ಎಂಬವರಲ್ಲಿದ್ದ ತಾಮ್ರ ಶಾಸನಗಳಿಂದ[8] "ಶಕವರುಷ ೧೫೪೯ನೆಯ ಪ್ರಭವ ಸಂವತ್ಸರದ ವೈಶಾಖಶುದ್ಧ ೧೫ಲು ಶ್ರೀಮದೆಡವಮುರಾರಿ ಕೋಟೆಕೋಲಾಹಳ ವಿಸುದ್ಧವೈದಿಕಾದ್ವೈತ್ರಸಿದ್ಧಾಂತ್ರಪ್ರತಿಷ್ಠಾಪಕ ಶಿವಗುರುಭಕ್ತಿಪರಾಯಣನಾದ' ಕೆಳದಿಯ ಅರಸ ವೆಂಕಟಪ್ಪ ನಾಯಕನು (೧೫೮೬–೧೬೨೯) ಇದನ್ನು (ಮಸೀದಿ) ಕಟ್ಟಿಸಿ ಮಹಮಂಕನಾಡಸೀಮೆಯೊಳಗಣ 'ಹಲಸಿನಹಳ್ಳಿ' ಗ್ರಾಮದಲ್ಲು, ಅದೇ ನಾಡ ಸೀಮೆಯೊಳಗಣ 'ಚಂದವಳ್ಳಿ' ಗ್ರಾಮದಲ್ಲೂ" ಭೂಮಿಯನ್ನು ದತ್ತಿಯಾಗಿ ಕೊಟ್ಟನೆಂದು ತಿಳಿದುಬರುತ್ತದೆ. ಇದು ಕೆಳದಿ ಅರಸರ ಧರ್ಮಸಹಿಷ್ಣುತೆ ಹಾಗೂ ಸಮದರ್ಶಿತ್ವವನ್ನು ತೋರಿಸುವ ಕುರುಹಾಗಿದೆ[9].

ಇವಲ್ಲದೆ ಕಲ್ಯಾಣಮಂಟಪ, ಟಂಕಶಾಲೆ[10], ಶಿವಗಂಗಾ ಎಂಬ ಜಲಕ್ರೀಡಾಕೊಳಗಳು, ಪುರಾತನ ಗೋರಿಗಳು, ಬಾವಿಗಳು ಹೇರಳವಾಗಿದೆ. ಕೆಳದಿ ಅರಸರ ಕಾಲದಲ್ಲಾದ, ತಿಮ್ಮಣ್ಣ ನಾಯಕನೆಂಬುವನು ಕಟ್ಟಿಸಿದ ಕೆರೆ, ಬಳಿಗಿ ಅರಸರು ಕಟ್ಟಿಸಿದ ಕೆರೆ (ಮಠದ ಕೆರೆ) ಹಾಗೂ ಶಿಸ್ತುಗಾರ ಶಿವಪ್ಪ ನಾಯಕನ (೧೬೪೫–೧೬೬೦) ಮೊದಲನೆಯ ಹೆಂಡತಿಯಾದ ಲಿಂಗಮ್ಮಾಜಿಯ ಹೆಸರಿನ ಕೆರೆ (ಲಿಂಗಮ್ಮಾಜಿ ಕೆರೆ) ಇಲ್ಲಿವೆ. ಪರಿಹಾರ ಮಠ, ಗವಿಮಠವೆನ್ನಲಾದ ಪಾಳುಬಿದ್ದಿರುವ ಮಠಗಳು

---

6 K. D. Swaminathan, *The Nāyakas of Ikkēri*, p. 27.

7 ಲಿಂಗಣ್ಣ ಕವಿ ವಿರಚಿತ 'ಕೆಳದಿ ನೃಪವಿಜಯ.' ಪ್ರ. ೧೬೮. ಸಂ. ಆರ್. ಶಾಮಶಾಸ್ತ್ರಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೩

8 *E. C.* VIII–Ins. 38–39

9 ಕೆಳದಿ ರಾಜ್ಯದಲ್ಲಿ ಅನೇಕ ಶೈವ, ವೀರಶೈವ, ವೈಷ್ಣವ ಮಠಗಳಲ್ಲದೆ, ಜೈನ ಬಸದಿಗಳು, ಮಸೀದಿಗಳು ಮತ್ತು ಚರ್ಚುಗಳಿದ್ದುವೆಂದು ಡಾ. ದೀಕ್ಷಿತರು ತಮ್ಮ ಉಪನ್ಯಾಸ ಗ್ರಂಥಮಾಲೆಯ ಹೊತ್ತಗೆಯಲ್ಲಿ ಹೇಳಿದ್ದಾರೆ (ಕೆಳದಿ ನಾಯಕರು ಪು. ೫೨).

10 ಈಗ ಇಲ್ಲಿ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದೆ.

ಇಲ್ಲಿವೆ. ತಿಮ್ಮಣ್ಣ ನಾಯಕನ ಕೆರೆಯ ದಂಡೆಯ ಮೇಲೆ ಮಹಾನವಮಿಯ ಬಯಲು ಎಂದು ಕರೆಯುವ ಬಯಲು ಸ್ಥಳದಲ್ಲಿ ಅಸಂಖ್ಯಾತ ಮಹಾಸತಿಕಲ್ಲುಗಳಿವೆ. ಶಾಸನಗಳಿಲ್ಲವಾದರೂ ಇವು ಆಗಿನ ಕಾಲದಲ್ಲಿ ಗ್ರಾಮರಕ್ಷಣೆಗೆ ಪ್ರಾಣಾರ್ಪಣೆ ಮಾಡಿದ ಸತಿಪತಿಯರ ಸಾಹಸದ ಕಥೆಯನ್ನು ಮುಕ್ತಮನದಿಂದ ಸಾರುತ್ತವೆ.

ಇಲ್ಲಿಯ ಬೆಟ್ಟದ ಮೇಲೆ ತೊಲೆತಮ್ಮ, ಮುಂಡಿಗೆ ತಮ್ಮರೆಂಬ ಪರಾಕ್ರಮಶಾಲಿಗಳಾದ ಇಬ್ಬರು ಸಹೋದರರು ಸೇನೆಯನ್ನು ಕಟ್ಟಿ 'ವಿಶೇಷವಾಗಿ ಮೆಲೆತು ನಡೆಯುತ್ತ ಇದ್ದು' ಅವರನ್ನು ವೆಂಕಟಪ್ಪ ನಾಯಕ ಸದೆಬಡಿದು ಕೋಟೆಯನ್ನು ಕೊಂಡ ಅನಂತರ ಇದನ್ನು 'ಭುವನಗಿರಿದುರ್ಗ' ಎಂದು 'ನಾಮಾಂಕಿತಮಾಡಿ' ದೊಡ್ಡ ಸಂಕಣ್ಣ ನಾಯಕ (೧೫೬೬) ಕಾಶೀಕ್ಷೇತ್ರದಿಂದ ತಂದ ದಿವ್ಯ ಲಿಂಗವನ್ನು ವಿಶ್ವೇಶ್ವರಲಿಂಗ ಎಂದು ಹೆಸರಿಸಿ ಕೋಟೆಯೊಳಗೆ ಪ್ರತಿಷ್ಠೆ ಮಾಡಿಸಿದುದಲ್ಲದೆ ಅದಕ್ಕೆ ಪೂಜೆಯ ವ್ಯವಸ್ಥೆ ಮಾಡಿದನೆಂದೂ 'ಭಂಡಾರ', 'ಜ್ಞಾನಶಾಲೆಯುಗ್ರಾಣ' 'ಪಣತವಾನೆಯ ಮಹಲು', 'ಕುದುರೆಯ ಲಾಯ' ಮುಂತಾದ 'ಮಹಲು'ಗಳನ್ನು ಕಟ್ಟಿಸಿದನೆಂದೂ ಕೆಳದಿ ನೃಪವಿಜಯದಲ್ಲಿ ಹೇಳಿದೆ[11]. ಶಿಖರದಲ್ಲಿ ಕಟ್ಟಿಸಿದ ಈಶ್ವರ ದೇವಾಲಯಕ್ಕೆ ಬೆಟ್ಟದ ಮತ್ತು ಮಂದಿರದ ಶಿಖರಗಳ ವಿಶೇಷತೆಯನ್ನು ತೋರಿಸುವುದಕ್ಕಾಗಿಯೋ ಏನೋ ಶಿಖರೇಶ್ವರ ದೇವಾಲಯವೆಂದು ಕೆಳದಿ ದೊರೆ ಬಸವ ಭೂಪಾಲ (ಹಿರಿಯ ಬಸವಪ್ಪ ನಾಯಕ ೧೬೯೭–೧೭೧೪) ತನ್ನ ಶಿವತತ್ವರತ್ನಾಕರ ಎಂಬ ಗ್ರಂಥದಲ್ಲಿ ಹೇಳಿದ್ದಾನೆ. ಇದಲ್ಲದೆ ಲಕ್ಷ್ಮೀನಾರಾಯಣ, ಮೈಲಾರೇಶ್ವರ ಮುಂತಾದ ಗುಡಿಗಳನ್ನು ಕೋಟೆಯ ಒಳಭಾಗದಲ್ಲಿ ಕಟ್ಟಿಸಿದ. ಇವಲ್ಲದೆ ಇನ್ನೂ ಅನೇಕ ಪಾಳುಬಿದ್ದಿರುವ ಗುಡಿಗಳು ಕೋಟೆಯ ಒಳಭಾಗದಲ್ಲಿವೆ. ಇವೆಲ್ಲವೂ ಕೆಳದಿ ನಾಯಕರು ಕಲಾಪ್ರಪಂಚಕ್ಕೆ ಸಲ್ಲಿಸಿದ ಕಾಣಿಕೆಯ ಕುರುಹುಗಳಾಗಿ ಉಳಿದಿವೆ. ಕಾಶಿ ವಿಶ್ವೇಶ್ವರ ದೇವಾಲಯ ಶಿಲ್ಪಕಲಾವೈಭವದಿಂದ ಕೂಡಿದೆ. ಕೆಳದಿ ಅರಸರ ಈ ದೇವಸ್ಥಾನಗಳು ಮಲೆನಾಡ ವಾಸ್ತು ಶಿಲ್ಪದ ಕೆಲವು ವಿಶಿಷ್ಟ ಮಾದರಿಗಳೆನ್ನಿಸಿವೆ.

ಪಾಳೆಯಗಾರರ ಕಾಲದಲ್ಲಿ ನಿರ್ಮಿಸಲಾದ ಉತ್ತಮ ಶಿಲ್ಪದಿಂದ ಕೂಡಿದ ಹಲವು ಕಲ್ಯಾಣಿಗಳು ಇವೆ. ಅವುಗಳಲ್ಲಿ ಶಾಂತಗಂಗೆ ಸುಂದರವಾಗಿದೆ. ಬಾಗಿಲು, ಕಲ್ಲಿನ ಚಪ್ಪಡಿಗಳು ಮತ್ತು ಮುರಿದು ಬಿದ್ದಿರುವ ಕಲ್ಲು ಕಂಭಗಳು ಮುಂತಾದ, ಪಾಳೆಯಗಾರರ ಕಾಲದ ಅರಮನೆಯ ಅವಶೇಷಗಳು ಇಂದಿಗೂ ಉಳಿದುಬಂದಿವೆ. ಇವುಗಳಲ್ಲಿ ೮ ಅಡಿ ಉದ್ದ ೭ ಅಡಿ ಅಗಲವಿರುವ ಕಲ್ಲಿನ ಮಂಚವೂ ಒಂದು. ರಾಣಿಯ ಮಂಚವೆಂದು ಹೆಸರಿಸುವ ಈ ಮಂಚವನ್ನು ೧೬೯೪ರಲ್ಲಿ ನಿರ್ಮಿಸಲಾಯಿತೆಂದು ಅದರ ಮೇಲಿರುವ ಶಾಸನದಿಂದ ತಿಳಿದಿದೆ. ಉತ್ತಮ ರೇಖಾಚಿತ್ರಗಳಿಂದ ಕೂಡಿದ ಈ ಮಂಚ ತುಂಬ ಆಕರ್ಷಕವಾಗಿದೆ. ಈಗ ಇದು ಮೈಸೂರಿನಲ್ಲಿದೆ[12]. ಇವಲ್ಲದೆ ಮದ್ದುಗುಂಡುಗಳನ್ನು ಶೇಖರಿಸಿಡುವ ಕೋಣೆಗಳು. ಕಮಂಡಲ ತೀರ್ಥ, ತುಪ್ಪ ಮತ್ತು ಎಣ್ಣೆಯ ಬಾವಿಗಳು, ಕಲ್ಲು ಮರಿಗೆಗಳು ಮುಂತಾದುವೂ ಇಲ್ಲಿವೆ.

ಇವುಗಳಲ್ಲದೆ ಈ ಸ್ಥಳದಲ್ಲಿ ಕೆಳದಿ ಅರಸರ ಕಾಲದಲ್ಲಿ ದುರ್ಗದ ತಿಂಮಣ (ತಿಮ್ಮಣ್ಣ)ನೆಂಬವನು ಕಟ್ಟಿಸಿಕೊಟ್ಟ ಮಹಾಮಹತ್ತಿನ ಮಠವೆಂದು ಕರೆಯುವ ಒಂದು ಲಿಂಗಾಯತ ಮಠವಿದೆ. ಕೆಳದಿ ಅರಸರ ಕಾಲದಲ್ಲಿ ದತ್ತಿಗಳನ್ನು ಪಡೆದು ಈ ಮಠ ತುಂಬ ಅಭಿವೃದ್ಧಿಹೊಂದಿತು. ಈ ಮಠದ ವಿಷಯದಲ್ಲಿ ಕೆಳದಿ ವೆಂಕಟಪ್ಪನಾಯಕನ ಸೇವೆಯಂತೂ ಅಮೋಘವಾದುದು. ಇಲ್ಲಿ ಕೆಳದಿ ಅರಸರಿಗೆ ಸೇರಿದ ಅಸಂಖ್ಯಾತ ತಾಮ್ರ ಶಾಸನಗಳು[13], ಓಲೆಗರಿಗಳು ಇವೆ. ಇಲ್ಲಿರುವ ತಾಮ್ರಶಾಸನಗಳ ಪೈಕಿ ಐದು ಶಾಸನಗಳು ಕೆಳದಿ ಅರಸ ವೆಂಕಟಪ್ಪ ನಾಯಕನಿಗೂ[14] (೧೫೮೬–೧೬೨೯) ಒಂದು ವೀರಪ್ಪ

11 ಲಿಂಗಣ್ಣಕವಿ 'ಕೆಳದಿ ನೃಪವಿಜಯ', ಮೈಸೂರು ವಿಶ್ವವಿದ್ಯಾನಿಲಯ, ೧೯೭೩, ಪುಟ ೭೫

12 C. Hayavadana Rao, *Mysore Gazetteer*, vol. v, p. 1303

13 *E. C.* VIII, Tl. 40–90 ಮತ್ತು *M. A. R.* 1943, Ins 37–45

ನಾಯಕನಿಗೂ (೧೬೩೦) ಹದಿನಾರು ವೀರಭದ್ರ ನಾಯಕನಿಗೂ (೧೬೨೯–೧೬೪೫) ಒಂದು ಶಿವಪ್ಪ ನಾಯಕನಿಗೂ(೧೬೪೫-೧೬೬೦) ಮೂರು ಭದ್ರಪ್ಪ ನಾಯಕನಿಗೂ (೧೬೬೧–೧೬೬೪) ಹದಿನಾರು ಸೋಮಶೇಖರ ನಾಯಕನಿಗೂ (೧೬೬೪-೧೬೭೧) ಹದಿನಾಲ್ಕು ಇದೇ ಸೋಮಶೇಖರ ನಾಯಕನ ಧರ್ಮಪತ್ನಿ ಚೆನ್ನಮ್ಮಾಜಿಗೂ (೧೬೭೧-೧೬೯೬) ಹತ್ತು ಹಿರಿಯ ಬಸವಪ್ಪ ನಾಯಕನಿಗೂ (೧೬೯೭–೧೭೧೪) ಎರಡು ಸೋಮಶೇಖರ ನಾಯಕನಿಗೂ (೧೭೧೪–೧೭೩೯) ಸೇರಿವೆ. ಇವಲ್ಲದೆ ಬೆಳಗಿ ಘಂಟೆವಡೆಯರ ಪೌತ್ರರಾದ ಶಿವಪ್ಪ ನಾಯಕರ ಪುತ್ರರಾದ ಇಮ್ಮಡಿ ಶಿವಪ್ಪನಾಯಕನಿಗೆ ಸೇರಿದ ಒಂದು ಶಾಸನವೂ (೧೬೬೪) ಇದೆ. ಮಠಗಳಲ್ಲೆಲ್ಲ ಇದು ಪ್ರಧಾನ ಮಠ (ಮಹಾಮಹತ್ತಿನ ಮಠ) ಆಗಿದ್ದುದರಿಂದ ವಿವಿಧ ಸ್ಥಳಗಳ ಮಠಗಳಿಗೆ ಕೊಟ್ಟ ದತ್ತಿಗಳನ್ನು ಉಲ್ಲೇಖಿಸುವ ಶಾಸನಗಳು ಈ ಮಠದಲ್ಲಿ ಉಳಿದುಕೊಂಡು ಬಂದಿರಬಹುದು.[15] ಈ ಶಾಸನಗಳಿಂದ ಅಂದಿನ ಪ್ರಭುಗಳು ಹಾಗೂ ಇತರರು ಸದಾಶಿವ ಸಾಗರ (ಸಾಗರ), ಬಾರಕೂರು, ಭದ್ರಾಪುರ, ಆಂಬಿಗೆ, ಕೆರೆಕೊಪ್ಪ, ಚಿಕ್ಕೋಡು, ಮಂಡುಬ, ಬಸರೂರು, ಆರಗ, ಹುಲಿಕಲ್ಲು, ಹೊಸಂಗಡಿ, ಬಿದನೂರು (ನಗರ), ಕೋಟೇಶ್ವರ, ಕಡೆಕೊಪ್ಪ, ಉಳುವೆ, ಬಿದಿರಳ್ಳಿ, ಹೊಸಹಳ್ಳಿ, ಆಗುಂಬೆ, ಮಂಡಲಿ, ತೀರ್ಥರಾಜಪುರ, ಕೋಣದೂರು, ಕಾರಗಲ್ಲು, ಕವಲೇದುರ್ಗ ಮುಂತಾದ ಕಡೆಗಳಲ್ಲಿ ಮಠಗಳನ್ನು ನಿರ್ಮಾಣ ಮಾಡಿಸಿ ದತ್ತಿಗಳನ್ನು ಕೊಟ್ಟರೆಂದು ತಿಳಿದುಬರುತ್ತದೆ. ಮಠಗಳ ನಿರ್ಮಾಣ ಹಾಗೂ ಅವುಗಳಿಗೆ ಅಪಾರ ಭೂಮಿಯನ್ನು ದತ್ತಿ ಕೊಡುವುದು ಕೆಳದಿ ಅರಸರ ಉದಾರ ನೀತಿಯಾಗಿತ್ತು. ಅರಸರು ಮಾತ್ರವಲ್ಲದೆ ಅವರ ಪತ್ನಿಯರು, ತಾಯಂದಿರು, ಸರ್ಕಾರಿ ಅಧಿಕಾರಿಗಳು, ಅವರ ಪತ್ನಿಯರು, ಅಲ್ಲದೆ ಖಾಸಗಿ ವ್ಯಕ್ತಿಗಳಾದ ಶಿವಲಿಂಗಿ, ಪುಟ್ಟತಾಯಿ ಜಂಬುಬಂದಿ (ನೃತ್ಯದ ಹುಡುಗಿಯರು), ಶಾಂತಯ್ಯ ಮುಂತಾದವರು ಸ್ವ ಇಚ್ಛೆಯಿಂದ ಮುಂದೆ ಬಂದು ಮಠಗಳನ್ನು ಕಟ್ಟಿಸಿ ಸರ್ಕಾರದಿಂದ ಭೂಮಿಯನ್ನು ಕೊಂಡು ಅದನ್ನು ಆ ಮಠಗಳಿಗೆ ದಾನಮಾಡಿದ ಉಲ್ಲೇಖಗಳನ್ನು ಈ ಶಾಸನಗಳಲ್ಲಿ ನಾವು ಕಾಣಬಹುದು[16]. ವಿದ್ಯಾಪೀಠಗಳಾಗಿ, ಪೂಜಾಕ್ಷೇತ್ರಗಳಾಗಿ, ಸಾಮಾಜಿಕ ಜೀವನದ ಕೇಂದ್ರಗಳಾಗಿ ಮತ್ತು ಇವೆಲ್ಲಕ್ಕೂ ಮಿಗಿಲಾಗಿ ವೀರಶೈವ ತತ್ತ್ವದ ಪ್ರಮುಖ ಕೇಂದ್ರಗಳಾಗಿ ವಿವಿಧ ಹಂತದ ಅಧಿಕಾರಗಳ ಮೂಲಕ ಬಹುಮುಖ ಕಾರ್ಯ ನಡೆಸುತ್ತಿದ್ದ ಪವಿತ್ರ ಸಂಸ್ಥೆಗಳೇ ಈ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಮಠಗಳು.

ಇಲ್ಲಿರುವ ಶಾಸನಗಳಲ್ಲಿ ಕವಲೇದುರ್ಗದ ಮಹಾಮಹತ್ತಿನ ಮಠಕ್ಕೂ ಕೊಟ್ಟ ದತ್ತಿಯನ್ನು ಹೆಸರಿಸುವ ಕೆಲವು ಶಾಸನಗಳಿವೆ. ಸು. ೧೬೯೦ ಶಾಸನ[17] "ಶ್ರೀಮದನೇಕ ಬ್ರಂಹ್ಮಾಂಡಭಾಂಡ ಗರ್ಭಗರ್ಭೀಕೃತ ವಿಧಿ ಮಧುಸೂಧನ ತ್ರಿದಿಶಾಧೀಶ್ವರಾದ್ಯನೇಕ ದೇವತಾ ಮಕುಟಮಣಿಗಣಕಿರಣದೀಪ್ತ ಪಾದಪಯೋಜ ಪರಿವಲೀಲಾ ಸುಕೃತ ಕಳೇವರಮಪ್ಪ ಶ್ರೀನಂದಿನಾಥ ಶ್ರೀಭೃಂಗಿನಾಥ ಶ್ರೀ ವೀರಭದ್ರದೇವರ ಮುಖ್ಯರಾದ ಸಜ್ಜನಶುಭ ಶಿವಾಚಾರ ಸಂಪನ್ನರಾದ ದೇವಾಪ್ರಭೃತ್ವೀ ಮಹಾಮಹತ್ತಿನೊಳಗಾದ ಭುವನಗಿರಿದುರ್ಗದಲ್ಲೂ" (ಕವಲೇದುರ್ಗದಲ್ಲಿ) 'ದುರ್ಗದ ತ್ರಿಮಣ್ಣ' (ತಿಮ್ಮಣ್ಣ) ಕಟ್ಟಿಸಿದ 'ಮಹತ್ತಿನ ಮಠದ ಧರ್ಮಕ್ಕೆ' ಕೆಳದಿಯ ವೆಂಕಟಪ್ಪ ನಾಯಕನು ಕೊಟ್ಟ ದತ್ತಿಯ 'ಪಟ್ಟೆಯು ಶಿಥಿಲವಾದ ಸಂಬಂಧ' ಚೆನ್ನಮ್ಮಾಜಿಯು ಪುನಃ ಈ ತಾಮ್ರಶಾಸನದಲ್ಲಿ ಬರೆಸಿ ಅದೇ ದತ್ತಿಯನ್ನು ಮುಂದುವರಿಸಿದ್ದನ್ನು ಕಾಣಬಹುದು.

---

14 ಇಲ್ಲಿ ದೊರೆತ ಈ ದೊರೆಯ ೭ ಶಾಸನಗಳಲ್ಲಿ ಎರಡು ಸ್ಥಳದ ಖಾಜಿಯಿಂದ ಬಂದಿವೆ. ಅವನ್ನು ಈ ಲೇಖನದ ಮಧ್ಯದಲ್ಲಿ ಹೇಳಿದೆ.

15 ಡಾ. ಎಂ. ಹೆಚ್. ಕೃಷ್ಣ ಅವರು, ಎಲ್ಲಾ ಮಠಗಳು ಹಾಳು ಬಿದ್ದುದರಿಂದ ಅಲ್ಲಿಯ ತಾಮ್ರಶಾಸನಗಳನ್ನು ಈ ಮಠಕ್ಕೆ ತಂದಿರಬಹುದೆಂದು ಅಭಿಪ್ರಾಯ ಪಡುತ್ತಾರೆ. (*M. A. R.* 1943–p. 118)

16 *EC*. VIII, Tl 71, 85 ಮತ್ತು ಇತರ ಶಾಸನಗಳು

17 *EC*. VIII, Tl. 46

ಇನ್ನೊಂದು ಶಾಸನ[18] ಕೆಳದಿ ಅರಸ ಸೋಮಶೇಖರ ನಾಯಕರ ಕಾಲಕ್ಕೆ ಸೇರಿದುದು. ಕೆಲವು ಸಂದರ್ಭಗಳಲ್ಲಿ ಮಠವೇ ಸರ್ಕಾರದಿಂದ ಭೂಮಿಯನ್ನು ಕೊಂಡದ್ದಕ್ಕೆ ಇದೊಂದು ನಿದರ್ಶನ[19]. ಇಲ್ಲಿಯ 'ಮಹತ್ತಿನ ಮಠದವರ ಕೈಯ ಅರಮನೆಗೆ ಕ್ರಯದ ಬಗೆ ಗ ೨೧೦೫ ತೆಗೆದುಕೊಂಡು' ಮೊಸರೂರ ಸೀಮೆಯ ಕಲ್ಲೂರ ಹೋಬಳಿ ಕಳಲೆ ಗ್ರಾಮದಲ್ಲಿ ಭೂಮಿಯನ್ನು ಕೊಟ್ಟಿದ್ದುದನ್ನು ಇಲ್ಲಿ ಕಾಣಬಹುದು. ಹಾಗೆಯೇ ಇದೇ ಮಠದ ಇನ್ನೊಂದು ಶಾಸನವು[20] 'ಮಹತ್ತಿನವರ ಕೈಯಲ್ಲಿ ಕ್ರಯ ಗ ೯೦೧॥೦ ಶಾಸನವ ಬರಸಿಕೊಡುವ ಬಗೆ ಗ ೧೯೫॥೦ ಒಟ್ಟು ಗ ೧೦೯೭ ಅರಮನೆಗ ತೆಗೆದುಕೊಂಡು' ಮರುಗಸೂರ ಗ್ರಾಮದಲ್ಲಿ 'ತೊಂಭತ್ತ ಆರುವರಹಂನ್ನು ಯೇಳು ಹಣ ಹಾಗದ ಸ್ವಾಸ್ಥೇನು ಯೀ ಮಹತ್ತಿನ ಮಠದ ಧರ್ಮಕೆ ಶಿವಾರ್ಪಿತವಾಗಿ ಬಿಟ್ಟು ಯೀ ಭೂಮಿಗೆ ನೆಟ್ಟಲಿಂಗ ಮುದ್ರೆ ಕಲ್ಲಿನೊಳಗುಳ್ಳ ನಿಧಿನಿಕ್ಷೇಪಜಲಪಾಷಾಣಅಕ್ಷಿಣಿ ಆಗಾಮಿಸಿದಸಾಧ್ಯಂಗಳೆಂಬ ಅಷ್ಟಭೋಗ ತೇಜಸ್ವಾಮ್ಯಂಗಳು ಯೀ ಭೂಮಿಯಲ್ಲಿ ಸಸ್ಯಾರಾಮ ಮುಂತಾಗಿ ಯೇನು ಅಧಿಕ ಫಲವಾಹಂತೆ ಸಹ ಆಗುಮಾಡಿಕೊಂಡು ಮಹತು ಪಾರಂಪರ್ಯವಾಗಿ ಆಚಂದ್ರಾರ್ಕಸ್ಥಾಯಿಗಳಾಗಿ ಸುಖದಿಂ ಮಠದ ಧರ್ಮವ ನಡಸಿಕೊಂಡು' ಬರುವುದೆಂದು ಈ ಮಹತ್ತಿನ ಮಠಕ್ಕೆ ಚೆನ್ನಮ್ಮಾಜಿಯ ಪುತ್ರ ಬಸವಪ್ಪ ನಾಯಕ ಶಾಸನವನ್ನು ಬರೆಸಿಕೊಟ್ಟಿದ್ದಾನೆ.

ಈ ಸ್ಥಳದಲ್ಲಿ ದೊರೆತ ಅತ್ಯಂತ ಪ್ರಾಚೀನ ಶಾಸನ[21] ಕ್ರಿ.ಶ.ಸು. ೧೩೬೨ರದು. ಇದು 'ಮಹಾಮಂಡಳೇಶ್ವರ' 'ಅರಿರಾಯವಿಭಾಡ' 'ಭಾಷೆಗೆ ತಪ್ಪುವರಾಯರ ಗಂಡ' 'ಪೂರ್ವಪಶ್ಚಿಮ ದಕ್ಷಿಣ ಸಮುದ್ರಾಧಿಪತಿ' ಎನ್ನಿಸಿಕೊಂಡ ವಿಜಯನಗರದ ಅರಸ ವೀರ ಬುಕ್ಕಣ್ಣವೊಡೆಯರ ಕುಮಾರ ಮಲೆಗಿರಿಯ ವಿರುಪಣ್ಣವೊಡೆಯರದು. ಈ ದೊರೆ ಆರಗ ರಾಜ್ಯದಿಂದ[22] ರಾಜ್ಯವಾಳುತ್ತಿರುವಾಗ 'ನಗರಿಯ ಕೋಟೆಯ ಮಯಿಲಾರ ದೇವರ' ಅಮೃತ ಪಡಿಭೋಗಕ್ಕೆ ಭೂಮಿಯನ್ನು ದತ್ತಿಯಾಗಿ ಬಿಟ್ಟನೆಂದು ಇದರಲ್ಲಿ ಹೇಳಿದೆ.

ಕವಲೇದುರ್ಗ ಗಂಡಾಂತರ ಪ್ರಸಂಗಗಳಲ್ಲಿ ಕೆಳದಿಯ ಅರಸರಿಗೆ ರಕ್ಷಣೆಯ ಸ್ಥಳವಾಗಿತ್ತು. ಬಿಜಾಪುರದ (ವಿಜಾಪುರದ) ಸುಲ್ತಾನನ ದಂಡನಾಯಕನಾದ ರಣದುಲ್ಲಾಖಾನ ಇಕ್ಕೇರಿಯನ್ನು ಜಯಿಸಲು ಹೊರಟಾಗ ವೀರಭದ್ರ ನಾಯಕನಿಗೆ (೧೬೨೯–೧೬೪೫) ಶತ್ರುಗಳನ್ನು ಎದುರಿಸುವುದು ಕಷ್ಟಕರವಾದಾಗ. ಕುಟುಂಬ ಪರಿವಾರ ಸಮೇತನಾಗಿ ಇಕ್ಕೇರಿಯನ್ನು ಬಿಟ್ಟು ಕವಲೇದುರ್ಗಕ್ಕೆ ಬಂದ. ಆದರೆ ಇಕ್ಕೇರಿ ವಶವಾದ ಅನಂತರ[23] ರಣದುಲ್ಲಾಖಾನ ಕೆಂಗ ಹನುಮನೆಂಬುವನ ಸಹಾಯದಿಂದ ನಲವತ್ತು ಸಾವಿರ ಕುದುರೆ. ಒಂದು ಲಕ್ಷ ಕಾಲಾಳು ಹಾಗೂ ನಲವತ್ತು ಆನೆಗಳಿದ್ದುವೆನ್ನಲಾದ ಬಹು ದೊಡ್ಡ ಸೈನ್ಯ ಸಮೇತನಾಗಿ ಕವಲೇದುರ್ಗವನ್ನು ಮುತ್ತಿಗೆ ಹಾಕಿದಾಗ ವೀರಭದ್ರ ನಾಯಕ ಶಾಂತಿಯೊಪ್ಪಂದವನ್ನು ಮಾಡಿಕೊಳ್ಳಬೇಕಾಯಿತು[24].

ಸೈನ್ಯ ಸಮೇತನಾದ ಬಿಜಾಪುರದ ಎರಡನೆ ಆದಿಲ್‌ಷಾಹ ಕೆಳದಿ ಅರಸರ ಮೂರನೆಯ ರಾಜಧಾನಿಯಾದ ಬಿದನೂರಿಗೆ (ನಗರ) ಮುತ್ತಿಗೆ ಹಾಕಿದಾಗ ಅಲ್ಲಿಯ ದೊರೆ ಭದ್ರಪ್ಪ ನಾಯಕ(೧೬೬೧–

---

18 *EC*. VIII, Tl. 78

19 ಇದೇ ರೀತಿ ತೂದೂರಿನಲ್ಲಿ ನಿರ್ಮಿತವಾದ ಶಿವರಾಯಪುರದ ಮಹಂತಿನ ಮಠವು ಭೂಮಿಯನ್ನು ಸರಕಾರದಿಂದ ಕೊಂಡುಕೊಂಡಿದೆ.

20 *EC*. VIII, Tl. 79

21 *EC*. VIII-Tl 37

22 ಅರಗ ಎಂಬ ಸ್ಥಳ ಕವಲೇದುರ್ಗಕ್ಕೆ ೬ ಮೈಲಿಗಳ ದೂರದಲ್ಲಿದೆ.

23 ಶಕವರ್ಷ ೧೫೬೦, ಈಶ್ವರ, ಪುಷ್ಯ ಬ ೧೧ರಲ್ಲಿ (೩೦ ಡಿಸೆಂಬರ್ ೧೬೩೮) ಈ ದಾಳಿ ನಡೆಯಿತೆಂದು ಕೆಳದಿನೃಪವಿಜಯದಲ್ಲಿ ಹೇಳಿದೆ.

24 K. D. Swaminathan, *The Nāyakās of Ikkēri*, P. 73

೧೬೬೪) ಶತ್ರುಗಳನ್ನು ಎದುರಿಸಲಾರದೆ ಕವಲೇದುರ್ಗಕ್ಕೆ ಪಲಾಯನ ಮಾಡಿದ. ಅಂಬಲಿಗೊಳ ಎಂಬಲ್ಲಿ ಘೋರವಾದ ಯುದ್ಧವಾಗಿ ಬಿದನೂರು ಸೈನ್ಯ ಸಂಪೂರ್ಣ ಸೋಲನ್ನು ಅನುಭವಿಸಬೇಕಾಯಿತು. ಬಿದನೂರು ಸಂಪೂರ್ಣವಶವಾದ ಅನಂತರ ಆದಿಲ್ ಷಾಹನ ಸೈನ್ಯ ಷನ್‌ಜರ್ ಖಾನನೆಂಬ ದಂಡ ನಾಯಕನೊಂದಿಗೆ ಕವಲೇದುರ್ಗಕ್ಕೆ ಮುತ್ತಿಗೆ ಹಾಕಿತು. ಆದರೆ ಅಲ್ಲಿದ್ದ ಭದ್ರಪ್ಪನಾಯಕ ಧೈರ್ಯ ಗೆಡದೆ ಸೈನ್ಯವನ್ನು ಸಜ್ಜುಮಾಡಿಕೊಂಡು ಕವಲೇದುರ್ಗಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳನ್ನೂ ಕಾಲುದಾರಿಗಳನ್ನೂ ಮುಚ್ಚಿಸಿ ಸಂಪರ್ಕವನ್ನು ಕಡಿದು ಹಾಕಿದ. ಇದರ ಪರಿಣಾಮದಿಂದಾಗಿ ಬಿಜಾಪುರದ ಸೈನ್ಯ ಯುದ್ಧರಂಗದಿಂದ ಹಿಂದಕ್ಕೆ ಸರಿಯಿತು. ಅನಂತರ ಭದ್ರಪ್ಪ ನಾಯಕ ಹೂವಯ್ಯನೆಂಬ ರಾಯಭಾರಿಯನ್ನು ಆದಿಲ್ ಷಾಹನಲ್ಲಿಗೆ ಕಳುಹಿಸಿ ಶಾಂತಿಯೊಪ್ಪಂದವನ್ನು ಮಾಡಿಕೊಂಡ.[25]

ಹಿರಿಯ ಸೋಮಶೇಖರ ನಾಯಕನ ಅನಂತರ ಕೆಳದಿಯ ಮುಖಂಡರಲ್ಲಿ ಎರಡು ಪಂಗಡ ಗಳಾಗಿ ದ್ವೇಷ ಕಾದಾಟಗಳಿಂದ ರಾಜ್ಯದಲ್ಲಿ ಅನಾಯಕತ್ವ, ಅರಾಜಕತೆ ತಲೆದೋರಿದುದರ ಪರಿಣಾಮ ವಾಗಿ ರಾಣಿ ಚೆನ್ನಮ್ಮಾಜಿ ತನ್ನ ಪ್ರಾಣಕ್ಕೆ ಅಪಾಯ ಸಂಭವಿಸಬಹುದೆಂದು ತಿಳಿದು ಬಿದನೂರನ್ನು ಬಿಟ್ಟು ಕವಲೇದುರ್ಗಕ್ಕೆ ಬಂದು ತಂಗಿದಳು. ಆದವಿ ಗುಡ್ಡಗಳ ನಡುವಣ ಕವಲೇದುರ್ಗ ಅವಳ ರಾಜಧಾನಿಯಾಯಿತು. ಬಿಜಾಪುರದ ಸೇನೆಯನ್ನು ಸೋಲಿಸಿದ್ದ ಚನ್ನಮ್ಮನ ಸಾಮರ್ಥ್ಯದ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿತು. ಕಾಸರಗೋಡು ತಿಮ್ಮಣ್ಣ ನಾಯಕ, ಸಬ್ಬನೀಸ ಕೃಷ್ಣಪ್ಪನಂತಹ ಮುತ್ಸದ್ದಿಗಳು ರಾಣಿಗೆ ನೆರವಾಗಲು ಮುಂದಾದರು[26]. ರಾಣಿ ಇವರೊಡನೆ ಸಮಾಲೋಚನೆ ನಡೆಸಿ ಬಿಕ್ಕಟ್ಟನ್ನು ಪರಿಹರಿಸಿದಳು. ಎಲ್ಲರೂ ರಾಜಿಯಾಗಿ ಕುತ್ಸಿತ ಶಿವಪ್ಪನಾಯಕನಿಗೆ[27] ಕೆಳದಿ ರಾಜ ಪಟ್ಟದ ಹಕ್ಕಿಲ್ಲವೆಂದು, ಚೆನ್ನಮ್ಮಾಜಿಯೇ ಪಟ್ಟದ ರಾಣಿಯೆಂದು ತೀರ್ಮಾನಿಸಿದುದರ ಫಲವಾಗಿ ಇವಳಿಗೆ (ಚೆನ್ನಮ್ಮಾಜಿಗೆ) ಶಕವರ್ಷ ೧೫೯೪ [28] (ಕ್ರಿ.ಶ. ೧೬೭೨)ರಲ್ಲಿ ಕವಲೇದುರ್ಗದ ಅರಮನೆ ಯಲ್ಲಿ ಪಟ್ಟವಾಯಿತು. ತದನಂತರ ಈಕೆ ತನ್ನ ಸೇನೆ ಪರಿವಾರ ಸಮೇತ ಬಿದನೂರಿಗೆ ಹಿಂತಿರುಗಿದಳು[29].

ಹೈದರ್ ಅಲಿ ಬಿದನೂರನ್ನು ಮುತ್ತಿಗೆ ಹಾಕಿದಾಗ ಕೋಟೆಯೊಳಗಿದ್ದ ರಾಣಿ ವೀರಮ್ಮಾಜಿ (೧೭೫೭–೧೭೬೩) ನವಾಬನಿಗೆ ಲೂಟಿಯಲ್ಲಿ ಏನೂ ಸಿಕ್ಕಬಾರದೆಂದು ಅರಮನೆಗೂ ರತ್ನಖಚಿತವಾದ ಆಭರಣಗಳಿಗೂ ಬೆಂಕಿ ಇರಿಸಿ, ನಂಬಿಗಸ್ತ ಮತ್ತು ತನ್ನ ದತ್ತುಮಗ ಸೋಮಶೇಖರ ನಾಯಕನೊಡ ಗೂಡಿ ರಹಸ್ಯವಾಗಿ ಒಳಮಾರ್ಗದಲ್ಲಿ ಕವಲೇದುರ್ಗಕ್ಕೆ ಬಂದು ತಂಗಿದಳು.[30] ಉಳಿದ ಬಂಡವಾಳದಿಂದ ಇಲ್ಲಿಯ ಕೋಟೆಯನ್ನು ಭದ್ರಪಡಿಸಿದಳು. ಇದನ್ನು ಕೇಳಿದ ಹೈದರ್ ಕವಲೇದುರ್ಗದ ಕೋಟೆಗೂ ಮುತ್ತಿಗೆ ಹಾಕಿದ. ರಾಣಿ ಶರಣಾಗತಳಾದಳು. ಇದರ ಪರಿಣಾಮವಾಗಿ ಕ್ರಿ.ಶ. ೧೭೬೩ರಲ್ಲಿ ಕೆಳದಿ ಅರಸು ಮನೆತನದ ಪ್ರಭುತ್ವ ಕೊನೆಗೊಂಡಿತು.[31] ಭವ್ಯವಾದ ಕೋಟೆ, ಸುಸಜ್ಜಿತವಾದ ಅರಮನೆ, ದೇವಾಲಯಗಳು, ಮಠ ಮಸೀದಿ ಕೊಳಗಳಿಂದ ಕಂಗೊಳಿಸುತ್ತಿದ್ದು, ಇತಿಹಾಸದಲ್ಲಿ ಮಹತ್ತ್ವದ ಪಾತ್ರ ವಹಿಸಿದ ಕವಲೇದುರ್ಗ ಈಗ ಪ್ರೇಕ್ಷಣೀಯ ಸ್ಥಳವಾಗಿ ಉಳಿದಿದೆ.

---

25 K D. Swaminathan, *The Nāyakās of Ikkēri*, p. 106-107

26 ಡಾ. ಸೂರ್ಯನಾಥ ಕಾಮತ್, 'ಕೆಳದಿ ಚೆನ್ನಮ್ಮಾಜಿ', ಪು. ೨೫–೨೬

27 ಇವನೇ ಅಂದಕ ವೆಂಕಟಯ್ಯನ ಮಗ.

28 ಲಿಂಗಣ್ಣ ಕವಿ, 'ಕೆಳದಿ ನೃಪವಿಜಯ', ಮೈಸೂರು ವಿಶ್ವವಿದ್ಯಾನಿಲಯ. ೧೯೭೩

29 ಡಾ. ಜಿ. ಎಸ್. ದೀಕ್ಷಿತ, 'ಕೆಳದಿ ನಾಯಕರು, ಪು. ೩೮–೩೯

30 K. D. Swaminathan, *The Nāyakās of Ikkēri*, p. 159–60
ಬಲ್ಲಾಳರಾಯನ ದುರ್ಗಕ್ಕೆ (ಬಲ್ಲಾಳರಾಯನ ದುರ್ಗಕ್ಕೆ) ಹೋದಳೆಂದು ಡಾ. ಜಿ. ಎಸ್. ದೀಕ್ಷಿತರು (ಕೆಳದಿ ನಾಯಕರು) ಮತ್ತು ಎಂ.ಎಸ್. ಪುಟ್ಟಣ್ಣ (ಇಕ್ಕೇರಿ ಸಂಸ್ಥಾನದ ಚರಿತ್ರೆ) ಹೇಳಿದ್ದಾರೆ.

31 K. D. Swaminathan, ಪೂರ್ವೋಕ್ತ, ಪು. ೧೫೯–೬೦

ಮು. ರಾ. ದೇವಪ್ಪ

ನ್ಯಾಯಾಡಳಿತದಲ್ಲಿಯ ಸಮಸ್ಯೆಗಳು

ರಾಜ್ಯಮಟ್ಟದಲ್ಲಿನ ನ್ಯಾಯಾಲಯಗಳ ಕ್ರಮಬದ್ಧ ಶ್ರೇಣಿ, ಅವುಗಳ ರಚನೆ ಮತ್ತು ವ್ಯವಸ್ಥೆಯನು ಸೂಕ್ಷ್ಮವಾಗಿ ವಿವರಿಸಿ ಅಲ್ಲಿನ ಸಮಸ್ಯೆಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿ ನಿವಾರಣೋಪಾಯಗಳನ್ನು ಸಂಕ್ಷಿಪ್ತವಾಗಿ ತಿಳಿಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

"ಒಂದು ಗರುತರವಾದ ಸಾರ್ವಭೌಮತ್ವಕ್ಕೆ ಒಳಪಡದೆ, ಸಮಾನ ವಿವೇಚನಾ ಶಕ್ತಿಯಿಲ್ಲದೆ, ತಮ್ಮ ಹಿತಾಸಕ್ತಿ ಮತ್ತು ಆಸೆ ಆಕಾಂಕ್ಷೆಗಳನ್ನು ಈಡೇರಿಸುವಲ್ಲಿಯೇ ನಿರತರಾಗಿರುವ ಸ್ವಾರ್ಥಿ ಮಾನವರಿಗಿಂತ, "ತೋಳಗಳ ಮುಂದೆಯೇ ಲೇಸು" ಎಂದು ಜೆರೆಮಿ ಟೇಲರ್ ಅಭಿಪ್ರಾಯಪಟ್ಟಿರುತ್ತಾನೆ[1] ನಮ್ಮ ಸಮಾಜದಲ್ಲಿ ಅವರವರ ಸ್ವಾರ್ಥಕ್ಕಾಗಿ ಹೋರಾಡುವ ಹಲವಾರು ಹಿತಾಸಕ್ತಿಗಳನ್ನು ಕಾಣ ಬಹುದು. ಡೀನ್ ಪೌಂಡ್ ಹಿತಾಸಕ್ತಿಗಳನ್ನು ಹೀಗೆ ವರ್ಗೀಕರಿಸುತ್ತಾನೆ:' (೧) ವೈಯಕ್ತಿಕ ಹಿತಾಸಕ್ತಿಗಳು, (೨) ಸಾರ್ವಜನಿಕ ಹಿತಾಸಕ್ತಿಗಳು, (೩) ಸಾಮಾಜಿಕ ಹಿತಾಸಕ್ತಿಗಳು. ಈ ಹಿತಾಸಕ್ತಿಗಳನ್ನು ಸಮನ್ವಯಗೊಳಿಸುವ ಕಾರ್ಯವನ್ನು ರಾಷ್ಟ್ರ ಕೈಗೊಳ್ಳುವುದು.[2] ಸ್ವಾರ್ಥ ವ್ಯಕ್ತಿಗಳೇ ತುಂಬಿರುವ ಸಮಾಜದ ಅಂತಹ ಹಿತಾಸಕ್ತಿಗಳ ನಡುವೆ ಘರ್ಷಣೆಗಳಾಗಿ, ವಿವಾದ ಕಲಹಗಳು ಹುಟ್ಟುವುದು ಸ್ವಾಭಾವಿಕ ಹಾಗೂ ಅನಿವಾರ್ಯ. ಇಂತಹ ಕಲಹಗಳನ್ನು ಸಮದರ್ಶಿತ್ವದಿಂದ ಹಾಗೂ ನಿಷ್ಪಕ್ಷಪಾತದಿಂದ ಬಗೆಹರಿಸಿ ನ್ಯಾಯ ದೊರಕಿಸಿಕೊಡುವ ಸ್ವತಂತ್ರ ಸಂಸ್ಥೆಗಳು ನ್ಯಾಯಾಲಯಗಳು. ಹಾಗೆಂದ ಮೇಲೆ ನ್ಯಾಯವೆಂದರೇನು, ಇದರ ಅರ್ಥ ವಿವರಣೆ ಏನು ಎಂದು ತಿಳಿಯುವುದು ಸಮಂಜಸ. ಆದರೆ ಈ ಪದಕ್ಕೆ ನಿರ್ದಿಷ್ಟವಾದ, ಎಲ್ಲಾ ಕಾಲ ದೇಶಗಳಿಗೆ ಅನ್ವಯವಾಗುವಂಥ ಅರ್ಥವಿವರಣೆ ಕೊಡುವುದು ಬಹು ಪ್ರಯಾಸದ ಕೆಲಸ. ನ್ಯಾಯವೆಂದರೇನು? ಎಂಬ ಪ್ರಶ್ನೆಯನ್ನು ಪರಿಶೀಲಿಸುವಾಗ ಹ್ಯಾನ್ಸ್ ಕೆಲ್ಸನ್ ಹೀಗೆ ಹೇಳುತ್ತಾನೆ: "ಬೇರೆ ಯಾವ ಪ್ರಶ್ನೆಯೂ ಇಷ್ಟು ಭಾವಪೂರ್ಣವಾದ ಚರ್ಚೆಗೆ ಒಳಗಾಗಿರಲಿಲ್ಲ, ಬೇರೆ ಯಾವ ಪ್ರಶ್ನೆಯೂ ಈ ರೀತಿಯಲ್ಲಿ ಹಲವು ಪ್ರಭಾವಶಾಲಿ ವ್ಯಕ್ತಿಗಳ ಅಂತ್ಯಕ್ಕೆ ಮತ್ತು ದುರಂತಗಳಿಗೆ ಕಾರಣವಾಗಿರಲಿಲ್ಲ. ಅಲ್ಲದೆ, ಮಹಾನ್ ದಾರ್ಶನಿಕರಾದ ಪ್ಲೇಟೋವಿನಿಂದ ಕಾಂಟ್ ವರೆಗೂ ಬೇರೆ ಯಾವ ಸಮಸ್ಯೆಯೂ ಇಂಥ ಗಾಢ ಚಿಂತನೆಗೆ ಒಳಗಾಗಿರಲಿಲ್ಲ. ಆದರೂ ಈ ವರೆಗೂ ಈ ಪ್ರಶ್ನೆ ಹಿಂದಿನಂತೆಯೇ ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ[3].

---

[1] Jeremy Taylor, *Works* XIII, Hebers (Ed), p. 306

[2] Dean Pound, *Jurisprudence*, Vol III, 1959, p. 162

[3] Hans Kelsen, *What is Justice*, University of California Press, Berkeley and Los Angeles, 1960, p. 1

ಒಂದು ರೀತಿಯ ಸ್ವಾಭಾವಿಕವಾದ ಸಾಮರಸ್ಯ ಮತ್ತು ಮನಸ್ಸಿನ ಆರೋಗ್ಯಕರ ಪ್ರವೃತ್ತಿಯೇ ನ್ಯಾಯ–ಎಂದು ಪ್ಲೇಟೋ ಹೇಳಿರುತ್ತಾನೆ[4].

ಪ್ರತಿಯೊಬ್ಬ ಮನುಷ್ಯನಿಗೂ ಸಲ್ಲಬೇಕಾದ್ದನ್ನು ದೊರಕಿಸುವ ಸ್ಥಿರವಾದ ಮತ್ತು ಸಾರ್ವಕಾಲಿಕವಾದ ಇಚ್ಛೆಯೇ ನ್ಯಾಯ ಎಂದು ಜಸ್ಟೀನಿಯನ್ ಅಭಿಪ್ರಾಯಪಟ್ಟಿರುತ್ತಾನೆ.

ಆದ್ದರಿಂದ ನ್ಯಾಯವೆಂಬ ಶಬ್ದಕ್ಕೆ ಸರಿಯಾದ ವ್ಯಾಖ್ಯಾನ ದೊರಕುವುದು ಕಷ್ಟ. ಆದರೂ, ಸಂಕ್ಷಿಪ್ತವಾಗಿ ಹೇಳುವುದಾದರೆ. ಸಾಮಾನ್ಯವಾಗಿ ಪ್ರಚಲಿತವಾಗಿರುವ. "ಯಾವುದು ಸರಿ ಮತ್ತು ಸಮ್ಮತವಾದದ್ದು ಎಂದು ಹೇಳುವ ಕ್ರಿಯೆಯೇ ನ್ಯಾಯ" ಎಂಬ ವ್ಯಾಖ್ಯಾನ ಸ್ವಲ್ಪಮಟ್ಟಿಗೆ ಸಮಂಜಸವಾಗಿ ತೋರುವುದು.

ಎಲ್ಲ ಪ್ರಜೆಗಳಿಗೂ ಸಮಾನವಾಗಿ ನ್ಯಾಯ ದೊರಕಿಸುವ ಸದುದ್ದೇಶವನ್ನು ಈಡೇರಿಸಲೋಸುಗ ಕಾರ್ಯನಿರ್ವಹಣೆಗೆ ಬೇಕಾದ ವ್ಯಕ್ತಿಗಳನ್ನು ಸಂಘಟಿಸಿ. ಅಲ್ಲಿ ಆವಶ್ಯಕವಾಗಿರುವ ಸಾಮಗ್ರಿಗಳನ್ನು ಸಜ್ಜುಗೊಳಿಸಿ ನ್ಯಾಯವಿತರಣೆ ಮಾಡುವ ಕಾರ್ಯನಿರ್ವಹಣೆಯನ್ನು ನ್ಯಾಯಾಡಳಿತವೆಂದು ಕರೆಯಬಹುದು.

ನಾಗರಿಕ ಮತ್ತು ನಾಗರಿಕರ ನಡುವಣ ಹಾಗೂ ನಾಗರಿಕ ಮತ್ತು ಸರಕಾರದ ಅಧಿಕಾರಿಯ ನಡುವಣ ಕಾನೂನು ಕಟ್ಟಳೆಗಳ ನ್ಯಾಯ ವ್ಯವಸ್ಥೆ ಯಾವ ಮಟ್ಟದಲ್ಲಿ ನಡೆಯುತ್ತದೆ ಎಂಬ ವಿಷಯ ಒಂದು ದೇಶದ ರಾಜಕೀಯ ಬೆಳವಣಿಗೆಯ ಮಟ್ಟವನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಅಂಶವಾಗಿರುತ್ತದೆ ಎಂದು ಸಿಡ್ಜ್‌ವಿಕ್ ಹೇಳುತ್ತಾನೆ[5]. ಕಾರಣ. ನ್ಯಾಯವ್ಯವಸ್ಥೆ ಮಾನವನ ಸಾಮಾಜಿಕ ರಾಜಕೀಯ ಬೆಳವಣಿಗೆಯ ಅತ್ಯಂತ ಪ್ರಮುಖ ಅಭಿವ್ಯಕ್ತಿಗಳಲ್ಲೊಂದು. ಆದುದರಿಂದ ಸಮಾಜದ ಸ್ವರೂಪವನ್ನು ಅರಿತುಕೊಳ್ಳಲು ಈ ವ್ಯವಸ್ಥೆಯ ಅಂತರ್ದರ್ಶನ ಪಡೆಯಬೇಕಾದದ್ದು ಅವಶ್ಯಕ[6].

ಪ್ರತಿಯೊಬ್ಬ ಪ್ರಜೆಯೂ ಕಾನೂನು ನಿಬಂಧನೆಗಳನ್ನು ತಿಳಿದುಕೊಂಡಿರಬೇಕೆಂಬುದು "ಕಾನೂನಿನ ತಿಳಿವಳಿಕೆ ಇರಲಿಲ್ಲವೆಂಬುದಕ್ಕೆ ಕ್ಷಮೆಯಿಲ್ಲ". ಎಂಬ ವಾಕ್ಯದಿಂದ ಅಭಿವ್ಯಕ್ತವಾಗುತ್ತದೆ. ಪ್ರಾಯಶಃ ಈ ಹಿನ್ನೆಲೆಯ ಮೇಲೆ ಕಾನೂನು ಪ್ರಯೋಗವಾಗುತ್ತಿರಬೇಕು. ಯಾವುದೇ ವ್ಯಕ್ತಿ ಬೇರೆಯವರಿಗೆ ಅಪರಾಧವೆಸಗಿದರೆ, ಬೇರೆಯವರ ವ್ಯಕ್ತಿತ್ವಕ್ಕೊ ಆಸ್ತಿಗೊ ಹಾನಿ ತಂದರೆ, ಅಥವಾ ಒಪ್ಪಿಕೊಂಡ ಕರಾರು ಮತ್ತು ಒಪ್ಪಂದದ ಪ್ರಕಾರ ನಡೆದುಕೊಳ್ಳದಿದ್ದರೆ ಕಾನೂನಿನ ಅರಿವಿರಲಿಲ್ಲವೆಂದು ಕಾನೂನಿನ ಚೌಕಟ್ಟಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಕಾನೂನಿನ ಅರಿವು ಅನಿವಾರ್ಯ ಹಾಗೂ ಆವಶ್ಯಕ. ಹಾಗೆಯೇ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ನಿಯಂತ್ರಿಸುವಲ್ಲಿ ನ್ಯಾಯಾಲಯಗಳು ಮಹತ್ವಪೂರ್ಣ ಜವಾಬ್ದಾರಿ ಹೊಂದಿರುವುದರಿಂದ ನ್ಯಾಯಾಡಳಿತ ವ್ಯವಸ್ಥೆಯನ್ನು ತಿಳಿಯುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಸಾಲ ವಸೂಲಿ ಮಾಡಲು. ಅಕ್ರಮವಾಗಿ ಕಸಿದುಕೊಂಡ ಆಸ್ತಿಯನ್ನು ಮರಳಿ ಪಡೆಯಲು. ಬೇರೆಯವರು ತಪ್ಪು ಮಾಡಿದುದಕ್ಕೆ ಪರಿಹಾರ ಕೇಳಲು, ಬಾಡಿಗೆದಾರರನ್ನು ಬಾಡಿಗೆ ಮನೆಯಿಂದ ಬಿಡಿಸಲು. ಇನ್ನೂ ಮುಂತಾದ ಕಾರಣಗಳಿಗಾಗಿ ನ್ಯಾಯಾಲಯದ ಮೆಟ್ಟಿಲನ್ನು ಹತ್ತಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ನ್ಯಾಯಾಲಯಗಳ ವ್ಯವಸ್ಥೆ. ನ್ಯಾಯಾಡಳಿತ ಅನುಸರಿಸುವ ಕಾರ್ಯವಿಧಾನ ಮತ್ತು ಅಲ್ಲಿನ ಸಮಸ್ಯೆಗಳನ್ನು ತಿಳಿದು ಪರಿಹಾರ ಕಂಡುಕೊಳ್ಳುವುದು ಸೂಕ್ತ. ಈ ಕಾರಣಗಳಿಂದಲೂ ಈ ವಿಷಯ ಪ್ರಾಮುಖ್ಯ ಹೊಂದಿದೆ.

---

[4] Plato, *Republic Laws* 66 2 b' quoted by Hans Kelsen in *What is Justice*

[5] Sidgwick, *Elements of Politics*, Macmillan &Co. Ltd., London, 1910, p. 431

[6] Lord Bryce, *Modern Democracies*, Vol II, Macmillan & Co. Ltd., London, 1929, p. 384

ಇಲ್ಲಿ ರಾಜ್ಯಮಟ್ಟಕ್ಕೆ ಸಂಬಂಧಿಸಿದ ಹಾಗೆ ಕರ್ಣಾಟಕ ರಾಜ್ಯದ ನ್ಯಾಯಾಲಯಗಳ ವ್ಯವಸ್ಥೆಯನ್ನು ಪರಿಶೀಲಿಸಲಾಗಿದೆ. ಹೀಗೆ ಚರ್ಚಿಸುವಲ್ಲಿ ನ್ಯಾಯ ವಿತರಣೆಯ ಸಂಸ್ಥೆಗಳನ್ನು ಎರಡು ವಿಧಗಳಾಗಿ ವರ್ಗೀಕರಿಸಲಾಗಿದೆ. ೧ ವಿಧಿಬದ್ಧ ನ್ಯಾಯಾಲಯಗಳು. ೨ ಆಡಳಿತ ಕಾನೂನಿಗನುಗುಣವಾಗಿ ನ್ಯಾಯ ವಿತರಣೆ ಮಾಡುವ ಅಧಿಕಾರಿಗಳು ಮತ್ತು ಆಡಳಿತ ಮಂಡಳಿಗಳು.

ಮೊದಲನೆಯವಾಗಿ ವಿಧಿಬದ್ಧ ನ್ಯಾಯಾಲಯಗಳ ರಚನೆ ಹಾಗೂ ವ್ಯವಸ್ಥೆಯನ್ನು ಪರಿಶೀಲಿಸೋಣ. ವಿಧಿಬದ್ಧವಾದ ನ್ಯಾಯಾಲಯಗಳನ್ನು ಸಿವಿಲ್ ನ್ಯಾಯಾಲಯಗಳು ಮತ್ತು ಕ್ರಿಮಿನಲ್ ನ್ಯಾಯಾಲಯಗಳೆಂದು ವರ್ಗೀಕರಿಸಬಹುದು.

ಸಿವಿಲ್ ವಿಭಾಗ: ೧೯೬೪ರ ಮೈಸೂರು ಸಿವಿಲ್ ನ್ಯಾಯಾಲಯ ಅಧಿನಿಯಮ ಸಂವಿಧಾನದ ಕೆಲವು ಅನುಚ್ಛೇದಗಳು, ಕೆಲವು ರಾಜ್ಯಗಳ ವಿಶೇಷ ಅಧಿನಿಯಮಗಳು, ಉಚ್ಚ ನ್ಯಾಯಾಲಯದ ಕೆಲವು ಅಧಿನಿಯಮಾವಳಿಗಳು ಮತ್ತು ಸುತ್ತೋಲೆಗಳು ನ್ಯಾಯಾಲಯಗಳ ಸ್ಥಳೀಯ ವ್ಯಾಪ್ತಿಯನ್ನು ನಿರ್ಧರಿಸುತ್ತವೆ. ಮೈಸೂರು ನ್ಯಾಯಾಲಯ ಶುಲ್ಕ ಮತ್ತು ದಾವೆ ಮೌಲ್ಯ ನಿರ್ಧಾರಣ ಅಧಿನಿಯಮ ೧೬. ೧೯೫೮. ೧೯೬೪. ೧೯೬೯—ಇದು ನ್ಯಾಯಾಲಯಗಳ ಹಣಕಾಸಿನ ವ್ಯಾಪ್ತಿಯನ್ನು ನಿರ್ಧರಿಸುತ್ತದೆ[7].

ಉಚ್ಚ ನ್ಯಾಯಾಲಯವು ರಾಜ್ಯದ ನ್ಯಾಯಾಲಯಗಳ ಕ್ರಮಬದ್ಧ ಶ್ರೇಣಿಯಲ್ಲಿ ಮೊತ್ತ ಮೊದಲನೆಯದು ಹಾಗೂ ಉಚ್ಚವಾದ್ದು. ಕೆಳಗಿನ ನ್ಯಾಯಾಲಯಗಳ ತೀರ್ಪಿನಿಂದ ಬಂದ ಅಪೀಲುಗಳನ್ನು ತೀರ್ಮಾನಿಸುವ, ಪುನರ್‌ಪರಿಶೀಲನೆ ಅರ್ಜಿಗಳನ್ನು ವಿಮರ್ಶಿಸುವ. ವಿವಿಧ ರಿಟ್‌ಗಳನ್ನು ಪುರಸ್ಕರಿಸುವ ಮೂಲಕ ಆಜ್ಞೆ, ಆದೇಶ ಹಾಗೂ ನಿರ್ದೇಶಗಳನ್ನು ನೀಡುವ ಅಧಿಕೃತ ಅಧಿಕಾರ ಹೊಂದಿರುತ್ತದೆ. ಹಾಗೆಯೇ ಮೂಲಭೂತ ಹಕ್ಕುಗಳ ಪೋಷಕ ಹಾಗೂ ರಕ್ಷಕನಾಗಿ ಕಾರ್ಯನಿರ್ವಹಣೆ ಮಾಡುತ್ತದೆ.

ಕಂಪನಿ ವ್ಯವಹಾರಗಳಿಗೆ ಸಂಬಂಧಿಸಿದ ಮೂಲತಃ ಉದ್ಭವಿಸುವ ಕಲಹಗಳನ್ನು ಬಗೆಹರಿಸುವುದರ ಜೊತೆಗೆ ರಾಜ್ಯಾಂಗದ ೨೨೬ನೇಯ ವಿಧಿಯ ಪ್ರಕಾರ ಕೆಳಗಿನ ನ್ಯಾಯಾಲಯಗಳ ಕಾರ್ಯ ಚಟುವಟಿಕೆಗಳ ಮೇಲ್ವಿಚಾರಕನಾಗಿಯೂ ಕಾರ್ಯನಿರ್ವಹಿಸುತ್ತದೆ[8]. ಸಿವಿಲ್ ವ್ಯಾಜ್ಯ ಕಾರ್ಯ ವಿಧಾನ ಸಂಹಿತೆಯ ೯೬ ಮತ್ತು ೧೦೦ನೆಯ ಸೆಕ್ಷನ್‌ಗೆ ಅನುಗುಣವಾಗಿ ಸಿವಿಲ್ ವ್ಯಾಜ್ಯಗಳಿಂದ ಬಂದ ಅಪೀಲುಗಳನ್ನು ಅಂಗೀಕರಿಸಿ ತೀರ್ಪು ನೀಡುತ್ತದೆ. ಸಿವಿಲ್ ವ್ಯಾಜ್ಯ ಕಾರ್ಯವಿಧಾನ ಸಂಹಿತೆಯ ೧೧೫ನೆಯ ಪ್ರಕರಣದ ಪ್ರಕಾರ ಸಿವಿಲ್ ವ್ಯಾಜ್ಯಗಳನ್ನು ಪುನರ್ ಪರಿಶೀಲನೆ ಮಾಡುತ್ತದೆ.[9] ಕೆಲವು ಸಂದರ್ಭಗಳಲ್ಲಿ ಅಪೀಲುಗಳು. ರಿಟ್‌ಗಳು ಮತ್ತು ಪುನರ್ ಪರಿಶೀಲನಾ ಅರ್ಜಿಗಳನ್ನು ಸ್ವೀಕರಿಸಿ ಒಬ್ಬರೇ ನ್ಯಾಯಾಧೀಶರು ತೀರ್ಪು ಕೊಡುವರು. ಗುರುತರವಾದ ಕಾನೂನಿನ ಅಂಶಗಳಿರುವ ಮೊಕದ್ದಮೆಗಳಲ್ಲಿ ಇಬ್ಬರು ನ್ಯಾಯಾಧೀಶರು ತೀರ್ಪುಕೊಡುವರು. ಸಂವಿಧಾನಕ್ಕೆ ಸಂಬಂಧಪಟ್ಟ ಗುರುತರವಾದ ವಿವಾದವನ್ನು ಎಲ್ಲ ನ್ಯಾಯಾಧೀಶರು ಕುಳಿತು ನಿರ್ಣಯಿಸುವರು. ಈಗ ಉಚ್ಚ ನ್ಯಾಯಾಲಯದಲ್ಲಿ ಹದಿನಾಲ್ಕು ಜನ ನ್ಯಾಯಾಧೀಶರುಗಳಿದ್ದಾರೆ. ಆಯಾ ನ್ಯಾಯಾಧೀಶರು ಅಂಗೀಕಾರ ಮಾಡಿ ವಿಚಾರಣೆ ಮಾಡುವ ವಿಚಾರಗಳನ್ನು ಮುಂಚಿತವಾಗಿಯೇ ಅಧಿಕೃತವಾಗಿ ಸೂಚಿಸಿ ನ್ಯಾಯಾಡಳಿತದ ಕಾರ್ಯ ನಿರ್ವಹಿಸುವರು.

---

[7] Government of Mysore, Legislative Department : *Mysore Code Vol.* III, Government Press, Bangalore, 1965

[8] Government of India, Ministry of Law, *The Constitution of India*, Government of India Press, Delhi, 1967

[9] Achar, M. R., *The code of Civil Procedure* (*Act of* 1908 *in Mysore*, Saravana, Bangalore 1, 1967, Part III, p. 32

ಎರಡನೆಯ ಮಟ್ಟದಲ್ಲಿ ಜಿಲ್ಲಾ ನ್ಯಾಯಾಲಯಗಳಿವೆ. ಇವು ಮೂಲ ಹಾಗೂ ಅಪೀಲು ವ್ಯಾಪ್ತಿ ಹೊಂದಿರುತ್ತವೆ[10]. ಜಿಲ್ಲೆಗೆ ಪ್ರಮುಖವಾದ್ದು ಜಿಲ್ಲಾ ನ್ಯಾಯಾಲಯ. ಜಿಲ್ಲಾ ನ್ಯಾಯಾಧೀಶರು ಹೈಕೋರ್ಟಿನ ಸಾಮಾನ್ಯ ಅಧೀನಕ್ಕೆ ಒಳಪಟ್ಟು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳ ಕಾರ್ಯವನ್ನೂ ನಿಯಂತ್ರಿಸುತ್ತಾರೆ. ಜಿಲ್ಲಾ ನ್ಯಾಯಾಧೀಶರು ವಿವಿಧ ರಾಜ್ಯ ಅಧಿನಿಯಮಗಳು ನಮೂದಿಸಿರುವ ಕೆಲವು ವಿಶೇಷ ಅಧಿಕಾರಗಳನ್ನು ಹೊಂದಿ ಕೆಲವು ಕಲಹಗಳನ್ನು ತೀರ್ಮಾನಿಸುತ್ತಾರೆ. ಉದಾಹರಣೆಗೆ, ಮೋಟಾರು ವಾಹನ ಅಪಘಾತ ಅಧಿನಿಯಮ (ಪರಿಹಾರ ಮಂಡಳಿಯಾಗಿ) ಭಾರತೀಯ ಮತಿ ಭ್ರಮಣೆ ಅಧಿನಿಯಮ (Indian Lunacy Act). ದಿವಾಳಿ ಅಧಿನಿಯಮ, ಚುನಾವಣಾ ಅಧಿನಿಯಮಗಳು. ಮುಂತಾದವುಗಳಿಂದ ಉದ್ಭವಿಸಬಹುದಾದ ವ್ಯಾಜ್ಯಗಳನ್ನು ಮತ್ತು ಮನೆ ತೆರಿಗೆಗೆ ಸಂಬಂಧಪಟ್ಟ ವ್ಯಾಜ್ಯಗಳನ್ನು ತೀರ್ಮಾನಿಸುವರು.

ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮೀರದ ವ್ಯಾಜ್ಯಗಳ ಮೇಲೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಿಂದ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಹೋಗಬಹುದು.

ಈ ನ್ಯಾಯಾಲಯಗಳ ನ್ಯಾಯಾಧೀಶರು ನ್ಯಾಯ ವಿತರಣೆ ಮಾಡುವುದರ ಜೊತೆಗೆ, ಜಿಲ್ಲೆಯಲ್ಲಿರುವ ಎಲ್ಲ ಕೆಳ ದರ್ಜೆಯ ನ್ಯಾಯಾಲಯಗಳ ಆಡಳಿತದ ಮೇಲ್ವಿಚಾರಕರಾಗಿ. ಆಗಾಗ್ಗೆ ಪರಿಶೀಲನೆ ನಡೆಸಿ ಸೂಕ್ತ ಸಲಹೆಗಳನ್ನು ಕೊಡುವರು. ಜಿಲ್ಲಾ ನ್ಯಾಯಾಧೀಶರನ್ನು ರಾಜ್ಯಪಾಲರು ರಾಜ್ಯಾಂಗದ ೨೩೩ನೆಯ ವಿಧಿಗನುಗುಣವಾಗಿ ಉಚ್ಚನ್ಯಾಯಾಲಯದೊಡನೆ ಸಮಾಲೋಚನೆ ನಡೆಸಿ ನೇಮಕ ಮಾಡುವರು[11].

ಮೂರನೆಯ ಮಟ್ಟದಲ್ಲಿ ಜಿಲ್ಲೆಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳಿವೆ. ಈ ನ್ಯಾಯಾಧೀಶರು ಮುನ್ಸಿಫ್ ಕೋರ್ಟಿನಿಂದ ಬಂದ ಅಪೀಲುಗಳನ್ನು ತೀರ್ಮಾನಿಸುವ. ಹತ್ತು ಸಾವಿರಕ್ಕೆ ಮೇಲ್ಪಟ್ಟ ಹಣಕಾಸಿನ ವ್ಯಾಪ್ತಿಯುಳ್ಳ ಎಲ್ಲಾ ಮೂಲ ಸಿವಿಲ್ ವ್ಯಾಜ್ಯಗಳನ್ನೂ ವಿಚಾರಣೆ ಮಾಡುವ ಅಧಿಕಾರ ಹೊಂದಿರುತ್ತಾರೆ[12]. ಸಿವಿಲ್ ನ್ಯಾಯಾಧೀಶರುಗಳನ್ನು ಮುನ್ಸಿಫ್ ಹುದ್ದೆಯಿಂದ ಬಡ್ತಿಕೊಟ್ಟು ಇವರನ್ನು ನೇಮಕ ಮಾಡುವರು. ಸಿವಿಲ್ ನ್ಯಾಯಾಧೀಶರು ಕೆಲವು ರಾಜ್ಯ ಅಧಿನಿಯಮಗಳಿಂದ ವಿಶೇಷ ಅಧಿಕಾರಗಳನ್ನು ಪಡೆದು ಹಿಂದೂ ಉತ್ತರಾಧಿಕಾರ ಅಧಿನಿಯಮ, ಭೂಸ್ವಾಧೀನ ಅಧಿನಿಯಮ. ಚುನಾವಣೆಗೆ ಸಂಬಂಧಿಸಿದ ಅಧಿನಿಯಮ. ಹಿಂದೂ ವಿವಾಹ ಅಧಿನಿಯಮ ಇತ್ಯಾದಿ ಅಧಿನಿಯಮಗಳಿಂದ ಉದ್ಭವಿಸಬಹುದಾದ ವ್ಯಾಜ್ಯಗಳನ್ನು ತೀರ್ಮಾನಿಸುವರು. ಇವರಿಗೆ ಲಘು ವ್ಯಾಜ್ಯ ನ್ಯಾಯಾಲಯ (ಸ್ಮಾಲ್ ಕಾಸ್ ಕೋರ್ಟ್) ಅಧಿನಿಯಮದ ಪ್ರಕಾರ ಲಘುವ್ಯಾಜ್ಯ ನ್ಯಾಯಾಲಯದ ನ್ಯಾಯಾಧೀಶರಾಗಿ ಸಂಕ್ಷಿಪ್ತವಾಗಿ ವಿಚಾರಣೆ ನಡೆಸುವ ವಿಶೇಷ ಅಧಿಕಾರ ಕೊಟ್ಟಿರುವರು.

ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮಟ್ಟದಲ್ಲಿ ಸಾವಿರ ರೂಪಾಯಿಗಳಿಗೆ ಮೀರದ ಸಿವಿಲ್ ವ್ಯಾಜ್ಯಗಳನ್ನೂ ಜಿಲ್ಲಾ ನ್ಯಾಯಾಧೀಶರು ಕಳುಹಿಸಿದ ಕೆಲವು ಅಪೀಲುಗಳನ್ನೂ ತೀರ್ಮಾನಿಸಲು ಜಿಲ್ಲೆಗೊಂದು ಲಘು ಮುಖ್ಯ ನ್ಯಾಯಾಲಯ ಇರುತ್ತದೆ[13]. ಇಂಥಹ ನ್ಯಾಯಾಲಯಗಳಲ್ಲಿ

---

[10] Government of Mysore, Law Department, *Mysore Civil Court Act of* 1964, Government Press, Bangalore, 1965, Chapter III, SS 14, 15, 197, pp. 18, 19

[11] Government of India, Ministry of Law, *The Constitution of India*, Government of India press, 1967, p. 85

[12] Government of Mysore, Law Department, *Mysore Civil Court Act of* 1964, Government Press, Bangalore, 1965, Chapter III, SS 16, 21, to 23

[13] Government of Mysore, Law Department, *Mysore Small Cause Court Act*, 1964. Chapter III, SS 8 to 10

ಅನುಸರಿಸುವ ಕಾರ್ಯವಿಧಾನ ಸ್ವಲ್ಪ ಭಿನ್ನವೆಂದು. ನ್ಯಾಯಾಧೀಶರು ಸಾಕ್ಷಿ ವಿಚಾರಣೆಯನ್ನು ಸಂಕ್ಷಿಪ್ತವಾಗಿ ಬರೆದುಕೊಂಡು ತೀರ್ಪನ್ನು ಕೊಡುವರು.

ರಾಜ್ಯದ ನ್ಯಾಯಾಲಯಗಳ ಕ್ರಮಬದ್ಧ ಶ್ರೇಣಿಯ ನಾಲ್ಕನೆಯ ಹಂತದಲ್ಲಿ ಮುನ್ಸಿಫ್ ನ್ಯಾಯಾಲಯಗಳು ಬರುತ್ತವೆ. ನಮ್ಮ ರಾಜ್ಯದಲ್ಲಿ ಸಾಮಾನ್ಯವಾಗಿ ತಾಲ್ಲೂಕಿಗೊಂದು ಮುನ್ಸಿಫ್ ನ್ಯಾಯಾಲಯ ಇರಬೇಕೆಂಬ ಸದುದ್ದೇಶದಿಂದ ಸರಕಾರದವರು ತಾಲ್ಲೂಕಿಗೊಂದು ಮುನ್ಸಿಫ್ ನ್ಯಾಯಾಲಯವನ್ನು ಸ್ಥಾಪಿಸುತ್ತಿದ್ದಾರೆ. ಈ ನ್ಯಾಯಾಲಯಗಳು ಹತ್ತು ಸಾವಿರ ರೂಪಾಯಿಗಳಿಗೆ ಮೀರದ ವ್ಯಾಪ್ತಿಯ ಸಿವಿಲ್ ವ್ಯಾಜ್ಯಗಳನ್ನು, ಮನೆ ತೆರಿಗೆ ನಿಯಂತ್ರಣ ಅಧಿನಿಯಮದಿಂದ ಉದ್ಭವಿಸಬಹುದಾದ ವ್ಯಾಜ್ಯಗಳನ್ನು ತೀರ್ಮಾನಿಸುವರು[14]. ಇಂಥ ನ್ಯಾಯಾಲಯಗಳ ನ್ಯಾಯಾಧೀಶರನ್ನು (ಮುನ್ಸಿಫ್) ರಾಜ್ಯ ಲೋಕಸೇವಾ ಆಯೋಗದವರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಯಿಸಿ ಆಯ್ಕೆ ಮಾಡಿ ನೇಮಕ ಮಾಡುವರು[15].

ಇದುವರೆಗೆ ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ರಚನೆ ಹಾಗೂ ವ್ಯವಸ್ಥೆಯನ್ನು ಪರಿಶೀಲಿಸಿಯಾಯಿತು. ಇನ್ನು ಕ್ರಿಮಿನಲ್ ಮೊಕದ್ದಮೆಗಳಿಗೆ ಸಂಬಂಧಿಸಿದ ನ್ಯಾಯಾಲಯಗಳ ವ್ಯವಸ್ಥೆಯನ್ನು ನೋಡೋಣ.

ಕ್ರಿಮಿನಲ್ ವಿಭಾಗ

ರಾಜ್ಯಾಂಗದ ಕೆಲವು ವಿಧಿಗಳು. ೧೯೭೩ರಲ್ಲಿ ತಿದ್ದುಪಡಿ ಮಾಡಿದ ಅಪರಾಧ ಪ್ರಕರಣ ಕಾರ್ಯ ವಿಧಾನ ಸಂಹಿತೆ ಮತ್ತು ಕೆಲವು ವಿಶೇಷ ರಾಜ್ಯ ಕಾಯಿದೆಗಳು. ಕ್ರಿಮಿನಲ್ ಕೋರ್ಟುಗಳ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುತ್ತವೆ[16].

ರಾಜ್ಯಮಟ್ಟದಲ್ಲಿ ಉಚ್ಚ ನ್ಯಾಯಾಲಯ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸೆಷನ್ಸ್ ನ್ಯಾಯಾಲಯ, ಜಿಲ್ಲೆಗೊಂದು ಮುಖ್ಯ ನ್ಯಾಯಿಕ ದಂಡಾಧಿಕಾರಿಯ ನ್ಯಾಯಾಲಯ (ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ) ಹಾಗೂ ಸಾಮಾನ್ಯವಾಗಿ ತಾಲೂಕು ಮಟ್ಟದಲ್ಲಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯ (ಫಸ್ಟ್‌ಕ್ಲಾಸ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರ) ನ್ಯಾಯಾಲಯ —ಹೀಗೆ ಹಂತ ಹಂತವಾಗಿ ಮೇಲೆ ಹೇಳಿದ ನ್ಯಾಯಾಲಯಗಳು ಅಪರಾಧ ಪ್ರಕರಣಕ್ಕೆ ಸಂಬಂಧಿಸಿದ ಮೊಕದ್ದಮೆಗಳನ್ನು ವಿಚಾರಣೆ ಮಾಡುತ್ತವೆ[17].

ಉಚ್ಚ ನ್ಯಾಯಾಲಯ ಕ್ರಿಮಿನಲ್ ಅಪೀಲುಗಳನ್ನೂ ಪುನರ್‌ಪರಿಶೀಲನಾ ಅರ್ಜಿಗಳನ್ನೂ ವಿಚಾರಣೆ ಮಾಡುತ್ತದೆ. ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ನೀಡಿದ ಮರಣ ದಂಡನೆಯ ತೀರ್ಪನ್ನು ಅವರು ಪುರಸ್ಕರಿಸಬೇಕಾದ ಪದ್ಧತಿ ಇದೆ.

ಜಿಲ್ಲಾ ಸೆಷನ್ಸ್ ನ್ಯಾಯಾಲಯವು ಅಪರಾಧ ಪ್ರಕರಣಗಳಿಗೆ ಜಿಲ್ಲೆಯಲ್ಲಿನ ಪ್ರಮುಖವಾದ ನ್ಯಾಯಾಲಯವಾಗಿ ಅಪರಾಧ ಪ್ರಕರಣ ಕಾರ್ಯ ವಿಧಾನ ಸಂಹಿತೆಯ ತಪ್ಶೀಲಿನಲ್ಲಿ ನಮೂದಿಸಿರುವ

---

[14] Government of Mysore, Law Department, *Mysore Civil Court Act*. 1964, Chapter III S 17. Government Press, Bangalore, 1965

[15] Government of Mysore, Department of Law, *Karnataka Munsiff (Recruitment) Rules*, 1958, Government Press, Bangalore 1959

[16] Taxmann's *Code of Criminal Procedure*, 1973, Taxmann Publications, Delhi 110006, 1971, Chapter II & III, SS 635 pp. 9 to 23

[17] Ibid., S 6., p. 9

ಕೆಲವು ಕೊಲೆ. ಅತ್ಯಾಚಾರ. ದರೋಡೆ ಮುಂತಾದ ಹೀನ ಕೃತ್ಯಗಳನ್ನು ಮಾಡಿದ ಅಪರಾಧಿಗಳನ್ನು ಶಿಕ್ಷೆಗೆ ಗುರಿಪಡಿಸುವುದು. ಜ್ಯುಡಿಷಿಯಲ್ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರಿಂದ ಬಂದ ಪುನರ್ ವಿಮರ್ಶನ ಅರ್ಜಿ ಮತ್ತು ಅಪೀಲುಗಳನ್ನು ಸೆಷನ್ಸ್ ನ್ಯಾಯಾಧೀಶರು ವಿಚಾರಣೆ ಮಾಡುವರು[18].

ಮುಖ್ಯನ್ಯಾಯಿಕ ದಂಡಾಧಿಕಾರಿಯ(ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್)ನ್ಯಾಯಾಲಯ

ಸೆಷನ್ಸ್ ನ್ಯಾಯಾಧೀಶರುಗಳಿಗೆ ಕಾರ್ಯದ ಒತ್ತಡವಿರುವುದರಿಂದ ಜಿಲ್ಲೆಯ ಎಲ್ಲಾ ದಂಡಾಧಿಕಾರಿ ನ್ಯಾಯಾಲಯಗಳನ್ನು ಮೇಲ್ವಿಚಾರಣೆ ಮಾಡಲು ಸಾಧ್ಯವಾಗದಿರುವುದರಿಂದ ೧೯೭೪ರ ಏಪ್ರಿಲ್ ೧ರಿಂದ ಈ ಬಗೆಯ ನ್ಯಾಯಾಲಯಗಳನ್ನು ಜಿಲ್ಲೆಗೊಂದು ಸ್ಥಾಪಿಸಿ. ಮೇಲ್ವಿಚರಣಾ ಕಾರ್ಯ ನಿರ್ವಹಿಸಲು ಇಂತಹ ನ್ಯಾಯಾಧೀಶರುಗಳಿಗೆ ಅವಕಾಶ ಕೊಟ್ಟಿರುತ್ತಾರೆ. ಇವರುಗಳು ಕೆಲವು ಗುರುತರವಾದ ಕೃತ್ಯಗಳನ್ನು ಮಾಡಿದ ಅಪರಾಧಿಗಳನ್ನು ಶಿಕ್ಷಿಸುವ ಅಧಿಕಾರವನ್ನು ಹೊಂದಿರುತ್ತಾರೆ[19].

ಪ್ರಥಮದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯಗಳು

ಇಂತಹ ನ್ಯಾಯಾಲಯಗಳು ಸಾಮಾನ್ಯವಾಗಿ ತಾಲ್ಲೂಕಿಗೊಂದು ಅಥವಾ ಎರಡು ತಾಲ್ಲೂಕುಗಳಿಗೊಂದಿವೆ. ದೊಡ್ಡ ದೊಡ್ಡ ನಗರಗಳಲ್ಲಿ ಇವುಗಳ ಸಂಖ್ಯೆ ಎರಡು ಅಥವಾ ಮೂರು. ಈ ನ್ಯಾಯಾಲಯಗಳು ಅಪರಾಧ ಪ್ರಕರಣ ಕಾರ್ಯ ವಿಧಾನ ಸಂಹಿತೆಯಲ್ಲಿರುವ ತಖ್ತೀಲಿನಲ್ಲಿ ನಮೂದಿಸಿರುವ ಸಮನ್ಸ್ ಮತ್ತು ವಾರಂಟ್ ಪ್ರಕರಣಗಳನ್ನು ವಿಚಾರಣೆ ಮಾಡಿ ತೀರ್ಪು ಕೊಡುವುವು.[20] ಈ ದಂಡಾಧಿಕಾರಿಗಳಿಗೆ ಹಲವಾರು ರಾಜ್ಯ ವಿಶೇಷ ಕಾಯಿದೆಗಳಲ್ಲಿ. ಉದಾಹರಣೆಗೆ ಅವಶ್ಯಕ ಸಾಮಗ್ರಿಗಳ ಕಾಯಿದೆ. ನಗರಾಡಳಿತ ಕಾಯಿದೆ. ಕನಿಷ್ಠ ವೇತನ ಕಾಯಿದೆ. ಕೈಗಾರಿಕಾ ವಿವಾದ ಕಾಯಿದೆ. ಅಸ್ಪೃಶ್ಯತಾ ನಿವಾರಣಾ ಕಾಯಿದೆ. ಜೀತಾವರಿ ಕಾಯಿದೆ. ಇತ್ಯಾದಿ ಕಾಯಿದೆಗಳಲ್ಲಿ ಉದ್ಭವಿಸುವ ಪ್ರಕರಣಗಳನ್ನು ಗಮನಿಸಿ ದಂಡ ವಿಧಿಸುವ ಅಧಿಕಾರವನ್ನು ಕೊಟ್ಟಿದೆ.

ಈ ಮೇಲಿನವುಗಳೆಲ್ಲವೂ ವಿಧಿಬದ್ಧವಾದ ಸಾಂಪ್ರದಾಯಿಕ ನ್ಯಾಯಾಲಯಗಳು. ಇನ್ನು ಆಡಳಿತಾಧಿಕಾರಿಗಳು ಹೇಗೆ ನ್ಯಾಯವಿತರಣೆ ಮಾಡುವರು ಎನ್ನುವುದನ್ನು ತಿಳಿಯೋಣ.

ಜಿಲ್ಲೆಯಲ್ಲಿ ವಿಧಿಬದ್ಧವಾದ ನ್ಯಾಯಾಲಯಗಳಲ್ಲದೆ ಇತರ ಕೆಲವು ಇಲಾಖೆಗಳು ನ್ಯಾಯ ವಿತರಣೆ ಮಾಡುತ್ತವೆ. ಈ ಇಲಾಖೆಗಳು ಅಧಿಕಾರಿಗಳು ಅಥವಾ ಮಂಡಳಿಗಳು ಹಲವಾರು ಕಾರಣಗಳಿಗಾಗಿ ಬೇಡಿ ಬಂದ ಆಡಳಿತ ಕಾನೂನಿನನುಗುಣವಾಗಿ ತೀರ್ಪುಗಳನ್ನು ಕೊಡುತ್ತವೆ. ಆಡಳಿತಗಾರರ ಅಧಿಕಾರ ವ್ಯಾಪ್ತಿ ಮತ್ತು ಆಡಳಿತ ವಿಧಾನವನ್ನು ಕುರಿತಾದ ಅಧಿನಿಯಮಗಳಿಗೆ ಆಡಳಿತ ಕಾನೂನು ಎಂಬ ಹೆಸರಿದೆ. ಆಡಳಿತಾಧಿಕಾರಿಗಳು ಅವರವರ ಕರ್ತವ್ಯಗಳನ್ನು ವಿವರಿಸಲು ಹೊರಟಾಗ ಕಾನೂನನ್ನು ರಚಿಸುವ ಮತ್ತು ತೀರ್ಪು ಕೊಡುವ ಕೆಲಸಗಳನ್ನು ಕೈಗೊಳ್ಳಬೇಕಾಗಿರುವುದರಿಂದ ನ್ಯಾಯವಿತರಣೆ ಮಾಡಲೇಬೇಕಾಗುತ್ತದೆ. ಆ ರೀತಿ ಅವರು ರಚಿಸಿಕೊಳ್ಳುವ ಕಾನೂನಿಗೆ ಆಡಳಿತ ಅಧಿನಿಯಮ ಎಂದೂ ತೀರ್ಪುಕೊಡುವ ಅಧಿಕಾರಿಯನ್ನು ಆಡಳಿತ ಮಂಡಳಿ ಎಂದೂ ಕರೆಯುವರು.

ವಿಧವಿಧವಾದ ತೆರಿಗೆಗಳನ್ನು ಹೊರಿಸಿ ವಸೂಲು ಮಾಡುವ. ವಾಣಿಜ್ಯ ಸಂಸ್ಥೆಗಳನ್ನು ನಡೆಸಲು ಅಪ್ಪಣೆ ಕೊಡುವ. ಲಾರಿ ಬಸ್ಸುಗಳನ್ನು ನಡೆಸಲು ಅನುಮತಿ ನೀಡುವ. ಯಜಮಾನರ ವಿರುದ್ಧ ನೌಕರರಿಗೆ ರಕ್ಷಣೆಗಳನ್ನು ನೀಡುವ. ಸಹಕಾರ ಸಂಘ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುವ. ಜಿಲ್ಲೆಯಲ್ಲಿನ ಹಲವಾರು ಇಲಾಖೆಗಳು ನ್ಯಾಯವಿಮರ್ಶೆ ಮಾಡುತ್ತವೆ. ಉದಾಹರಣೆಗೆ ತೆರಿಗೆ

---

[18] Taxmann, *The Code of Criminal Procedure*, Taxmann Publication, Delhi 110006, Chapter III S 9, p 6

[19] *Ibid.*, Chapter II, S 12, p. 9

[20] *Ibid.*, Chapter II, S 11, p.12

ಇಲಾಖೆಗಳಲ್ಲಿ ಮಾರಾಟ ತೆರಿಗೆ ಹಾಗೂ ಆದಾಯ ತೆರಿಗೆಯ ಅಧಿಕಾರಿಗಳು ಸಹಕಾರ ಇಲಾಖೆಯ ರಿಜಿಸ್ಟ್ರಾರರು ಮತ್ತು ಮಂಡಳಿಗಳು ಕಾರ್ಮಿಕ ಮಂಡಳಿಗಳ ಅಧಿಕಾರಿಗಳು, ರೆವಿನ್ಯೂ ಇಲಾಖೆಯ ಅಧಿಕಾರಿಗಳು, ಸಾರಿಗೆ ಇಲಾಖೆ ಅಧಿಕಾರಿಗಳು ನಾನಾ ಅಧಿನಿಯಮಗಳಿಂದ ಉದ್ಭವಿಸುವ ಕಲಹ ಗಳನ್ನು ಬಗೆಹರಿಸಿ ತೀರ್ಪು ಕೊಡುವರು. ಉದಾ: ಆವಶ್ಯಕ ಸಾಮಗ್ರಿಗಳ ಅಧಿನಿಯಮ, ಲ್ಯಾಂಡ್ ರೆವಿನ್ಯೂ ಅಧಿನಿಯಮ, ಗ್ರಾಮ ಪಂಚಾಯತಿ ಮತ್ತು ಸ್ಥಳೀಯಮಂಡಳಿ ಅಧಿನಿಯಮ, ನಗರಾಡಳಿತ ಅಧಿನಿಯಮ, ಸಶಸ್ತ್ರ ಕಾಯಿದೆ, ಸಿನಿಮಟೋಗ್ರಾಫ್ ರೆಗ್ಯುಲೇಷನ್ ಅಧಿನಿಯಮ, ಭೂಸುಧಾರಣಾ ಅಧಿನಿಯಮ, ತೆರಿಗೆ ನಿಯಂತ್ರಣ ಅಧಿನಿಯಮ, ಇತ್ಯಾದಿ.

ಸಿವಿಲ್ ವ್ಯಾಜ್ಯಗಳ ಕಾರ್ಯವಿಧಾನ

ಸಿವಿಲ್ ವ್ಯಾಜ್ಯಗಳಲ್ಲಿಯ ಕಾರ್ಯವಿಧಾನ ಬಹು ಕ್ಲಿಷ್ಟವಾದುದು ಹಾಗೂ ವಿಳಂಬಕಾರಿಯಾದ್ದು. ಈ ವಿಧಾನ ಕೆಲವೊಮ್ಮೆ ಪರಿಣತ ವಕೀಲರನ್ನು ಮತ್ತು ನ್ಯಾಯಾಧೀಶರನು ಗೊಂದಲಕ್ಕೀಡುಮಾಡು ತ್ತದೆ. ಇಂಥ ಪರಿಸ್ಥಿತಿಯಲ್ಲಿ ಸರಳವಾದ ಕಾರ್ಯವಿಧಾನವನ್ನು ರೂಪಿಸಿಕೊಳ್ಳುವುದು ನ್ಯಾಯಾಡಳಿತ ದಲ್ಲಿರುವ ಎಲ್ಲರ ಕರ್ತವ್ಯವಾಗಿದೆ. ವಾದಿ ಅಥವಾ ತೊಂದರೆಗೀಡಾದ ವ್ಯಕ್ತಿ ತನ್ನ ಅಹವಾಲನ್ನು ನ್ಯಾಯಾಲಯಕ್ಕೆ ಲಿಖಿತ ಮೂಲಕ ದಾವೆಯನ್ನು ಬರೆಯಿಸಿ ದಾಖಲು ಮಾಡಬೇಕಾಗುತ್ತದೆ. ದಾವೆಯ ಜೊತೆ ನಿಗದಿಯಾದ ನ್ಯಾಯಾಲಯ ಶುಲ್ಕವನ್ನು ಕೊಡಬೇಕಾಗುತ್ತದೆ[21]. ದಾವೆಯಲ್ಲಿ ಕೋರ್ಟಿನ ಹೆಸರು, ವಾದಿ ಪ್ರತಿವಾದಿಗಳ ಹೆಸರು, ವ್ಯಾಜ್ಯ ಹೂಡಲಿಕ್ಕೆ ಕಾರಣ, ಸನ್ನಿವೇಶಗಳು, ನ್ಯಾಯಾಲಯದಿಂದ ನಿರೀಕ್ಷಿಸುವ ಕೋರಿಕೆ, ಅವನ ರುಜು ಇತ್ಯಾದಿ ವಿವರಗಳನ್ನು ಸಿವಿಲ್ ವ್ಯಾಜ್ಯ ಕಾರ್ಯವಿಧಾನ ಸಂಹಿತೆಯ ವಿಧಿಗಳಿಗನುಗುಣವಾಗಿ ಕೊಡಬೇಕು. ಎಲ್ಲ ವಿವರಗಳೂ ಕಾನೂನಿಗನುಗುಣವಾಗಿದ್ದರೆ ದಾವೆಯನ್ನು ಸ್ವೀಕರಿಸಿ ಪ್ರತಿವಾದಿಯ ಹಾಜರಿಗೆಂದು ಒಂದು ದಿನಾಂಕ ವನ್ನು ಸೂಚಿಸುವರು. ಆ ದಿನ ಪ್ರತಿವಾದಿ ಬಂದು ವಾದಿಯ ಅಹವಾಲನ್ನು ಒಪ್ಪಿಕೊಂಡರೆ ಆ ದಿನವೇ ವಾದಿಯ ಕೋರಿಕೆಯನ್ನು ಎತ್ತಿ ಹಿಡಿದು ನ್ಯಾಯಾಲಯ ಡಿಕ್ರಿಯನ್ನು ಕೊಡುವುದು. ಪ್ರತಿವಾದಿ ದಾವೆಯನ್ನು ಒಪ್ಪಿಕೊಳ್ಳದೆ ಪ್ರತಿಭಟಿಸಿದರೆ, ವಾದಿ ಮತ್ತು ಪ್ರತಿವಾದಿ ಸಾಕ್ಷಿ ಪುರಾವೆ ಗಳನ್ನು ಯಾವ ಅಂಶಗಳಿಗೆ ಕೊಡಬೇಕೆಂಬುದನ್ನು ನ್ಯಾಯಾಲಯ ನಿರ್ಧರಿಸಿದ ಅನಂತರ ಅವರವರ ನಿಲುವನ್ನು ಸಮರ್ಥಿಸಲು ಸಾಕ್ಷಿಗಳ ವಿಚಾರಣೆ ಮಾಡಿ ಕಾಗದ ಪತ್ರಗಳನ್ನು ಹಾಜರ್ಪಡಿಸುವರು. ಅನಂತರ ವಾದಿ ಪ್ರತಿವಾದಿಗಳು ತಮ್ಮತಮ್ಮ ವಾದವನ್ನು ಮಂಡಿಸುವರು. ಅನಂತರ ನ್ಯಾಯಾಧೀಶರು ಸಾಕ್ಷಿ ವಿಚಾರಣೆಯ ಹೇಳಿಕೆಗಳನ್ನು, ಹಾಜರ್ಪಡಿಸಿದ ಕಾಗದ ಪತ್ರಗಳನ್ನು ವಿಮರ್ಶಿಸಿ ಅಂತಿಮ ನಿರ್ಣಯ ಕೊಡುವರು. ಆದರೆ, ಸಿವಿಲ್ ಮೊಕದ್ದಮೆಯ ಕಾರ್ಯವಿಧಾನ ಮೇಲೆ ಹೇಳಿದಷ್ಟು ಸರಳವಾಗಿಲ್ಲ. ವಿವಿಧ ಘಟ್ಟಗಳಲ್ಲಿ ಅಡೆತಡೆಗಳಾಗಿ, ಮೊಕ್ಕದ್ದಮೆಯ ಮೇಲಣ ನಿರ್ಣಯ ನಿರೀಕ್ಷಿಸಿದಷ್ಟು ಬೇಗ ಹೊರಬೀಳುವುದಿಲ್ಲ, ಬಹು ವಿಳಂಬವಾಗುತ್ತದೆ. ಈ ರೀತಿಯ ವಿಳಂಬಕ್ಕೆ, ಅನುಸರಿಸುವ ಕಾರ್ಯವಿಧಾನ, ಕಕ್ಷಿಗಾರರು, ವಕೀಲರು, ನ್ಯಾಯಾಧೀಶರುಗಳು, ನ್ಯಾಯಾಲಯಗಳ ನೌಕರವರ್ಗ ದವರು ತಮ್ಮದೇ ಆದ ರೀತಿಯಲ್ಲಿ ಕಾರಣರಾಗಿದ್ದಾರೆ.

ನ್ಯಾಯಾಲಯದಿಂದ ಡಿಕ್ರಿ ಪಡೆದ ತತ್‌ಕ್ಷಣ ನ್ಯಾಯ ದೊರಕಿ ವಾದಿಯ ಇಷ್ಟ ನೆರವೇರಿ ದಂತಾಗುವುದಿಲ್ಲ. ದಾವಾ ಡಿಕ್ರಿಯನ್ನು ಜಾರಿಗೆ ಹಾಕಿ ವ್ಯಾಜ್ಯವನ್ನು ಮುಂದುವರಿಸಬೇಕಾಗುತ್ತದೆ. ಈ ವಿಧಾನ ಬಹು ಕಠಿಣವೂ ಬೇಸರ ತರಿಸತಕ್ಕಂಥದೂ ಆಗಿರುತ್ತದೆ. ಜಾರಿಯ ಕಾಲದಲ್ಲಿ ಇಲ್ಲಸಲ್ಲದ, ಅಸಮಂಜಸ ತಕರಾರುಗಳನ್ನು ಹಾಕಿ ಜಾರಿಯನ್ನು ತಡೆಗಟ್ಟುವ ಪ್ರಕರಣಗಳೇ ಹೆಚ್ಚು. ೧೯೦೮ರಿಂದ

---

[21] Government of Mysore, Law Department, *The Mysore Court Fee and Suit Valuation Act*, 1958 and 1960, Government Press, 1966, Chapter III & IX, SS 10 to 49

ಸಿವಿಲ್ ವ್ಯಾಜ್ಯವನ್ನು ನಿಯಂತ್ರಿಸುತ್ತಿದ್ದ ಸಿವಿಲ್ ವ್ಯಾಜ್ಯ ಪ್ರಕ್ರಿಯಾ ಸಂಹಿತೆ (ಸಿವಿಲ್ ಪ್ರೊಸೀಜರ್ ಕೋಡ್) ಈಗ ತಿದ್ದುಪಡಿಯಾಗುತ್ತಿದೆ.[22] ಸರಳೀಕರಣ, ತ್ವರಿತಗತಿಯಲ್ಲಿ ಮೊಕದ್ದಮೆಗಳನ್ನು ನಡೆಸುವುದು–ಈ ಎರಡು ಉದ್ದೇಶಗಳನ್ನು ಇಟ್ಟುಕೊಂಡು ಸಂಹಿತೆಯನ್ನು ತಿದ್ದುಪಡಿ ಮಾಡಲಾಗುತ್ತಿದೆ. ಬಡವರಿಗೆ ಧನಸಹಾಯ, ಉಚಿತವಾಗಿ ಕಾನೂನಿನ ಸಲಹೆ ನೀಡುವುದು, ಅನಾವಶ್ಯಕವಾದ ಅಪೀಲುಗಳ ಸಂಖ್ಯೆಗಳನ್ನು ಮೊಟಕುಗೊಳಿಸುವುದು ಮತ್ತು ಮುಂದೆ ಕೊಟ್ಟಿರುವ ಇನ್ನೂ ಕೆಲವು ಸುಧಾರಣೆಗಳನ್ನು ತರಲು ಹೊರಟ ಕೇಂದ್ರ ಸರ್ಕಾರದ ಕಾರ್ಯ ಸ್ತುತ್ಯವಾಗಿದೆ:

೧ ಸರ್ಕಾರದ ಮೇಲೆ ವ್ಯಾಜ್ಯ ಹೂಡಲು ಎರಡು ತಿಂಗಳು ಮುಂಚೆಯೇ ನೋಟೀಸನ್ನು ಕೊಟ್ಟು ದಾವಾ ದಾಖಲು ಮಾಡಬೇಕಾಗಿದ್ದ ಪದ್ಧತಿಯನ್ನು ಕೈಬಿಡುವುದು.

೨ ಎರಡನೆಯ ಅಪೀಲು ವ್ಯಾಜ್ಯದಲ್ಲಿ ನಿಗೂಢವಾದ ಕಾನೂನಿನ ಅಂಶವಿದೆ ಎಂದು ಉಚ್ಚ ನ್ಯಾಯಾಲಯ ದೃಢೀಕರಿಸಿದ ಅನಂತರವೇ ಮುಂದೆ ಅಪೀಲು ಹೋಗಲು ಅವಕಾಶ ಕೊಡುವುದು.

೩ ಆಧಾರ ಯೋಗ್ಯ ದಾವೆಗಳಲ್ಲಿ ಎರಡು ಸಾರಿ ಡಿಕ್ರಿಯನ್ನು ಬರೆಯುವ ಈಗಿನ ಪದ್ಧತಿಯನ್ನು ಕೈಬಿಡುವುದು.

೪ ಸಂಕ್ಷಿಪ್ತ ಸಾಕ್ಷಿ ಹೇಳಿಕೆ ದಾಖಲು ಮಾಡುವ ಪದ್ಧತಿಯನ್ನು (ಸಮ್ಮರಿ ಟ್ರೈಯಲ್) ವ್ಯಾಪಕವಾಗಿ ಅನುಸರಿಸುವುದು.

೫ 'ಪಾಪರ್ ದಾವಾ' ಎಂಬ ಶಬ್ದ ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಅಷ್ಟೊಂದು ಸಮಂಜಸವಲ್ಲವೆಂದು ತಿಳಿದು, ಆ ಪದವನ್ನು ಕಿತ್ತುಹಾಕಿ ಒಂದು ಸಾವಿರ ರೂಪಾಯಿಗಳಿಗೆ ಮೀರದ ವರಮಾನವುಳ್ಳವರಿಗೆ ಧನಸಹಾಯ, ಉಚಿತ ಕಾನೂನು ಸಲಹೆಯನ್ನು ಕೊಡಬೇಕೆಂದು ಉಲ್ಲೇಖಿಸಲಾಗಿದೆ.

೬ ಇನ್ನೊಂದು ಪ್ರಮುಖವಾದ ತಿದ್ದುಪಡಿ ಎಂದರೆ ಸಿವಿಲ್ ಪ್ರಕ್ರಿಯೆಯ ೧೧೫ನೆಯ ವಿಧಿಯನ್ನು ತೆಗೆದು ಹಾಕಿ ಕಕ್ಷಿಗಾರರಿಗೆ ಮಧ್ಯಾವಧಿಯಲ್ಲಿ ನ್ಯಾಯಾಧೀಶರು ಕೊಟ್ಟ ತೀರ್ಪನ್ನು ಮೇಲಿನ ಕೋರ್ಟಿಗೆ ಹೋಗಿ ಪುನರ್‌ಪ್ರಾರ್ಥಿಸಲು ಇದ್ದ ಅವಕಾಶವನ್ನು ತಪ್ಪಿಸಲಾಗಿದೆ. ವಿನಾಕಾರಣ ಮೊಕದ್ದಮೆಯನ್ನು ತಡೆಹಿಡಿಯುತ್ತಿದ್ದ ಪದ್ಧತಿಗೆ ತಿಲಾಂಜಲಿ ಕೊಟ್ಟಂತಾಗಿದೆ.

ದಂಡಪ್ರಕ್ರಿಯೆ

ಸಿವಿಲ್ ವ್ಯಾಜ್ಯಗಳಿಗೆ ಹೋಲಿಸಿ ನೋಡಿದಾಗ, ಅಪರಾಧ ನ್ಯಾಯಾಡಳಿತದ ಪ್ರಕ್ರಿಯೆ ಸ್ವಲ್ಪಮಟ್ಟಿಗೆ ಸರಳವಾಗಿ ತೋರುವುದು. ಕಾರ್ಯವಿಧಾನ ೧೯೭೩ರಲ್ಲಿ ತಿದ್ದುಪಡಿ ಮಾಡಿದ ದಂಡ ಪ್ರಕ್ರಿಯಾ ಸಂಹಿತೆಗೆ ಅನುಗುಣವಾಗಿದೆ. ಕೆಲವು ಸಣ್ಣ ಪುಟ್ಟ ಅಪರಾಧಗಳ ವಿಚಾರದಲ್ಲಿ ವಿಚಾರಣೆಯ ಹೇಳಿಕೆಯನ್ನು ಸಂಕ್ಷಿಪ್ತವಾಗಿ ಬರೆದುಕೊಂಡು ದೀರ್ಘಾವಧಿ ವಿಚಾರಣೆಗೆ ಅವಕಾಶ ಕೊಡದೆ ದಂಡಾಧಿಕಾರಿಗಳು ತೀರ್ಮಾನ ಮಾಡುತ್ತಾರೆ[23]. ಮೊತ್ತಮೊದಲಿಗೆ ಅಪರಾಧಿಯನ್ನು ನ್ಯಾಯಾಲಯಕ್ಕೆ ಬರಮಾಡಿಕೊಂಡು ಅವನನ್ನು ಆಪಾದನೆಗೆ ಗುರಿಪಡಿಸಲಾಗುವುದು. ಆ ಸಂದರ್ಭದಲ್ಲಿ ಆಪಾದಿತ ಆಪಾದನೆ

[22] Law Commission, India, 54th *report on The Code of Civil Procedure of* 1908, Government of India Publications, Delhi, 1973

[23] Taxmann, *Code of Criminal Procedure*, 1973, Taxmaun's Publications, New Delhi, 1974

ಯನ್ನು ಒಪ್ಪಿಕೊಳ್ಳಬಹುದು ಅಥವಾ ಒಪ್ಪದಿರಬಹುದು. ತಪ್ಪನ್ನು ಒಪ್ಪಿಕೊಂಡರೆ ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸಲಾಗುವುದು. ಇಲ್ಲದಿದ್ದಲ್ಲಿ ಅವನನ್ನು ವಿಚಾರಣೆಗೆ ಗುರಿಪಡಿಸಲಾಗಿ, ಆಪಾದನೆಗಳನ್ನು ಸಾಕ್ಷಿಗಳ ವಿಚಾರಣೆಯ ಮುಖಾಂತರ ಸಾಬೀತುಪಡಿಸಲಾಗುವುದು. ಅನಂತರ ಅಪರಾಧಿ ತನ್ನ ಪರವಾಗಿ ಸಾಕ್ಷಿಗಳನ್ನು ವಿಚಾರಣೆ ಮಾಡಲು ನಿರ್ಧರಿಸಿದರೆ ಹಾಗೆ ಮಾಡಲು ಅವನಿಗೆ ಅವಕಾಶ ಕೊಡಲಾಗುವುದು.

ಗುರುತರವಾದ ಅಪರಾಧಗಳನ್ನು ಮೇಲೆ ಹೇಳಿದ ರೀತಿಯಲ್ಲಲ್ಲದೆ ವಿಭಿನ್ನ ರೀತಿಯ ವಿಧಾನವನ್ನು ಅನುಸರಿಸಿ ವಿಚಾರಣೆ ಮಾಡುವರು. ಅಂತಹ ಪ್ರಕರಣಗಳಲ್ಲಿ ಅಪರಾಧಿಯನ್ನೂ ಕೆಲವು ಸಾಕ್ಷಿಗಳನ್ನೂ ವಿಚಾರಣೆ ಮಾಡಿ ಆಪಾದನೆಯನ್ನು ದೃಢೀಕರಿಸಿಕೊಂಡು ಆಪಾದಿತನನ್ನು ಆಪಾದನೆಗೆ ಗುರಿಪಡಿಸಲಾಗುವುದು. ಆಪಾದಿತನಿಗೆ ತನ್ನನ್ನು ರಕ್ಷಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ಕೊಡಬೇಕೆಂಬುದೇ ಈ ಪದ್ಧತಿಯ ಉದ್ದೇಶ. ತನ್ನ ಮೇಲಿನ ಆಪಾದನೆಗಳನ್ನು ಖಂಡಿಸಿ ಪ್ರಾಮಾಣಿಕತೆಯನ್ನು ಸಾಬೀತುಪಡಿಸಿಕೊಡುವ ಅವಕಾಶವನ್ನು ಕಲ್ಪಿಸಿಕೊಡುವ ಈ ಪದ್ಧತಿಯನ್ನು ಹಲವರು ಸರಿಯಾದ ಕ್ರಮವೆಂದು ಸಮರ್ಥಿಸಿರುತ್ತಾರೆ.

ದಂಡ ಪ್ರಕ್ರಿಯಾ ಸಂಹಿತೆಯ ತಪ್ಸೀಲು ಪಟ್ಟಿಯಲ್ಲಿ ನಮೂದಿಸಿರುವಂತೆ ಕೊಲೆ, ಮೋಸ, ದರೋಡೆ, ಅಕ್ರಮ ಸಂಭೋಗ ಇತ್ಯಾದಿ ಕ್ರೂರ ಅಪರಾಧಗಳನ್ನು ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ವಿಚಾರಣೆಗೆ ತೆಗೆದುಕೊಳ್ಳುವರು[24].

ಆದರೆ ಇದುವರೆಗೂ ದಂಡಾಧೀಶರು ಅಪರಾಧಿಯ ಮೇಲೆ ನ್ಯಾಯಸಮ್ಮತವಾದ ಆಪಾದನೆ ಇದೆ ಎಂದು ಕಂಡುಕೊಳ್ಳಲು ಸಾಕ್ಷಿಗಳನ್ನು ವಿಚಾರಣೆ ಮಾಡಿ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಿಗೆ ಮುಂದಿನ ವಿಚಾರಣೆಗೋಸ್ಕರ ಒಪ್ಪಿಸುತ್ತಿದ್ದರು. ಇದು ಅಸಾಧಾರಣ ವಿಳಂಬಕ್ಕೆ ಕಾರಣವಾಗುವುದೆಂದು ಭಾವಿಸಿ ಇತ್ತೀಚಿನ ತಿದ್ದುಪಡಿ ಮಾಡಿದ ದಂಡಪ್ರಕ್ರಿಯಾ ಸಂಹಿತೆಯಲ್ಲಿ ಈ ಪದ್ಧತಿಯನ್ನು ಕೈಬಿಡಲಾಗಿದೆ.

ವಿಚಾರಣೆಯ ಅನಂತರ ಅಪರಾಧಿಯ ಹೇಳಿಕೆಯನ್ನು ತೆಗೆದುಕೊಂಡು ಫಿರ್ಯಾದಿ–ಆಪಾದಿತರ ಪರ–ವಿರೋಧ ವಾದಗಳನ್ನು ಕೇಳಿ ಆಪಾದಿತನನ್ನು ಶಿಕ್ಷೆಗೆ ಗುರಿಪಡಿಸುವ ಅಥವಾ ಅಪರಾಧದಿಂದ ಖುಲಾಸೆ ಮಾಡುವ ತೀರ್ಪನ್ನು ಸೆಷನ್ಸ್ ನ್ಯಾಯಾಧೀಶರು ಕೊಡುವರು.

ಕಾರ್ಯವಿಧಾನವನ್ನು ಸರಳಗೊಳಿಸಲು ಹಾಗೂ ತ್ವರಿತಗೊಳಿಸಲು ೧೮೯೮ರ ದಂಡಪ್ರಕ್ರಿಯಾ ಸಂಹಿತೆಯನ್ನು ೧೯೭೩ರಲ್ಲಿ ತಿದ್ದುಪಡಿ ಮಾಡಿ ಈ ಸುಧಾರಣೆಗಳನ್ನು ತರಲಾಗಿದೆ[25].

೧ ಎರಡು ವರ್ಷಗಳ ವರೆಗೆ ಶಿಕ್ಷೆ ವಿಧಿಸಬಹುದಾದ ಅಪರಾಧಗಳನ್ನು ಸಮನ್ಸ್ ವಿಧಾನದಿಂದ ವಿಚಾರಣೆ ಮಾಡಲು ಅವಕಾಶ ಕೊಟ್ಟಿರುವುದರಿಂದ ಹಲವಾರು ಮೊಕದ್ದಮೆಗಳ ನಿರ್ಣಯ ವಿಳಂಬವಾಗದೆ ಅವು ತ್ವರಿತಗತಿಯಲ್ಲಿ ಸಾಗುವುವು.

೨ ಒಂದು ವರ್ಷದ ವರೆಗೆ ಶಿಕ್ಷೆ ವಿಧಿಸಬಹುದಾದ ಎಲ್ಲ ಅಪರಾಧಗಳನ್ನು ಸಂಕ್ಷಿಪ್ತ ವಿಚಾರಣೆ ಮಾಡುವ ವಿಧಾನದಿಂದ ನಿರ್ಣಯಿಸಬಹುದಾದ್ದರಿಂದ ವಿಳಂಬವಾಗದೆ ಮೊಕದ್ದಮೆಗಳು ಬೇಗ ನಿರ್ಣಾಯಕ ಘಟ್ಟಗಳನ್ನು ತಲಪುವುವು.

---

[24] *Ibid.*, The First Schedule (classification of offences), pp, A 2 to A 71

[25] Based on the *47th Report* submitted by the Law commission of India in the year 1969

೩ ಮಧ್ಯಾವಧಿಯಲ್ಲಿ ನ್ಯಾಯಾಧೀಶರ ನಿರ್ಣಯದ ಮೇಲೆ ಪುನರ್‌ಪರಿಶೀಲನೆಗಾಗಿ ಹೋಗುವ ಕ್ರಮವನ್ನು ತೆಗೆದುಹಾಕಿರುವುದರಿಂದ ಮೇಲಿನ ಕೋರ್ಟಿನಿಂದ ತಡೆಯಾಜ್ಞೆ ಬಂದು ಮೊಕದ್ದಮೆಗಳು ನಡೆಯದೆ ವಿಳಂಬವಾಗುವುದನ್ನು ತಪ್ಪಿಸಿದಂತಾಗಿದೆ.

೪ ಆಗಾಗ್ಗೆ ವಕೀಲರು ವಿನಾಕಾರಣ ಮೊಕದ್ದಮೆಯ ವಿಚಾರಣೆಗಳನ್ನು ಮುಂದೂಡಿಸುವ ಪ್ರವೃತ್ತಿಯನ್ನು ತಡೆಗಟ್ಟಲು ನ್ಯಾಯಾಧೀಶರುಗಳಿಗೆ ಕೋರ್ಟು ಖರ್ಚು ವಿಧಿಸುವ ಅಧಿಕಾರವನ್ನು ಕೊಡಲಾಗಿದೆ.

೫ ಸಣ್ಣಪುಟ್ಟ ಅಪರಾಧಗಳನ್ನು ಮಾಡಿದವರು ಅಂಚೆಯ ಮುಖಾಂತರ ದಂಡವನ್ನು ಕೊಡಬಹುದಾದ ಪದ್ಧತಿಯನ್ನು ನಿರೂಪಿಸಲಾಗಿದೆ.

೬ ಕೆಲವು ಸೂಕ್ತ ಸಂದರ್ಭಗಳಲ್ಲಿ ಮಾತ್ರ ಮೊಕದ್ದಮೆಗಳನ್ನು ಪುನರ್ ವಿಚಾರಣೆಗೆ ಕಳುಹಿಸಬೇಕೆಂದೂ ಸೂಚಿಸಲಾಗಿದೆ.

ನ್ಯಾಯಡಳಿತದಲ್ಲಿಯ ಸಮಸ್ಯೆಗಳು

ನ್ಯಾಯಾಡಳಿತದಲ್ಲಿ ನ್ಯಾಯವಿತರಣೆಯ ವಿಳಂಬ, ಕಕ್ಷಿಗಾರರಿಗೆ ತಗಲುವ ದುಬಾರಿ ಖರ್ಚು—ಇವು ಬಹುವಾಗಿ ಕಾಡುವ ಎರಡು ಸಮಸ್ಯೆಗಳು. ೧ ನ್ಯಾಯಾಧೀಶರುಗಳ ಮತ್ತು ನ್ಯಾಯಾಲಯದ ನೌಕರ ವರ್ಗದವರ ಸೇವಾ ಸೌಲಭ್ಯಗಳಲ್ಲಿನ ಸಮಸ್ಯೆಗಳು. ೨ ವಕೀಲರಲ್ಲಿಯ ಅನಪೇಕ್ಷಣೀಯ ಸ್ಪರ್ಧೆ ಮತ್ತು ಇತರ ಸಮಸ್ಯೆಗಳು. ೩ ಪ್ರಕ್ರಿಯಾ ಸಂಹಿತೆಯಲ್ಲಿಯ ದೋಷಗಳು. ೪ ವಿಹಿತಾಚಾರ. ೫ ಅನಾವಶ್ಯಕವಾದ ಅಪೀಲುಗಳು. ೬ ನ್ಯಾಯಾಲಯ ಮತ್ತು ಭಾಷೆ. ೭ ಕ್ಷೀಣವಾಗುತ್ತಿರುವ ನೈತಿಕ ಮೌಲ್ಯಗಳು. ೮ ಸಮಾಜದಲ್ಲಿರುವ ಆರ್ಥಿಕ ಅಸಮಾನತೆ. ಮುಂತಾದ ಅಂಶಗಳು ನ್ಯಾಯಾಡಳಿತದಲ್ಲಿ ಸಮಸ್ಯೆಗಳಿಗೆ ಕಾರಣವಾಗಿವೆ. ಇವನ್ನು ವ್ಯಕ್ತಿಗತ ಸಮಸ್ಯೆಗಳು ಮತ್ತು ಪ್ರಕ್ರಿಯಾ ನಿಯಂತ್ರಣ ಕಾನೂನು ಕಟ್ಟಳೆಗಳಲ್ಲಿಯ ಲೋಪದೋಷಗಳು ಎಂಬುದಾಗಿ ಎರಡು ಬಗೆಯಾಗಿ ವಿಂಗಡಿಸಬಹುದು.

ನ್ಯಾಯವಿತರಣೆಯ ವಿಳಂಬಕ್ಕೆ ಕಾರಣಗಳು :

೧ ನ್ಯಾಯಾಧೀಶರುಗಳ ಮತ್ತು ಇತರ ಸಹಾಯಕ ಸಿಬ್ಬಂದಿಯ ಕೊರತೆ.

೨ ಕಚೇರಿಯಲ್ಲಿ ಕ್ರಮಬದ್ಧವಾದ ವ್ಯವಸ್ಥೆ ಇಲ್ಲದಿರುವುದು.

೩ ಅನಾವಶ್ಯಕವಾಗಿ ಬೇಡದ ಸಾಕ್ಷಿಗಳನ್ನು ಹೆಚ್ಚಿಗೆ ಕರೆತಂದು ವಿಚಾರಣೆ ಮಾಡುವುದು.

೪ ತಡವಾಗಿ ಸಾಕ್ಷಿಗಳನ್ನು ಬರಮಾಡಿಕೊಳ್ಳುವುದು,

೫ ಉದ್ದನೆಯ ಪಾಟೀಸವಾಲು,

೬ ನ್ಯಾಯಾಧೀಶರು ವಕೀಲರನ್ನು ಸಾಕ್ಷಿ ವಿಚಾರಣೆ ಮತ್ತು ವಾದ ಮಾಡುವಾಗ ನಿರೀಕ್ಷಿಸಿದ ಹತೋಟಿಯಲ್ಲಿಡದೆ ಕಾಲವಿಳಂಬಕ್ಕೆ ಅವಕಾಶ ಮಾಡಿಕೊಡುವ ಪ್ರವೃತ್ತಿ,

೭ ದಾವೆಗೆ ಸಂಬಂಧಿಸಿದ ಪತ್ರಗಳನ್ನು ಸಮಯೋಚಿತವಾಗಿ ಹಾಜರ್ಪಡಿಸದೆ ಇರುವುದು.

೮ ಅಮೀನರು ನಿಯಮಿತ ವೇಳೆಯಲ್ಲಿ ಪ್ರತಿವಾದಿಗಳಿಗೆ ಮತ್ತು ಸಾಕ್ಷಿಗಳಿಗೆ ನೋಟೀಸನ್ನು ಕೊಡದಿರುವುದು,

೯ ಪ್ರಾರಂಭದಲ್ಲಿ ದಾವೆಯಲ್ಲಿ ಸ್ಪಷ್ಟ ಹಾಗೂ ಆವಶ್ಯಕ ವಿವರಗಳನ್ನು ಕೊಡದೆ ಇರುವುದು,

೧೦ ವಿನಾ ಕಾರಣ ಪ್ರತಿ ಪಕ್ಷದವರನ್ನು ತೊಂದರೆಗೀಡುಮಾಡಲೋ ಸೋಮಾರಿತನದಿಂದಲೋ ವ್ಯಾಜ್ಯವನ್ನು ಮುಂದೂಡುವ ಪ್ರವೃತ್ತಿ,

೧೧ ದಕ್ಷ ಹಾಗೂ ಸಾಮರ್ಥ್ಯವಿಲ್ಲದ ನ್ಯಾಯಾಧೀಶರುಗಳು ವ್ಯಾಜ್ಯಗಳ ಬಗ್ಗೆ ತಕ್ಕ ಮಾಹಿತಿ ಇಲ್ಲದೆ ಹತೋಟಿಯನ್ನು ಕಳೆದುಕೊಳ್ಳುವುದು,

೧೨ ವ್ಯಾಜ್ಯ ಅಂತಿಮವಾಗಿ ತೀರ್ಮಾನವಾಗುವ ಮುನ್ನವೇ ಮೇಲಿನ ಕೋರ್ಟುಗಳಿಂದ ತಡೆಯಾಜ್ಞೆ ಬಂದು ವ್ಯಾಜ್ಯ ಸ್ಥಗಿತಗೊಳ್ಳುವುದು,

೧೩ ಹೈಕೋರ್ಟು ಮತ್ತು ಜಿಲ್ಲಾ ನ್ಯಾಯಾಲಯಗಳು ಕೆಳದರ್ಜೆಯ ನ್ಯಾಯಲಯಗಳ ಕಾರ್ಯಕಲಾಪಗಳನ್ನು ಆಗಾಗ್ಗೆ ವೀಕ್ಷಿಸಿ, ಲೋಪದೋಷಗಳನ್ನು ಕಂಡುಹಿಡಿದು ಸಲಹೆಗಳನ್ನು ಕೊಡದಿರುವುದು,

ಇತ್ಯಾದಿ ಕಾರಣಗಳಿಗಾಗಿ ಮೊಕದ್ದಮೆಗಳು ಮುಂದುವರಿಯದೆ ಹಲವಾರು ಘಟ್ಟಗಳಲ್ಲಿ ಸ್ಥಗಿತಗೊಳ್ಳುವುವು.

ಕಕ್ಷಿಗಾರರಿಗೆ ತಗಲುವ ಖರ್ಚು ಈ ಕಾರಣ ಮತ್ತು ಅಂಶಗಳಿಂದಾಗಿ ಬಹು ದುಬಾರಿಯಾಗಿದೆ :

೧ ವಿವಾದಗಳಿಗೆ ಅಂತಿಮ ತೀರ್ಪು ದೊರಕಿಸಿಕೊಳ್ಳದೆ ತೀರ್ಪಿನ ಮೇಲೆ ಅಪೀಲು, ಅದರ ಮೇಲೊಂದು ಅಪೀಲು. ಹೀಗೆ ವ್ಯಾಜ್ಯ ಅಂತಿಮ ಘಟ್ಟವನ್ನು ತಲುಪದೆ ಹತ್ತು ಹದಿನೈದು ವರ್ಷಗಳಾಗಬಹುದು. ಹೀಗೆ ಈ ಅವಧಿಯಲ್ಲಿ ಕಕ್ಷಿಗಾರ ತುಂಬ ಖರ್ಚು ಮಾಡಬೇಕಾಗುತ್ತದೆ.

೨ ವಕೀಲರ ಸಾಮರ್ಥ್ಯ, ಮೊಕದ್ದಮೆಯ ವಿದ್ಯಮಾನ ಮತ್ತು ಕಕ್ಷಿಗಾರನ ಹಣಕಾಸಿನ ಸಾಮರ್ಥ್ಯಗಳಿಗೆ ಸಂಬಂಧಿಸಿದ ಹಾಗೆ ವಕೀಲರ ಶುಲ್ಕ ಇಷ್ಟು ಎಂದು ನಿಗದಿಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಕಕ್ಷಿಗಾರರು ಮೊಕದ್ದಮೆಯನ್ನು ಗೆಲ್ಲುವ ಅವಸರದಲ್ಲಿ ವಕೀಲರ ಶುಲ್ಕವನ್ನು ಎಷ್ಟು ಬೇಕಾದರೂ ಕೊಡುವವರಿರುತ್ತಾರೆ. ಅವಿದ್ಯಾವಂತ ರೈತರ ಶೋಷಣೆ ಬಹುಪಾಲು ವಕೀಲರ ಶುಲ್ಕದಿಂದಲೇ ಆಗುತ್ತದೆ.

೩ ನ್ಯಾಯಾಲಯಗಳ ಶುಲ್ಕ—ಸಿವಿಲ್ ವ್ಯಾಜ್ಯದಲ್ಲಿ ಕಕ್ಷಿಗಾರ ಮಿತಿಮೀರಿದ ಶುಲ್ಕವನ್ನು ಕೊಡಬೇಕಾಗುತ್ತವೆ. ನ್ಯಾಯಶಾಸ್ತ್ರಜ್ಞ ಬೆಂತಾಮನ ಪ್ರಕಾರ ಸರ್ಕಾರ ನ್ಯಾಯಾಡಳಿತದಲ್ಲಿ ಶುಲ್ಕ ವಸೂಲು ಮಾಡುವುದು ಸರಿಯಲ್ಲ. ಕಾರಣ, ಸರ್ಕಾರ ರಚಿಸಿದ ಕಾನೂನುಗಳಲ್ಲಿಯ ಲೋಪದೋಷಗಳಿಂದಲೂ ಅದಕ್ಷ ಹಾಗೂ ಅಕ್ರಮ ಕಾರ್ಯನಿರ್ವಹಣೆಯಿಂದಲೂ ಮೊಕದ್ದಮೆಗಳು ಹಾಗೂ ವಿವಾದಗಳು ಹುಟ್ಟುತ್ತವೆ ಎಂಬುದು ಅವನ ವಾದ[26]. ಇತ್ತೀಚೆಗೆ ಸಿವಿಲ್ ವ್ಯಾಜ್ಯಗಳನ್ನು ನಡೆಸುವುದರಿಂದ ಸರಕಾರಕ್ಕೆ ವೆಚ್ಚಕ್ಕಿಂತ ಆದಾಯವೇ ಜಾಸ್ತಿಯಾಗಿದೆ ಎಂಬುದು ಮಥಾಯ್ ವರದಿಯಿಂದ ವ್ಯಕ್ತವಾಗುತ್ತದೆ[27]. ಕಾನೂನು ಆಯೋಗದವರು ತಮ್ಮ ಹದಿನಾಲ್ಕನೆಯ ವರದಿಯಲ್ಲಿ ನ್ಯಾಯಾಲಯ ಶುಲ್ಕವನ್ನು (court fee) ವಸೂಲು ಮಾಡುವುದನ್ನು ಕ್ರಮೇಣ ನಿಲ್ಲಿಸಬೇಕು ಅಥವಾ ಕಡಿಮೆ ಮಾಡಬೇಕು ಎಂದು ಅಭಿಪ್ರಾಯಪಟ್ಟಿರುತ್ತಾರೆ.

೪ ಕೆಲವು ಸ್ಥಳಗಳಲ್ಲಿ ನ್ಯಾಯಾಲಯಗಳು ದೂರವಿರುವುದರಿಂದ ಕಕ್ಷಿಗಾರರು ಹೋಗಿ ಬರಲು ತಗಲುವ ಖರ್ಚು, ಸಾಕ್ಷಿಗಳ ಭತ್ಯಗಳಿಗೆ ಆಗುವ ವೆಚ್ಚ ಅಸಾಧಾರಣವಾಗಿರುತ್ತದೆ.

೫ ಮೊಕದ್ದಮೆ ಮುಗಿಯುವುದರಲ್ಲಿ ತುಂಬಾ ವಿಳಂಬವಾಗುವುದರಿಂದಲೂ ಕಕ್ಷಿಗಾರನಿಗೆ ತುಂಬ ವೆಚ್ಚ ತಗಲುವುದು.

ಈ ಕಾರಣಗಳಿಗಾಗಿ ಬಡ ಕಕ್ಷಿಗಾರ ನ್ಯಾಯಾಲಯದ ಮೆಟ್ಟಿಲನ್ನು ಹತ್ತದೆ, ಅನ್ಯಾಯಕ್ಕೊಳಗಾಗಿದ್ದರೂ ಸಮ್ಮನಿರಬೇಕಾಗುತ್ತದೆ. ಫ್ರಾನ್ಸಿಸ್ ಬೇಕನ್ ಹೇಳಿರುವಂತೆ, "Laws were

---

[26] Alladi Kuppuswami, Laws Delays and cost of Litigation, Law and Commonwealth Law conference, *Occasional papers*, (Ed), Singhvi, L. M., National Press, New Delhi, 1973, pp. 137

[27] Mathai Committee, *Taxation Enquiry Committee Report*, Government of India Press, Delhi, 1955 pp. 104–110

like cobwebs, where the small fiies were caught, and the great break through" ಅನುಕೂಲ ಪರಿಸ್ಥಿತಿಯಲ್ಲಿರುವ ಶ್ರೀಮಂತರು ಸುಲಭದಲ್ಲಿ ನ್ಯಾಯ ದೊರಕಿಸಿ ಕೊಳ್ಳಬಹುದು. ಆದುದರಿಂದ ಬಡ ಕಕ್ಷಿಗಾರರಿಗೆ ಧನಸಹಾಯ ಹಾಗೂ ಉಚಿತ ಕಾನೂನು ಸಲಹೆಗಳನ್ನು ಕೊಡಿಸಿ ನ್ಯಾಯ ದೊರಕುವಂತೆ ಮಾಡಲು ಹೊರಟಿರುವ ಸರಕಾರದೊಡನೆ ವಕೀಲರು ನ್ಯಾಯಾಧೀಶರು ಸಹಕರಿಸಿದರೆ ಬಡವರಿಗೆ ಸಾಮಾಜಿಕ ನ್ಯಾಯ ದೊರಕುವ ಮೂಲಕ ನ್ಯಾಯಾಲಯಗಳಲ್ಲಿ ನ್ಯಾಯ ದೊರಕಿದಂತಾಗುತ್ತದೆ[28].

ನ್ಯಾಯಾಧೀಶರು ಮತ್ತು ನೌಕರವರ್ಗದಲ್ಲಿಯ ಸಮಸ್ಯೆಗಳು:

ನ್ಯಾಯಾಧೀಶ ಕಾರ್ಡೋಜ್ ಹೇಳಿದಂತೆ. ಅಂತಿಮವಾಗಿ ನ್ಯಾಯದ ಭರವಸೆ ನ್ಯಾಯಾಧೀಶನ ವ್ಯಕ್ತಿತ್ವವನ್ನು ಅವಲಂಬಿಸಿರುತ್ತದೆ. ಇಂಥ ಸಂದರ್ಭದಲ್ಲಿ ಅವನ ಮೇಲೆ ಅವನ ಸಾಮಾಜಿಕ ಹಿನ್ನೆಲೆ ಮತ್ತು ಶಿಕ್ಷಣ ಪದ್ಧತಿ ನಿರ್ವಹಿಸಿದ ಪಾತ್ರ ಪ್ರಭಾವ ಬೀರುತ್ತದೆ. ಯಾವ ನ್ಯಾಯಾಧೀಶನಿಗೆ ಸಾಮಾಜಿಕ ಅಂತರ್‌ದೃಷ್ಟಿ. ದೂರದೃಷ್ಟಿ ಮತ್ತು ಬೌದ್ಧಿಕತೆ ಇವುಗಳ ಕೊರತೆಯಿರುತ್ತದೋ ಅವನು ನ್ಯಾಯಾಲಯಗಳಲ್ಲಿ ಉದ್ಭವಿಸುವ ಸವಾಲನ್ನು ಎದುರಿಸಲು ಅಸಮರ್ಥನಾಗುತ್ತಾನೆ.[29] ನ್ಯಾಯಾಪೇಕ್ಷಿತ ದಕ್ಷ ಹಾಗೂ ತ್ವರಿತಗತಿಯಲ್ಲಿ ಸಾಗಬೇಕಾದರೆ ಕೇವಲ ಕಾನೂನು ಕಾಯಿದೆಗಳನ್ನು ತಿದ್ದುಪಡಿ ಮಾಡಿದರೆ ಸಾಲದು. ನ್ಯಾಯಾಧೀಶರ ಸೇವಾ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕೆಂದು ಕಾನೂನು ಆಯೋಗ ತನ್ನ ೧೪ನೆಯ ವರದಿಯಲ್ಲಿ ತಿಳಿಸಿದೆ.[30] ಈಗ ಕೇವಲ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಯಿಸಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ನ್ಯಾಯಾಧೀಶರ ಹುದ್ದೆಗೆ ನೇಮಕ ಮಾಡುವರು. ಅವರಿಗೆ ಯಾವ ರೀತಿಯ ಪ್ರಾಯೋಗಿಕ ತರಬೇತಿಯನ್ನೂ ಕೊಡುತ್ತಿಲ್ಲ. ಕಾನೂನು ಆಯೋಗ ತನ್ನ ೫೪ನೆಯ ವರದಿಯಲ್ಲಿ ಸಲಹೆ ಮಾಡಿದಂತೆ ರಾಷ್ಟ್ರಮಟ್ಟದಲ್ಲಿ ತರಬೇತು ಕೇಂದ್ರಗಳನ್ನು ಸ್ಥಾಪಿಸಿ ಔದ್ಯೋಗಿಕ ನೈಪುಣ್ಯವನ್ನು ದೊರಕಿಸುವುದರ ಜೊತೆಗೆ. ಅಭ್ಯರ್ಥಿಗಳಲ್ಲಿ ಸೇವಾಮನೋಭಾವ. ನ್ಯಾಯನಿಷ್ಠುರತೆ. ಕಾರ್ಯತತ್ಪರತೆ ಮುಂತಾದ ವಿಶೇಷ ಗುಣಗಳನ್ನು ಬೆಳೆಸುವಂತೆ ಮಾಡಬೇಕು. ಹಾಗೆ ಮಾಡಿದರೇನೆ ನ್ಯಾಯಾಧೀಶರ ಮನೋಕ್ಷಿತಿಜ ವಿಶಾಲವಾಗಿ ಕರ್ತವ್ಯಗಳನ್ನು ದಕ್ಷರೀತಿಯಲ್ಲಿ ನಿರ್ವಹಿಸಲು ನೆರವಾಗುವುದು.[31]

ನ್ಯಾಯಾಲಯಗಳಲ್ಲಿಯ ನೌಕರವರ್ಗದವರ ಸಮಸ್ಯೆಗಳು: ಕಾನೂನು ಆಯೋಗದವರು ಹೇಳಿರುವಂತೆ. ಮೊಕದ್ದಮೆಗಳು ಪ್ರಾರಂಭವಾಗುವುದಕ್ಕಿಂತ ಮುನ್ನ ನೌಕರವರ್ಗದವರೆ ಸಾಕಷ್ಟು ಪೂರ್ವಭಾವಿ ಕೆಲಸಗಳನ್ನು ಮಾಡಿ ನ್ಯಾಯಾಲಯಗಳಲ್ಲಿ ಮೊಕದ್ದಮೆ ಬೇಗ ಪ್ರಾರಂಭವಾಗುವುದಕ್ಕೆ ನೆರವಾಗುವರು. ಇಂಥ ಕೆಲಸಗಳನ್ನು ನಿರ್ವಹಿಸಲು ಸಾಕಷ್ಟು ಸಂಖ್ಯೆಯ ನೌಕರರು ಬೇಕಾಗುತ್ತಾರೆ ಮತ್ತು ಅವರ ಸಂಬಳ ತುಂಬ ಕಡಿಮೆ ಮಟ್ಟ ಅಂದರೆ ಉಪವಾಸ ಮಟ್ಟದಲ್ಲಿ (Starvation level) ಇರುವುದರಿಂದ ಅವರು ಲಂಚ ರುಷುವತ್ತುಗಳ ಆಕರ್ಷಣೆಗೆ ಒಳಪಟ್ಟು ತಮ್ಮ ಜವಾಬ್ದಾರಿ

---

[28] Law commission of India, 54th *Report*, Government of India press, Delhi, 1973, Chapter 33, p. 237

[29] Justice Cordozo, *The Nature of the Judicial Process*, 1921, p. 112–113

[30] Law Commission of India, *14th Report*, Government of India Press, Delhi 1958, Vol I, p. 82

[31] Law Commission of India, *54th Report*, Government of India Press, Delhi, 1973, Chapter 53, pp. 327–338

ಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದಿಲ್ಲ.[32] ಇಂಥ ಸ್ಫೋಟಕ ಪರಿಸ್ಥಿತಿ ನ್ಯಾಯಾಡಳಿತದ ಮೇಲೆ ಉಗ್ರವಾದ ಪರಿಣಾಮವನ್ನು ಬೀರಿ ನ್ಯಾಯಾಡಳಿತ ಪದ್ಧತಿ ಲೋಪದೋಷಗಳಿಂದ ಕೂಡಿ ಹಲವಾರು ಸಮಸ್ಯೆಗಳಿಗೆ ಎಡೆಕೊಡುತ್ತದೆ. ಅದ್ದರಿಂದ ಹೆಚ್ಚಿನ ಸಂಬಳ ಮತ್ತು ಇತರ ಸೌಲಭ್ಯ ಗಳನ್ನು ಒದಗಿಸಿಕೊಡುವುದು ಒಳ್ಳೆಯದು.

ವಕೀಲರು ಮತ್ತು ಅವರ ಸಮಸ್ಯೆಗಳು: ನ್ಯಾಯಾಡಳಿತ ಸುವ್ಯವಸ್ಥಿತ ರೀತಿಯಲ್ಲಿ ನಡೆದು ಪ್ರಜೆಗಳಿಗೆ ನಿಜವಾದ ನ್ಯಾಯ ದೊರಕಬೇಕಾದರೆ ನ್ಯಾಯಾಧೀಶರುಗಳಷ್ಟೇ ವಕೀಲರೂ ಕಾರಣ ಕರ್ತರಾಗಿದ್ದಾರೆ. ನ್ಯಾಯ ದೊರಕಿಸಿಕೊಡುವಲ್ಲಿ ವಕೀಲರ ಜವಾಬ್ದಾರಿ ಗುರುತರವಾದುದು. ವಕೀಲರ ದಕ್ಷತೆಯಿಂದ ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಂಡು ವೃತ್ತಿ ಘನತೆಯನ್ನು ಉಳಿಸಿಕೊಂಡು ಹೋಗುವ ಸಾಂಕೇತ ನಿಯಮಗಳನ್ನು ಪಾಲಿಸಬೇಕು. ಮುಖ್ಯ ನ್ಯಾಯಾಧೀಶ ವಾಂಡರ್‌ಬಿಲ್ ಹೇಳಿರುವಂತೆ. ವಕೀಲರಿಗೆ ಐದು ಪ್ರಮುಖ ಕರ್ತವ್ಯಗಳಿವೆ : ಕಕ್ಷಿಗಾರರೊಡನೆ ಬಿಚ್ಚು ಮನಸ್ಸಿನಿಂದ ಚರ್ಚಿಸುವುದು. ಕಕ್ಷಿಗಾರರ ಪರವಾಗಿ ಆತ್ಮಸಾಕ್ಷಿಯಾಗಿ ವಾದ ಮಾಡುವುದು, ಅವರ ವೃತ್ತಿಯನ್ನು ಮತ್ತು ನ್ಯಾಯಾಡಳಿತ ಪದ್ಧತಿಯನ್ನು ಉತ್ತಮಗೊಳಿಸುವುದು; ನಿಸ್ವಾರ್ಥ ದೃಷ್ಟಿಯಿಂದ ಸಮಾಜ ಸೇವೆ ಮಾಡುವುದು[33].

ಒಬ್ಬ ವಕೀಲ ವೃತ್ತಿಯಲ್ಲಿ ಜಯಗಳಿಸಬೇಕಾದರೆ, ಅವನ ದಕ್ಷತೆ ಮತ್ತು ಸಾಮರ್ಥ್ಯ ಗಳಲ್ಲದೆ ಪ್ರಾದೇಶಿಕತೆ. ಜಾತಿ. ನ್ಯಾಯಾಧೀಶರುಗಳ ಒಲವು, ಕಕ್ಷಿಗಾರರನ್ನು ಆಕರ್ಷಿಸುವ ಪ್ರದರ್ಶನ ಪ್ರವೃತ್ತಿ ಇತ್ಯಾದಿ ಅನಪೇಕ್ಷಣೀಯ ಅಂಶಗಳು ಗುರುತರವಾದ ಪ್ರಭಾವ ಬೀರುತ್ತವೆ. ಈ ಕಾರಣ ಗಳಿಗಾಗಿ ಅನುಚಿತ ಸ್ಪರ್ಧೆ ನಡೆದು ಕೆಲವು ವಕೀಲರು ಕಕ್ಷಿಗಾರರ ಮೇಲೆ ಸ್ವಾಮ್ಯ ಸಾಧಿಸಿ ಇನ್ನುಳಿದ ವಕೀಲರಿಗೆ ಕೆಲಸ ಸಿಗದಂತೆ ಮಾಡುವರು. ಹೊಸದಾಗಿ ವೃತ್ತಿ ಪ್ರಾರಂಭಿಸಿದ ಕಿರಿಯ ವಕೀಲರ ಪರಿಸ್ಥಿತಿಯಂತೂ ತೀರ ಚಿಂತಾಜನಕ. ಈ ಸಮಸ್ಯೆಗಳಲ್ಲದೆ, ವಕೀಲರ ಮತ್ತು ಕಕ್ಷಿಗಾರರ ನಡುವಿನ ಮಧ್ಯವರ್ತಿ ದಳ್ಳಾಳಿಗಳು ವಕೀಲರ ವೃತ್ತಿಯ ಮೇಲೆ ತುಂಬ ಪ್ರಭಾವ ಬೀರುವರು. ಕೆಲವು ವಕೀಲರ ಭವಿಷ್ಯ ಇಂಥ ದಳ್ಳಾಳಿಗಳ ಪ್ರೋತ್ಸಾಹದ ಮೇಲೆ ನಿಂತು, ಅವರು ಸ್ವಾತಂತ್ರ್ಯ ಕಳೆದುಕೊಂಡು ವೃತ್ತಿ ಘನತೆ ಗೌರವಗಳಿಗೆ ತಿಲಾಂಜಲಿ ಕೊಡುವರು.

ನ್ಯಾಯಾಲಯದ ಭಾಷೆ: ನ್ಯಾಯಾಲಯಗಳಲ್ಲಿ ಇನ್ನೂ ಆಂಗ್ಲ ಭಾಷೆಯನ್ನು ಬಳಸುತ್ತಿರು ವುದರಿಂದ ನ್ಯಾಯಾಲಯದ ಕಾರ್ಯ ಕಲಾಪಗಳು ಕಕ್ಷಿಗಾರರಿಗೆ ಅರ್ಥವಾಗದೆ ಶೋಷಣೆಗಳಿಗೆ ಅವರು ಒಳಪಡುವರು[34]. ಇದನ್ನು ತಪ್ಪಿಸಲು ಪ್ರಾದೇಶಿಕ ಭಾಷೆಯನ್ನು ವ್ಯಾಪಕವಾಗಿ ಎಲ್ಲಾ ಮಟ್ಟದಲ್ಲೂ ಬಳಸುವುದು ಸಮಂಜಸವೆಂದು ತೋರುವುದು.[35] ಪಾರಿಭಾಷಿಕ ಶಬ್ದಗಳನ್ನು ಭಾಷಾಂತರ ಮಾಡಿ ಅರ್ಥ ವಿವರಣೆಯನ್ನು ಕನ್ನಡದಲ್ಲಿ ಕೊಡುವ ನಿಘಂಟುಗಳನ್ನು ತಂದರೆ ಇಂಗ್ಲಿಷ್ ಭಾಷೆ ಬಾರದ ಹಳ್ಳಿಯ ರೈತನಿಗೂ ನ್ಯಾಯಾಡಳಿತ ನಡೆಯುವ ಕ್ರಮ ಗೊತ್ತಾಗಿ ನ್ಯಾಯಾಲಯಗಳಲ್ಲಿ

---

[32] The Committee for Investigation of causes of corruption in subordinate courts in Uttar Pradesh, *Its Report*, Luknow, 1963, p. 37

[33] Arthur Vanderbilt, *The Challenge of Law Reforms*, New York, Washington square, 1959

[34] Govinda Menon, p. *The poinere* (weekly), December 12, 1967

[35] Law Commission of India, *14th Report*, Government of India Press, Delhi, 1958, Vol I, p. 651

ವಿಶ್ವಾಸ ಮೂಡುವುದು[36]. ನ್ಯಾಯಾಲಯದ ತೀರ್ಪುಗಳ ವರದಿಯನ್ನು ಪುಸ್ತಕರೂಪದಲ್ಲಿ ತಂದು ಕಕ್ಷಿಗಾರರು ಓದುವಂತೆ ಕಡಿಮೆ ದರದಲ್ಲಿ ಒದಗಿಸಿದರೆ. ಶಬ್ದಗಳು ಕ್ರಮೇಣ ಪ್ರಚಲಿತವಾಗಿ. ಅವುಗಳನ್ನು ಬಳಸುವಲ್ಲಿ ನಿಖರತೆ ಹಾಗೂ ನಿರ್ದಿಷ್ಟತೆಯನ್ನು ಸಾಧಿಸಬಹುದು. ಸೋವಿಯತ್ ಸಂವಿಧಾನದ ೧೧೦ನೆಯ ವಿಧಿಯ ಪ್ರಕಾರ. ರುಮೇನಿಯದ ಸಂವಿಧಾನದ ೯೦ನೆಯ ವಿಧಿಯ ಪ್ರಕಾರ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿಯ ನ್ಯಾಯಾಲಯಗಳು ಪ್ರಾದೇಶಿಕ ಭಾಷೆಯನ್ನು ತಮ್ಮ ಕಾರ್ಯಕಲಾಪಗಳಲ್ಲಿ ಬಳಸುವುವು. ದಕ್ಷಿಣ ಆಫ್ರಿಕ. ಮಂಗೋಲಿಯ ಮತ್ತು ಚೀನ ದೇಶಗಳಲ್ಲೂ ನ್ಯಾಯಾಲಯಗಳಲ್ಲಿ ಪ್ರಾದೇಶಿಕ ಭಾಷೆಗಳನ್ನು ಬಳಸುವರು. ಕರ್ನಾಟಕ ರಾಜ್ಯ ಸರಕಾರದ ಆದೇಶದ ಪ್ರಕಾರ ಈಗ ರಾಜ್ಯದ ಎಲ್ಲ ಮುನ್ಸೀಫ್ ದಂಡಾಧಿಕಾರಿಗಳ ನ್ಯಾಯಾಲಯಗಳಲ್ಲಿ ಕನ್ನಡವನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ[37]. ಈ ದಿಸೆಯಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ನಡೆದರೆ ಮೇಲ್ಪಟ್ಟ ನ್ಯಾಯಾಲಯಗಳಲ್ಲೂ ಕನ್ನಡವನ್ನು ಬಳಸಲು ಸಾಧ್ಯವಾಗಬಹುದು.

ಕ್ಷೀಣವಾಗುತ್ತಿರುವ ನೈತಿಕ ಮೌಲ್ಯಗಳು: ಇತ್ತೀಚೆಗಂತೂ ನ್ಯಾಯಾಲಯಗಳಲ್ಲಿ ನಡೆಯುವ ಕ್ಷುಲ್ಲಕ ಹಾಗೂ ಅನೈತಿಕ ಪ್ರಕರಣಗಳನ್ನು ನೋಡಿದ ನಾಗರಿಕರು ನ್ಯಾಯಾಲಯಗಳ ಮೇಲಿದ್ದ ಪವಿತ್ರ ಮನೋಭಾವವನ್ನು ಕಳೆದುಕೊಳ್ಳುತ್ತಿದ್ದಾರೆ. ಕಾರಣ. ಒಬ್ಬ ಸುಪ್ರೀಮ್ ಕೋರ್ಟ್ ನ್ಯಾಯಾಧೀಶರು ಹೇಳಿದಂತೆ ಸುಳ್ಳು ಸಾಕ್ಷ್ಯ. ಸುಳ್ಳು ಪ್ರಮಾಣ ಸರ್ವೇ ಸಾಮಾನ್ಯವಾಗಿದೆ[38]. ನ್ಯಾಯಾಲಯದಲ್ಲಿ ಮಾಡುವ ಪ್ರಮಾಣಕ್ಕೆ ಪಾವಿತ್ರ್ಯವೇ ಇಲ್ಲದಂತಾಗಿದೆ. ಹಿಂದೆ ಹಲವಾರು ವ್ಯವಹಾರಗಳು ಬಾಯಿಮಾತಿನಲ್ಲೇ ನಡೆಯುತ್ತಿದ್ದುವು. ಆನಂತರ ಪ್ರಮಾಣಪತ್ರವಿಲ್ಲದೆ ಸಾಲ ಕೊಡುತ್ತಿರಲಿಲ್ಲ. ಈಗಂತೂ ಆಸ್ತಿಗಳನ್ನು ಒತ್ತೆಗಿಟ್ಟುಕೊಳ್ಳದೆಯೇ ಸಾಲಕೊಡುವುದಿಲ್ಲ. ಇದೊಂದು ನಿದರ್ಶನ ನಮ್ಮ ನೈತಿಕ ಮೌಲ್ಯಗಳು ಕ್ಷೀಣವಾಗುತ್ತಿರುವುದಕ್ಕೆ ಸ್ಪಷ್ಟ ವಿವರಣೆ ಕೊಡುತ್ತದೆ.

ಹೀಗೆ ನ್ಯಾಯಾಡಳಿತದಲ್ಲಿ ಹಲವಾರು ಸಮಸ್ಯೆಗಳಿವೆ. ಸಮಸ್ಯೆಗಳನ್ನು ಚರ್ಚಿಸುವಾಗ ಅಲ್ಲಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿರುತ್ತೇನೆ. ಅದರ ಸಂಶೋಧನಾನುಭವದ ಆಧಾರದ ಮೇಲೆ ಈ ಲೇಖಕ ಕೊಡುವ ಕೆಲವು ಸಲಹೆಗಳು ನ್ಯಾಯಾಡಳಿತ ವ್ಯವಸ್ಥೆಯನ್ನು ಸುಧಾರಿಸಲು ನೆರವಾಗಬಹುದು.

ಸುಧಾರಣೆ ಮಾಡಲು ಹೊರಟಾಗ ಕೆಲವು ಸಮಸ್ಯೆಗಳಿಗೆ ಕಾನೂನು ಚೌಕಟ್ಟಿನಲ್ಲಿ ಪರಿಹಾರಗಳನ್ನು ಕಂಡುಕೊಳ್ಳಬಹುದು. ಉಳಿದವುಗಳಿಗೆ ಪ್ರಕ್ರಿಯಾ ಸಂಹಿತೆಗಳನ್ನು ಇತರ ಅಧಿನಿಯಮ ಮತ್ತು ನಿಯಮಾವಳಿಗಳನ್ನು ತಿದ್ದುಪಡಿ ಮಾಡಿ ಪದ್ಧತಿಯನ್ನು ಉತ್ತಮಗೊಳಿಸಬಹುದು.

ಕಾನೂನು ಚೌಕಟ್ಟಿನಲ್ಲೇ ತರಬೇಕಾದಂಥ ಸುಧಾರಣೆ

ನ್ಯಾಯಾಧೀಶರು ಯಾವುದೇ ಕ್ಷುಲ್ಲಕ ಕಾರಣಗಳಿಗಾಗಿ ಮೊಕದ್ದಮೆಯನ್ನು ಮುಂದೂಡುವ ಪ್ರವೃತ್ತಿಯನ್ನು ನಿಲ್ಲಿಸಬೇಕು. ಕೋರ್ಟ್ ತಿಳಿವಳಿಕೆಯನ್ನು ಕಳುಹಿಸುವ ಅಮೀನರುಗಳನ್ನು. ನಕಲು ಮಾಡುವ ನೌಕರರನ್ನು ಒಳಗೊಂಡ ನಾಜರ್ ವಿಭಾಗದಲ್ಲಿ ಲಂಚರುಷವತ್ತುಗಳಿಗೆ ತುಂಬ ಅವಕಾಶಗಳಿವೆ. ಆದ್ದರಿಂದ ನ್ಯಾಯಾಧೀಶರು ಈ ವಿಭಾಗದ ನೌಕರರ ಮೇಲೆ ತಕ್ಕ ಹತೋಟಿ ಇಟ್ಟುಕೊಂಡು. ಆಗಾಗ್ಗೆ ಮೇಲ್ವಿಚಾರಣೆ. ಉಸ್ತುವಾರಿ ನಡೆಸಿ ಅವರು ಕರ್ತವ್ಯಚ್ಯುತರಾಗದಂತೆ ಸದಾ ಜಾಗರೂಕರಾಗಿದ್ದರೆ

---

[36] Krishna Iyer. V. R., *Law and the people*, people's Publishing House, New Delhi, 1972, p. 52

[37] *Deccan Herald* Dated April, 29, 'Kannada as Court language', statement given by D. K. Naickar, Minister for Law and Municipal Administration, Government of Karnataka

[38] Khosla G. D., *Our Judicial system*. University Book Agency, Allahabad, 1949 p. 26

ಕೋರ್ಟಿನ ತಿಳಿವಳಿಕೆ ಕೊಡುವಲ್ಲಿ. ನಕಲು ಪ್ರತಿಗಳನ್ನು ಕೊಡುವ ವಿಭಾಗದಲ್ಲಿ ಆಗುತ್ತಿರುವ ಅಸಾಧಾರಣ ಕಾಲವಿಳಂಬವನ್ನು ಕಡಿಮೆಮಾಡಬಹುದು. ನಕಲುಗಳನ್ನು ಬರೆಯುವವರು ಮತ್ತು ಅಧಿಕಾರಿಗಳು ತಾವು ನಿರ್ವಹಿಸಿದ ಕಾರ್ಯಗಳ ವಿವರವನ್ನು ದಾಖಲೆ ಪತ್ರಗಳಲ್ಲಿ ತಿಳಿಸಬೇಕು. ಅಂತಹ ದಾಖಲೆ ಪತ್ರಗಳನ್ನು ಪರಿಶೀಲಿಸಿ ತಕ್ಕ ಸಲಹೆಗಳನ್ನು ನ್ಯಾಯಾಧೀಶರು ಕೊಡಬೇಕು[39].

ಕೋರ್ಟಿಗೆ ಸಂದ ಹಣವನ್ನು ವಾಪಸು ಪಡೆಯಲು ಲಂಚ ಕೊಡುವುದು ವಾಡಿಕೆಯಾಗಿ ಬಿಟ್ಟಿದೆ. ಇದನ್ನು ತಪ್ಪಿಸಲು ಹಣವನ್ನು ವಾಪಸು ಪಡೆಯಲು ಹಾಕಿಕೊಂಡ ಅರ್ಜಿಯ ದಿನದಿಂದ ನಿಗದಿಪಡಿಸಿದ ದಿನಗಳೊಳಗೆ ಹಣವನ್ನು ಕೊಡಬೇಕು. ಪ್ರತ್ಯೇಕವಾದ ದಾಖಲೆಗಳನ್ನು ಮಾಡಿ ದಾಖಲೆಪತ್ರಗಳನ್ನು ಆಯಾ ಕೋರ್ಟಿನ ನ್ಯಾಯಾಧೀಶರುಗಳು ಆಗಾಗ್ಗೆ ಪರಿಶೀಲನೆಮಾಡುವ ಪದ್ಧತಿಯನ್ನು ಅನುಸರಿಸುವುದು ಸೂಕ್ತ.

ಈಗ ನಡೆಯುತ್ತಿರುವಂತೆ. ನ್ಯಾಯಾಧೀಶರು ನ್ಯಾಯಾಲಯದ ಗುಮಾಸ್ತರುಗಳನ್ನು ಕೇಳಿ ಮೊಕದ್ದಮೆ ವಿಚಾರಣೆ ನಡೆಯುವ ದಿನಾಂಕವನ್ನು ಸೂಚಿಸುವುದಕ್ಕಿಂತ. ತಾವೇ ವಿವಿಧ ಉದ್ದೇಶಕ್ಕಾಗಿರುವ ಮೊಕದ್ದಮೆಗಳನ್ನು (ಉದಾ: ಪ್ರತಿವಾದಿ ಹೇಳಿಕೆಗಾಗಿರುವ ಮೊಕದ್ದಮೆಗಳು, ವಾದಕ್ಕಾಗಿರುವ ಮೊಕದ್ದಮೆಗಳು. ವಿಚಾರಣೆಗಾಗಿರುವ ಮೊಕದ್ದಮೆಗಳು) ವರ್ಗೀಕರಿಸಿ. ಅಂಥ ಮೊಕದ್ದಮೆಗಳಿಗೆ ತಗಲುವ ಸಮಯವನ್ನು ಗ್ರಹಿಸಿ ಸೂಕ್ತವಾದ ದಿನಾಂಕವನ್ನು ಸೂಚಿಸುವುದು ಒಳ್ಳೆಯದು. ಕೆಲವು ನ್ಯಾಯಾಲಯಗಳಲ್ಲಿ ಸ್ವೇಚ್ಛೆಯಾಗಿ ಮೊಕದ್ದಮೆಗಳನ್ನು ಹಾಕಿಕೊಂಡು ಒಂದು ಮೊಕದ್ದಮೆಯೂ ನಡೆಯದೇ ಬರೇ ಕೂಗಿಸುವುದರಲ್ಲಿ ಮೂರು ನಾಲ್ಕು ಗಂಟೆಗಳಾಗುತ್ತವೆ. ಕಕ್ಷಿಗಾರರು. ಸಾಕ್ಷಿಗಳು, ಪದೇಪದೇ ಬಂದು ಮೊಕದ್ದಮೆ ನಡೆಯದೆ ವಾಪಸು ಹೋಗಬೇಕಾಗುತ್ತದೆ. ಇದನ್ನು ತಪ್ಪಿಸಲು ನ್ಯಾಯಾಧೀಶರೇ ಮೊಕದ್ದಮೆ ನಡೆಯುವ ದಿನಾಂಕವನ್ನು ಸೂಚಿಸಬೇಕು.

ಅಮೆರಿಕದಲ್ಲಿರುವಂತೆ ವಾದಿ ಮತ್ತು ಪ್ರತಿವಾದಿಗಳ ಅಹವಾಲುಗಳನ್ನು ಪರಿಶೀಲಿಸಿ ಸಾಕ್ಷಿ ವಿಚಾರಣೆ ನಡೆಸುವ ಮುನ್ನ ವಾದಿ. ಪ್ರತಿವಾದಿ. ಅವರ ವಕೀಲರುಗಳನ್ನು ಕರೆಸಿ ಬಿಗುಮಾನ ಮತ್ತು ಔಪಚಾರಿಕತೆ ಇಲ್ಲದೆ ಅವರೊಡನೆ ಸರಳ ರೀತಿಯಲ್ಲಿ ಚರ್ಚಿಸಿ ಮೊಕದ್ದಮೆಯಲ್ಲಿ ನಿರ್ಧರಿಸಬೇಕಾದ ಅಂಶಗಳನ್ನು ವಿವೇಚನಾಯುತವಾಗಿ ಖಚಿತಮಾಡಿಕೊಂಡು ಮೊಕದ್ದಮೆಯ ವಿದ್ಯಮಾನವನ್ನು ಮೊದಲೇ ತಿಳಿದುಕೊಳ್ಳುವ ಪದ್ಧತಿಯನ್ನು ನಮ್ಮ ದೇಶದಲ್ಲೂ ಅನುಸರಿಸಿದರೆ ವಿಚಾರಣಾ ಕಾಲದಲ್ಲಿ ಕಾಲವಿಳಂಬವನ್ನು ತಡೆಗಟ್ಟಬಹುದು[40].

ವಾದಿ ಮತ್ತು ಪ್ರತಿವಾದಿ ತಮ್ಮ ನಿಲುವುಗಳನ್ನು ಸರಿಯಾಗಿ ಕಾನೂನು ರೀತ್ಯ ಸ್ಪಷ್ಟ ಹಾಗೂ ನಿಖರವಾಗಿ. ಸಮಯೋಜಿತವಾಗಿ. ಲಿಖಿತಮೂಲಕ ತಿಳಿಸಿದ್ದರೆ ಸಾಕ್ಷಿ ವಿಚಾರಣೆ ಕಾಲದಲ್ಲಿ ಕಾಲ ವ್ಯಯವಾಗಿ. ಕೆಲವು ಸಂದರ್ಭಗಳಲ್ಲಿ ಆಗಾಗ್ಗೆ ತಿದ್ದುಪಡಿಗಳನ್ನು ಮಾಡಬೇಕಾಗಿ ಬರುವುದರಿಂದ ವಿಳಂಬವಾಗುವುದು. ಇದನ್ನು ತಪ್ಪಿಸಲು ಕಕ್ಷಿಗಾರರು ತಮ್ಮ ನಿಲುವನ್ನು ಲಿಖಿತ ಮೂಲಕ ಬರೆಸುವಾಗ ನಿರ್ದಿಷ್ಟ ಪದ್ಧತಿಯನ್ನು ಅನುಸರಿಸಿ, ಸಮಾನತೆಯನ್ನು ಸಾಧಿಸುವುದು ಒಳ್ಳೆಯದು.

ಸಮಯಕ್ಕೆ ಸರಿಯಾಗಿ ದಾಖಲೆ ಪತ್ರಗಳನ್ನು ಹಾಜರ್ಪಡಿಸದೆ ಇರುವುದರಿಂದ ಮೊಕದ್ದಮೆ ಮುಂದುವರಿಯದೆ ಸ್ಥಗಿತಗೊಳ್ಳುವುದನ್ನು ನಿಲ್ಲಿಸಲು ವಾದಿ ಮತ್ತು ಪ್ರತಿವಾದಿಗಳು ಲಿಖಿತ ಮೂಲಕ ಅಹವಾಲುಗಳನ್ನು ಕೊಡುವಾಗಲೇ ಪತ್ರಗಳನ್ನು ಹಾಜರ್ಪಡಿಸುವಂತೆ ನಿರ್ದೇಶನ ನೀಡುವುದು ಸೂಕ್ತ.

ಸಾಕ್ಷಿ ವಿಚಾರಣೆಯು ಮೊಕದ್ದಮೆಯ ಪ್ರಕ್ರಿಯೆಯಲ್ಲಿ ಬಹು ಪ್ರಮುಖವಾದ ಹಂತ. ಮೊಕದ್ದಮೆಗೆ ಸಂಬಂಧಿಸಿದ ಕೆಲವು ಅನಾವಶ್ಯಕ ಅಂಶಗಳ ಮೇಲೆ ಉದ್ದನೆಯ ಸವಾಲು ಮತ್ತು

[39] Law Commission of India, *14th Report*, Government of India Press, Delhi, Vol I, 230–251

[40] Krishr a Iyer, V. R., *Law and the people*, people's Publishing House, New Delhi, 1972, p. 129

ಪಾಟಿಸವಾಲು ಮಾಡುವರು. ಕೆಲವು ರಾಷ್ಟ್ರಗಳಲ್ಲಿರುವಂತೆ ನ್ಯಾಯಾಧೀಶರು ವಿವೇಚನಾಯುತವಾಗಿ ಪಕ್ಷಪ್ರತಿಪಕ್ಷಗಳ ಸಾಕ್ಷಿಗಳನ್ನು ತಾವೇ ವಿಚಾರಣೆ ಮಾಡಿ ಸಾಕ್ಷಿಗಳನ್ನು ಕೇವಲ ಕೆಲವು ಪ್ರಮುಖ ಅಂಶಗಳ ಮೇಲೆ ಪ್ರಶ್ನೆ ಕೇಳುವ ಅವಕಾಶವನ್ನು ವಕೀಲರಿಗೆ ಕೊಡಬೇಕು. ಹಾಗೆ ಮಾಡಿದ್ದಲ್ಲಿ ಒಂದೊಂದು ಸಾಕ್ಷಿಯನ್ನೂ ಐದು ಆರು ಗಂಟೆಗಳ ವರೆಗೆ ವಿಚಾರಣೆ ಮಾಡಿ ಕಾಲ ವ್ಯಯಮಾಡುವುದನ್ನು ತಪ್ಪಿಸ ಬಹುದು.

ಕೆಲವು ವಕೀಲರು ಕಕ್ಷಿಗಾರರನ್ನು ಮೆಚ್ಚಿಸಲೋಸುಗವೋ ಸರಿಯಾಗಿ ತಯಾರಾಗದೆ ಮೊಕದ್ದಮೆಯ ಮೇಲೆ ಹತೋಟಿ ಇಲ್ಲದೆಯೋ ಒಂದು ಅಥವಾ ಎರಡು ದಿವಸಗಳ ವರೆಗೂ ವಾದಗಳನ್ನು ಮಾಡುವುದುಂಟು. ಈ ಪ್ರವೃತ್ತಿ ಹೋಗಬೇಕು. ಸಾಕ್ಷಿ ಹೇಳಿಕೆ ಮುಗಿದ ಕೂಡಲೆ ವಾದ ಮಾಡಲು ಸಿದ್ಧರಾಗಿ ಸಂಕ್ಷಿಪ್ತವಾಗಿ ಸಮಂಜಸವಾದ ಅಂಶಗಳನ್ನು ಒತ್ತಿ ಹೇಳಿ ವಾದ ಮಾಡಿದರೆ ನಿಯಮಿತ ವೇಳೆಯಲ್ಲಿ ತೀರ್ಪು ಕೊಡಬಹುದು.

ತೀರ್ಪು: ನ್ಯಾಯಾಧೀಶರು ವಾದಿ ಮತ್ತು ಪ್ರತಿವಾದಿಗಳ ನಿಲುವುಗಳನ್ನು ಪರಿಶೀಲಿಸಿ, ಅವರವರ ನಿಲುವನ್ನು ಸಮರ್ಥಿಸಲೋಸುಗ ನಡೆಸಿದ ಸಾಕ್ಷಿ ವಿಚಾರಣೆಗಳ ಯುಕ್ತಾಯುಕ್ತತೆ, ಉಚಿತ. ಅನುಚಿತಗಳ ಮೌಲ್ಯಗಳನ್ನು ಸಮದರ್ಶಿತ್ವದಿಂದ ತೂಗಿ ನಿರ್ದಿಷ್ಟವಾದ ನಿರ್ಧಾರಕ್ಕೆ ಬರಲು ಕಾರಣಗಳೇನೆಂಬುದನ್ನು ಸಂಕ್ಷಿಪ್ತವಾಗಿ. ನಿಖರವಾಗಿ. ಸರಳವಾಗಿ ತಮ್ಮ ತೀರ್ಪುಗಳಲ್ಲಿ ತಿಳಿಸಬೇಕು. ಆದರೆ ಈಗಿನ ಕೆಲವು ತೀರ್ಪುಗಳು ಹಾಗಿರುವುದಿಲ್ಲ. ಅಸಮಂಜಸ ಅಂಶಗಳನ್ನೆಲ್ಲ ಚರ್ಚಿಸಿ. ಒಂದಕ್ಕೊಂದು ಹೊಂದಾಣಿಕೆಯಿಲ್ಲದ ಕಾರಣಗಳನ್ನು ಕೊಟ್ಟು. ವಿಷಯಕ್ಕಿಂತ ಭಾಷೆಗೆ ಆದ್ಯತೆ ಕೊಟ್ಟು ಉದ್ದನೆಯ ತೀರ್ಪುಗಳನ್ನು ಕೊಡುತ್ತಾರೆ. ಇದನ್ನು ತಡೆಗಟ್ಟಲು ನ್ಯಾಯಾಧೀಶರುಗಳಿಗೆ ಆಗಾಗ್ಗೆ ತರಬೇತುಗಳನ್ನು ಕೊಡುವುದು, ಸಾಮಾನ್ಯ ಸಮಸ್ಯೆಗಳನ್ನು ಚರ್ಚಿಸಲು ಆಗಾಗ್ಗೆ ಸಮ್ಮೇಳನಗಳನ್ನು ಏರ್ಪಡಿಸುವುದು ಸೂಕ್ತ[41].

ಕಕ್ಷಿಗಾರರು ಮೊಕದ್ದಮೆ ದಾಖಲಿಸಿ ತೀರ್ಪು ಹೊರಬೀಳುವ ವರೆಗೂ ಹಲವಾರು ಅಂಶ ಗಳ ಮೇಲೆ ಆಗಾಗ್ಗೆ ಅರ್ಜಿಗಳನ್ನು ಹಾಕುತ್ತಾರೆ. ಉದಾಹರಣೆ: ಮೊಕದ್ದಮೆ ನಡೆಯುವ ಅವಧಿಯಲ್ಲಿ ಮೊಕದ್ದಮೆಗೆ ಸಂಬಂಧಪಟ್ಟವರು ಯಾರಾದರೂ ಮರಣ ಹೊಂದಿದರೆ ಅವರ ವಾರಸುದಾರರನ್ನು ದಾವಾಕ್ಕೆ ಸೇರಿಸುವಾಗ ಹಾಕುವ ಅರ್ಜಿ. ವಾದಗ್ರಸ್ತವಾದ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಕೊಯ್ಲು ಮಾಡಿ ಅದನ್ನು ಮಾರಿ ಬಂದ ಹಣವನ್ನು ಕೋರ್ಟಿಗೆ ಠೇವಣಿ ಮಾಡುವ ಸಂದರ್ಭದಲ್ಲಿ ಹಾಕುವ ಅರ್ಜಿ. ನ್ಯಾಯಾಧೀಶರು ಸ್ಥಳ ಪರಿಶೀಲನೆ ಮಾಡಬೇಕೆಂದೆನಿಸುವಾಗ ಅದಕ್ಕಾಗಿ ಹಾಕುವ ಅರ್ಜಿ, ಇವುಗಳ ಮೇಲೆ ನ್ಯಾಯಾಧೀಶರುಗಳು ಸೂಕ್ತ ತೀರ್ಪು ಕೊಡುವರು. ತೀರ್ಪು ಸರಿಹೋಗದಿದ್ದಾಗ ನೊಂದ ಕಕ್ಷಿಗಾರರು ಆ ತೀರ್ಪಿನ ಮೇಲೆ ಪುನರ್‌ಪರಿಶೀಲನೆಗಾಗಿ ಮೇಲಿನ ಕೋರ್ಟಿಗೆ ಅರ್ಜಿ ಹಾಕುವರು. ಆಗ ತಡೆಯಾಜ್ಞೆ ನೀಡಿದರೆ ಕೆಳಗಿನ ಕೋರ್ಟಿನವರು ಮೊಕದ್ದಮೆಯನ್ನು ಮುಂದು ವರಿಸುವಂತಿಲ್ಲ. ಹೀಗೆ ಮೊಕದ್ದಮೆಗಳು ಸ್ಥಗಿತಗೊಳ್ಳುವುವು. ಇಂಥ ಪ್ರವೃತ್ತಿಯನ್ನು ನಿಲ್ಲಿಸಲು ಸಿವಿಲ್ ವ್ಯಾಜ್ಯ ಪ್ರಕ್ರಿಯಾ ಸಂಹಿತೆಯ ೧೧೫ನೆಯ ಪ್ರಕರಣವನ್ನು ತೆಗೆದುಹಾಕಿ ಪುನರ್‌ಪರಿಶೀಲನೆಗಾಗಿ ಹಾಕುವ ಅರ್ಜಿಗಳನ್ನು ಅಂಗೀಕಾರ ಮಾಡದಂತೆ ಕಾನೂನು ಆಯೋಗದವರು ೫೪ನೆಯ ವರದಿಯಲ್ಲಿ ಸಲಹೆಮಾಡಿದ್ದಾರೆ.

ಕೆಳಗಿನ ನ್ಯಾಯಾಲಯಗಳ ಮೇಲಿನ ಹಲವಾರು ನ್ಯೂನತೆಗಳನ್ನು ಮೇಲಿನ ಕೋರ್ಟಿನ ನ್ಯಾಯಾಧೀಶರು ಆಗಾಗ್ಗೆ ಪರಿಶೀಲಿಸಿ ಸೂಕ್ತ ಸಲಹೆಗಳನ್ನು ಕೊಟ್ಟರೆ. ಈಗ ಇರುವ ಲಿಖಿತ ಮೂಲಕ ದಾಖಲೆ ಪತ್ರಗಳನ್ನು ತರಿಸಿ ಪರಿಶೀಲಿಸುವ ಪದ್ಧತಿಯನ್ನು ಔಪಚಾರಿಕತೆಗಾಗಿ ಅನುಸರಿಸದೆ. ಜವಾಬ್ದಾರಿ

[41] Law Commission of India, *54th Report*, Government of India Press, Delhi, 1973, pp. 327–338

ಹಾಗೂ ವಿವೇಚನಾಯುತವಾಗಿ ಕಾರ್ಯನಿರ್ವಹಿಸಿದರೆ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಬಹುದು[42].

ಹಲವಾರು ಕಾನೂನು ಕಾಯಿದೆಗಳು ಕೂಲಂಕಷವಾದ ಪರಿಶೀಲನೆಗೆ ಒಳಪಡದೆ ಅವಸರದಲ್ಲಿ ರಚಿತಗೊಂಡು ಅನುಮಾನಕ್ಕೆ ಆಸ್ಪದ ಕೊಟ್ಟು ವಿವಾದಗಳು ಉದ್ಭವವಾಗಲು ಕಾರಣವಾಗುತ್ತವೆ. ಇದನ್ನು ತಪ್ಪಿಸಲು ಆಗಾಗ್ಗೆ ಕಾನೂನು ಕಾಯಿದೆಗಳನ್ನು ಕ್ರೋಢೀಕರಿಸಿ, ಸಮಾನತೆ ಹಾಗೂ ನಿಖರತೆ ಯನ್ನು ಸಾಧಿಸಿಕೊಳ್ಳುವುದು ಒಳ್ಳೆಯದು.

ಮೊಕದ್ದಮೆಗಳ ಜಾರಿಯಲ್ಲಿ ವಿಳಂಬ

ನ್ಯಾಯಾಧೀಶರು ತೀರ್ಮಾನಗಳನ್ನು ಕೈಗೊಂಡ ಪಟ್ಟಿಯಲ್ಲಿ ಜಾರಿ ಮೊಕದ್ದಮೆಗಳ ಇತ್ಯರ್ಥ ಸೇರ ದಿರುವುದರಿಂದ ನ್ಯಾಯಾಧೀಶರು ಅದಕ್ಕೆ ಹೆಚ್ಚಿನ ಗಮನ ಕೊಡದೆ ಕೇವಲ ಗುಮಾಸ್ತರುಗಳಿಗೆ ಅಂಥ ಮೊಕದ್ದಮೆಗಳನ್ನು ವಹಿಸುವರು. ಆದ್ದರಿಂದ ಹಲವಾರು ಸಮಸ್ಯೆಗಳು ಉದ್ಭವವಾಗಿ ಜಾರಿ ವಿಳಂಬವಾಗುವುದು.

ಹೀಗೆಯೇ ಅಪರಾಧ ಪ್ರಕರಣಗಳಲ್ಲಿ ಪೋಲೀಸ್ ಅಧಿಕಾರಿಗಳು ಸಮಯೋಚಿತವಾಗಿ ಮೊದಲ ವರ್ತಮಾನ ಕೋರ್ಟಿಗೆ ಹಾಜರ್ಪಡಿಸದಿದ್ದುದರಿಂದಲೂ ಸಮಯಕ್ಕೆ ಸರಿಯಾಗಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಒದಗಿಸದಿದ್ದರಿಂದಲೂ ಶವಪರೀಕ್ಷೆಯ ವರದಿ ಬಾರದಿದ್ದುದರಿಂದಲೂ ಪ್ರಾಸಿಕ್ಯೂಷನ್ ಅಧಿಕಾರಿಗಳು ತಕ್ಕ ವಿವರಗಳನ್ನು ಕೊಡದಿದ್ದುದರಿಂದಲೂ ಸಾಕ್ಷಿಗಳು ಸೂಚಿಸಿದ ದಿನದಲ್ಲಿ ಬಾರದಿದ್ದುದರಿಂದಲೂ ಮೊಕದ್ದಮೆ ತ್ವರಿತಗತಿಯಲ್ಲಿ ಮುಂದುವರಿಯದೆ ತುಂಬ ಕಾಲ ವ್ಯಯವಾಗುವುದು. ಇದನ್ನು ತಪ್ಪಿಸಲು ಸುಶಿಕ್ಷಿತ ಅಧಿಕಾರಿಗಳನ್ನು ನೇಮಿಸಿ ಅಪರಾಧ ಪ್ರಕರಣ ಗಳಲ್ಲಿ ಸಮಯೋಚಿತವಾಗಿ ಕ್ರಮ ಜರುಗಿಸುವಂತೆ ಮಾಡಬೇಕು.

ಕಾನೂನುಗಳಿಗೆ ತಿದ್ದುಪಡಿ ಮಾಡಿ ತರಬಹುದಾದ ಸುಧಾರಣೆಗಳು

ನಿಯಮಿತ ಕಾಲಗಳಲ್ಲಿ ವಿವಾದಗಳನ್ನು ಇತ್ಯರ್ಥ ಮಾಡಲು ಉದ್ದನೆಯ ಸವಾಲು ಮತ್ತು ಪಾಟಿ ಸವಾಲುಗಳನ್ನೆಲ್ಲ ಬರೆದುಕೊಳ್ಳುವ ಪದ್ಧತಿಯನ್ನು ಅನುಸರಿಸದೆ, ಸಣ್ಣಪುಟ್ಟ ವಿವಾದಗಳಲ್ಲಿ ಸಂಕ್ಷಿಪ್ತ ವಾಗಿ ವಿಚಾರಣೆ ನಡೆಸಿ ವಿಚಾರಣೆಯ ಪ್ರಮುಖ ಅಂಶಗಳನ್ನು ದಾಖಿಲು ಮಾಡುವ ಪದ್ಧತಿಯನ್ನು ವ್ಯಾಪಕವಾಗಿ ಅನುಸರಿಸುವಂತೆ ಪ್ರಕ್ರಿಯಾ ಸಂಹಿತೆಯ ತಿದ್ದುಪಡಿ ಮಾಡುವುದು ಸೂಕ್ತ. ಸಂಹಿತೆಯ ಕೆಲವು ಪ್ರಕರಣಗಳ ತಿದ್ದುಪಡಿ ಮಾಡಿ ಕೋರ್ಟ್ ತಿಳಿವಳಿಕೆಯನ್ನು ಕಕ್ಷಿಗಾರರ ಮತ್ತು ಸಾಕ್ಷಿಗಳಿಗೆ ಕೊಡಲು ಅಧಿಕವಾಗಿ ಅಮೀನರುಗಳ ಸೇವೆಯನ್ನು ಬಳಸುವ ಪದ್ಧತಿಯನ್ನು ಬಿಟ್ಟು ರಿಜಿಸ್ಟರ್ಡ್ ಪೋಸ್ಟ್ ಮುಖಾಂತರ ನೋಟೀಸನ್ನು ಕಳುಹಿಸುವ ಪದ್ಧತಿಯನ್ನು ವ್ಯಾಪಕವಾಗಿ ಬಳಸುವುದರಿಂದ ಅನಾವಶ್ಯಕ ಕಾಲವ್ಯಯವಾಗದೆ ಮೊಕದ್ದಮೆ ಮುಂದುವರಿಯಲು ಅನುಕೂಲವಾಗುತ್ತದೆ.

ವಿವಾದಕ್ಕೆ ಸಂಬಂಧಪಟ್ಟ ಪತ್ರಗಳನ್ನು ಅಂಗೀಕಾರ ಮಾಡುವಾಗ ಸರಳವಾದ ಪದ್ಧತಿಯನ್ನು ಅನುಸರಿಸುವಂತೆ ಸಿವಿಲ್ ವ್ಯಾಜ್ಯ ಸಂಹಿತೆಯನ್ನು ತಿದ್ದುಪಡಿ ಮಾಡುವುದು ಸೂಕ್ತ.

ಅಪ್ರಾಪ್ತವಯಸ್ಕ ಕಕ್ಷಿಗಾರರನ್ನು ಪ್ರತಿನಿಧಿಸುವ ಕಾನೂನಿಗನುಸಾರವಾಗಿ ಪೋಷಕರನ್ನು ನೇಮಿಸುವಾಗ ತುಂಬಾ ವಿಳಂಬವಾಗುವುದನ್ನು ತಪ್ಪಿಸಲು ಪೋಷಕರಾಗಬಲ್ಲವರೆಲ್ಲರಿಗೂ ತಿಳಿವಳಿಕೆ ಕೊಟ್ಟು ಕ್ರಮವಾಗಿ ಅವರುಗಳನ್ನು ನೇಮಿಸುವುದು ಒಳ್ಳೆಯದು. ಈ ಕ್ರಮವನ್ನು ಅನುಸರಿಸಲು ಕೆಲವು ಪರಿಚ್ಛೇದಗಳನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಹೀಗೆ ನೇಮಿಸಿದ ಪೋಷಕರು ಸ್ವೇಚ್ಛೆ

---

[42] Law Commission of India, *14th Report*, Government of India Press, Delhi, 1958, pp. 230–251

ಯಾಗಿ ತಮ್ಮ ಜವಾಬ್ದಾರಿಯಿಂದ ವಿಮುಕ್ತರಾಗಲು ಮಾಡುವ ಪ್ರಯತ್ನವನ್ನು ತಪ್ಪಿಸಲು, ಹಾಗೆ ತಮ್ಮ ಇಚ್ಛೆಗನುಸಾರವಾಗಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವವರಿಗೆ ದಂಡ ವಿಧಿಸಿ ಮುಂದೆ ಅವರ ಸ್ಥಾನದಲ್ಲಿ ಬೇರೆ ಪೋಷಕರನ್ನು ನೇಮಿಸಲು ಆಗುವ ಖರ್ಚನ್ನು ಕೊಡುವಂತೆ ಕಾನೂನನ್ನು ತಿದ್ದುಪಡಿ ಮಾಡುವುದು ಸೂಕ್ತ. ಹಾಗೆ ಮಾಡಿದಲ್ಲಿ ಅಪ್ರಾಪ್ತ ವಯಸ್ಕರ ಹಿತಾಸಕ್ತಿಗಳು ಕಾನೂನಿನ ದೃಷ್ಟಿಯಲ್ಲಿ ರಕ್ಷಿಸಲ್ಪಡುತ್ತವೆ.

ಬೇರೆಯವರಿಗೆ ಕಿರುಕುಳ ಕೊಡುವ ದೃಷ್ಟಿಯಿಂದ ಹಾಕುವ, ಅಸಮಂಜಸ ಹಾಗೂ ಅನುಚಿತ ವಿವಾದಗಳನ್ನು ತಡೆಗಟ್ಟಲು ಅಂತಹ ಕಕ್ಷಿಗಾರರ ಮೇಲೆ ದಂಡದ ರೀತಿಯಲ್ಲಿ ಅಸಾಧಾರಣ ಖರ್ಚಾಗುವಂತೆ ಪ್ರಕ್ರಿಯೆಯನ್ನು ತಿದ್ದುಪಡಿ ಮಾಡಬೇಕು[43].

ಸಾಕ್ಷ್ಯದ ಅಧಿನಿಯಮ

ಮೊಕದ್ದಮೆಯ ಕೆಲವು ಪ್ರಮುಖ ಅಂಶಗಳನ್ನು ನಿರ್ಧರಿಸುವಲ್ಲಿ ನೆರವಾಗುವ ಮೂಲಪತ್ರಗಳು ದೊರೆಯದಿದ್ದಾಗ, ಅವುಗಳ ಬದಲು ಪ್ರಮಾಣಿತ ಪ್ರತಿಗಳನ್ನು (ಸರ್ಟಿಫೈಡ್ ಕಾಪಿ) ವ್ಯಾಪಕವಾಗಿ ಅಂಗೀಕರಿಸಿ ಮೊಕದ್ದಮೆ ಮುಂದುವರಿಯಲು ಅವಕಾಶವಾಗುವಂತೆ ಕೆಲವು ವಿಧಿಗಳನ್ನು ತಿದ್ದುಪಡಿ ಮಾಡುವುದು ಸೂಕ್ತ. ಪಕ್ಷ ಮತ್ತು ಪ್ರತಿಪಕ್ಷದವರು ಒಪ್ಪಿಕೊಳ್ಳುವಂಥ ಸಾಮಾನ್ಯ ಅಂಶಗಳಿಗೆ ಸಾಕ್ಷಿ ಹೇಳಿಕೆಗಳನ್ನು ಪಡೆದುಕೊಳ್ಳುವುದರಿಂದ ತುಂಬಾ ಕಾಲವ್ಯಯವಾಗುವುದರಿಂದ ಇದನ್ನು ತಪ್ಪಿಸಲು ಪ್ರಮಾಣಿತ ಪ್ರತಿಗಳನ್ನು ಬಳಸಿಕೊಳ್ಳಬಹುದು.

ಜಾರಿಯಲ್ಲಿ ಆಗುವ ವಿಳಂಬವನ್ನು ತಪ್ಪಿಸುವ ರೀತಿ

ಜಾರಿಯಲ್ಲಿ ಪ್ರತಿವಾದಿ ಡಿಕ್ರಿ ಹಣವನ್ನು ಕೊಡುವಾಗ ಮುಂದೆ ಕಾಣಿಸಿರುವ ಮೂರು ವಿಧಾನಗಳನ್ನು ಮಾತ್ರ ಅನುಸರಿಸುವಂತೆ ಮಾಡುವುದರಿಂದ, ಪ್ರತಿವಾದಿಯು ಬಾಯಿಮಾತಿಗೆ ಬೆಲೆಕೊಟ್ಟು ಜಾರಿ ನಿಲ್ಲಿಸಿ ಪುನಃ ಪ್ರಾರಂಭಿಸಬೇಕಾಗುವುದರಿಂದ ಆಗುವ ಅನಾವಶ್ಯಕ ಕಾಲವ್ಯಯವನ್ನು ತಪ್ಪಿಸಿದಂತಾಗುತ್ತದೆ: ೧ ಬ್ಯಾಂಕಿನ ಮೂಲಕ. ೨ ಅಂಚೆಯ ಮುಖಾಂತರ. ೩ ವಾದಿಗೆ ಹಣ ಕೊಟ್ಟು ರಶೀತಿ ಪಡೆದು ಅದನ್ನು ಹಾಜರ್ಪಡಿಸುವ ಮುಖಾಂತರ.

ಕ್ಷುಲ್ಲಕ ಕಾರಣಗಳಿಗಾಗಿ ಜಾರಿ ಮೊಕದ್ದಮೆಗೆ ತಡೆಯಾಜ್ಞೆ ತರುವ ಪ್ರವೃತ್ತಿಯನ್ನು ನಿರ್ದಾಕ್ಷಿಣ್ಯವಾಗಿ ನಿಲ್ಲಿಸಲು ತಡೆಯಾಜ್ಞೆ ತರುವ ವ್ಯಕ್ತಿ ಡಿಕ್ರಿ ಹಣದ ಅರ್ಧಭಾಗವನ್ನು ಠೇವಣಿ ಇಟ್ಟ ಅನಂತರವೇ ಅಂಥ ತಡೆಯಾಜ್ಞೆಯನ್ನು ನೀಡುವುದು ಸಮಂಜಸವಾಗಿ ಕಾಣುವುದರಿಂದ ಇದಕ್ಕನುಗುಣವಾಗಿ ಸಂಹಿತೆಯನ್ನು ತಿದ್ದುಪಡಿ ಮಾಡಬೇಕು.

ಇತರ ಸುಧಾರಣೆಗಳು

ಈಗ ಇರುವ ಗ್ರಾಮ ಪಂಚಾಯಿತಿಗಳಿಗೆ ಕೆಲವು ಸಣ್ಣಪುಟ್ಟ ಸಿವಿಲ್ ಹಾಗೂ ಅಪರಾಧ ಪ್ರಕರಣಗಳ ವಿವಾದವನ್ನು ತೀರ್ಮಾನಿಸುವ ಅಧಿಕಾರವನ್ನು ಕೊಟ್ಟರೆ ಹಾಲಿ ವಿಧಿಬದ್ಧವಾದ ಸಿವಿಲ್ ಮತ್ತು ದಂಡ ನ್ಯಾಯಾಲಯಗಳಿಗಿರುವ ಕೆಲಸದ ಒತ್ತಡ ಕಡಿಮೆಯಾಗಿ, ಗುರುತರವಾದ ಮೊಕದ್ದಮೆಗಳನ್ನು ಬೇಗ ತೀರ್ಮಾನಿಸಲು ಸಮಯಾವಕಾಶ ದೊರೆಯುವುದು.

ಇತ್ತೀಚೆಗೆ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಉದ್ಭವಿಸುತ್ತಿರುವ ವಿಶೇಷ ತರಹ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿ, ಆಯಾ

---

[43] Law Commission of India, *54th Report*. Government of India Press, Delhi, 1973, pp. 208–209

ವಿಷಯಗಳ ಮೇಲೆ ಕಾರ್ಯ ನೈಪುಣ್ಯ ಮತ್ತು ಅನುಭವವಿರುವವರನ್ನು ನ್ಯಾಯಾಧೀಶರನ್ನಾಗಿ ನೇಮಿಸುವುದು ಸಮಂಜಸ[44].

ಇವೆಲ್ಲಕ್ಕಿಂತ ಮಿಗಿಲಾಗಿ, ವಿವಾದಗಳು ಉದ್ಭವಿಸಲು ಇರಬಹುದಾದ ಕಾರಣಗಳನ್ನು ತಿಳಿದುಕೊಂಡು ಪರಿಹಾರ ಕಂಡುಕೊಳ್ಳಲು ಸಾಮಾಜಿಕ ಹಾಗೂ ಮನಶ್ಶಾಸ್ತ್ರೀಯ ಅಧ್ಯಯನಗಳನ್ನು ನಡೆಸುವುದು ಉತ್ತಮ. ಸಮಾಜದಲ್ಲಿರುವ ತೀವ್ರತರವಾದ ಅಸಮಾನತೆಗಳೇ ವಿವಾದಗಳಾಗಲು, ಅಪರಾಧ ವೆಸಗಲು ಬಹುಪಾಲು ಕಾರಣವಾಗಿವೆ. ಆದ್ದರಿಂದ ಸರ್ಕಾರ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ದೊರಕಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಪ್ರಾಯಶಃ ಎಷ್ಟೋ ವಿವಾದಗಳು ಉದ್ಭವಿಸುವುದೇ ಇಲ್ಲವೆಂದು ಹೇಳಬಹುದು.

"ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಎಲ್ಲರಿಗೂ ಸಮಾನವಾಗಿ ಕಾನೂನಿನ ರಕ್ಷಣೆ ದೊರೆಯುತ್ತದೆ." ಎಂದು ನಾವು ನಮ್ಮ ಸಂವಿಧಾನದಲ್ಲಿ ಘೋಷಿಸಿದ್ದೇವೆ. ಇದು ಅಕ್ಷರಶಃ ನಿಜವಾಗಬೇಕಾದರೆ ಬಡ ಕಕ್ಷಿಗಾರರಿಗೆ ಧನಸಹಾಯ ಮತ್ತು ಉಚಿತವಾಗಿ ಕಾನೂನಿನ ಸಲಹೆಗಳು ದೊರೆಯುವ ಅವಕಾಶವನ್ನು ಶೀಘ್ರವಾಗಿ ಕಲ್ಪಿಸಿಕೊಡಬೇಕು.

ವಕೀಲರು, ನ್ಯಾಯಾಧೀಶರು, ನೌಕರ ವರ್ಗದವರು ಮತ್ತು ಕಕ್ಷಿಗಾರರನ್ನು ಸಂಘಟಿಸಿ ಸಮ್ಮೇಳನ ಹಾಗೂ ವಿಚಾರಗೋಷ್ಠಿಗಳನ್ನು ಏರ್ಪಡಿಸಿ ನ್ಯಾಯಾಡಳಿತದಲ್ಲಿಯ ಸಮಸ್ಯೆಗಳನ್ನು ಅರಿತು ಪರಸ್ಪರ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಲು ಸಾಮೂಹಿಕ ಹಾಗೂ ಪ್ರಾಮಾಣಿಕ ಪ್ರಯತ್ನ ಮಾಡಿದ ಹೊರತು ಸಮಸ್ಯೆಗಳಿಗೆ ಸಮಗ್ರ ಪರಿಹಾರ ದೊರಕಲಾರದು. ಈ ದಿಸೆಯಲ್ಲಿ ಇದುವರೆವಿಗೂ ಪ್ರಾಮಾಣಿಕ ಪ್ರಯತ್ನ ನಡೆಯದಿರುವುದು ವಿಷಾದಕರ.

---

[44] Krishna Iyer V. R., *Law and the people*, People's Publishing House, Delhi, 1972, pp. 130–310; Law Commission of India, 14th *Report*, Government of India Press, Delhi, 1958, Volume II, pp. 874–925; Yudhisthira, "Law Delays", "Law and Commonwealth Law Conference *Occasional papers*, (Ed) L. M. Singhvi, National Press, New Delhi, 1973, p. 168, Law Commission of India, *47th Report*, Government of India Press, Delhi, 1968

ಮೂರು ಸಾವಿರ ವರ್ಷಗಳಿಗೂ ದೀರ್ಘವಾದ ಇತಿಹಾಸ ಪಡೆದಿರುವ ಗ್ರೀಸ್ ದೇಶ ಪಾಶ್ಚಾತ್ಯ ಸಂಸ್ಕೃತಿಯ ತೊಟ್ಟಿಲು ಎಂದು ಪರಿಗಣಿತವಾಗಿದೆ. ಒಂದು ದೇಶದ ಸಂಸ್ಕೃತಿಯ ಪ್ರಮುಖ ಲಕ್ಷಣಗಳಲ್ಲಿ ಅದರ ನ್ಯಾಯಸೂತ್ರಗಳೂ ಸೇರಿರುತ್ತವೆ. ಪ್ರಪಂಚದ ಚರಿತ್ರೆಯಲ್ಲಿ ವಿಶಿಷ್ಟವಾದಂಥ ಗುರು ಶಿಷ್ಯ ಪರಂಪರೆಯ ಸಾಕ್ರಟೀಸ್, ಪ್ಲೇಟೋ, ಅರಿಸ್ಟಾಟಲ್, ಅಲೆಗ್ಸಾಂಡರ್ ಇವರ ವೈಚಾರಿಕ ಕೊಡುಗೆಗಳಲ್ಲಿ ಗ್ರೀಸ್ ದೇಶದಲ್ಲಿದ್ದ ನ್ಯಾಯದ ರೂಪರೇಷೆಗಳನ್ನು ಕಾಣಬಹುದು. ಅವರಿಗೂ ಹಿಂದಿನ ಕಾಲದ ಗ್ರೀಕ್ ನ್ಯಾಯದ ಸ್ವರೂಪವನ್ನು ಹೋಮರನ ಇಲಿಯಡ್ ಮತ್ತು ಆಡಿಸಿ (Odyssey) ಮಹಾಕಾವ್ಯಗಳಿಂದ ತಿಳಿಯಬಹುದು. ವಿಶ್ವದ ಪ್ರಮುಖ ನ್ಯಾಯ ವ್ಯವಸ್ಥೆಗಳಲ್ಲಿ ಗ್ರೀಕ್ ನ್ಯಾಯವೂ ಒಂದು. ಇದು ಒಂದು ಪ್ರಾಚೀನ ಕುರುಹು ಆಗಿರದೆ ಜೀವಂತ ಸಂಪ್ರದಾಯವಾಗಿದೆ.

ಕನ್ನಡ ವಿಶ್ವಕೋಶ, ಸಂ. ೬, ಪು. ೮೪೪

ಬಿ. ನಾಗಪ್ಪ

ಗ್ರಂಥಪಾಲನೆಯ ಅಂತರರಾಷ್ಟ್ರೀಯ ಚಟುವಟಿಕೆಗಳು

'ಆಧುನಿಕ'ವೆಂದು ಕರೆಯಲ್ಪಡುವ ಪ್ಟಲೇಮಿನ ಮತ್ತು ಇತರ ಗ್ರಂಥಾಲಯ ಚಟುವಟಿಕೆಗಳಲ್ಲಿ ಹೊಸದೇನೂ ಇಲ್ಲವೆಂಬ ಹಾಗೂ ಅವು ಎರಡು ಸಾವಿರ ವರ್ಷಗಳಿಗಿಂತ ಹಳೆಯ ವಿಷಯಗಳೆಂಬ ಒಂದು ಅಭಿಪ್ರಾಯವಿದೆ. ಕ್ರಿ.ಪೂ. ೩ನೆಯ ಶತಮಾನದಷ್ಟು ಹಿಂದೆಯೇ ಅಲೆಕ್ಸಾಂಡ್ರಿಯದಲ್ಲಿದ್ದ ಜಗದ್ವಿಖ್ಯಾತ ವಸ್ತುಸಂಗ್ರಹಾಲಯದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಹಸ್ತಪ್ರತಿ ಗ್ರಂಥಾಲಯವೊಂದಿತ್ತೆಂದೂ ಅಲ್ಲಿ ಅಂತಹ ವಿಷಯಗಳು ದಿನನಿತ್ಯದ ಕಾರ್ಯಕ್ರಮಗಳಾಗಿದ್ದುವೆಂದೂ ಈ ಅಭಿಪ್ರಾಯದ ಸಾರಾಂಶ. ಆ ಗ್ರಂಥಾಲಯದಲ್ಲಿ ಸಂಶೋಧನೆಗೆ ಅಗತ್ಯವಾದ ಗ್ರೀಕ್ ಭಾಷೆಯ ಹಸ್ತಪ್ರತಿ ಸಂಗ್ರಹವೇ ಅಲ್ಲದೆ ಅನೇಕ ಪೌರಸ್ತ್ಯ ಭಾಷಾ ಗ್ರಂಥಗಳ ಗ್ರೀಕ್ ಅನುವಾದಗಳೂ ಸುವ್ಯವಸ್ಥಿತಗೊಂಡಿದ್ದುವೆಂದು ರೇಮಾಂಡ್ ಇರ್ವಿನ್ ಹೇಳಿದ್ದಾರೆ[1]. ದೇಶ ವಿದೇಶಗಳಿಂದ ಗ್ರಂಥಗಳನ್ನು ಸಂಗ್ರಹಿಸುವುದು, ಗ್ರೀಕ್ ಭಾಷೆಗೆ ಅವುಗಳನ್ನು ಅನುವಾದಿಸುವುದು, ವಿದ್ವಾಂಸರ ವ್ಯಾಸಂಗ ಮತ್ತು ಸಂಶೋಧನೆಗೆ ನೆರವಾಗುವಂತೆ ವ್ಯವಸ್ಥೆಗೊಳಿಸುವುದು–ಇವುಗಳ ಜೊತೆಗೆ ಭಾವೀ ಪೀಳಿಗೆಯ ಸಲುವಾಗಿ ಅವನ್ನು ಸಂರಕ್ಷಿಸುವ ಕಾರ್ಯಕ್ರಮಗಳೂ ಅಲ್ಲಿ ನಡೆಯುತ್ತಿದ್ದುವು. 'ಅಂತರರಾಷ್ಟ್ರೀಯ' ಎಂದು ನಾವು ಹೆಸರಿಸುವ ಹಲವಾರು ಗ್ರಂಥಾಲಯ ಚಟುವಟಿಕೆಗಳು ಅಲ್ಲಿ ದಿನನಿತ್ಯ ಕಾರ್ಯಕ್ರಮಗಳಾಗಿದ್ದುವು ಎಂಬುದು ಕರ್ಟ್ ವೋರ್ಮನ್ ಅವರ ಅಭಿಪ್ರಾಯವಾಗಿದೆ[2].

ಪ್ರಾಚೀನ ಭಾರತದಲ್ಲೂ ತಕ್ಷಶಿಲ, ನಳಂದ ಮೊದಲಾದ ಸ್ಥಳಗಳಲ್ಲಿದ್ದ ಗ್ರಂಥಾಲಯಗಳು ಅಲೆಕ್ಸಾಂಡ್ರಿಯ ಗ್ರಂಥಾಲಯದಂತೆ ಅಭಿವೃದ್ಧಿಗೊಂಡು ಸೇವೆ ಸಲ್ಲಿಸಿದ್ದಿರಬಹುದು. ಸರಿಯಾದ ದಾಖಲೆಗಳ ಅಭಾವದಿಂದ ಆ ಬಗ್ಗೆ ಖಚಿತವಾಗಿ ಏನನ್ನೂ ಹೇಳುವಂತಿಲ್ಲ. ಅಮೆರಿಕ, ಬ್ರಿಟನ್ ಮೊದಲಾದ ದೇಶಗಳಲ್ಲಿಯ ಅಂತರರಾಷ್ಟ್ರೀಯ ಅಂಶಗಳನ್ನೊಳಗೊಂಡ ಸಂಘ-ಸಂಸ್ಥೆಗಳು ಮತ್ತು ಕಾರ್ಯಕ್ರಮಗಳು ಪ್ರಾರಂಭವಾದದ್ದು ಕಳೆದ ಶತಮಾನದ ಉತ್ತರಾರ್ಧದಲ್ಲಿ ಎಂಬುದು ಮಾತ್ರ ಖಚಿತ.

ಅಂಥ ಕಾರ್ಯಕ್ರಮಗಳಲ್ಲಿ ಮೊದಲಿನದೆಂದರೆ ಲಂಡನ್ನಿನಲ್ಲಿ ೧೮೭೭ರಲ್ಲಿ ನಡೆದ ಗ್ರಂಥಪಾಲರ ಸಮ್ಮೇಳನ. 'ಅಂತರರಾಷ್ಟ್ರೀಯ ಸಮ್ಮೇಳನ'ವೆಂದು ಇದನ್ನು ಹೆಸರಿಸದಿದ್ದರೂ ಇದರಲ್ಲಿ ಭಾಗವಹಿಸಲು

---

1 Irwin (Raymond): Ancient and medieval libraries (*In* Encyclopaedia of library and information science

2 Wormann (C D): Aspects of international library co-operation. *Library Quartely*, Vol. 38, 1968 p. 161

ಬೆಲ್ಜಿಯಂ, ಡೆನ್ಮಾರ್ಕ್, ಇಟಲಿ, ಫ್ರಾನ್ಸ್ ಮತ್ತು ಅಮೆರಿಕ ದೇಶಗಳ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು.

ಆಟ್ಲೆಟ್ ಮತ್ತು ಲಾ ಫೋಂಟೇನ್

ಪ್ರಲೇಖನ ಹಾಗೂ ಗ್ರಂಥಸೂಚಿ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಮಟ್ಟದ ಪ್ರಯತ್ನಗಳನ್ನು ಮಾಡಿದವರಲ್ಲಿ ಬೆಲ್ಜಿಯಂ ದೇಶದ ಹೆನ್ರಿ ಲಾ ಫೋಂಟೇನ್ ಮತ್ತು ಪಾಲ್ ಆಟ್ಲೆಟ್ ಅವರ ಹೆಸರು ಚಿರಸ್ಮರಣೀಯ. ವೃತ್ತಿಯಲ್ಲಿ ವಕೀಲರಾಗಿದ್ದ ಅವರು ಎಲ್ಲ ಆಧುನಿಕ ಗ್ರಂಥಪಾಲರಿಗೂ ಆಶ್ಚರ್ಯ ಹುಟ್ಟಿಸುವ ರೀತಿಯ ಸೇವೆಯನ್ನು ಗ್ರಂಥಸೂಚಿ ಮತ್ತು ಪ್ರಲೇಖನ ಕ್ಷೇತ್ರಗಳಲ್ಲಿ ಮಾಡಿದ್ದಾರೆ. ೧೮೯೫ರಲ್ಲಿ ಬ್ರುಸೆಲ್ಸ್‌ನಲ್ಲಿ ಗ್ರಂಥಸೂಚಿಯ ಬಗ್ಗೆ ನಡೆದ ಅಂತರರಾಷ್ಟ್ರೀಯ ಸಮ್ಮೇಳನವನ್ನು ಏರ್ಪಡಿಸಲು ಈ ಮಹನೀಯರು ಶ್ರಮಿಸಿದರು. ಅಂತರರಾಷ್ಟ್ರೀಯ ಗ್ರಂಥಸೂಚಿ ಕಚೇರಿಯನ್ನು ಬ್ರುಸೆಲ್ಸ್‌ನಲ್ಲಿ ಸ್ಥಾಪಿಸುವ ತೀರ್ಮಾನವನ್ನು ಕೈಗೊಂಡದ್ದು ಈ ಸಮ್ಮೇಳನದಲ್ಲೇ. ಆಟ್ಲೆಟ್ ಮತ್ತು ಲಾ ಫೋಂಟೇನ್ ಅವರು ಕಾರ್ಯ ಚತುರರೂ ಮಾನವ ಜನಾಂಗದ ಸಮಗ್ರ ಅಭ್ಯುದಯದಲ್ಲಿ ಅಗಾಧ ಶ್ರದ್ಧೆಯುಳ್ಳವರೂ ಆಗಿದ್ದರು. ವಿಶ್ವಶಾಂತಿ ಮತ್ತು ಅಂತರರಾಷ್ಟ್ರೀಯ ಸಹಕಾರದಲ್ಲಿ ಜನಾಂಗಗಳ ಹಾಗೂ ದೇಶಗಳ ಪರಸ್ಪರ ಅರಿವು ಅತಿ ಮುಖ್ಯವೆಂದೂ ಆ ಅರಿವಿಗೆ ಅಡೆತಡೆಯಿಲ್ಲದ ಜ್ಞಾನಪ್ರವಾಹ ಆವಶ್ಯಕವೆಂದೂ ಅವರು ಅರಿತಿದ್ದರು. ಇಂತಹ ಮಹತ್ತರ ಕಾರ್ಯಗಳಲ್ಲಿ ಗ್ರಂಥಾಲಯ, ಪ್ರಲೇಖನ ಮತ್ತು ಮಾಹಿತಿ ಕೇಂದ್ರಗಳ ಪಾತ್ರ ವಿಶಿಷ್ಟವಾದದ್ದೆಂದು ಅವರು ಮನಗಂಡಿದ್ದರು. ಮಾಹಿತಿಯ ಸಂಪರ್ಕ ಸಾಧನಗಳಲ್ಲಿ ಮತ್ತು ಸೂಚೀಕರಣ ಕ್ರಮಗಳಲ್ಲಿ ನವೀನ ವಿಧಾನಗಳನ್ನು ರೂಪಿಸುವ ತಮ್ಮ ಮಹತ್ಕಾರ್ಯಗಳಲ್ಲಿ ಅವರಿಗೆ ದೇಶ-ವಿದೇಶಗಳ ಸಂಘ-ಸಂಸ್ಥೆಗಳಿಂದ ಸಹಕಾರ ದೊರೆಯಿತು. ವಿಶ್ವವ್ಯಾಪಕವಾದ ಗ್ರಂಥಸೂಚಿ ರಚನೆ ಆಟ್ಲೆಟ್ ಮತ್ತು ಲಾ ಫೋಂಟೇನ್ ಅವರ ಮುಖ್ಯ ಉದ್ದೇಶಗಳಲ್ಲೊಂದು. ೧೨೦ ಲಕ್ಷ ಕಾರ್ಡುಗಳಲ್ಲಿ ದಾಖಲಾದ ಈ ಬೃಹತ್ ಸೂಚಿ ಕೆಲಸ ಮೊದಲನೆಯ ಮಹಾಯುದ್ಧದ ದೆಸೆಯಿಂದ ನಿಂತು ಹೋಯಿತು. ಆದರೂ ಅವರು ನಿರಾಶರಾಗದೆ ಅನಂತರ ತಮ್ಮ ಕೆಲಸವನ್ನು ಮುಂದುವರಿಸಿದರು. ಅವರು ಸ್ಥಾಪಿಸಿದ ಅಂತರರಾಷ್ಟ್ರೀಯ ಗ್ರಂಥಸೂಚಿ ಸಂಸ್ಥೆಯು 'ಅಂತರ ರಾಷ್ಟ್ರೀಯ ಪ್ರಲೇಖನ ಸಂಸ್ಥೆಯೆಂದು (FID) ಪುನರ್‌ನಾಮಕರಣಗೊಂಡು ಕೆಲಸವನ್ನು ಮುಂದುವರಿಸಿತು. ಗ್ರಂಥಸೂಚಿ ರಚನೆಯ ಕಾರ್ಯದಲ್ಲಿ ಗ್ರಂಥಗಳ ವರ್ಗೀಕರಣಕ್ಕೆ ವ್ಯಾಪಕವಾದ ಪದ್ಧತಿಯ ಆವಶ್ಯಕತೆಯನ್ನು ಈ ಸಂಸ್ಥೆಯಲ್ಲಿ ಮನಗಾಣಲಾಯಿತು. ಅದಕ್ಕಾಗಿಯೇ ಡ್ಯೂಯಿಯವರ ದಶಾಂಶ ವರ್ಗೀಕರಣ ಪದ್ಧತಿಯನ್ನು ಆಧಾರವಾಗಿಟ್ಟುಕೊಂಡು ಅಂತರರಾಷ್ಟ್ರೀಯ ದಶಾಂಶ ವರ್ಗೀಕರಣ ಪದ್ಧತಿ (UDC) ಎಂಬುದನ್ನು ರೂಪಿಸಲಾಯಿತು. ಅನಂತರದ ವರ್ಷಗಳಲ್ಲಿ ಇದು ಅನೇಕ ದೇಶಗಳಲ್ಲಿ ಜನಪ್ರಿಯವಾಯಿತು. ಆಟ್ಲೆಟ್ ಮತ್ತು ಲಾ ಫೋಂಟೇನ್ ಅವರ ಚಟುವಟಿಕೆಗಳು ಹಾಗೂ ಧ್ಯೇಯಧೋರಣೆಗಳು ಲೀಗ್ ಆಫ್ ನೇಷನ್ಸ್‌ನ ಗ್ರಂಥಾಲಯ ಚಟುವಟಿಕೆಗಳಲ್ಲಿ ಸಾಕಷ್ಟು ಪ್ರಭಾವವನ್ನು ಬೀರಿದುವು.

ಲೀಗ್ ಆಫ್ ನೇಷನ್ಸ್

ಗ್ರಂಥಾಲಯ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸಿ ಪೋಷಿಸುವುದರಲ್ಲಿ ಇದರ ಪಾತ್ರ ಉಲ್ಲೇಖನಾರ್ಹ. ಇದು ೧೯೨೨ರಲ್ಲಿ International Committee for Intellectual Co-operation ಎಂಬುದನ್ನು ಜಿನೀವಾದಲ್ಲಿ ಸ್ಥಾಪಿಸಿತು. ಮೇಡಂ ಕ್ಯೂರಿ, ಹೆನ್ರಿ ಬೆರ್ಗ್‌ಸನ್, ಅಲ್ಬರ್ಟ್ ಐನ್‌ಸ್ಟೈನ್ ಮೊದಲಾದ ಜಗದ್ವಿಖ್ಯಾತವಿಜ್ಞಾನಿಗಳು ಮತ್ತು ಪ್ರಾಜ್ಞರು ಈ ಮಂಡಳಿಯ ಸದಸ್ಯರಾಗಿದ್ದರು. ವಿಜ್ಞಾನ, ಸಂಸ್ಕೃತಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಲೋಕಹಿತವನ್ನೇ ಪ್ರಧಾನ ಅಂಶವಾಗಿಟ್ಟುಕೊಂಡ ಅಂತರರಾಷ್ಟ್ರೀಯ ವಿದ್ವತ್ ಸಂಘವಾಗಿ ಇದನ್ನು ಮಾರ್ಪಡಿಸುವುದು ಇದರ ಗುರಿಯಾಗಿತ್ತು. ಇಂತಹ ಗುರಿಸಾಧನೆಯಲ್ಲಿ ಗ್ರಂಥಾಲಯ, ಪ್ರಲೇಖನ ಹಾಗೂ ಮಾಹಿತಿ ಕೇಂದ್ರಗಳ ಪಾತ್ರ ವಿಶಿಷ್ಟವಾದದ್ದೆಂಬುದು ಈ ಮಂಡಳಿಗೆ ಮನದಟ್ಟಾಗಿತ್ತು. ಲೀಗ್ ಆಫ್ ನೇಷನ್ಸ್ ಮತ್ತು ಅಂತರರಾಷ್ಟ್ರೀಯ ವಿದ್ವತ್ ಸಂಘದ ಕಾರ್ಯಚಟುವಟಿಕೆಗಳ ಪ್ರಭಾವದಿಂದ ಪ್ರೇರಿತವಾದ ಫ್ರೆಂಚ್ ಸರ್ಕಾರ ಪ್ಯಾರಿಸ್‌ನಲ್ಲಿ ತನ್ನ ರಾಷ್ಟ್ರೀಯ ವಿದ್ವತ್ ಸಂಸ್ಥೆಯೊಂದನ್ನು ೧೯೨೪ರಲ್ಲಿ ಸ್ಥಾಪಿಸಿತು.

ಈ ಮೂರು ಸಂಘ ಸಂಸ್ಥೆಗಳು ೧೯೨೭ರಿಂದ ಹಲವಾರು ವರ್ಷಗಳ ವರೆಗೆ ಗ್ರಂಥಪಾಲರ ಅಂತರರಾಷ್ಟ್ರೀಯ ವಾರ್ಷಿಕ ಸಮ್ಮೇಳನಗಳನ್ನು ಏರ್ಪಡಿಸುತ್ತ ಬಂದುವು. ಇವುಗಳ ಮಹತ್ತರ ಕೊಡುಗೆಯೆಂದರೆ: ೧ ಗ್ರಂಥಸೂಚಿಗಳ ಸೂಚಿ (Index Bibliographicus, ೧೯೩೧) ಮತ್ತು ೨ ಭಾಷಾಂತರಗಳ ಸೂಚಿ (Index Translationum, ೧೯೩೨). ಮೊದಲನೆಯದು ಲೇಖನಗಳ ಸಾರಾಂಶಗಳನ್ನು ಸೂಚಿಸುವ ನಿಯತಕಾಲಿಕಗಳ ಹಾಗೂ ಗ್ರಂಥಸೂಚಿಗಳ ಅಂತರರಾಷ್ಟ್ರೀಯ ನಿರ್ದೇಶಿಯಾದರೆ, ಎರಡನೆಯದು ಪ್ರಪಂಚದ ಪ್ರಮುಖ ಭಾಷಾಂತರಗಳೆಲ್ಲವುಗಳ ಸಮಗ್ರ ವಾರ್ಷಿಕ ಸೂಚಿಯಾಗಿ ಇನ್ನೂ ಮುಂದುವರಿಯುತ್ತಿದೆ. ಈ ಎರಡು ಅಮೂಲ್ಯ ಪ್ರಕಟಣೆಗಳ ಕಾರ್ಯದಲ್ಲಿ ಅಂತರರಾಷ್ಟ್ರೀಯ ಗ್ರಂಥಾಲಯಗಳ ಫೆಡರೇಷನ್ (Ifla) ಕೂಡ ಸಕ್ರಿಯವಾಗಿ ಭಾಗವಹಿಸಿತ್ತು.

ಅಂತರರಾಷ್ಟ್ರೀಯ ಗ್ರಂಥಾಲಯಗಳ ಫೆಡರೇಷನ್ (Ifla)

ಅಮೆರಿಕ ಮತ್ತು ಐರೋಪ್ಯ ದೇಶಗಳ ಹಲವಾರು ಗ್ರಂಥಾಲಯ ಸಂಘಗಳ ಒಡಂಬಡಿಕೆಯಿಂದ ೧೯೨೭ರಲ್ಲಿ ಪ್ರಾರಂಭವಾದ ಈ ಮಹಾಸಂಘ ಅನೇಕ ಉಪಯುಕ್ತ ಕಾರ್ಯಗಳನ್ನು ಈ ವರೆಗೆ ಮಾಡುತ್ತ ಬಂದಿದೆ. ಐದು ವರ್ಷಗಳಿಗೊಮ್ಮೆ ಕಾರ್ಯನಿರತ ಗ್ರಂಥಪಾಲರ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ವ್ಯವಸ್ಥೆಗೊಳಿಸುವುದರ ಮೂಲಕ ಗ್ರಂಥಪಾಲನೆಯ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಹಾಯ ಮಾಡಿದೆ. ಈ ಸಮ್ಮೇಳನಗಳಲ್ಲಿ ಭಾಗವಹಿಸುವ ಗ್ರಂಥಪಾಲರು, ಲೇಖಕರು ಮತ್ತು ಸೂಚಿಕಾರರು ಪರಸ್ಪರರ ಅಭಿಪ್ರಾಯ ವಿನಿಮಯಕ್ಕೆ ಇಫ್ಲಾವನ್ನು ಒಂದು ಸಾಮಾನ್ಯ ವೇದಿಕೆಯನ್ನಾಗಿ ಮಾಡಿಕೊಂಡಿದ್ದಾರೆ. ಗ್ರಂಥಪಾಲನೆಯ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಅರಿವಿನ ಕೇಂದ್ರವೆನಿಸಿದ ಈ ಮಹಾಸಂಘ ಸಹಕಾರ ಮತ್ತು ಸಂಘಟನೆಯ ಪ್ರತಿರೂಪವೆನಿಸಿದೆ.

ದ್ವಿತೀಯ ಮಹಾಯುದ್ಧ ಇಫ್ಲಾದ ಎಲ್ಲಾ ಯೋಜನೆ ಮತ್ತು ಕಾರ್ಯಕ್ರಮಗಳಿಗೂ ಅಡ್ಡಿಯನ್ನುಂಟುಮಾಡಿತು. ಯುದ್ಧ ಕೊನೆಗೊಂಡ ತತ್‌ಕ್ಷಣವೇ ಅದು ಪುನಃ ಚೇತರಿಸಿಕೊಂಡು ಪುನಃ ಕಾರ್ಯಮಗ್ನವಾಯಿತು. ಯುನೆಸ್ಕೋ ಮತ್ತು ಎಫ್.ಐ.ಡಿ.ಗಳ ಸಹಕಾರದಿಂದ ಗ್ರಂಥಾಲಯ ಮತ್ತು ಪ್ರಲೇಖನ ಕ್ಷೇತ್ರಗಳಲ್ಲಿ ಹೊಸ ಹೊಸ ವಿಧಾನಗಳನ್ನು ರೂಪಿಸುವುದರಲ್ಲಿ ತನ್ನ ಆಸಕ್ತಿಯನ್ನು ತೋರಿಸಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಅಂತರಗ್ರಂಥಾಲಯ ಎರವಲು ಒಪ್ಪಂದ (೧೯೫೪), ಸೂಚೀಕರಣ ತತ್ವಗಳ ಅಂತರರಾಷ್ಟ್ರೀಯ ಒಪ್ಪಂದ (೧೯೬೧) ಮೊದಲಾದವು ಇಫ್ಲಾದ ಸಾಧನೆಗಳಲ್ಲಿ ಮೈಲುಗಲ್ಲುಗಳೆನಿಸಿವೆ. ಇದರ ಪ್ರಕಟಣೆಗಳ ಪೈಕಿ: ೧ ಪ್ರಧಾನ ಮಂಡಳಿಯ ನಡವಳಿಕೆಗಳು[4], ೨ ಪರಿವಹನಗಳು[5] ಮತ್ತು ೩ ವಾರ್ತೆಗಳು ಗ್ರಂಥಾಲಯಶಾಸ್ತ್ರದ ಅಭ್ಯರ್ಥಿಗಳಿಗೆ ಅಂತರರಾಷ್ಟ್ರೀಯ ಹಾಗೂ ಶಾಲಾಸಿಕ ಗ್ರಂಥಾಲಯಶಾಸ್ತ್ರದ ಅಧ್ಯಯನಕ್ಕೆ ಮೂಲ ಸಾಮಗ್ರಿಗಳಾಗಿವೆ.[5] ರಾಷ್ಟ್ರಗಳನ್ನು ಪ್ರತಿನಿಧಿಸುವ ೮೯ ಸಂಘ ಸಂಸ್ಥೆಗಳೂ ೬ ಅಂತರರಾಷ್ಟ್ರೀಯ ಸಂಸ್ಥೆಗಳೂ ಇದರ ಸದಸ್ಯತ್ವವನ್ನು ಪಡೆದಿವೆ. ೧೯೭೭ರಲ್ಲಿ ತನ್ನ ಐವತ್ತನೆಯ ಹುಟ್ಟುಹಬ್ಬವನ್ನು ಆಚರಿಸಲಿರುವ ಈ ಮಹಾಸಂಘ ಹಲವಾರು ಅಂತರರಾಷ್ಟ್ರೀಯ ಸಂಘ ಮತ್ತು ಸಮ್ಮೇಳನಗಳಿಗೆ ಆಶ್ರಯದಾತವೆನಿಸಿದೆ. ಆದ್ದರಿಂದಲೇ ಹ್ಯಾರಿಸನ್ ಅವರು ಇಫ್ಲಾವನ್ನು "ಎಲ್ಲ ಅಂತರರಾಷ್ಟ್ರೀಯ ಗ್ರಂಥಾಲಯ ಸಂಘಗಳ ಮುತ್ತಜ್ಜಿ" ಎಂದು ಕರೆದಿರುವುದು[6].

---

[4] *Proceedings of the Ifla General Council*, 22 Vols. The Hague, Mortinus Nighoff

[5] Ifla Communications (Appearing as part of *Libri*, an international journal. (Copenhagen, Munksgard)

[6] Harrison (K C) : International Relations in Librarianship, *I. L. A. Bulletin*, Vol. 10, 1974, p. 1

ಅಂತರ ರಾಷ್ಟ್ರೀಯ ಪ್ರಲೇಖನ ಸಂಸ್ಥೆ (FID)

ಇಫ್ಲಾದಂತೆ ಎಫ್.ಐ.ಡಿ. ಕೂಡ ತನ್ನದೇ ಆದ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಅರಿವು ಮತ್ತು ಸಹಕಾರಕ್ಕೆ ಶ್ರಮಿಸುತ್ತ ಬಂದಿದೆ. ಪ್ರಲೇಖಕರ ತರಬೇತಿ, ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರಲೇಖ ಕೇಂದ್ರಗಳ ಸ್ಥಾಪನೆ, ಮಾಹಿತಿಯ ಸಂಗ್ರಹಣೆ, ವಿಶ್ಲೇಷಣೆ ಮತ್ತು ಪ್ರಸಾರದಲ್ಲಿ ಯಂತ್ರಗಳ ಬಳಕೆ ಮೊದಲಾದ ಕಾರ್ಯಕ್ರಮಗಳಲ್ಲಿ ಇವರ ಪಾತ್ರ ಗಮನಾರ್ಹವಾಗಿದೆ. ಈ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಇದರ ಜೊತೆಗೆ ಸುಮಾರು ೫೦ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಇದರ ಸಂಸ್ಥಾಪಕರಾದ ಆಟ್ಲೆಟ್ ಮತ್ತು ಲಾ ಫೋಂಟೇನ್ ಅವರ ಧ್ಯೇಯಧೋರಣೆ ಗಳನ್ನು ಹಲ-ಕೆಲವು ಮಾರ್ಪಾಟುಗಳೊಂದಿಗೆ ನಡೆಸುತ್ತ ಬಂದಿವೆ. ಇಫ್ಲಾ ಮತ್ತು ಎಫ್.ಐ.ಡಿ.ಗಳು ಯುನೆಸ್ಕೋದ ತಾಂತ್ರಿಕ ಸಲಹಾ ಸಂಸ್ಥೆಗಳಾಗಿ ನಡೆದುಕೊಳ್ಳುತ್ತಿವೆ.

ವಿಶ್ವಸಂಸ್ಥೆ (UNO)

ಲೀಗ್ ಆಫ್ ನೇಷನ್ಸ್‌ನಂತೆ ಅದರ ಉತ್ತರಾಧಿಕಾರಿಯಾದ ವಿಶ್ವಸಂಸ್ಥೆಯೂ ಗ್ರಂಥಾಲಯ ಕ್ಷೇತ್ರದಲ್ಲಿ ಅನೇಕ ಉಪಯುಕ್ತ ಕೆಲಸಗಳನ್ನು ಮಾಡಿದೆ. ವಿಶ್ವಸಂಸ್ಥೆಯ ಅಂಗ-ಸಂಸ್ಥೆಗಳು—ವಿಶ್ವಕಾರ್ಮಿಕ ಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ, ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ ಮೊದಲಾದವು—ತಮ್ಮವೇ ಆದ ಗ್ರಂಥಾಲಯ ಗಳನ್ನು ಹೊಂದಿವೆ. ಈ ಗ್ರಂಥಾಲಯಗಳನ್ನು ಅವುಗಳ ಮಾತೃಸಂಸ್ಥೆಗಳ ವಿಶಿಷ್ಟ ಆವಶ್ಯಕತೆಗಳಿಗನು ಗುಣವಾಗಿ ಬೆಳಸಿಕೊಂಡು ಬರಲಾಗಿದೆ. ಅಂತೆಯೇ ಅವುಗಳ ಗ್ರಂಥಸಂಗ್ರಹಗಳು ವ್ಯಾಪ್ತಿಯಲ್ಲಿ ಅಂತರರಾಷ್ಟ್ರೀಯತ್ವವನ್ನು ಪ್ರತಿಬಿಂಬಿಸುತ್ತವೆ. ಈ ಗ್ರಂಥಾಲಯಗಳು ಪ್ರಕಟಿಸುವ ಪ್ರಚಲಿತ ಗ್ರಂಥಸೂಚಿಗಳು ಮತ್ತು ಪ್ರಲೇಖನ ಪಟ್ಟಿಗಳು ಪ್ರಪಂಚದ ಹಲವಾರು ಪ್ರಮುಖ ಗ್ರಂಥಾಲಯ ಗಳಲ್ಲಿ ಉಪಯೋಗಿಸಲ್ಪಡುತ್ತಿವೆ.

ವಿಶ್ವಸಂಸ್ಥೆಯ ಗ್ರಂಥಾಲಯ ಚಟುವಟಿಕೆಗಳು ತಮ್ಮ ಉತ್ತುಂಗ ಶಿಖರಕ್ಕೇರಿದ್ದು ಅದರ ಪ್ರಧಾನ ಗ್ರಂಥಾಲಯವನ್ನು ೧೯೬೧ರಲ್ಲಿ ನ್ಯೂ ಯಾರ್ಕ್ ನಗರದಲ್ಲಿ ಸ್ಥಾಪಿಸಿದಾಗ. ಆಗ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಡಾಗ್ ಹ್ಯಾಮರ್‌ಷಲ್ಡ್ ಅವರೇ ಈ ಗ್ರಂಥಾಲಯದ ರೂಪ ರೇಷೆಗಳನ್ನು ನಿಯೋಜಿಸಿದ್ದರು. ಇದು ಅಂತರರಾಷ್ಟ್ರೀಯ ಮಾಹಿತಿ ಮತ್ತು ಜಿಜ್ಞಾಸೆಗಳಿಗೆ ಸೇತುವೆಯಂತಿರಬೇಕೆಂಬುದು ಹ್ಯಾಮರ್‌ಷಲ್ಡರ ಆಶಯವಾಗಿತ್ತು. ಈ ಗ್ರಂಥಾಲಯಕ್ಕೆ ಅನಂತರ ಅವರ ಹೆಸರನ್ನೇ ಇಡಲಾಗಿದೆ.

ಯುನೆಸ್ಕೋ (UNESCO)

ಇದರ ಗ್ರಂಥಾಲಯ ಚಟುವಟಿಕೆಗಳಂತೂ ಪರಿಣಾಮ, ವ್ಯಾಪ್ತಿ ಮತ್ತು ಸಂಖ್ಯೆಗಳೆಲ್ಲದರಲ್ಲೂ ಅಪಾರ. ಅವುಗಳ ಸಂಕ್ಷಿಪ್ತ ಸಮೀಕ್ಷೆಯನ್ನು ನನ್ನ ಇನ್ನೊಂದು ಲೇಖನದಲ್ಲಿ ಮಾಡಿದ್ದೇನೆ[7]. ಪುನಃ ಅವುಗಳ ವಿವರಣೆ ಇಲ್ಲಿ ಅನಾವಶ್ಯಕ. ಆದರೂ, ಯುನೆಸ್ಕೋದಿಂದ ಸ್ಥಾಪಿಸಲ್ಪಟ್ಟ, ಇಲ್ಲವೆ ಅದರಿಂದ ಪೋಷಿಸಲ್ಪಟ್ಟ ಕೆಲವು ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದು: ೧ ಅಂತರರಾಷ್ಟ್ರೀಯ ಮಾನಕ ಸಂಸ್ಥೆಯ ಪ್ರಲೇಖನ ಸಮಿತಿ, ೨ ಅಂತರರಾಷ್ಟ್ರೀಯ ಪತ್ರಾಗಾರ ಮಂಡಳಿ, ೩ ಅಂತರರಾಷ್ಟ್ರೀಯ ಕಟ್ಟಡ ಸಂಶೋಧನ ಮತ್ತು ಅಧ್ಯಯನದ ಪ್ರಲೇಖನ ಮಂಡಳಿ, ೪ ಅಂತರರಾಷ್ಟ್ರೀಯ ಸಮಾಜಶಾಸ್ತ್ರಗಳ ಪ್ರಲೇಖನ ಸಮಿತಿ, ೫ ಸಂಗೀತ ಗ್ರಂಥಾಲಯಗಳ ಅಂತರ ರಾಷ್ಟ್ರೀಯ ಸಂಘ, ೬ ಕಾಮನ್‌ವೆಲ್ತ್ ಗ್ರಂಥಾಲಯ ಸಂಘ. ತಮ್ಮ ತಮ್ಮ ಮಾತೃಸಂಸ್ಥೆಗಳ ಧ್ಯೇಯ ಧೋರಣೆಗಳಿಗೆ ನೆರವಾಗುವುದರ ಜೊತೆಗೆ ಈ ಗ್ರಂಥಾಲಯಗಳು ಆಯಾ ಕ್ಷೇತ್ರದಲ್ಲಿ

---

[7] ನಾಗಪ್ಪ (ಬಿ): ಗ್ರಂಥಾಲಯಗಳ ಅಭಿವೃದ್ಧಿಯಲ್ಲಿ ಯುನೆಸ್ಕೋ ಪಾತ್ರ, ಮಾನವಿಕ ಕರ್ಣಾಟಕ, ಸಂಪುಟ ೧, ಸಂಚಿಕೆ ೪, ಪು. ೧೧–೨೬

ನಿರತವಾಗಿರುವ ವಿವಿಧ ರಾಷ್ಟ್ರೀಯ ಸಂಘ ಸಂಸ್ಥೆಗಳಿಗೆ ಸಹಾಯಮಾಡುತ್ತಿವೆ. ಈ ರೀತಿಯ ಸಹಾಯ ಆಯಾ ಕ್ಷೇತ್ರದಲ್ಲಿನ ಸಂಶೋಧನ ಮಾಹಿತಿಯನ್ನು ಸಂಗ್ರಹಿಸಿ ಅನಂತರ ಅದನ್ನು ಪರಿಷ್ಕರಿಸಿ ಸದಸ್ಯ ಸಂಸ್ಥೆಗಳಿಗೆ ವಿತರಣೆ ಮಾಡುವುದರ ಮೂಲಕ ನೆರವೇರುತ್ತದೆ. ತಾಂತ್ರಿಕ ಲೇಖನಗಳ ಸಾರಾಂಶ, ಭಾಷಾಂತರ ಮತ್ತು ಸೂಚಿಪಟ್ಟಿಗಳನ್ನು ತಯಾರಿಸುವುದು ಈ ಕಾರ್ಯಾಚರಣೆಯ ಮುಖ್ಯ ಅಂಶಗಳು.

ಮೇಲೆ ಹೇಳಿದ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳಲ್ಲಿ ನಮಗೆ ಹೆಚ್ಚಿನ ಆಸಕ್ತಿಯನ್ನುಂಟು ಮಾಡುವುದೆಂದರೆ ಕಾಮನ್‌ವೆಲ್ತ್ ಗ್ರಂಥಾಲಯ ಸಂಘ. ೧೯೭೨ರ ನವೆಂಬರ್‌ನಲ್ಲಿ ಜಮೈಕಾದಲ್ಲಿ ಜನ್ಮವೆತ್ತಿದ ಈ ಸಂಘ ಕೋಮ್ಲಾ (COMLA) ಎಂಬ ಸಂಕ್ಷಿಪ್ತ ನಾಮದಿಂದ ಕರೆಯಲ್ಪಡುತ್ತಿದೆ. ಶೈಶವಾವಸ್ಥೆಯಲ್ಲಿರುವ ಇದು ಈಗಾಗಲೇ ಹಲವು ಉಪಯುಕ್ತ ಯೋಜನೆಗಳನ್ನು ರೂಪಿಸಿಕೊಂಡಿದೆ. ಕಾಮನ್‌ವೆಲ್ತ್ ದೇಶಗಳಲ್ಲಿಯ ಗ್ರಂಥಪಾಲರ ತ್ರೈವಾರ್ಷಿಕ ಸಮ್ಮೇಳನಗಳನ್ನು ನಡೆಸುವುದು; ಸದಸ್ಯ ರಾಷ್ಟ್ರಗಳ ನಡುವೆ ಗ್ರಂಥಪಾಲರ ವಿನಿಮಯ; ಗ್ರಂಥಾಲಯ ಶಿಕ್ಷಣದ ಪದವಿಗಳನ್ನು ಪರಸ್ಪರ ಮಾನ್ಯಮಾಡುವುದು ಇವೇ ಮೊದಲಾದ ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸಿಕೊಂಡಿದೆ.

ಅಮೆರಿಕನ್ ಕಾಂಗ್ರೆಸ್ ಗ್ರಂಥಾಲಯ

ಇದು ರಾಷ್ಟ್ರೀಯ ಗ್ರಂಥಾಲಯವಾಗಿದ್ದರೂ ಅಂತರರಾಷ್ಟ್ರೀಯ ವ್ಯಾಪ್ತಿಯುಳ್ಳ ಯೋಜನೆಯೊಂದನ್ನು ೧೯೬೬ರಲ್ಲಿ ಪ್ರಾರಂಭಿಸಿತು. ಯಂತ್ರವಾಚಕ ಸೂಚಿಗಳನ್ನು (Machine Readable Catalogues) ತಯಾರಿಸುವ ದಿಶೆಯಲ್ಲಿ ಕಾಂಗ್ರೆಸ್ ಗ್ರಂಥಾಲಯ ನಡೆಸುತ್ತಿರುವ ಪ್ರಯೋಗಗಳು ಎಲ್ಲ ಪ್ರಗತಿಶೀಲ ಗ್ರಂಥಪಾಲರ ಗಮನವನ್ನು ಸೆಳೆದಿವೆ. ಈ ಎಲ್ಲ ಕಾರ್ಯಕ್ರಮಗಳ ತೌಲನಿಕ ಪರಿಶೀಲನೆಯನ್ನು ಶ್ರೀ ರಾಘವನ್ ಅವರ ಲೇಖನವೊಂದರಲ್ಲಿ ನಾವು ಕಾಣಬಹುದು.[8] ೧೯೬೬ರಲ್ಲಿ ಹೇಗ್ ನಗರದಲ್ಲಿ ನಡೆದ ಇಫ್ಲಾ ಸಮ್ಮೇಳನದಲ್ಲಿ ಅದರ ಅಧ್ಯಕ್ಷರಾದ ಫ್ರ್ಯಾಂಕ್ ಫ್ರ್ಯಾನ್ಸಿಸ್ ಅವರು ಕಾಂಗ್ರೆಸ್ ಗ್ರಂಥಾಲಯದ ಈ ಯೋಜನೆಯ ಮಹತ್ತ್ವವನ್ನು–ಅದು ಇನ್ನೂ ರೂಪುಗೊಳ್ಳುತ್ತಿರುವ ಸಮಯದಲ್ಲೇ–ಮುಕ್ತಕಂಠದಿಂದ ಹೊಗಳಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಅದೊಂದು ದಿಟ್ಟ ಹೆಜ್ಜೆಯೆಂದೂ ಗ್ರಂಥಾಲಯ ಕ್ಷೇತ್ರದಲ್ಲಿ ಸೈದ್ಧಾಂತಿಕ ವಿಷಯವೊಂದು ನೈಜತೆಯನ್ನು ತಳೆಯುತ್ತಿದೆಯೆಂದೂ ಅಭಿಪ್ರಾಯ ಪಟ್ಟಿದ್ದಾರೆ.[9]

ಯುನಿಸಿಸ್ಟ್ (UNISIST)

ಈ ದಶಕದ ಮಹತ್ತ್ವದ ಯೋಜನೆಗಳಲ್ಲಿ ಅಂತರರಾಷ್ಟ್ರೀಯ ವೈಜ್ಞಾನಿಕ ಮಾಹಿತಿ ವ್ಯವಸ್ಥೆ (UNISIST) ಪ್ರಮುಖವಾದ್ದು. ಯುನೆಸ್ಕೋ ಮತ್ತು ಅಂತರರಾಷ್ಟ್ರೀಯ ವೈಜ್ಞಾನಿಕ ಮಂಡಳಿಯ (ICSU) ಸಹಯೋಗದಿಂದ ರೂಪಗೊಂಡ ಈ ಯೋಜನೆ ಇವೆರಡರ ಜಂಟಿ ಸಮಿತಿಯೊಂದರ ಅಧ್ಯಯನದ ವರದಿಯ ರೂಪದಲ್ಲಿ ಅಕ್ಟೋಬರ್ ೧೯೭೦ರಲ್ಲಿ ಪ್ರಕಟಿಸಲ್ಪಟ್ಟಿತು. ವೈಜ್ಞಾನಿಕ ಹಾಗೂ ತಾಂತ್ರಿಕ ಮಾಹಿತಿಯ ಮುಕ್ತ ಪರಿವಹನಕ್ಕೆ ಈ ಯೋಜನೆ ತಳಪಾಯ ಹಾಕುತ್ತದೆ. ಇದನ್ನು ಕಾರ್ಯರೂಪಕ್ಕೆ ತರುವ ದಿಶೆಯಲ್ಲಿ ಆಗಲೇ ಹಲವಾರು ಪ್ರಯತ್ನಗಳು ನಡೆದಿವೆ. ವಿಚಾರ ಸಂಕಿರಣಗಳು, ಅಂತರರಾಷ್ಟ್ರೀಯ ಚರ್ಚಾಕೂಟಗಳು, ಮತ್ತು ಹಲವಾರು ನಿಯತಕಾಲಿಕಗಳಲ್ಲಿ ಪ್ರಕಟವಾಗಿರುವ ತಜ್ಞ ಅಭಿಪ್ರಾಯ ಮತ್ತು ಲೇಖನಗಳು ಈ ಯೋಜನೆಯ ಬಗ್ಗೆ ಸಾಕಷ್ಟು ಸಾಹಿತ್ಯವನ್ನು ಸೃಷ್ಟಿಸಿವೆ. ಪರಿವಹನದ ಸಾಧನ ಸಲಕರಣೆಗಳನ್ನು ಸುಧಾರಿಸುವುದು; ವೈಜ್ಞಾನಿಕ ಹಾಗೂ ತಾಂತ್ರಿಕ ಮಾಹಿತಿಯ

---

8 ರಾಘವನ್ (ಕೆ.ಎಸ್): ಗ್ರಂಥ ಸೂಚೀಕರಣದಲ್ಲಿ ಅಮೆರಿಕನ್ ಕಾಂಗ್ರೆಸ್ ಗ್ರಂಥಾಲಯದ ಪಾತ್ರ, ಮಾನವಿಕ ಕರ್ನಾಟಕ, ಸಂ.೪, ಸಂಚಿಕೆ ೧, ೧೯೭೩, ಪು. ೧೭–೩೦.

9 Francis (Frank) : Presidential Address to Ifla General Council. *Quoted* by Curt Worman. op. cit.

ಪರಸ್ಪರ ವಿನಿಮಯವನ್ನು ಪ್ರೋತ್ಸಾಹಿಸುವದು; ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಾಹಿತಿ ಕೇಂದ್ರಗಳ ಪರಿವಹನ ಜಾಲಗಳನ್ನು ಸೃಷ್ಟಿಸುವುದು; ಅಭಿವೃದ್ಧಿಶೀಲ ದೇಶಗಳಿಗೆ ವಿಶೇಷ ಸಹಾಯ ಸೌಲಭ್ಯಗಳನ್ನು ನೀಡುವುದು ಮತ್ತು ಮಾಹಿತಿಶಾಸ್ತ್ರಜ್ಞರಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವದು–ಈ ಐದು ಅಂಶಗಳು ಈ ಯೋಜನೆಯ ಧ್ಯೇಯೋದ್ದೇಶಗಳಾಗಿವೆ. ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯಗಳ ಮಾಹಿತಿಯ ಬಗ್ಗೆ ಈ ಯೋಜನೆ ಸೀಮಿತಗೊಂಡಿದ್ದರೆ ಸಾಮಾಜಿಕ ಹಾಗೂ ಆರ್ಥಿಕ ವಿಷಯಗಳಿಗೆ ಇಂಥದೇ ಒಂದು ಯೋಜನೆ ೧೯೭೪ರ ಜೂನ್‌ನಲ್ಲಿ DEVSIS ಎಂಬ ಸಂಕ್ಷಿಪ್ತನಾಮದಿಂದ ರೂಪುಗೊಂಡಿತು. ಸಾಮಾಜಿಕ ಹಾಗು ಆರ್ಥಿಕ ಅಭಿವೃದ್ಧಿಯನ್ನು ಕುರಿತು ಅಧ್ಯಯನ ನಡೆಸುತ್ತಿರುವ ೩೪ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಗಳು ಒಟ್ಟಾವದಲ್ಲಿ ಸಭೆಸೇರಿ ತಮ್ಮ ಈ ಯೋಜನೆಯನ್ನು ಯೂನಿಸಿಸ್ಟ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಯುನೆಸ್ಕೋವನ್ನು ಕೋರಿದ್ದಾರೆ. ಇವು ಪೂರ್ಣರೂಪದಲ್ಲಿ ಅಸ್ತಿತ್ವಕ್ಕೆ ಬಂದಾಗ ಪ್ರತಿಯೊಬ್ಬ ಸಂಶೋಧಕ ಮತ್ತು ಅಧ್ಯಯನಶೀಲನೂ ತನ್ನ ರಾಷ್ಟ್ರೀಯ ಮಾಹಿತಿಕೇಂದ್ರದ ಮೂಲಕ ತನಗೆ ಬೇಕಾದ ಮಾಹಿತಿಯನ್ನು ಕಾಲವಿಳಂಬವಿಲ್ಲದೆ ವಿಶ್ವದ ಯಾವ ಕೇಂದ್ರದಿಂದಲಾದರೂ ಪಡೆಯ ಬಹುದು. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಜಾಲಗಳು–ಆಸಕ್ತಿಯುಳ್ಳ ಪ್ರತಿಯೊಬ್ಬನಿಗೂ ಅವನಿಗೆ ಬೇಕೆನಿಸಿದ ಮಾಹಿತಿಯನ್ನು ಒದಗಿಸಗಬಲ್ಲ ಈ ಬೃಹತ್ ಯೋಜನೆಗಳು–ಸದ್ಯದಲ್ಲೇ ರೂಪ ಗೊಳ್ಳಲಿವೆ. ಆಗ ಗ್ರಂಥಾಲಯಗಳು ಮಾಹಿತಿಯ ಪೂರೈಕೆ ಕೇಂದ್ರಗಳಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಗ್ರಂಥಪಾಲನೆಯ ಕ್ಷೇತ್ರದಲ್ಲಿ ಹಲವಾರು ಪ್ರಮುಖ ಅಂತರರಾಷ್ಟ್ರೀಯ ಸಂಘ–ಸಂಸ್ಥೆಗಳು ಕಾರ್ಯೋನ್ಮುಖವಾಗಿರುವುದನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ. ಅಂಥವುಗಳ ಸಂಖ್ಯೆ. ಹೋದ ವರುಷವೇ. ಮೂವತ್ತಕ್ಕೆ ಮೀರಿದೆ ಎಂದು ಹ್ಯಾರಿಸನ್ ಅವರು ಹೇಳಿದ್ದಾರೆ.[10] ಆ ಸಂಖ್ಯೆ ಇತ್ತೀಚೆಗೆ ಇನ್ನೂ ಬೆಳೆದಿರುವ ಸಾಧ್ಯತೆಯಿದೆ. ಆಧುನಿಕ ಗ್ರಂಥಪಾಲ ತನ್ನ ದಿನನಿತ್ಯ ಕೆಲಸಕಾರ್ಯಗಳಲ್ಲಿ ಹಲವಾರು ಅಂತರರಾಷ್ಟ್ರೀಯ ಸಂಘಸಂಸ್ಥೆಗಳ ನೆರವನ್ನು ಪಡೆಯಬೇಕಾಗುತ್ತದೆ. ಯುನೆಸ್ಕೋ. ಇಫ್ಲಾ, ಎಫ್.ಐ.ಡಿ. ಮೊದಲಾದ ಸಂಸ್ಥೆಗಳ ನೆರವು ಮತ್ತು ಯೂನಿಸಿಸ್ಟ್, ಡೆವ್‌ಸಿಸ್ ಮೊದಲಾದ ಯೋಜನೆಗಳ ಪ್ರಯೋಜನಗಳು ಗ್ರಂಥಪಾಲನೆಯಲ್ಲಿ ಅಗತ್ಯವಾದ ಅಂತರರಾಷ್ಟ್ರೀಯ ಪ್ರಜ್ಞೆಯನ್ನು ಇನ್ನೂ ಅಧಿಕಗೊಳಿಸುತ್ತವೆ.

---

[10] Harrison (KC): *International Relations in Librarianship.* op. cit. (6)

ಡಾ. ಎಸ್. ಗುರುರಾಜಾಚಾರ್

ಕರ್ನಾಟಕದ ಕೆಲವು ಕೈಗಾರಿಕೆಗಳು

[1600ರ ವರೆಗೆ]

ಕೈಗಾರಿಕೆಗಳು ಒಂದು ದೇಶದ ಪ್ರಧಾನ ಸಂಪನ್ಮೂಲಗಳಲ್ಲೊಂದಷ್ಟೆ. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿನ ಹಲವಾರು ಕೈಗಾರಿಕೆಗಳನ್ನು ಕುರಿತ ಅಧ್ಯಯನಕ್ಕೆ ಮಾಹಿತಿಯ ಸಾಕಷ್ಟು ಕೊರತೆಯಿದೆ. ಆ ಕಾಲದ ನೂರಾರು ಶಾಸನಗಳಲ್ಲೋ, ಹಲವಾರು ಸಾಹಿತ್ಯಕ ಕೃತಿಗಳಲ್ಲೋ, ಕೆಲವು ವಿದೇಶೀಯರ ಬರಹಗಳಲ್ಲೋ, ಪ್ರತ್ಯಕ್ಷ ಅಥವಾ ಪರೋಕ್ಷವಾಗಿ, ಕೆಲವೊಂದು ಅಂಶಗಳನ್ನು ಗ್ರಹಿಸಬಹುದಷ್ಟೆ. ಉದಾ: ದಾನವಾಗಿ ಕೊಟ್ಟ ಕೆಲವು ಪದಾರ್ಥಗಳು, ಮಾರುಕಟ್ಟೆಗಾಗಿ ತಯಾರಿಸಲಾಗುತ್ತಿದ್ದ ಹಲವು ಸಾಮಾನುಗಳು, ಕೆಲವು ಕೈಗಾರಿಕೆಗಳ ಮೇಲೆ ವಿಧಿಸುತ್ತಿದ್ದ ತೆರಿಗೆಗಳು, ಇತ್ಯಾದಿ. ಇವನ್ನು ಆಧಾರವಾಗಿಟ್ಟುಕೊಂಡು, ಅಂದಿನ ಕೈಗಾರಿಕೆಗಳನ್ನು ಸ್ಥೂಲವಾಗಿ ವಿವರಿಸಲು ಪ್ರಯತ್ನಿಸಬಹುದು. ಆದರೂ, ಕೈಗಾರಿಕೆಗಳಲ್ಲಿ ಅನುಸರಿಸುತ್ತಿದ್ದ ವಿಧಾನಗಳು, ಪ್ರಸಿದ್ಧ ಕೈಗಾರಿಕಾ ಕೇಂದ್ರಗಳು, ಮುಂತಾದ ಮುಖ್ಯ ಅಂಶಗಳ ಬಗ್ಗೆ ಮಾಹಿತಿ ಸ್ವಲ್ಪ ದುರ್ಲಭವೆ.

ಅಂದಿನ ಕೈಗಾರಿಕೆಗಳನ್ನು ವಿವರಿಸುವ ಮುನ್ನ, ಅವುಗಳ ಕೆಲವು ಸಾಧಾರಣ ಲಕ್ಷಣಗಳನ್ನು ಗಮನಿಸಬಹುದು. ಸಾಮಾನ್ಯ ನಿಯಮವೆಂಬಂತೆ, ಅಂದಿನ ಕೈಗಾರಿಕೆಯನ್ನು ಕೈಕಸಬು (Handicraft) ಎಂದು ಕರೆಯಬಹುದು. ಉತ್ಪಾದನೆ ಸರಳರೀತಿಯದು ಮತ್ತು ಹೆಚ್ಚು ಖರ್ಚಿಲ್ಲದ್ದು. ಸಾಮಾನ್ಯವಾಗಿ ಕಸಬುದಾರರು ತಮ್ಮ ತಮ್ಮ ಮನೆಗಳಲ್ಲೋ ಕುಟೀರಗಳಲ್ಲೋ ಕೆಲಸಮಾಡಿ ಹಲವಾರು ಪದಾರ್ಥಗಳನ್ನು ತಯಾರಿಸುತ್ತಿದ್ದರು. ಅವರಿಗೆ ಅವಶ್ಯಕವಾದ ಕಚ್ಚಾ ಸಾಮಗ್ರಿಗಳು ಅನತಿದೂರದಲ್ಲಿ ಉಪಲಬ್ಧವಿರುತ್ತಿದ್ದುವು. ಹೀಗೆ ತಯಾರಾದ ಪದಾರ್ಥಗಳು ಪ್ರತಿನಿತ್ಯದ ಪೇಟೆಗಳಲ್ಲೋ ವಾರದ ಸಂತೆಗಳಲ್ಲೋ ಸಿಗುತ್ತಿದ್ದವು. ಇದು, ಅಂದಿನ ಕೈಗಾರಿಕೆಗಳ ಒಂದು ಸ್ಥೂಲ ಚಿತ್ರ ಮಾತ್ರ.

ಇಲ್ಲಿ ಇನ್ನೊಂದು ಅಂಶವನ್ನು ಪ್ರಸ್ತಾಪಿಸಬಹುದು. ಅಂದಿನ ಕೆಲವು ಕಸಬುಗಳಲ್ಲಿ ಉತ್ತಮ ಕಾರ್ಯ ಕೌಶಲವನ್ನು ಕಾಣಬಹುದು. ಇದು ಹಲವಾರು ತಲೆಮಾರುಗಳಿಂದ ಬಂದ ಆಸ್ತಿಯೆನ್ನಬಹುದು. ಅಲ್ಲದೆ, ಕೆಲವು ಸಂದರ್ಭಗಳಲ್ಲಿ, ವಿಜ್ಞಾನೇಶ್ವರ[1] ಸೂಚಿಸುವಂತೆ, ಸುಪ್ರಸಿದ್ಧ ಗುರುಗಳ ಶಿಷ್ಯವೃತ್ತಿಯಲ್ಲಿ 'ಅಭ್ಯಾಸಿ'ಗಳಾಗಿ (apprentice) ಕಸಬುಗಳನ್ನು ಕಲಿಯುವ ಪದ್ಧತಿಯೂ ಇತ್ತು. ಅಂತಹ ಪರಿಸರದಲ್ಲಿ ಸಹಜವಾಗಿಯೇ ಹೊಸ ಹೊಸ ಪ್ರಯೋಗಗಳಿಗೂ ಅವಕಾಶವಿರುತ್ತಿತ್ತು.

ಸಾಮಾನ್ಯವಾಗಿ ಪ್ರತಿಯೊಂದು ಕೈಗಾರಿಕೆಯೂ ತನ್ನದೇ ಆದ 'ಶ್ರೇಣಿ'[2]ಯ(guild) ಅಧಿಕಾರ ಮತ್ತು ಹತೋಟಿಯಲ್ಲಿ ನಡೆಯುತ್ತಿತ್ತು. ವಿಜ್ಞಾನೇಶ್ವರ[3] ಪ್ರಸ್ತಾಪಿಸುವಂತೆ, ಈ 'ಶ್ರೇಣಿ'ಗಳು ಎಷ್ಟೇ ಸೀಮಿತವಾಗಿದ್ದಾಗ್ಯೂ, ತಮ್ಮವೇ ಆದ ನೀತಿ–ನಿಯಮಗಳನ್ನು ರೂಪಿಸಿಕೊಳ್ಳುವ

---

1 *Mitākṣarā* II. 182 (J. R. Gharpure's Trn.)

2 *Ibid.*, 30

3 *Ibid.*, 192

ನ್ಯಾಯದಾನಾಧಿಕಾರ (judicial power) ಹೊಂದಿದ್ದುವು. ಇವಕ್ಕೆ ರಾಜನಿಂದಲೂ ಮನ್ನಣೆ ರಕ್ಷಣೆಗಳು ದೊರಕುತ್ತಿದ್ದುವು. ದೊಡ್ಡ ನಗರಗಳಲ್ಲಿ, ರಾಜಧಾನಿಗಳಲ್ಲಿ ಇಂಥ ಕೆಲವು 'ಶ್ರೇಣಿ' (= ಸೇಣಿ = ಕೊತ್ವಾಳಿ)ಗಳು, ಸಮಾಜದಲ್ಲಿ ಸಾಕಷ್ಟು ಪ್ರಭಾವ ಬೀರಬಲ್ಲ ಶಕ್ತಿಗಳಾಗಿದ್ದುವು. ಸಮಕಾಲೀನ ಆಕರಗಳ ಬೆಳಕಿನಲ್ಲಿ, ಕೆಲವೊಂದು ಪ್ರಧಾನ ಕೈಗಾರಿಕೆಗಳನ್ನು ಕುರಿತು ಸ್ಥೂಲವಾಗಿ ವಿವರಿಸಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ನೆಯ್ಗೆ

ಪ್ರಾಚೀನ ಭಾರತದ ಪ್ರಧಾನ ಕೈಗಾರಿಕೆಗಳಲ್ಲಿ ನೆಯ್ಗೆಯೂ ಒಂದು. ಭಾರತದ ಹಲವಾರು ಪ್ರಾಂತ್ಯಗಳು ಈ ಉದ್ಯಮಕ್ಕೆ ಹೆಸರಾಗಿದ್ದುವು. ರಾಜನ 'ವಸ್ತ್ರ-ಭೋಗ'ವನ್ನು ಕುರಿತು ಪ್ರಸ್ತಾಪಿಸುವ ಸೋಮೇಶ್ವರ[4], ನಾಗಪಟ್ಟಣ, ಪಾಂಡ್ಯದೇಶ, ಅಣಿಲಾವಾಟ, ಮೂಲಸ್ಥಾನ, ಕಳಿಂಗ, ವಂಗ, ಮುಂತಾದ ಪ್ರದೇಶಗಳ ಬಟ್ಟೆಗಳನ್ನು ಹೆಸರಿಸುವುದು ಗಮನಾರ್ಹ.

ಕರ್ನಾಟಕದಲ್ಲೂ ಈ ಕೈಗಾರಿಕೆ ಸಾಕಷ್ಟು ಪ್ರಗತಿ ಸಾಧಿಸಿತ್ತು. ಮಿತಾಕ್ಷರಾದಲ್ಲಿ[5] ಮತ್ತು ಕೆಲವು ಶಾಸನಗಳಲ್ಲಿ[6] ನೇಕಾರರ 'ಶ್ರೇಣಿಗಳ ಪ್ರಸ್ತಾಪವಿರುವುದನ್ನು ಗಮನಿಸಬಹುದು. ಆಳರಸರು ಮತ್ತು ಅಧಿಕಾರಿಗಳು ಈ ಕೈಗಾರಿಕೆಗೆ ಪ್ರೋತ್ಸಾಹ ಕೊಡಲು ಉತ್ಸುಕರಾಗಿದ್ದಂತೆ ಕಾಣುತ್ತದೆ. ೧೦೬೨ರಲ್ಲಿ,[7] ಮಹಾಮಂಡಲೇಶ್ವರ ಪೀರನೊಣಂಬ ಜಗದೇಕಮಲ್ಲ, ಒಂದು 'ನೈವಮನೆ'ಯನ್ನು ದಾನವಾಗಿ ಕೊಟ್ಟನಂತೆ. ಅಲ್ಲದೆ, ಈ ಕೈಗಾರಿಕೆಯ ಮೇಲೆ ವಿಧಿಸುತ್ತಿದ್ದ 'ಮಗ್ಗದೆಜು',[8] 'ನೂಲುದೆಜು',[9] ಮುಂತಾದ ತೆರಿಗೆಗಳನ್ನು ಹಾಕದೆ, ವಿನಾಯಿತಿಯನ್ನು ತೋರಿಸಿ, ಸಹಾಯ ಮಾಡುತ್ತಿದ್ದುದೂ ಉಂಟು.[10] ನೆಯ್ದ ಬಟ್ಟೆಗಳು ಚೀಲಗಳಲ್ಲಿ ಗಂಟುಗಳಲ್ಲಿ. ಪೇಟೆಯನ್ನು ತಲುಪುವಾಗ, ಸ್ವಲ್ಪ ತೆರಿಗೆಯನ್ನು ಹಾಕುತ್ತಿದ್ದರು.[11]

ಸೋಮೇಶ್ವರ ತನ್ನ (ಐತಿಹಾಸಿಕ ಚಂಪೂ ಎಂದು ಪರಿಗಣಿಸಲ್ಪಟ್ಟಿರುವ) 'ವಿಕ್ರಮಾಂಕಾಭ್ಯುದಯ'ದಲ್ಲಿ[12] ಕಲ್ಯಾಣ ನಗರದ ಪೇಟೆಯನ್ನು (ವಿಪಣಿಸದನ-ವರ್ಣನಂ) ವರ್ಣಿಸುತ್ತ, ಅಲ್ಲಿ ಉಪಲಬ್ಧವಾಗಿದ್ದ ಅತ್ಯುತ್ತಮ ಹಾಗೂ ಸುಂದರವಾದ ವಸ್ತ್ರಗಳ ಬಗ್ಗೆ ಹೇಳುವ ಮಾತುಗಳನ್ನು ಗಮನಿಸಬಹುದು: ಆ ಬಟ್ಟೆಗಳು ಎಷ್ಟು ಸುಂದರ ಮತ್ತು ಸೂಕ್ಷ್ಮವಾಗಿದ್ದುವೆಂದರೆ, ಅವು ಕೇವಲ ಸ್ಪರ್ಶದಿಂದ ಮಾತ್ರ ತಿಳಿಯಲು ಸಾಧ್ಯವೇ ಹೊರತು, ದೃಷ್ಟಿ ಮಾತ್ರಕ್ಕೆ ಅಗೋಚರವಾಗಿದ್ದುವು. ಅತಿ ಹಗುರವಾಗಿದ್ದರೂ ಬಹಳ ಬೆಲೆಬಾಳುವವು. ಅವು ಎಷ್ಟು ತೆಳುವು ಮತ್ತು ಪಾರದರ್ಶಕವಾಗಿದ್ದುವೆಂದರೆ, ಧರಿಸಿದವರ ಅಂಗಾಂಗಗಳು ಸ್ಪಷ್ಟವಾಗಿ ಕಾಣುತ್ತಿದ್ದುವಂತೆ! ಇಂತಹುದೇ ವರ್ಣನೆ, ದಖ್ಖನಿನ ಬಟ್ಟೆಗಳ ಬಗ್ಗೆ ಮಾರ್ಕೊಪೋಲೊ[13] ಮಾಡಿರುವುದನ್ನು ಇಲ್ಲಿ ಸ್ಮರಿಸಬಹುದು.

---

[4] ಅಭಿಲಷಿತಾರ್ಥ ಚಿಂತಾಮಣಿ, ೩, ೧೦೭೨–೮೮

[5] II. 30

[6] *EC*, XI, Cl. 21

[7] BKI, I. i, No. 97 (1062); EI, XIII, P. 196, ಇತ್ಯಾದಿ

[8] *Ibid*., IX, Cp. 66 (1288 A.D.)

[9] *Ibid*.,

[10] *INKKS*, 21 a

[11] *EC*, II, 327 (124); XI, Cl, 21, etc.

[12] P. 11, ll. 5–11

[13] "These are the most delicate buckrams and of the highest price; in sooth they look like the tissue of spider's web. There can be no king or queen in the world but might be glad to wear them." *The book of Sir Marco Polo* (Ed Sir Henry Yule), II p. 391

ಹತ್ತಿ, ರೇಷ್ಮೆ ಮತ್ತು ಉಣ್ಣೆ ಬಟ್ಟೆಗಳನ್ನು ನೇಯುತ್ತಿದ್ದರು. ಹತ್ತಿಯ ಬೆಳೆಗೆ ಕರ್ನಾಟಕ ಮೊದಲಿನಿಂದಲೂ ಹೆಸರಾಗಿತ್ತಷ್ಟೆ. ವಿಧವಿಧವಾದ ಹತ್ತಿಯ ಬಟ್ಟೆಗಳನ್ನು ತಯಾರಿಸುತ್ತಿದ್ದರು.[14] ರೇಷ್ಮೆ ಕೈಗಾರಿಕೆಯೂ ಸಾಕಷ್ಟು ಪ್ರಗತಿ ಸಾಧಿಸಿತ್ತು. ಹರಿಹರ ಹಲವು ಬಗೆಯ ರೇಷ್ಮೆವಸ್ತ್ರಗಳನ್ನು ಹೆಸರಿಸುತ್ತಾನೆ: "ಬಿಜ್ಜಳನ ಭಂಡಾರದ ಚಿನಿ ಮಹಾಚಿನಿ ದೇವಾಂಗ......ಮೊದಲಾದ ಪಟ್ಟಾವಳಿಯ ದಿಂಡುಗಳಂ ತರಿಸಿ............"[15]

ಧಾರವಾಡ ಜಿಲ್ಲೆಯ, ಹನ್ನೆರಡನೆಯ ಶತಮಾನದ, ಶಾಸನವೊಂದು, "ಪಟ್ಟಗಾಱಕುಳಭೂಷಣ ಬರಗಿರಿಯ ಸೋಮಗೌಂಡ"ನ ಬಗ್ಗೆ ಪ್ರಸ್ತಾಪಿಸುತ್ತದೆ. ಹಾಗೆಯೇ, ಗುಲಬರ್ಗ ಜಿಲ್ಲೆಯ, ಕ್ರಿ.ಶ. ೧೨೨೨ರ, ಶಾಸನದಲ್ಲಿ, ದೇವಮಂದಿರಕ್ಕೆ ೬೩೦ 'ಪಟ್ಟೆ'ಗಳನ್ನು ದಾನವಾಗಿ ಕೊಟ್ಟ ವಿಷಯವಿದೆ.

ಬಹಮನಿ ಅರಸರ ಆಳ್ವಿಕೆಯ ಕಾಲದಲ್ಲಿ, ಗುಲಬರ್ಗವು ರೇಷ್ಮೆ ಕೈಗಾರಿಕೆಯ ಪ್ರಸಿದ್ಧ ಕೇಂದ್ರ ವೆನಿಸಿದ್ದು, ಇಲ್ಲಿ ತಯಾರಾದ ಉತ್ತಮ ರೇಷ್ಮೆ ವಸ್ತ್ರಗಳು ಅತಿ ಕಡಿಮೆ ಬೆಲೆಗೆ ಸಿಗುತ್ತಿದ್ದುವು.[18] ದಕ್ಷಿಣ ಕನ್ನಡದ (South Kanara) ಬೋಳೂರು ಮತ್ತು ಕಾವೂರು ಮೊದಲಿನಿಂದಲೂ ಈ ಕೈಗಾರಿಕೆಗೆ ಪ್ರಸಿದ್ಧವೆನಿಸಿದ್ದುವು; ಬೋಳೂರಿನಲ್ಲಿ ಇಂದಿಗೂ ಹಲವು ಕುಟುಂಬಗಳು ಈ ಉದ್ಯಮವನ್ನು ನಡೆಸಿಕೊಂಡು ಬಂದಿವೆಯಂತೆ.[19]

ಇಲ್ಲಿ ಒಂದು ವಿಷಯವನ್ನು ಗಮನಿಸುವುದು ಆವಶ್ಯಕವೆನಿಸುತ್ತದೆ. ಆ ಕಾಲದ ಹಲವಾರು ಕೃತಿಗಳಲ್ಲಿ,[20] 'ಚೀನ', 'ಮಹಾಚೀನ' ಎಂಬ ರೇಷ್ಮೆವಸ್ತ್ರಗಳು ನಮೂದಿತವಾಗಿವೆ. ಇವು, ಹೆಸರು ಗಳೇ ಸೂಚಿಸುವಂತೆ, ಚೀನಾದೇಶದಿಂದ ತರಿಸಿಕೊಳ್ಳುತ್ತಿದ್ದ ಬಟ್ಟೆಗಳೇ? ಅಥವಾ, ಇಲ್ಲೇ ತಯಾರಾಗು ತ್ತಿದ್ದ ಬಟ್ಟೆಗಳಿಗೆ ಆ ಹೆಸರುಗಳು ಬಂದಿದ್ದವೋ? ಇದು ವಿಚಾರಣೀಯ.

ಚೀನಿ ರೇಷ್ಮೆ (ಚೀನಾಂಶುಕ, ಚೀನಪಟ್ಟ)ವಸ್ತ್ರಗಳು, ಬಹು ಪ್ರಾಚೀನ ಕಾಲದಿಂದಲೂ ಪ್ರಸಿದ್ಧ ವಾಗಿವೆ. ಭಾರತೀಯ ಮಾರುಕಟ್ಟೆಗೆ ಚೀನದ ರೇಷ್ಮೆಯ ಹೊರತು ಮತ್ಯಾವ ಸರಕೂ ಆ ದೇಶದಿಂದ ಬರುತ್ತಿದ್ದಂತೆ ಕಾಣುವುದಿಲ್ಲವೆಂಬುದು ವಿದ್ವಾಂಸರ ಅಭಿಪ್ರಾಯ.[21] ಹೆಚ್ಚೇಕೆ; ಚೀನವನ್ನು 'ರೇಷ್ಮೆಯ ದೇಶ' (the land of silk) ಎಂದು ವರ್ಣಿಸಿರುವುದೂ ಉಂಟು.[22]

ಕರ್ನಾಟಕಕ್ಕೂ ಚೀನಕ್ಕೂ ನೇರವಾದ ವ್ಯಾಪಾರ ಸಂಪರ್ಕ ಇತ್ತೆನ್ನಲು ಮಾಹಿತಿಯ ಕೊರತೆ ಯೇನಿಲ್ಲ. ಸುಮಾರು ೧೫ನೆಯ ಶತಮಾನದ ಆದಿಭಾಗದ ವರೆಗೂ ಮಂಗಳೂರು ಹೊನ್ನಾವರಗಳು

---

14 A. Appadorai, *Economic Conditions in Southern India*, II, p. 452

15 ಬಸವರಾಜದೇವರ ರಗಳೆ (ಸಂ. ಟಿ. ಎಸ್. ವೆಂಕಣ್ಣಯ್ಯ), ಪು. ೪೯

16 *KI*, V, No. 102

17 *APGAS* No. 9 : Inscription No. 15

18 S. K. Sinha, *Medieval History of Deccan*, I, p. 151

19 B. A. Saletore, *Ancient Karnataka* p, 485

20 ನೋಡಿ: ಅಭಿಲಷಿತಾರ್ಥ ಚಿಂತಾಮಣಿ, III. ೧೦೬೬; ಧರ್ಮಾಮೃತ, I–೩.೩೬; ೫.೫೨; ೬.೧೫೫ ಇತ್ಯಾದಿ; ಬಸವರಾಜದೇವರ ರಗಳೆ, ಪು. ೪೯, ಇತ್ಯಾದಿ

21 Sachindra Kumar Maity, *Economic Life of Northern India in the Gupta Period*, p. 134

22 *Ibid.*

ಚೀನದೊಡನೆ ವಾಣಿಜ್ಯ ಸಂಬಂಧ ಹೊಂದಿದ್ದವು.[23] ಮೂಡುಬಿದುರೆಯ ಒಂದು ಶಾಸನದಲ್ಲಿ (೧೪೨೯) "ಚೀನಾಂಬರ ವಿಭ್ರಮ ಕ್ರಮಿಕರ" ಪ್ರಸ್ತಾಪವಿರುವುದನ್ನು ಗಮನಿಸಬಹುದು ಆದ್ದರಿಂದ, ಈ 'ಮಹಾಚೀನ-ಭವಾನಿ' ಆಮದಾಗುತ್ತಿದ್ದ ಬಟ್ಟೆಗಳೇ ಅಥವಾ, ಇಲ್ಲೇ ತಯಾರಾಗುತ್ತಿದ್ದ ರೇಷ್ಮೆ ವಸ್ತ್ರಗಳಿಗೆ, ಈ ಹೆಸರುಗಳು ಬಳಕೆಯಲ್ಲಿ ಬಂದಿರಬಹುದೇ? ಖಚಿತವಾಗಿ ಹೇಳುವುದು ಸ್ವಲ್ಪ ಕಠಿಣವೇ.

ಕಿತ್ತಾನಾರು (hemp) ಮುಂತಾದವುಗಳಿಂದ ಕೆಲವು ಬಗೆಯ ನಾರುಬಟ್ಟೆ (linen) ಗಳನ್ನೂ ಮಾಡುತ್ತಿದ್ದರು. ೨ನೆಯ ನಾಗವರ್ಮ ('ದುಕೂಲ')[25], ವಿಜ್ಞಾನೇಶ್ವರ, ಸೋಮೇಶ್ವರ ('ಕ್ಷೌಮ')[26]ಇವರ ಕೃತಿಗಳಲ್ಲಿ, ಇವರ ಪ್ರಸ್ತಾಪವಿದೆ. ಬಹುಶಃ, ಚಿತ್ರದುರ್ಗ ಜಿಲ್ಲೆಯ ಬುದೇಹಾಳ್ ಎಂಬಲ್ಲಿ, ನಾರುವಸ್ತ್ರಗಳನ್ನು ಮಾಡುತ್ತಿದ್ದರು ಎನ್ನಲಾಗಿದೆ.[27]

ತುಪ್ಪಟಗಳನ್ನು ನೆಯ್ದು ಉಣ್ಣೆಯ ಬಟ್ಟೆಗಳನ್ನು ಮಾಡುತ್ತಿದ್ದರು. 'ಕುತಪ'ವನ್ನು, ಅಂದರೆ ಬೆಟ್ಟಗುಡ್ಡಗಳಲ್ಲಿಯ ಟಗರುಗಳ ತುಪ್ಪಟದಿಂದ ಮಾಡಿದ ಕಂಬಳಿಯನ್ನು, ವಿಜ್ಞಾನೇಶ್ವರ[28] ಹೆಸರಿಸುತ್ತಾನೆ. ಕಂಬಳಿಗಳ ಪ್ರಸ್ತಾಪ ಕೆಲವು ಶಾಸನಗಳಲ್ಲಿರುವುದೂ ಉಂಟು. ದಾವಣಗೆರೆ, ದೊಡ್ಡಬಳ್ಳಾಪುರ ಮುಂತಾದ ಸ್ಥಳಗಳಲ್ಲಿ ಕಂಬಳಿಗಳನ್ನು ನೆಯ್ಯುತ್ತಿದ್ದಂತೆ ಕಾಣುತ್ತದೆ.[30] ಹಲವು ಬಗೆಯ ಕಂಬಳಿಗಳನ್ನು ಮಾಡುತ್ತಿದ್ದಿರಬೇಕು.[31] ಸ್ವಲ್ಪ ಒರಟಾದ ತುಪ್ಪಟವನ್ನು ಕಂಬಳಿಗಳಿಗೆ ಉಪಯೋಗಿಸುತ್ತಿದ್ದರೆನ್ನಬಹುದು.[32]

ವಿಜ್ಞಾನೇಶ್ವರ[33] ತಿಳಿಸುವಂತೆ, 'ರೋಮಬದ್ಧ'ವೆಂಬುದು ಮೇಲೆ ಧರಿಸುವ ಒಂದು ಉಣ್ಣೆಯ ವಸ್ತ್ರ. ಆತನೇ ಹೇಳುವಂತೆ, 'ವಾಲವಾಸಾ' ಎಂಬುದು ಹಸುವಿನ ಕೂದಲಿನಿಂದ ಮಾಡಿದ ಒಂದು ಬಟ್ಟೆ. ರೇಷ್ಮೆ, ಉಣ್ಣೆ ಮುಂತಾದ ಬಟ್ಟೆಗಳ ವರ್ಗೀಕರಣ ಅವುಗಳಿಗೆ ಉಪಯೋಗಿಸಿದ್ದ ಒರಟು. ಮಧ್ಯಮ ಹಾಗೂ ಉತ್ತಮ ದರ್ಜೆಗಳ ನೂಲಿನ ಆಧಾರದ ಮೇಲೆ ಮಾಡುತ್ತಿದ್ದುದರ ಸೂಚನೆ, ಮಿತಾಕ್ಷರಾ[35]ದಲ್ಲಿದೆ.

---

23 ಇದರ ವಿವರಗಳ ಚರ್ಚೆಗೆ, ನೋಡಿ: S. Gururajachar, *Some Aspects of Economic and Social Life in Karṇāṭaka*, pp. 70–71

24 *S II*, VII, No. 196

25 ಅಭಿಧಾನವಸ್ತುಕೋಶ, ಪು. ೭೮, ಪ. ೧೮

26 *Mitākṣarā*, I, 187 ; ಅಭಿಲಷಿತಾರ್ಥ ಚಿಂತಾಮಣಿ, III ೧೦೬೭

27 A. Appadorai, *op. cit.* II, p. 453

28 *Mitākṣarā*, II. 37 ; ಅಭಿಧಾನ ವಸ್ತುಕೋಶ, ಪು. ೭೮, ಪ. ೧೯, ಇದನ್ನೂ ನೋಡಬಹುದು.

29 *EC*, IX, DB. 31 (1267 A.D.) ; *S II*, XX, No. 347 (13th century A. D.), etc.

30 *Half-Yearly Journal of the Mysore University*, II, p. 215

31 ಅಭಿಧಾನವಸ್ತುಕೋಶ ಪು. ೭೮, ಪ.೧೯

32 *Mitāksarā*, II, 179

33 *Ibid.*, 180

34 *Ibid* , III, 254

35 *Ibid.*, II, 179

ಸುಪ್ರಸಿದ್ಧ ಶಿವಶರಣ ಮತ್ತು ವಚನಕಾರನೆನಿಸಿರುವ ದೇವರ ದಾಸಿಮಯ್ಯ ನೆಯ್ಗೆ ಕಾಯಕ ವನ್ನು ಅವಲಂಬಿಸಿದ್ದವನೆಂದು ತಿಳಿಯುತ್ತದೆ. ಆತನ ವಚನವೊಂದರಲ್ಲಿ, ಬಟ್ಟೆಯನ್ನು ನೆಯ್ಯುವ ಚಿತ್ರವನು ಕಾಣಬಹುದು:

ಉಂಕಿಯ ನಿಗುಚಿ
ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೊಳು ಏಳ ಮೆಟ್ಟಿದೆ.
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು.
ಈ ಸೀರೆಯ ನೈದವ ನಾನೋ ನೀನೋ ರಾಮನಾಥ?[36]

ಬಹಮನಿ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ[37] ಬಿಜಾಪುರ ನೆಯ್ಗೆ ಕೈಗಾರಿಕೆಯ ಒಂದು ಪ್ರಸಿದ್ಧ ಕೇಂದ್ರವೆನಿಸಿತ್ತು. ಅಲ್ಲದೆ, ಇಲ್ಲಿ ತಯಾರಾದ ಬಟ್ಟೆಗಳು ಪರ್ಷಿಯ ಅರೇಬಿಯ ಮತ್ತು ಪೂರ್ವ ಆಫ್ರಿಕ ದೇಶಗಳ ಮಾರುಕಟ್ಟೆಗಳನ್ನು ತಲುಪುತ್ತಿದ್ದುವು. 'ಕ್ಯಾಲಿಕೋ' ಮತ್ತು 'ಮಸ್ಲಿನ್' ಬಟ್ಟೆಗಳು ವಿಶೇಷವಾಗಿ ತಯಾರಾಗುತ್ತಿದ್ದುವು. ಪೋರ್ಚುಗಲ್‌ನ ವರ್ತಕರು ತಾವೇ ಬಿಜಾಪುರಕ್ಕೆ ಬಂದು ಈ ಬಟ್ಟೆಗಳನ್ನು ಕೊಂಡುಹೋಗುತ್ತಿದ್ದರು, ಎಂಬುದು ಬಾರ್ಬೋಸನ ಹೇಳಿಕೆ.[38] ಹಾಗೆಯೇ ರಾಯಚೂರಿನಲ್ಲಿ ತಯಾರಾಗುತ್ತಿದ್ದ 'ಪಗಡಿ'ಗಳು ಪ್ರಸಿದ್ಧವೆನಿಸಿದುವು; ಬಹಮನಿ ರಾಜ್ಯದ ಅಮೀರರುಗಳಿಂದ ಇವಕ್ಕೆ ಬೇಡಿಕೆ ಬಹಳವಾಗಿತ್ತು.[39]

ಹತ್ತಿ, ರೇಷ್ಮೆ, ಉಣ್ಣೆ ಮುಂತಾದ ಬಟ್ಟೆಗಳಿಗೆ ಬಣ್ಣ ಹಾಕಲು ಕೆಲವು ಸಸ್ಯಸಂಬಂಧವಾದ ಬಣ್ಣಗಳನ್ನು ಉಪಯೋಗಿಸುತ್ತಿದ್ದರು: ಉದಾ: ನೀಲಿ (Indigo)[40], ಕೆಂಪು (ಕುಸುಮ್ಬೆ–Safflower), ಇತ್ಯಾದಿ. ಈ ಉದ್ಯಮದ ಮೇಲೆ ತೆರಿಗೆಯನ್ನು ವಿಧಿಸುತ್ತಿದ್ದಂತೆ ಕಾಣುತ್ತದೆ. ಶಾಸನಗಳಲ್ಲಿ ಕಾಣುವ ತೆರಿಗೆಗಳ ಪಟ್ಟಿಯಲ್ಲಿ, 'ಬಣ್ಣ'[41] 'ಕುಸುಮ್ಬೆಯ ಪೂವಿನಾಯ'[42] ಮುಂತಾದವು ಕಾಣಸುತ್ತವೆ. ಬಟ್ಟೆಗಳಿಗೆ ಬಣ್ಣ ಹಾಕುತ್ತಿದ್ದ 'ರಜುಕ'ನ ಉಲ್ಲೇಖ ಮಿತಾಕ್ಷರಾದಲ್ಲಿದೆ.[43]

ಮತ್ತೊಂದು ಅಂಶವನ್ನು ಇಲ್ಲಿ ಗಮನಿಸಬಹುದು. ಆ ಕಾಲದ ಕೆಲವು ಗ್ರಂಥಗಳಲ್ಲಿ[44], ಕಸೂತಿ ಕೆಲಸ (embroidering) ಹಾಗೂ ಚಿತ್ರ ಕೆಲಸಗಳನ್ನು (designing) ಮಾಡಿದ ಬಟ್ಟೆಗಳ ಪ್ರಸ್ತಾಪವಿದೆ. ಅಂತಹ ಬಟ್ಟೆಗಳನ್ನು 'ಕಾರ್ಮಿಕಂ' ಎಂದು ಕರೆಯುವ ವಿಜ್ಞಾನೇಶ್ವರ, ಅವುಗಳ ಮೇಲೆ ಚಕ್ರ, ಸ್ವಸ್ತಿಕ, ಮುಂತಾದ ಚಿತ್ರಗಳಿರುತ್ತವೆಂದು ತಿಳಿಸುತ್ತಾನೆ. ಆನೆ, ಕುದುರೆ, ರಥ, ಸ್ವಸ್ತಿಕ ಮುಂತಾದ ಚಿತ್ರಗಳಿರುವ ಬಟ್ಟೆಗಳ ಬಗ್ಗೆ ಸೋಮೇಶ್ವರ ಪ್ರಸ್ತಾಪಿಸುತ್ತಾನೆ. ಅಲ್ಲದೆ, ಕೆಲವುಗಳ ಮೇಲೆ ಅಕ್ಷರಗಳೂ ಕಾಣಸುವುದರಿಂದ, ಪುಸ್ತಕಗಳಂತೆ (ಪುಸ್ತಕೈರಿವ ಸಾಕ್ಷರೈಃ) ಕಾಣುತ್ತಿದ್ದವಂತೆ!

---

36 ದಾಸಿಮಾರ್ಯ ಪ್ರಶಸ್ತಿ, ಪು. ೧೩೨, ವ. ೧೪೮

37 S. K. Sinha, *Op. cit.*, p. 152

38 *Ibid.*

39 *Ibid.*

40 *Mitāksarā*, II, 293

41 *EC*, IX, Cp. 66 (128 (A.D)·

42 *Ibid*, V. Bl. 236; VII, Sk. 112 (both of 1139 A.D.)

43 *Mitākṣarā*, I. 164, 187; ಅಭಿಲಷಿತಾರ್ಥ ಚಿಂತಾಮಣಿ, III., ೧೦೬೮ನ್ನೂ ನೋಡಬಹುದು.

44 S. Gururajachar, *op. cit*, pp. 72, 93 (notes)

ಇಷ್ಟೇ ಅಲ್ಲ; ಕೆಲವು ವಸ್ತ್ರಗಳ ಮೇಲೆ ಸರಳರೇಖೆ, ವಕ್ರರೇಖೆ, ವೃತ್ತ, ಚತುರ್ಭುಜ ಮುಂತಾದವುಗಳ, ಹಾಗೂ ಹೂವುಮೊಗ್ಗುಗಳ ಚಿತ್ರಗಳನ್ನು ಕಾಣಬಹುದಾಗಿತ್ತು. ಕೆಲವು ಬಟ್ಟೆಗಳ ಮೇಲೆ ಆನೆ (ಗಜಾವಳಿ), ಸಿಂಹ (ಸಿಂಹಾವಳಿ), ಜಿಂಕೆ (ಮೃಗಾವಳಿ), ಹಂಸ (ಹಂಸಾವಳಿ), ಗಿಡ-ಬಳ್ಳಿಗಳು (ಲತಾವಳಿ) ಇವುಗಳ ಚಿತ್ರಗಳು ಮುದ್ರಿತವಾಗಿರುತ್ತಿದ್ದುವು ಎಂಬುದು ಕವಿ ಹರಿಹರನ ಹೇಳಿಕೆ.

ಇಲ್ಲಿ ಹೊಲಿಗೆ ಕೆಲಸದ ಬಗ್ಗೆ ಒಂದು ಮಾತನ್ನು ಹೇಳಬಹುದು. ಚಿಪ್ಪಿಗರು ಕೈಸೂಜಿ ಮತ್ತು ದಾರಗಳನ್ನು ಉಪಯೋಗಿಸಿ, ಬಟ್ಟೆಗಳನ್ನು (ಉದಾ: ಅಂಗಿ, ಕೋಟು, ತಲೆಯ ಮೇಲೆ ಧರಿಸುವ ಉಡುಪುಗಳು ಇತ್ಯಾದಿ ಹೊಲಿಯುತ್ತಿದ್ದರು. ಅಲ್ಲದೆ, ಇವರ 'ಶ್ರೇಣಿ'ಯಾದ 'ಚಿಪ್ಪಿಗ-ಗೊತ್ತಳಿ'ಯನ್ನು ವರ್ಣಿಸುವ ಬೇಲೂರಿನ ಶಾಸನವೊಂದು[45] ಈ ಚಿಪ್ಪಿಗ(=ಸಿಪ್ಪಿಗ)ರನ್ನು "ವಸ್ತ್ರ ಖಂಡಿತ ಶೃಂಗಾರ ಚಿತ್ರೋದ್ಭವರ್", "ಅನೇಕ ವಸ್ತ್ರ ಖಂಡಿತ ಶೃಂಗಾರ ವಿದ್ಯಾ ಪ್ರವೀಣರ್", ಮುಂತಾಗಿ ಪೊಗಳುತ್ತದೆ. ವೀರಶೈವ ವಚನಕಾರ ಸೂಜಿಕಾಯಕದ ರಾಮಿತಂದೆ (ಕ್ರಿ.ಶ. ಸು. ೧೧೬೦)ಯ ಹೆಸರನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.[46]

ಬೆಲ್ಲ ಮತ್ತು ಸಕ್ಕರೆ

ಪ್ರಾಚೀನ ಭಾರತದ ಪ್ರಮುಖ ಕೈಗಾರಿಕೆಗಳಲ್ಲಿ ಬೆಲ್ಲ ಮತ್ತು ಸಕ್ಕರೆ ಉತ್ಪಾದನೆಯೂ ಒಂದು.[47] ವೇದಗಳಲ್ಲಿ ಕಬ್ಬಿನ (ಇಕ್ಷು) ಉಲ್ಲೇಖವಿದ್ದರೂ ಅದರ ಹಾಲಿನಿಂದ ಸಕ್ಕರೆ ಮಾಡುವ ವಿಧಾನ ಬಹುಶಃ ಆ ಕಾಲದಲ್ಲಿ ತಿಳಿದಿರಲಿಲ್ಲವೆಂದು ಹೇಳಲಾಗಿದೆ. ಪ್ರಾಚೀನಕಾಲದಲ್ಲಿ ಕಬ್ಬಿನ ಹಾಲನ್ನು ಮರಳಿಸಿ ತಯಾರು ಮಾಡುತ್ತಿದ್ದ ಪದಾರ್ಥಗಳಲ್ಲಿ ಬೆಲ್ಲವೇ (ಗುಡ) ಮೊದಲನೆಯದೆಂದು ತಿಳಿದುಬರುತ್ತದೆ.

ಸುಪ್ರಸಿದ್ಧ ವೈದ್ಯಗ್ರಂಥಕರ್ತನಾದ ಚರಕ[48] ಕಬ್ಬಿನ ಹಾಲಿನಿಂದ ತಯಾರಾಗುತ್ತಿದ್ದ ಐದು ಪದಾರ್ಥಗಳ ಹೆಸರುಗಳನ್ನು ಕೊಡುತ್ತಾನೆ: 'ಕ್ಷುದ್ರ-ಗುಡ', 'ಗುಡ', 'ಮತ್ಸ್ಯಂಡೀ', 'ಖಂಡ' ಮತ್ತು 'ಶರ್ಕರಾ': 'ಶರ್ಕರಾ' ಎಲ್ಲಕ್ಕಿಂತಲೂ ಹೆಚ್ಚು ಪರಿಶುದ್ಧವಾದ್ದು ಹಾಗೂ ಉತ್ತಮವಾದ್ದು. ಕೌಟಿಲ್ಯ ಮತ್ತು ಸುಶ್ರುತರೂ[49] ಈ ಐದು ಪದಾರ್ಥಗಳನ್ನೂ ಇದೇ ಕ್ರಮದಲ್ಲಿ ವಿವರಿಸಿರುವುದು ಗಮನಾರ್ಹ. ೧೬ನೆಯ ಶತಮಾನದ 'ಭಾವಪ್ರಕಾಶ'[50] ಎಂಬ ಗ್ರಂಥದಲ್ಲಿ ಈ ಐದರ ಜೊತೆಗೆ 'ಪುಷ್ಪಸಿತಾ' ಮತ್ತು 'ಸಿತೋಪಲಾ' ಎಂಬ ಇನ್ನೆರಡು ಹೆಸರುಗಳನ್ನೂ ಕಾಣಬಹುದು. ಮುಖ್ಯವಾಗಿ, ಕಬ್ಬಿನ ಹಾಲನ್ನು ಮರಳಿಸಿ, ಶೋಧಿಸಿ, ಅಪರಿಶುದ್ಧವಾದ ಪದಾರ್ಥವನ್ನು ಶುದ್ಧಿಗೊಳಿಸಿ, ಸಕ್ಕರೆಯನ್ನು ಮಾಡುವ ವಿಧಾನ ಚರಕ ಮತ್ತು ಸುಶ್ರುತರ ಕಾಲದಲ್ಲೇ ಬಳಕೆಯಲ್ಲಿತ್ತು ಎಂದು ಸ್ಪಷ್ಟವಾಗುವುದು.

ವಾಣಿಜ್ಯ ಮಹತ್ತ್ವವುಳ್ಳ ಕಬ್ಬನ್ನು ಕರ್ನಾಟಕದಲ್ಲಿ ಅದಕ್ಕೆ ಬೇಕಾದ ಮಣ್ಣು, ಹೆಚ್ಚು ನೀರಿನ ಸೌಕರ್ಯಗಳಿರುವ ಹಲವೆಡೆಗಳಲ್ಲಿ ಬೆಳೆಯುತ್ತಿದ್ದರು. ಆ ಕಾಲದ ಶಾಸನಗಳಲ್ಲಿ ಹಾಗೂ ಸಾಹಿತ್ಯಕ ಕೃತಿಗಳಲ್ಲಿ ಕಬ್ಬಿನ ತೋಟದ ಸುಂದರವಾದ ವರ್ಣನೆಗಳಿವೆ.[51] ತುಳುನಾಡಿನ ಬಾರಕೂರಿನಲ್ಲಿದ್ದ ಕಬ್ಬಿನ ಬೆಳೆಯನ್ನು ಕಂಪು, ಇಬ್ನಬಾಟೂಟ ಮುಕ್ತಕಂಠದಿಂದ ಹೊಗಳಿರುವುದನ್ನು ಗಮನಿಸಬಹುದು.[52]

---

45 *E.C.*, V, Bl. 236 (1139 A.D.)

46 ಆರ್. ನರಸಿಂಹಾಚಾರ್, ಕರ್ಣಾಟಕ ಕವಿ ಚರಿತೆ, I. ಪು. ೨೨೨

47 ನೋಡಿ : "Sugar Industry in Ancient India," by J. C. Roy, in *Journal of the Bihar and Orissa Research Sociesy*, Patna–Vol IV, Pt. IV (1918), pp. 435–454

48 *Ibid.*, p. 439

49 *Ibid.*, p. 440

50 *Ibid.*

51 ಇದರ ಚರ್ಚೆಗೆ ನೋಡಿ : S. Gururajachar, *op. cit.*, pp. 42, 60 (n. 25–27), etc.

52 *Ibid.*, p. 60 (n. 25)

ಬೆಲ್ಲ ಮತ್ತು ಸಕ್ಕರೆಗಳನ್ನು ಉತ್ಪಾದಿಸುತ್ತಿದ್ದ ಈ ಉದ್ಯಮದ ಮೇಲೆ 'ಆಲೆದೆಱೆ'ಯೆಂಬ ತೆರಿಗೆಯನ್ನು ವಿಧಿಸುತ್ತಿದ್ದರು. ಸಕ್ಕರೆಯನ್ನು ಮಾಡುತ್ತಿದ್ದುದರ ಪ್ರಸ್ತಾಪ ಅಕ್ಕಮಹಾದೇವಿಯ ವಚನವೊಂದರಲ್ಲಿದೆ:

ಸಂದ ಸಂದ ಕಡಿದ ಕಬ್ಬು ಗಾಣದಲಿಸಿಕ್ಕಿ ಬೆಂದು
ಸಕರೆಯಾಗಿ ನೊಂದೆನೆಂದು ಸವಿಯ ಬಿಟ್ಟತ್ತೆ?[53]

ಸಕ್ಕರೆ ನೋಡಲು ಮರಳಿನಂತೆ ಕಾಣುತ್ತಿತ್ತು. "ಹಾಲ ತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು."[54]

ಸಕ್ಕರೆ ಪುಡಿಯಂತಿತ್ತು. ಅದನ್ನು ಪೊಟ್ಟಣಗಳಲ್ಲಿ ಕಟ್ಟಿರುತ್ತಿತ್ತು; ಏಕೆಂದರೆ, ಅವರಿಗೆ ಸಕ್ಕರೆ ಅಚ್ಚು ಮಾಡಲು ತಿಳಿದಿರಲಿಲ್ಲ–ಎಂದು ಬಾರ್ಬೋಸನ ಹೇಳಿಕೆ.[55]ಆದರೆ, ವಾರ್ಥೆಮಾ (Varthama) ಎಂಬ ಇಟಾಲಿಯನ್ ಪ್ರವಾಸಿ[56] ಭಟ್ಕಳದಲ್ಲಿ ಹೇರಳವಾಗಿದ್ದ ಸಕ್ಕರೆಯನ್ನು ಪ್ರಸ್ತಾಪಿಸುತ್ತ, ಕಲ್ಲುಸಕ್ಕರೆಯನ್ನು[57] ಮಾಡುತ್ತಿದ್ದರು, ಎನ್ನುತ್ತಾನೆ. ಭಟ್ಕಳದಿಂದ ಹೊರದೇಶಗಳಿಗೆ ಸಕ್ಕರೆಯನ್ನು ರಫ್ತು ಮಾಡುತ್ತಿದ್ದರು.[58] ಮಾರುಕಟ್ಟೆಯನ್ನು ತಲುಪುವ ಬೆಲ್ಲ ಮತ್ತು ಸಕ್ಕರೆಗಳ ಮೇಲೆ ಸುಂಕವನ್ನು ವಿಧಿಸುತ್ತಿದ್ದರು.[59]

ಎಣ್ಣೆ ಉತ್ಪಾದನೆ

ದೇಶದ ಹಲವಾರು ಭಾಗಗಳಲ್ಲಿ ಕಂಡುಬರುವ ಪ್ರಮುಖ ಕೈಗಾರಿಕೆಗಳಲ್ಲಿ ಎಣ್ಣೆ ಉತ್ಪಾದನೆಯೂ ಒಂದು. ಮನೆಗಳಲ್ಲಿ ಪ್ರತಿನಿತ್ಯದ ಬಳಕೆಗೆ ಮಾತ್ರವಲ್ಲದೆ, ನೂರಾರು ದೇವಸ್ಥಾನಗಳಲ್ಲಿ 'ನಂದಾದೀವಿಗೆ'ಗಳಿಗೆ ಸದಾ ಆವಶ್ಯಕವಾದ ಎಣ್ಣೆಯನ್ನು ತಯಾರಿಸುತ್ತಿದ್ದ ಈ ಉದ್ಯಮದ ಮೇಲೆ 'ಗಾಣದಸುಂಕ'[60]ವನ್ನು ವಿಧಿಸುತ್ತಿದ್ದರು.

ಎಣ್ಣೆ ತೆಗೆಯುವವರನ್ನು ಮಿತಾಕ್ಷರಾವು[61] 'ಚಕ್ರೀ', 'ಚಾಕ್ರಿಕ' ಎಂದು ಕರೆದರೆ, ಶಾಸನಗಳು ಅವರನ್ನು 'ತೆಲ್ಲಿಗರ್' (ಸಂ. ತೈಲಿಕ) ಎಂದು ಕರೆದಿವೆ. ಹಲವಾರು ಶಾಸನಗಳು [62] ಇವರನ್ನು 'ಐವತ್ತು ಒಕ್ಕಲುಗಳು' ಎಂದು ಕರೆದಿರುವುದುಂಟು. ಆದರೆ, ಕ್ರಿ.ಶ. ೧೧೭೩ರ ಬೇಲೂರಿನ ಶಾಸನ[63] ಈ

---

53 ಮಹಾದೇವಿಯಕ್ಕನವರ ವಚನಗಳು, ೬೭, ಪು. ೨೩

54 ಬಸವಣ್ಣನವರ ಷಟ್ಸ್ಥಳದ ವಚನಗಳು, ೬೭, ಪು. ೨೩
ನೋಡಿ: ಧರ್ಮಾಮೃತ, II, ೧೦.೪೩, ಪು. ೧೮–"ಸಕ್ಕರೆಯನೊಲ್ಲದೆ ಮಳಲಂ ಮೆಲ್ವ".

55 T. V. Mahalingam, *Economic Life in the Vijayanagara Empire*, p. 93

56 *Ibid*

57 ಅಲ್ಲಮನ ವಚನ ಚಂದ್ರಿಕೆ, ೧೨೯೯, ಪು. ೩೬೬: ಈ ವಚನದಲ್ಲಿ ಬರುವ 'ಸಕ್ಕರೆಯ ದಂಡ'ವೂ ಬಹುಶಃ ಕಲ್ಲುಸಕ್ಕರೆಯನ್ನೇ ಸೂಚಿಸುವಂತಿದೆ.

58 A. Appadorai, *ap cit.*, p. 531

59 *JBBRAS*, X, No. VII (1229 A.D.) ; *E.C.* IX, DB. 31 (1267 A.D.), etc.

60 *EC*, V, Cn. 151 (c. 1200 A.D.); VIII, I Sb. 137 (1272 A.D.), etc.

61 ಮಿತಾಕ್ಷರಾ, I. ೧೪೧, ೧೬೫

62 *EC* VIII, Sh, 170 (1126 A.D.); Bk 51 of 1928–29 (1207 A.D.)

63 *EC* V, Bl 114

ತೆಲ್ಲಿಗರನ್ನು '೧೦೦೦ ಒಕ್ಕಲುಗಳು' ಎಂದು ಕರೆಯುತ್ತದೆ. ಈ ಸಂಖ್ಯೆಗಳ ಮಹತ್ವವೇನೋ, ಅರ್ಥವಾಗುವಂತಿಲ್ಲ. ಅದೇನೇ ಇರಲಿ, ತೆಲ್ಲಿಗರು ತಮ್ಮದೇ ಆದ 'ಶ್ರೇಣಿ'ಯನ್ನು ಹೊಂದಿದ್ದು, ಸಮಾಜದಲ್ಲಿ ಸಾಕಷ್ಟು ಪ್ರಭಾವಶಾಲಿಗಳಾಗಿದ್ದರು. ದೇವಾಲಯಗಳನ್ನು ಕಟ್ಟಿಸಿ, ದಾನ-ಧರ್ಮಗಳನ್ನು ಮಾಡುತ್ತಿದ್ದರು.[64] ಇವರನ್ನು 'ಗಾಣಿಗ'[65] ಎಂದೂ ಕರೆಯುತ್ತಿದ್ದರು.

ಎಳ್ಳು, ಹರಳು ಮುಂತಾದ ಎಣ್ಣೆಯ ಬೀಜಗಳನ್ನು ಗಾಣದಲ್ಲಿ ಅರೆದು, ಅವುಗಳ ಎಣ್ಣೆಯನ್ನು ತೆಗೆಯುತ್ತಿದ್ದರು.[66] ಹಾಗೆಯೇ ತೆಂಗಿನ ಎಣ್ಣೆಯನ್ನೂ ತೆಗೆಯುತ್ತಿದ್ದರು.[67] ಕೆಲವು ಸುಗಂಧ ದ್ರವ್ಯಗಳನ್ನು ಬೆರೆಸಿ ಸುಗಂಧದೆಣ್ಣೆಯನ್ನೂ ಮಾಡುತ್ತಿದ್ದಂತೆ ಕಾಣುತ್ತದೆ.[68]

ಎಣ್ಣೆಯನ್ನು ಅರೆಯುತ್ತಿದ್ದ ಯಂತ್ರವು, ಸಾಮಾನ್ಯವಾಗಿ 'ಕಲ್ಲುಗಾಣ'[69]ವಾಗಿರುತ್ತಿತ್ತು. ಮೂರು ಬಗೆಯ ಗಾಣಗಳಿದ್ದುವು:

೧ ಕೈಗಳಿಂದ ತಿರುಗಿಸಬಹುದಾದಂತಹ 'ಕೈಗಾಣ'[70]
೨ ಎತ್ತುಗಳು ತಿರುಗಿಸುತ್ತಿದ್ದಂತಹ ಎತ್ತುಗಾಣ[71]
೩ ಕಾಲುಗಳಿಂದ ತುಳಿದು ತಿರುಗಿಸುವಂತಹ 'ಮೆಟ್ಟುಗಾಣ'.[72]

ಇನ್ನೂ ಕೆಲವು ಕೈಗಾರಿಕೆಗಳನ್ನು ಹೆಸರಿಸಬಹುದು. ಕುಂಬಾರರು (ಸಂ. ಕುಂಭಕಾರ) ಮಣ್ಣಿನಿಂದ ಮತ್ತು ಚಕ್ರದ ಸಹಾಯದಿಂದ ಹಲವಾರು ಪಾತ್ರೆ-ಪದಾರ್ಥಗಳನ್ನು ಮಾಡಿ 'ಆವ್ರಗೆ'ಗಳಲ್ಲಿ ಸುಟ್ಟು ತಯಾರು ಮಾಡುತ್ತಿದ್ದರು. ಮಣ್ಣಿನ ಪಾತ್ರೆ, ತಟ್ಟೆ ಮುಂತಾದುವು ಸಾಮಾನ್ಯವಾಗಿ ಎಲ್ಲೆಡೆಯಲ್ಲಿಯೂ ಬಳಕೆಯಲ್ಲಿದ್ದುವು. ಸೋಮೇಶ್ವರನು,[73] ರಾಜನ 'ಅನ್ನಭೋಗ'ವನ್ನು ವಿವರಿಸುತ್ತಾ, ಅಕ್ಕಿಯಿಂದ ಮಾಡುವ ಅನ್ನ ಮೊದಲಾದುವುಗಳನ್ನು ಮಣ್ಣಿನ ಪಾತ್ರೆಗಳಲ್ಲೂ (ಮೃಜ್ಜಾತಾಯಾಂ ಸ್ಥಾಲ್ಯಾಂ) ಮಾಡಬಹುದು ಎನ್ನುವನು. ಅಲ್ಲದೆ ಮಣ್ಣಿನಿಂದ ಕೆಲವು ಆಟದ ಸಾಮಾನುಗಳು, ಬೊಂಬೆ[74] ಮುಂತಾದವುಗಳನ್ನು ಮಾಡಲಾಗುತ್ತಿತ್ತು. 'ಕುಂಬಾರದೆಜ್ಜೆ'[75] ಈ ಉದ್ಯಮದ ಮೇಲೆ ಹಾಕುತ್ತಿದ್ದ ತೆರಿಗೆ.

---

[64] *BKI*, I ii, 144 (1098 A.D.) ; *EC*, VI, Kd. 99 (1143 A.D.) ; *EI*, XX A (1167 A.D.) ; B (11 7 A.D.), etc.

[65] *EC*, XII, Ch. 2 (1261 A.D.)

[66] ನೋಡಿ: "ಎಳ್ಳಂ ಗಾಣದೊಳಿಕ್ಕಿ ಒಳಿಯೆ ಬಳಿಕ್ಕೆಣ್ಣೆಯಕ್ಕುಂ"–ಧರ್ಮಾಮೃತ, I, 9.120 ಪು. 442 ; *EC*, III, My. 9 (1196 A.D.)—'ಹರಳೆಯ ಯೆಣ್ಣೆ'

[67] *EC*, V, Bl. 155

[68] "ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ, ಎಣ್ಣೆಗೆ ಪರಿಮಳ ವೇಧಿಸದು."–ಅಲ್ಲಮನ ವಚನ ಚಂದ್ರಿಕೆ, ೧೮೪, ಪು. ೨೩೯
ಬಸವರಾಜದೇವರ ರಗಳೆ, ಪು. ೮೭: 'ಕಂಮೆಣ್ಣೆ'.

[69] *EC* III, Nj. 150 (1445 A.D); *IA*, XII, p. 97

[70] *EC* V, Hn 54 (C. 1176 A.D.) ; VI, Kd. 36 (1203 A.D.)

[71] *Ibid.*, V, Ak. 172 (1163 A.D.) ; III, My. 9 (1196 A.D.)

[72] *Ibid*, V, Bl. 114 (1173) ; Ak. 90 (1189 A.D.)

[73] ಅಭಿಲಷಿತಾರ್ಥ ಚಿಂತಾಮಣಿ, ೧೮೩೨

[74] ಹರಿಹರ, ಪಂಪಾಶತಕ, ೯೮: 'ಮಣ್ಣ ಬೊಂಬೆಗಳ್'

[75] *EC*, Hs. 137 (1162 A.D.)

ಗಾಜಿನ ಬಳೆಗಳು ಮತ್ತು ಮಣಿಗಳನ್ನು ಮಾಡುತ್ತಿದ್ದುದು ಮತ್ತೊಂದು ಉದ್ಯಮ. ಬಳೆಗಳು ಹಿಂದೂ ನಾರಿಯರ ಮಂಗಳ ಸೂಚಕವಷ್ಟೆ[76]. ಕ್ರಿ.ಶ. ೧೨೬೧ ಶಾಸನವು[77] ಸೇನಹಳ್ಳಿ, ಕಲ್ಲಕುಂದರಗೆ ಮತ್ತು ನಿಟ್ಟೂರು–ಈ ಸ್ಥಳಗಳನ್ನು 'ಬಳೆಗಾರ ಸ್ಥಳ'ವೆಂದು ಬಣ್ಣಿಸುತ್ತದೆ. ಕನ್ನಡದ ಕವಿರತ್ನನೆನಿಸಿರುವ ರನ್ನ. 'ಬಳೆಗಾರ ಕುಲ' ಸಂಜಾತ ಎಂಬಂಶವನ್ನು ಇಲ್ಲಿ ಸ್ಮರಿಸಬಹುದು. ನಯಸೇನನ ಕೃತಿಯಲ್ಲಿ[78] 'ಕಾಚಿನ ತುಡಿಗೆ'.[79] 'ಕಾಚಿನ ಮಣಿಗಳ್' ಇವುಗಳ ಪ್ರಸ್ತಾಪವಿದೆ.ಪೇಟೆಗಳಲ್ಲಿ ಮಾರಾಟಮಾಡುತ್ತಿದ್ದ ಬಳೆಗಳ ಮೇಲೆ ಸ್ವಲ್ಪ ತೆರಿಗೆಯನ್ನು ತೆರಬೇಕಾಗಿತ್ತು.[80]

ಇನ್ನು ಚಮ್ಮಾರರ ವಿಷಯ. 'ಸಮ್ಮಗಾರ' (ಸ . ಚರ್ಮಕಾರ)ರು, ಹಲವು ಬಗೆಯ ಚರ್ಮಗಳಿಂದ ವಿಧವಿಧವಾದ ಪಾದರಕ್ಷೆಗಳನ್ನು ಮಾಡುತ್ತಿದ್ದರು.[81] ಈ ಉದ್ಯಮಿಗಳ 'ಶ್ರೇಣಿಯ ಉಲ್ಲೇಖ ಮಿತಾಕ್ಷರಾದಲ್ಲಿದೆ.[82] ಜನರು ಧರಿಸುತ್ತಿದ್ದ ಪಾದರಕ್ಷೆಗಳ ವಿವರಣೆ, ವಿದೇಶಿ ಪ್ರವಾಸಿಗರ ಬರಹಗಳಲ್ಲಿ ಕಂಡುಬರುತ್ತದೆ.[83] ಅಲ್ಲದೆ ಚರ್ಮದಿಂದ ನೀರು ತುಂಬಿಡುವ ಚೀಲ (ದೃತಿ), ಹಗ್ಗ ಮುಂತಾದುವುಗಳನ್ನೂ ಮಾಡುತ್ತಿದ್ದರು.[84] ಆಡು ಮುಂತಾದ ಪ್ರಾಣಿಗಳ ಚರ್ಮದಿಂದ ಒಂದು ಬಗೆಯ ಬಟ್ಟೆಯನ್ನು ಮಾಡುತ್ತಿದ್ದರು ಎಂಬುದು ವಿಜ್ಞಾನೇಶ್ವರನ ಹೇಳಿಕೆ.[85]

---

76 ಸೋಮೇಶ್ವರ ಶತಕ, ೨೬: 'ಬಳೆಯೇ ಸರ್ವ ವಿಭೂಷಣಕ್ಕೆ ಮೊದಲೈ'.

77 *KI*, II, 40

78 ಧರ್ಮಾಮೃತ, I, 8.84 ; II, 12.24

79 ಪಂಪಭಾರತ (೨.೭೬)ದಲ್ಲಿ ಗಾಜಿನ ಬಳೆಗಳ ಪ್ರಸ್ತಾಪವಿದೆ ಎನ್ನಲಾಗಿದೆ–ಎಂ. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೩೭

80 *EC*, XII, Ck, 21 (1160 A.D.)

81 ಅಭಿಲಷಿತಾರ್ಥ ಚಿಂತಾಮಣಿ. III. 1000 ; *EI*. XIX, pp. 30 ff.

82 ಮಿತಾಕ್ಷರಾ, II. 30

83 T V. Mahalingam, *Economic Life in the Vijayanagara Empire*, p. 103

84 ಮಿತಾಕ್ಷರಾ, III 268 ; ಬ್ರಹ್ಮಶಿವ, ಸಮಯ ಪರೀಕ್ಷೆ, 14. 96 ; 14. 152 ; *MAR* (1913), p. 36, Para. 86, etc.

85 ಮಿತಾಕ್ಷರಾ, I. 182

ಕರ್ನಾಟಕದಲ್ಲಿ ಸಣ್ಣ ದೊಡ್ಡ ಕೈಗಾರಿಕೆಗಳ ಬೆಳವಣಿಗೆಗೆ ಅನುಕೂಲಕರವಾದ ಪರಿಸ್ಥಿತಿಯುಂಟು. ವಿದ್ಯುತ್ತು, ಖನಿಜಸಂಪತ್ತು, ವ್ಯವಸಾಯೋತ್ಪನ್ನ, ವಾಯುಗುಣ, ಜನಬಲ—ಎಲ್ಲವೂ ಈ ರಾಜ್ಯದಲ್ಲಿ ಧಾರಾಳ. ಖನಿಜಗಳ ವಿಚಾರದಲ್ಲೂ ಕರ್ನಾಟಕಕ್ಕೆ ಕೊರತೆಯಿಲ್ಲ. ರಾಜ್ಯದ ಭೂಗರ್ಭದಲ್ಲಿ ೨೦೦–೨೫೦ ಕೋಟಿ ಟನ್ ಉತ್ತಮ ದರ್ಜೆಯ ಕಬ್ಬಿಣದ ಅದುರೂ ೧೦೦–೧೨೦ ಲಕ್ಷ ಟನ್ ಮ್ಯಾಂಗನೀಸ್, ಬಾಕ್ಸೈಟ್, ಮ್ಯಾಗ್ನಸೈಟ್, ಕ್ರೋಮೈಟ್, ಸುಣ್ಣಕಲ್ಲು, ಕೊರಂಡಂ, ಎಮರಿ, ಆಸ್ಬೆಸ್ಟಸ್, ಜೇಡಿಮಣ್ಣು ಮುಂತಾದವೂ ಇವೆ. ನೆಲದಿಂದ ತೆಗೆಯುತ್ತಿರುವ ಕಬ್ಬಿಣದ ಅದುರು ಮತ್ತು ಮ್ಯಾಂಗನೀಸುಗಳಲ್ಲಿ ಬಹುಭಾಗ ಹೊರ ದೇಶಗಳಿಗೆ ನಿರ್ಯಾತವಾಗುತ್ತಿದೆ.

ಕರ್ನಾಟಕದ ಕೈಗಾರಿಕೆಗಳಿಗೆ ಉಪಯುಕ್ತವಾದ ಎರಡು ಮುಖ್ಯ ವ್ಯವಸಾಯೋತ್ಪನ್ನಗಳೆಂದರೆ ಕಬ್ಬು ಮತ್ತು ಹತ್ತಿ.

ಕನ್ನಡ ವಿಶ್ವಕೋಶ, ಸಂ. ೪, ಪು. ೩೯

ಡಾ. ಆಂಡ್ರ್ಯೂ ಎಂ. ಕಾಮಾರ್ಕ್

ವಾಯುಗುಣ ಮತ್ತು ಆರ್ಥಿಕ ಬೆಳವಣಿಗೆ*

ಆರ್ಥಿಕ ಅಭಿವೃದ್ಧಿಯ ಆಧಾರದ ಮೇಲೆ ಪ್ರಪಂಚದ ಎಲ್ಲ ದೇಶಗಳನ್ನೂ ಅವುಗಳ ಸ್ಥೂಲ ರಾಷ್ಟ್ರೀಯ ಉತ್ಪನ್ನಗಳಿಗೆ ಅನುಗುಣವಾಗಿ ಶ್ರೀಮಂತ ದೇಶಗಳು, ಮಧ್ಯಮ ದೇಶಗಳು, ಬಡ ದೇಶಗಳು ಮತ್ತು ಅತ್ಯಂತ ಬಡದೇಶಗಳು ಎಂದು ನಾಲ್ಕು ವರ್ಗಗಳಾಗಿ ವಿಂಗಡಿಸಲಾಗುತ್ತದೆ.

ಭೌಗೋಳಿಕವಾಗಿ ಈ ನಾಲ್ಕು ವರ್ಗದ ದೇಶಗಳ ಹಂಚಿಕೆಯನ್ನು ಗಮನಿಸಿದಾಗ ಪ್ರಪಂಚದ ಅತಿ ಹೆಚ್ಚಿನ ಬಡ ಹಾಗೂ ಅತ್ಯಂತ ಬಡದೇಶಗಳು ಉಷ್ಣವಲಯದಲ್ಲೇ ಕೇಂದ್ರೀಕೃತವಾಗಿರುವುದು ಕಂಡುಬರುತ್ತದೆ. ಖ್ಯಾತ ಅರ್ಥಶಾಸ್ತ್ರಜ್ಞ ಜೆ. ಕೆ. ಗಾಲ್‌ಬ್ರೈತರ ಮಾತಿನಲ್ಲಿ, "ಭೂಗೋಳದಲ್ಲಿ ಭೂಮಧ್ಯ ರೇಖೆಯ ಸುತ್ತಲೂ ಒಂದೆರಡು ಸಾವಿರ ಮೈಲಿಗಳ ವಿಸ್ತಾರದ ಪಟ್ಟಿಯೊಂದನ್ನು ಗುರುತಿಸಿದರೆ ಆ ಇಡೀ ಪ್ರದೇಶದಲ್ಲಿ ಅಭಿವೃದ್ಧಿ ಹೊಂದಿದ ಯಾವ ದೇಶವನ್ನೂ ಕಾಣಲು ಸಾಧ್ಯವಿಲ್ಲ." ಎಲ್ಲೆಡೆಯಲ್ಲೂ ಜೀವನ ಮಟ್ಟ ಕಡಿಮೆ ಮತ್ತು ಆಯುಃ ಪ್ರಮಾಣ ಅಲ್ಪ.

ಮೇಲಿನ ಸಂಗತಿಯಿಂದ ಹಲವು ಪ್ರಶ್ನೆಗಳು ಏಳುತ್ತವೆ:

೧ ಇಂದಿನ ಬಡ ದೇಶಗಳೆಲ್ಲ ಉಷ್ಣವಲಯದಲ್ಲೇ ಇವೆ ಎಂಬ ಅಂಶ ಆರ್ಥಿಕ ಅಭಿವೃದ್ಧಿ ಸಮಸ್ಯೆಗಳ ವಿಶ್ಲೇಷಣೆಯ ದೃಷ್ಟಿಯಿಂದ ಪ್ರಮುಖ ಅಂಶವೆ ಅಥವಾ ಅಸಂಬದ್ಧವೆ?

೨ ಇಂದಿನ ಬಡದೇಶಗಳು ಏಕೆ ಹಾಗಿವೆ ಎಂಬುದನ್ನು ಅರಿಯಲು ಆ ಅಂಶ ಪ್ರಮುಖವಾಗಿದೆ ಎಂದರೂ ಆರ್ಥಿಕ ಅಭಿವೃದ್ಧಿಯ ನೀತಿನಿರೂಪಣೆಯ ದೃಷ್ಟಿಯಿಂದ ಅದು ಪ್ರಮುಖವೆ?

೩ ಅದರ ಬಗ್ಗೆ ನಾವು ಮಾಡಬಹುದಾದುದೇನು?

ಅಭಿವೃದ್ಧಿ ಸಮಸ್ಯೆಗಳ ಚರ್ಚೆಗಳಲ್ಲಿ ಆರ್ಥಿಕ ಅಭಿವೃದ್ಧಿಯ ಮೇಲೆ ವಾಯುಗುಣದ ಪ್ರಭಾವವನ್ನು ಇತ್ತೀಚಿನ ವರೆಗೂ ನಿರ್ಲಕ್ಷಿಸುತ್ತ ಬರಲಾಗಿದೆ. ಈ ನಿರ್ಲಕ್ಷ್ಯಕ್ಕೆ ಕೆಲವು ಕಾರಣಗಳನ್ನೂ ಕಾಣಬಹುದು.

ಆರ್ಥಿಕ ಅಭಿವೃದ್ಧಿಯ ಚಿಂತನೆಗಳು ಮತ್ತು ಬರಹಗಳೆಲ್ಲ ಹೆಚ್ಚಾಗಿ ಪಾಶ್ಚಾತ್ಯ ದೇಶಗಳಲ್ಲೇ ನಡೆದಿವೆ. ಸಮಶೀತೋಷ್ಣ ವಲಯದಲ್ಲಿರುವ ಆ ದೇಶಗಳಲ್ಲಿ ಆರ್ಥಿಕ ಚಟುವಟಿಕೆಗಳ ಮೇಲೆ ವಾಯುಗುಣದ ಪ್ರಭಾವ ಕಡಿಮೆ ಇರುವುದರಿಂದ ಸಹಜವಾಗಿ ಅಭಿವೃದ್ಧಿ ಸಿದ್ಧಾಂತಗಳು ಮತ್ತು ಸೂತ್ರಗಳಲ್ಲಿ ವಾಯುಗುಣವನ್ನು ನಿರ್ಲಕ್ಷಿಸಲಾಗಿದೆ ಅಥವಾ ಗೃಹೀತವಾಗಿ ಪರಿಗಣಿಸಲಾಗಿದೆ. ಕೆನೆತ್ ಬೌಲ್ಡಿಂಗರು ಹೇಳುವಂತೆ, "ಅರ್ಥಶಾಸ್ತ್ರದಂತೆ ಆರ್ಥಿಕ ಅಭಿವೃದ್ಧಿಯೂ ಸಮಶೀತೋಷ್ಣ ವಲಯದ ಉತ್ಪನ್ನವಾಗಿದೆ."

**Finance and Development*, Vol. 10, No. 2, June 1973 ಸಂಚಿಕೆಯಲ್ಲಿ ಪ್ರಕಟವಾದ ಲೇಖನದ ಅನುವಾದ

ಶುದ್ಧ ಸಮಶೀತೋಷ್ಣ ವಲಯದ ತಂತ್ರಗಳನ್ನು ವ್ಯವಸಾಯದಲ್ಲಾಗಲಿ ಕೈಗಾರಿಕೆಯಲ್ಲಾಗಲಿ ಅರ್ಥಶಾಸ್ತ್ರದಲ್ಲಾಗಲಿ ಉಷ್ಣವಲಯ ದೇಶಗಳ ಮೇಲೆ ಹೇರುವುದು ಅಪಾಯಕರ. ಆದರೆ ಇಂದಿನ ಬಡ ದೇಶಗಳ ಬಡತನಕ್ಕೆ ಕೇವಲ ವಾಯುಗುಣವೇ ಕಾರಣವೆಂದಾಗಲಿ ಈ ಅಂಶವನ್ನು ನಿವಾರಿಸಿದರೆ ಆ ದೇಶಗಳಲ್ಲಿ ಅಭಿವೃದ್ಧಿಯ ಹೊಳೆ ಹರಿಯುವುದೆಂದಾಗಲಿ ಅರ್ಥವಲ್ಲ. ವಾಯುಗುಣ ಉಷ್ಣ ವಲಯ ದೇಶಗಳಲ್ಲಿ ಮನುಷ್ಯನ ಮತ್ತು ವ್ಯವಸಾಯದ ಮೇಲೆ ಪರಿಣಾಮ ಬೀರುವುದರ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಹೇಗೆ ತಡೆಗಟ್ಟುತ್ತಿದೆ ಎಂಬುದು ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ.

ಉಷ್ಣವಲಯ: ಉಷ್ಣವಲಯದಲ್ಲಿರುವ ದೇಶಗಳೆಂದರೆ, ಆಫ್ರಿಕದ ಅತಿ ಉತ್ತರ ಭಾಗಗಳು ಮತ್ತು ದಕ್ಷಿಣ ಆಫ್ರಿಕ ಇವನ್ನು ಬಿಟ್ಟು ಇಡೀ ಆಫ್ರಿಕ ಖಂಡ; ಅರ್ಜೆಂಟೀನ, ಚಿಲಿ ಮತ್ತು ಉರುಗ್ವೇ ದೇಶಗಳನ್ನು ಬಿಟ್ಟು ಇಡೀ ದಕ್ಷಿಣ ಅಮೆರಿಕ ಖಂಡ; ದಕ್ಷಿಣ ಮೆಕ್ಸಿಕೋವನ್ನೊಳಗೊಂಡು ಮಧ್ಯ ಅಮೆರಿಕ ಮತ್ತು ಕ್ಯಾರಿಬಿಯನ್ ದೇಶಗಳು ಹಾಗೂ ದಕ್ಷಿಣ ಮತ್ತು ಆಗ್ನೇಯ ಏಷ್ಯ ದೇಶಗಳು.

ಉಷ್ಣ ವಾಯುಗುಣದಲ್ಲಿ ಮುಖ್ಯವಾಗಿ ಮೂರು ವಿಧಗಳನ್ನು ಕಾಣಬಹುದು: ೧ ಭೂಮಧ್ಯ ರೇಖೆಯ ೫ ಡಿಗ್ರಿ ಉತ್ತರ ಮತ್ತು ದಕ್ಷಿಣದಲ್ಲಿರುವ ತೇವಯುತ ಭೂಮಧ್ಯರೇಖೆಯ ವಾಯುಗುಣ: ಇಲ್ಲಿ ಉಷ್ಣತೆ, ಮಳೆ ಮತ್ತು ತೇವಾಂಶ ಸತತವಾಗಿರುತ್ತದೆ. ೨ ಒಣ ಭೂಮಧ್ಯರೇಖಾ ವಾಯುಗುಣ; ಇದು ಭೂಮಧ್ಯರೇಖೆಯ ೧೫ ಡಿಗ್ರಿ ಉತ್ತರ ಅಕ್ಷಾಂಶ ಮತ್ತು ೩೦ ಡಿಗ್ರಿ ದಕ್ಷಿಣದ ಅಕ್ಷಾಂಶದ ನಡುವೆ ಕಂಡುಬರುತ್ತದೆ. ವಿಶಾಲವಾದ ಒಣ ಮರುಭೂಮಿಗಳಿಂದ ಈ ಪ್ರದೇಶ ಆವೃತವಾಗಿದೆ (ಉತ್ತರ ಆಫ್ರಿಕ, ಅರೇಬಿಯ ಮತ್ತು ವಾಯುವ್ಯ ಭಾರತ). ಈ ಪ್ರದೇಶದಲ್ಲಿ ಮಳೆಯನ್ನವಲಂಬಿಸಿದ ವ್ಯವಸಾಯ ಅಸಾಧ್ಯ. ೩ ಒಣ ಮತ್ತು ತೇವಯುತ ಮಾನ್‌ಸೂನ್ ವಾಯುಗುಣ: ೫ ಡಿಗ್ರಿ ಉತ್ತರ ಮತ್ತು ೧೫ ಡಿಗ್ರಿ ದಕ್ಷಿಣ ಅಕ್ಷಾಂಶಗಳಲ್ಲಿ ದಕ್ಷಿಣ ಅಮೆರಿಕ, ಪಶ್ಚಿಮ ಮತ್ತು ಮಧ್ಯ ಆಫ್ರಿಕ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿ ಈ ವಾಯುಗುಣ ಕಂಡುಬರುತ್ತದೆ.

ಇಷ್ಟೊಂದು ವೈವಿಧ್ಯವಿದ್ದಾಗ್ಯೂ ಉಷ್ಣದೇಶಗಳಲ್ಲಿ ಕೆಲವು ಸಾಮಾನ್ಯ ಸಂಗತಿಗಳನ್ನು ಕಾಣಬಹುದು.

ಅತಿ ಶೀತ ಮಾಸಗಳಲ್ಲಿ ಸರಾಸರಿ ಉಷ್ಣತೆ ಅತಿ ಕಡಿಮೆಯೆಂದರೆ ೧೮^{0}C ಅಥವಾ ೬೪^{0}F ಇರುತ್ತದೆ. ಉಷ್ಣತೆಗಿಂತ ಮಳೆ ಹಂಚಿಕೆಯೇ ಋತುಗಳನ್ನು ನಿರ್ಧರಿಸುತ್ತದೆ.

ಮಳೆ ಹಂಚಿಕೆಯಲ್ಲಿ ವರ್ಷದಿಂದ ವರ್ಷಕ್ಕೆ ಹಾಗೂ ಒಂದೇ ವರ್ಷದ ಬೇರೆ ಬೇರೆ ಭಾಗಗಳಲ್ಲಿ ಗಮನಾರ್ಹವಾದ ಏರಿಳಿತಗಳನ್ನು ಕಾಣಬಹುದು. ಹಲವು ವೇಳೆ ಈ ಏರಿಳಿತಗಳ ಪರಿಣಾಮ ಘೋರವಾಗಿರುತ್ತದೆ ಉದಾಹರಣೆಗೆ ೧೯೭೨ರ ಜುಲೈ ತಿಂಗಳಲ್ಲಿ ಫಿಲಿಪೀನ್ಸ್‌ನ ಲೂಜಾನ್ ದ್ವೀಪದಲ್ಲಿ ೪.೫ ಮೀ. ಮಳೆ ಬಿದ್ದಿತು. ಫಿಲಿಪೀನ್ಸ್‌ನ ಹೆಚ್ಚು ಆರ್ಥಿಕ ಅಭಿವೃದ್ಧಿ ಯೋಜನೆಗಳು ಕೇಂದ್ರೀಕೃತವಾಗಿರುವ ಅಲ್ಲಿ ಆ ಮಳೆಯ ಕಾರಣದಿಂದ ಹತ್ತು ಲಕ್ಷ ಎಕರೆ ಬತ್ತದ ಬೆಳೆ ನಾಶವಾದುದೇ ಅಲ್ಲದೆ ದೇಶದ ಪ್ರಮುಖ ರಫ್ತು ಪದಾರ್ಥವಾದ ಕಬ್ಬಿನ ಬೆಳೆಯಲ್ಲಿ ಸೇಕಡ ೩೦ರಷ್ಟು ನಾಶವಾಯಿತು.

ಉಷ್ಣ ದೇಶಗಳಲ್ಲಿ ಮಳೆ ಹಂಚಿಕೆ ಅತಿ ಹೆಚ್ಚು ಅಥವಾ ಅತಿ ಕಡಿಮೆಯಾಗುವುದರ ಜೊತೆಗೆ ಉಷ್ಣತೆ ಅತಿ ಹೆಚ್ಚಾಗಿರುವ ಮತ್ತು ಅತಿಯಾಗಿ ಗಾಳಿ ಬೀಸುವ ವರ್ಷಭಾಗದಲ್ಲಿ ಆವಿಯಾಗುವಿಕೆ ಮತ್ತು ಇಂಗುವಿಕೆಯಿಂದ ಮಣ್ಣಿನಲ್ಲಿ ಜಲಾಂಶ ತೀವ್ರ ನಷ್ಟವಾಗಿ ಬರಗಾಲ ಬರುವುದೂ ಉಂಟು.

ಉಷ್ಣತೆ ಸತತವಾಗಿರುವುದರಿಂದ ಮತ್ತು ಶೀತಾಂಶ ಅತಿಯಾಗಿಲ್ಲದಿರುವುದರಿಂದ ಈ ದೇಶಗಳಲ್ಲಿ ಸಸ್ಯ ಜೀವನ ಹಾಗೂ ಪುನರುತ್ಪಾದನೆ ವರ್ಷವಿಡೀ ಸಾಗುತ್ತದೆ. ಅದೇ ರೀತಿ ನಾನಾ ರೀತಿಯ ಮಾರಕ ಕ್ರಿಮಿಕೀಟಗಳು ಮತ್ತು ಮನುಷ್ಯನ, ಪ್ರಾಣಿಗಳ ಮತ್ತು ಬೆಳೆಗಳ ಪರೋಪಜೀವಿಗಳ ಬೆಳವಣಿಗೆ ಮತ್ತು ಸಂತತಿವೃದ್ಧಿಯೂ ಅವ್ಯಾಹತವಾಗಿ ಸಾಗುತ್ತದೆ. ಈ ಕಾರಣದಿಂದ ಉಷ್ಣದೇಶಗಳಲ್ಲಿ ತುಂಬ ಜೀವ ವೈವಿಧ್ಯವನ್ನು ಕಾಣುವುದು ಸಾಧ್ಯ. ಆದರೆ ಈ ವೈವಿಧ್ಯದಿಂದ ಹುಟ್ಟುವ ಉಳಿವಿನ ಹೋರಾಟದಿಂದಾಗಿ ಯಾವುದೇ ಒಂದು ಪ್ರದೇಶದಲ್ಲಿ ಕೆಲವು ವರ್ಗದ ಜೀವಿಗಳು ಮಾತ್ರ ಬದುಕುತ್ತವೆ.

ಆದ್ದರಿಂದ ಈ ದೇಶಗಳಲ್ಲಿ ಯಾವುದೇ ಪ್ರದೇಶದಲ್ಲಿ ಒಂದು ಹೊಸ ಸಸ್ಯವನ್ನೋ ಹೊಸ ಪ್ರಾಣಿಯನ್ನೊ ಅಧಿಕ ಸಂಖ್ಯೆಯಲ್ಲಿ ಬೆಳೆಸಲು ತಂದಾಗ ಅವು ಈಗಾಗಲೆ ನಾನಾ ರೀತಿಯಲ್ಲಿರುವ ಅಥವಾ ಮುಂದೆ ಹುಟ್ಟಬಹುದಾದ ಪಿಡುಗುಗಳ ಆಕ್ರಮಣಕ್ಕೆ ಒಳಗಾಗುವ ಸಾಧ್ಯತೆಗಳು ಅತಿ ಹೆಚ್ಚಾಗಿರುತ್ತವೆ.

ವಾಯುಗುಣದ ಪರಿಣಾಮ ಆಫ್ರಿಕ ಮತ್ತು ಬ್ರೆಜಿಲ್–ಈ ಎರಡು ದೇಶಗಳನ್ನು ಸಮೀಪದಿಂದ ಅಭ್ಯಸಿಸಿ ಅವುಗಳ ಮೇಲೆ ಉಷ್ಣವಾಯುಗುಣದ ಪರಿಣಾಮವನ್ನು ಗುರುತಿಸಬಹುದು.

ಆಫ್ರಿಕದ ಒಟ್ಟು ೧೧.೭ ದಶಲಕ್ಷ ಚದರ ಮೈಲಿಗಳ ವಿಸ್ತಾರದಲ್ಲಿ ಉತ್ತರ ಆಫ್ರಿಕ ದೇಶಗಳು, ದಕ್ಷಿಣ ಆಫ್ರಿಕ ಗಣರಾಜ್ಯ ಮತ್ತು ಲಿಸೋತೋ–ಈ ದೇಶಗಳಲ್ಲಿ ಮಾತ್ರ ಯಾವುದೇ ಪ್ರಧಾನ ರೀತಿಯ ಉಷ್ಣವಾಯುಗುಣವಿಲ್ಲ. ಆಫ್ರಿಕ ಖಂಡವನ್ನು ಇತ್ತೀಚಿನ ವರೆಗೂ ಪ್ರಪಂಚದ ಇತರ ದೇಶಗಳ ಸಂಪರ್ಕದಿಂದ ದೂರವಾಗಿರಿಸಿ, "ಕಗ್ಗತ್ತಲೆಯ ಖಂಡ" ಎಂಬ ಬಿರುದು ಅದಕ್ಕೆ ಬಂದುದಕ್ಕೆ ಅಲ್ಲಿಯ ಕಷ್ಟಕರ ಭೌಗೋಳಿಕ ಲಕ್ಷಣಗಳೊಂದಿಗೆ ಉಷ್ಣವಾಯುಗುಣವೂ ಬಹುಮಟ್ಟಿಗೆ ಕಾರಣವಾಗಿದೆ. ಅನೇಕ ರೀತಿಯ ಉಷ್ಣವಲಯ ರೋಗಗಳು ಆಫ್ರಿಕನ್ನರನ್ನು ಜೀವನಾಧಾರ ಮಟ್ಟದಲ್ಲೇ ಇಟ್ಟಿವೆ. ಹಳದಿ ಜ್ವರ ಮತ್ತು ಮಲೇರಿಯ ಹೊರಗಿನಿಂದ ಬರುವ ಜನಗಳನ್ನು ಬಹುಸಂಖ್ಯೆಯಲ್ಲಿ ಬಲಿ ತೆಗೆದುಕೊಳ್ಳುತ್ತವೆ. ಟ್ಸೆಟ್ಸೆ ನೊಣಗಳ ಕಡಿತದಿಂದ ಬರುವ ರೋಗಗಳಿಂದ ಕುದುರೆಗಳು ಮತ್ತು ದನಕರುಗಳು ಅಧಿಕ ಸಂಖ್ಯೆಯಲ್ಲಿ ಸಾಯುತ್ತವೆ. ಇದರಿಂದ ಆಫ್ರಿಕದ ತೀರ ಪ್ರದೇಶಗಳಿಂದ ಒಳನಾಡಿನ ಪ್ರಯಾಣಕ್ಕೆ ಪ್ರಾಣಿಗಳನ್ನು ಬಳಸುವುದು ಅಸಾಧ್ಯವಾಗುತ್ತದೆ. ವಾಣಿಜ್ಯ ಅತಿ ದುಬಾರಿಯೂ ಅಷ್ಟೇ ಅಸಮರ್ಥವೂ ಆದ ಮಾನವ ಕೂಲಿಗಳನ್ನೇ ಅವಲಂಬಿಸಿದೆ. ಸಾರಿಗೆ ಅನುಕೂಲವೊಂದೇ ಆಫ್ರಿಕದ ಆರ್ಥಿಕ ಬೆಳವಣಿಗೆಯನ್ನು ಅನೇಕ ಶತಮಾನಗಳ ವರೆಗೆ ತಡೆಹಿಡಿದಿರಲು ಸಾಕು.

ಉಷ್ಣವಲಯದಲ್ಲಿದ್ದರೂ ದಕ್ಷಿಣ ಬ್ರೆಜಿಲ್ ಅತಿ ಎತ್ತರದಲ್ಲಿರುವುದರಿಂದ ಅಲ್ಲಿಯ ವಾಯುಗುಣ ಅಮೆರಿಕ ಸಂಯುಕ್ತ ಸಂಸ್ಥಾನಗಳ ಪೂರ್ವ ಆಪಲೇಷಿಯನ್ ವಾಯುಗುಣವನ್ನು ಹೋಲುತ್ತದೆ. ಹಿತಕರ ವಾಯುಗುಣವಿರುವ ಈ ಭಾಗದಲ್ಲಿ ಮಾತ್ರ ಆರ್ಥಿಕ ಬೆಳವಣಿಗೆ ಮಧ್ಯ ತಲಾ ಆದಾಯದ ಮಟ್ಟಕ್ಕೇರಿದೆ. ಇದಕ್ಕೆ ವಿರುದ್ಧವಾಗಿ ಈಶಾನ್ಯ ಬ್ರೆಜಿಲ್‌ನಲ್ಲಿ ಒಣ ಉಷ್ಣಹವೆ ಇದೆ. ಜನಸಂಖ್ಯೆ ೩ ಕೋಟಿ ಇರುವ ಈ ಭಾಗ ಬ್ರೆಜಿಲ್‌ನ ಸಮಸ್ಯಾತ್ಮಕ ಪ್ರದೇಶವಾಗಿದೆ. ಈ ಭಾಗದಲ್ಲಿ ಬರಗಾಲ ಪದೇಪದೇ ಬರುತ್ತಿರುತ್ತದೆ ಮತ್ತು ಒಮ್ಮೆ ಬಂದಾಗ ಒಂದರಿಂದ ಮೂರು ವರ್ಷಗಳ ವರೆಗೂ ಇರುತ್ತದೆ. ಈ ಬರಗಾಲಗಳು ಬ್ರೆಜಿಲ್‌ನ ಎಲ್ಲ ಆರ್ಥಿಕ ಅಭಿವೃದ್ಧಿ ಯೋಜನೆಗಳಿಗೂ ಮಾರಕವಾಗಿವೆ. ಆದಾಗ್ಯೂ ಬ್ರೆಜಿಲ್‌ನ ಆರ್ಥಿಕ ಬೆಳವಣಿಗೆ ನೀತಿಯಲ್ಲಿ ಸ್ಥಿರ ಬಂಡವಾಳದ ಬೆಳವಣಿಗೆಯ ಕಡೆಗೆ ಹೆಚ್ಚು ಗಮನ ಕೊಡಲಾಗುತ್ತಿದೆಯೇ ವಿನಾ ಬರಗಾಲಗಳನ್ನು ಹತೋಟಿಯಲ್ಲಿಡುವ ದಿಕ್ಕಿನಲ್ಲಿ ಸಂಶೋಧನೆ ನಡೆಸಲು ಸಾಕಷ್ಟು ಪ್ರಯತ್ನ ನಡೆದಿಲ್ಲ. ವಿಶಿಷ್ಟ ಭೂರಚನೆ ಮತ್ತು ಬಾಷ್ಪೀಕರಣ ಪ್ರಮಾಣ ಅಧಿಕವಾಗಿರುವ ಈ ಪ್ರದೇಶದಲ್ಲಿ ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸುವ ಬದಲು ಕಾಂಟೂರ್ ಪ್ಲೋಯಿಂಗ್ ಮೂಲಕ ಮಳೆ ಬೀಳುವ ಪ್ರದೇಶಗಳಲ್ಲಿ ಜಲ ಸಂರಕ್ಷಣೆ ಮಾಡುವ ಕ್ರಮಗಳು ಹೆಚ್ಚು ವಿವೇಕಯುತವಾಗಿರುತ್ತವೆ.

ಮಾನವ ರೋಗಗಳು ಇಂದಿನ ಬಡದೇಶಗಳ ಆರ್ಥಿಕ ಅಭಿವೃದ್ಧಿಯ ಮೇಲೆ ರೋಗಗಳ ಪ್ರಭಾವವನ್ನು ಆರ್ಥಿಕ ಅಭಿವೃದ್ಧಿಯ ಸಾಹಿತ್ಯದಲ್ಲಿ ಕಡೆಗಣಿಸಲಾಗಿದೆ. ಹೆಚ್ಚು ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ದೇಶಗಳ ವಿಚಾರದಲ್ಲಿ ಇದು ಸರಿಯೇ ಆಗಿರಬಹುದು. ಏಕೆಂದರೆ ಆ ದೇಶಗಳಲ್ಲಿ ಸರಾಸರಿ ಮನುಷ್ಯ ಆರೋಗ್ಯವಂತನಾಗಿರುತ್ತಾನೆ. ರೋಗಗಳು ಅಪ್ರಮುಖವಲ್ಲದಿದ್ದರೂ ಅಲ್ಲಿಯ ಆರ್ಥಿಕ ಬೆಳವಣಿಗೆಯಲ್ಲಿ ಗಣನೀಯ ಅಂಶವೇನೂ ಅಲ್ಲ. ಆದರೆ ಉಷ್ಣವಲಯದ ಇಂದಿನ ಬಡ ದೇಶಗಳ ವಿಚಾರದಲ್ಲಿ ಈ ಗ್ರಹಿಕೆ ತಪ್ಪಾಗುತ್ತದೆ. ಈ ದೇಶಗಳಲ್ಲಿ ರೋಗರಹಿತನಾದ ವ್ಯಕ್ತಿ ಅಪರೂಪ. ಉತ್ತಮ ಆರೋಗ್ಯದ ಅಭಾವ ವ್ಯಕ್ತಿಯ ಕಾರ್ಯಕ್ಷಮತೆ, ಕಲಿಕೆಯ ಸಾಮರ್ಥ್ಯ ಮತ್ತು ಕಷ್ಟಕರವಾದ ಹಾಗೂ ಸತತವಾದ ಕೆಲಸದ ಮತ್ತು ಚಿಂತನದ ಶಕ್ತಿಯನ್ನು ಕುಗ್ಗಿಸುತ್ತದೆ.

ಉಷ್ಣದೇಶಗಳಲ್ಲಿ ರೋಗಗಳು ಸಾಮಾನ್ಯ. ಉದಾಹರಣೆಗೆ ಆಫ್ರಿಕ ಖಂಡದಲ್ಲಿ ಸರಾಸರಿಯಲ್ಲಿ ಪ್ರತಿ ವ್ಯಕ್ತಿಗೆ ಎರಡು ಅಂಟುಜಾಡ್ಯಗಳಿರುತ್ತವೆಂದು ಗಣಿಸಲಾಗಿದೆ ಮತ್ತು ಬಿಲ್ಹೇರ್ಜಿಯಾ ಅರ್ಧ ದಷ್ಟು ಜನ ಸಂಖ್ಯೆಗೆ ಹರಡಿಕೊಂಡಿದೆ. ಅಂಟು ಜಾಡ್ಯಗಳು ಮತ್ತು ಪೌಷ್ಟಿಕ ಆಹಾರದ ಅಭಾವದ ಕಾರಣದಿಂದ ಸಾಮಾನ್ಯ ಆಫ್ರಿಕನ್ನನ ದೈಹಿಕ ಶಕ್ತಿ ಕುಂದಿಹೋಗಿರುತ್ತದೆ. ಆದ್ದರಿಂದ ದೈಹಿಕ ಶ್ರಮದಲ್ಲಿ ಒಬ್ಬ ಯೂರೋಪಿಯನ್‌ಗೆ ಇಬ್ಬರು ಆಫ್ರಿಕನರು ಸಮ ಎಂದು ಗಣಿಸಲಾಗಿದೆ.

ಆಫ್ರಿಕ, ಮಧ್ಯಪೂರ್ವ ಮತ್ತು ಲ್ಯಾಟಿನ್ ಅಮೆರಿಕ ದೇಶಗಳಲ್ಲಿ ೧೫ರಿಂದ ೨೦ ಕೋಟಿ ಜನರಲ್ಲಿ ನಿಶ್ಶಕ್ತಿಗೊಳಿಸುವ ಬಿಲ್ಹೇರ್ಜಿಯಾ ರೋಗ ಕಂಡುಬರುತ್ತದೆ ಹಾಗೂ ಚೀನದಲ್ಲಿ ಅಸಂಖ್ಯಾತ ಜನ ಈ ರೋಗದಿಂದ ನರಳುತ್ತಾರೆ. ಈ ರೋಗದ ಒಂದು ವಿಧ, ರೋಗಪೀಡಿತರ ಕಾರ್ಯಸಾಮರ್ಥ್ಯವನ್ನು ಸೌಮ್ಯರೂಪದಲ್ಲಿ ಶೇ. ೧೫–೧೮ರಷ್ಟು ಮತ್ತು ಉಗ್ರರೂಪದಲ್ಲಿ ಶೇ. ೭೦–೮೦ರಷ್ಟು ಕುಂದಿಸುವುದೆಂದು ತಿಳಿದುಬಂದಿದೆ. ನೀರಾವರಿಯ ಉತ್ಪೋತ್ಪನ್ನವಾಗಿ ಮತ್ತು ಜನಗಳ ಓಡಾಟದ ಹೆಚ್ಚಳದಿಂದ ಈ ರೋಗ ಹರಡುತ್ತಿದೆ. ಆದರೆ ಇದಕ್ಕೆ ಪರಿಣಾಮಕಾರಿಯಾದ ಔಷಧವನ್ನು ಇನ್ನೂ ಕಂಡುಹಿಡಿಯ ಲಾಗಿಲ್ಲ. ಅರೆ ಉಷ್ಣಪ್ರದೇಶಗಳಿಂದ ಮಲೇರಿಯವನ್ನು ಬಹುಪಾಲು ನಿರ್ಮೂಲ ಮಾಡಲಾಗಿದ್ದರೂ ಉಷ್ಣವಲಯದ ಆಫ್ರಿಕನ್ ದೇಶಗಳು ಮಧ್ಯ ಮತ್ತು ದಕ್ಷಿಣ ಅಮೆರಿಕದ ದೇಶಗಳ ಕೆಲವು ಭಾಗಗಳು ಮತ್ತು ಪಶ್ಚಿಮ, ದಕ್ಷಿಣ ಹಾಗೂ ಆಗ್ನೇಯ ಏಷ್ಯ ದೇಶಗಳಲ್ಲಿ ಅದು ಇನ್ನೂ ಪ್ರಬಲ ವಾಗಿಯೇ ಇದೆ. ವಿಶ್ವ ಆರೋಗ್ಯ ಸಂಸ್ಥೆಯ (WHO) ಲೆಕ್ಕಾಚಾರದ ಪ್ರಕಾರ ೧೯೭೨ರ ಮೇ ತಿಂಗಳಲ್ಲಿ ಮಲೇರಿಯ ರೋಗದ ವ್ಯಾಪ್ತಿಯಲ್ಲಿ ೭೦ ಕೋಟಿ ಜನಗಳಿದ್ದರು ಮತ್ತು ರೋಗ ವ್ಯಾಪನೆಯ ದರ ಶೇ. ೧೦ರಿಂದ ೮೦ರಷ್ಟಿತ್ತು. ಆಫ್ರಿಕದ ವಿಸ್ತಾರವಾದ ಭಾಗಗಳಲ್ಲಿ ಮತ್ತು ಮಧ್ಯ ಹಾಗೂ ದಕ್ಷಿಣ ಅಮೆರಿಕದ ಕೆಲವು ಭಾಗಗಳಲ್ಲಿ ಮಲೇರಿಯ ನಿವಾರಣೆಗೆ ಪರಿಣಾಮಕಾರಿ ವಿಧಾನ ಇನ್ನೂ ಕಂಡುಬಂದಿಲ್ಲ. ಅನೇಕ ಜಾತಿಯ ಸೊಳ್ಳೆಗಳು ಹಿಂದೆ ಬಳಕೆಯಲ್ಲಿದ್ದ ಕ್ರಿಮಿನಾಶಕಗಳಿಗೆ ಪ್ರತಿರೋಧವನ್ನು ಬೆಳೆಸಿಕೊಂಡುಬಿಟ್ಟಿವೆ. ಮಲೇರಿಯ ರೋಗವನ್ನು ನಿರ್ಮೂಲ ಮಾಡಲಾದ ಕೆಲವೇ ಉಷ್ಣದೇಶಗಳಲ್ಲಿ ಒಂದಾದ ಶ್ರೀ ಲಂಕಾದಲ್ಲಿ ಅದು ಪುನಃ ಹರಡುತ್ತಿದೆ. ೧೯೭೦ರಲ್ಲಿ ೨೦ ಲಕ್ಷ ಜನಗಳಿಗೆ ಮಲೇರಿಯಾ ತಗುಲಿತೆಂದು ವರದಿಯಾಗಿದೆ.

ಮೇಲಿನ ಪ್ರೋಲ್ಟಾದ ಅಭಿವೃದ್ಧಿಗೆ ಮಾರಕವಾಗಿರುವ ಒಂದು ರೋಗವೆಂದರೆ'ನದೀಗುರುಡು.' ಈ ರೋಗ ಅಲ್ಲಿಯ ಫಲವತ್ತಾದ ಭೂಮಿಯು ವ್ಯವಸಾಯಕ್ಕೆ ಅಡ್ಡಿಯನ್ನುಂಟುಮಾಡಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಆಫ್ರಿಕ, ಮೆಕ್ಸಿಕೋ, ಗ್ವಾಟೆಮಾಲ, ವೆನಿಜ್ವೇಲ, ಕೊಲಂಬಿಯ ಮತ್ತು ಯೆಮನ್ ಗಣರಾಜ್ಯಗಳಲ್ಲಿ ಒಟ್ಟು ೨ ಕೋಟಿ ಜನಗಳು ಪೂರ್ಣ ಅಥವಾ ಅರೆದೃಷ್ಟಿಮಾಂದ್ಯದಿಂದ ಬಳಲುತ್ತಿದ್ದಾರೆ.

ಸತ್ವಹೀನಗೊಳಿಸುವ ಇತರ ಹಲವಾರು ಪರೋಪಜೀವಿಗಳು ಉಷ್ಣದೇಶಗಳಲ್ಲಿರುತ್ತವೆ. ಉಷ್ಣದೇಶಗಳ ಮತ್ತು ಅರೆ ಉಷ್ಣದೇಶಗಳ ಕೋಟ್ಯಂತರ ಜನರು ಕರುಳು ಕ್ರಿಮಿಗಳಿಂದ ಬಾಧೆ ಪಡುತ್ತಾರೆ. ಕೊಕ್ಕೆ ಹುಳದ ರೋಗದಿಂದಾಗಿ ಈ ದೇಶಗಳಲ್ಲಿ ಸುಮಾರು ೬೫ ಕೋಟಿ ಜನ ನರಳು ತ್ತಿದ್ದಾರೆ. ಈ ರೋಗದಿಂದ ರಕ್ತಹೀನತೆ, ಮಕ್ಕಳಲ್ಲಿ ದೈಹಿಕ ಮತ್ತು ಬೌದ್ಧಿಕ ವಿಳಂಬಿತ ಬೆಳವಣಿಗೆ, ಕೆಲಸದ ಬಗ್ಗೆ ನಿರಾಸಕ್ತಿ ಮುಂತಾದವು ಉಂಟಾಗುತ್ತವೆ.

ಒಂದು ಜಾತಿಯ ಸೊಳ್ಳೆಯ ಕಡಿತದಿಂದ ಹರಡುವ ಫಿಲೇರಿಯಾಸಿಸ್ ರೋಗದಿಂದ ಪ್ರಪಂಚ ದಲ್ಲಿ ಒಟ್ಟು ೨೫ ಕೋಟಿ ಜನ ನರಳುತ್ತಿದ್ದಾರೆ. ಈ ರೋಗದ ಒಂದು ಅಸಹ್ಯ ಪ್ರಕಾರ ಎಂದರೆ 'ಆನೆಕಾಲುರೋಗ'. ಅದೃಷ್ಟವಶಾತ್ ಏಷ್ಯ ಖಂಡದಲ್ಲಿ ಈ ರೋಗದಿಂದ ಬಳಲುವ ಸುಮಾರು ೧೦ ಕೋಟಿ ಜನಗಳಲ್ಲಿ ಇದು ಸೌಮ್ಯರೂಪದ್ದಾಗಿದೆ. ಆಫ್ರಿಕ ಮತ್ತು ದಕ್ಷಿಣ ಏಷ್ಯದಲ್ಲಿ ೧ ಕೋಟಿಗೂ ಹೆಚ್ಚು ಜನ ಕುಷ್ಠರೋಗದಿಂದ ಪೀಡಿತರಾಗಿದ್ದಾರೆ. ಆದರೆ ಇವರಲ್ಲಿ ಬಹುಪಾಲು ಜನ ಔಷಧೋಪಚಾರ ವಿಲ್ಲದೆ ನರಳುತ್ತಿದ್ದಾರೆ.

ಉಷ್ಣದೇಶಗಳು ಮತ್ತು ಔಷಧಗಳು:

ಉಷ್ಣದೇಶಗಳು ತಮ್ಮವೇ ಆದ ವಿಶಿಷ್ಟ ರೋಗಗಳೊಂದಿಗೆ ಸಮಶೀತೋಷ್ಣ ದೇಶಗಳ ರೋಗ ಗಳಿಂದಲೂ ಬಳಲುತ್ತವೆ. ಇವುಗಳಲ್ಲಿ ಮುಖ್ಯವಾದುದು ಕ್ಷಯ. ಸಮಶೀತೋಷ್ಣದೇಶಗಳ ರೋಗಗಳನ್ನು ಎದುರಿಸಲು ಉಷ್ಣದೇಶಗಳು ಪಾಶ್ಚಾತ್ಯ ತಾಂತ್ರಿಕ ವಿಧಾನಗಳನ್ನು ಅನುಸರಿಸ ಬಹುದಾದರೂ ಉಷ್ಣವಲಯದ ರೋಗಗಳನ್ನು ಎದುರಿಸಲು ಪರಿಣಾಮಕಾರಿಯಾದ ಮತ್ತು ಆರ್ಥಿಕವಾಗಿ ಸಾಧುವಾದ ಯಾವ ವಿಧಾನವೂ ಬೆಳವಣಿಗೆಯಾಗಿಲ್ಲ. ಈ ದಿಕ್ಕಿನಲ್ಲಿ ಸಂಶೋಧನೆ ನಡೆಯಲು ಅಗತ್ಯ ಪ್ರಮಾಣದಲ್ಲಿ ಸಂಪನ್ಮೂಲಗಳ ಬಳಕೆಯಾಗುತ್ತಿಲ್ಲ. ಇದಕ್ಕೆ ಕಾರಣ ಅಭಿವೃದ್ಧಿ ಅರ್ಥಶಾಸ್ತ್ರಜ್ಞರು ಮತ್ತು ಯೋಜಕರು ಈ ವಿಶಿಷ್ಟ ಸಮಸ್ಯೆಗೆ ಗಮನ ಕೊಡದಿರುವುದೇ ಆಗಿದೆ.

ಮುಂದುವರಿದ ದೇಶಗಳ ಅರ್ಥಶಾಸ್ತ್ರಜ್ಞರು ತಮ್ಮ ದೇಶಗಳ ವಾತಾವರಣಕ್ಕೆ ಸಾಧುವಾದ ಗ್ರಹಿಕೆಗಳನ್ನೇ ಬಡದೇಶಗಳ ವಿಚಾರದಲ್ಲೂ ಅನುಸರಿಸುತ್ತಿರುವುದು ಮೇಲಿನ ಸಮಸ್ಯೆಗೆ ಮುಖ್ಯ ಕಾರಣವಾಗಿದೆ. ಬಡದೇಶಗಳ ಹೆಚ್ಚು ವೈದ್ಯಕೀಯ ಶಾಲೆಗಳು ತಮ್ಮ ತರಬೇತಿ ಕ್ರಮವನ್ನು ಮುಂದು ವರಿದ ದೇಶಗಳ ವೈದ್ಯಕೀಯ ಶಾಲೆಗಳ ಮಾದರಿಯಲ್ಲೇ ರೂಪಿಸಿಕೊಂಡಿರುತ್ತವೆ. ತಮ್ಮಲ್ಲಿ ಬಹು ಸಂಖ್ಯಾತ ಜನಗಳು ನರಳುವ, ಪರೋಪಜೀವಿಗಳಿಂದ ಬರುವ ಅಂಟುಜಾಡ್ಯಗಳ ಬಗ್ಗೆ ಗಮನಕೊಡದೆ ಮುಂದುವರಿದ ದೇಶಗಳ ವೈದ್ಯರು ಹೆಚ್ಚಾಗಿ ಎದುರಿಸುವ ಕ್ಯಾನ್ಸರ್, ಹೃದಯರೋಗಗಳು ಮುಂತಾದುವು ಗಳ ಬಗ್ಗೆಯೇ ತಾವೂ ಕಾಳಜಿ ವಹಿಸುತ್ತವೆ. ಕ್ಯಾನ್ಸರ್ ಮತ್ತು ಹೃದಯ ರೋಗಗಳು ಶ್ರೀಮಂತ ದೇಶಗಳ ಶ್ರೀಮಂತ ಜನಗಳ ರೋಗಗಳೇ ಹೊರತು ಹಿಂದುಳಿದ ದೇಶಗಳಲ್ಲಿ ಅವುಗಳ ಪ್ರಾಧಾನ್ಯ ಕಡಿಮೆಯೇ ಎನ್ನಬೇಕು. ರಿಯೋಡಿಜನ್ಯೆರೋ ನಗರದಲ್ಲಿ ಪ್ರತಿ ೩೭೦ ಜನರಿಗೆ ಒಬ್ಬ ವೈದ್ಯನಿದ್ದಾನೆ. ಆದರೆ ಇಕ್ಕ ಬ್ರೆಜಿಲ್ ದೇಶದಲ್ಲಿ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಜನ ಹುಟ್ಟಿನಿಂದ ಸಾವಿನ ವರೆಗೆ ವೈದ್ಯರ ಮುಖವನ್ನೇ ಕಾಣುವುದಿಲ್ಲ.

ಉಷ್ಣದೇಶಗಳಲ್ಲಿ ರೋಗಗಳು ಅಲ್ಲಿಯ ಆರ್ಥಿಕ ಬೆಳವಣಿಗೆಯನ್ನು ನೇರವಾಗಿ ಕುಂಠಿತ ಗೊಳಿಸಿವೆ. ಉದಾಹರಣೆಗೆ ಹಳದಿ ಜ್ವರ ಮತ್ತು ಮಲೇರಿಯ ರೋಗಗಳಿಂದ ೧೮೮೮ರಲ್ಲಿ ಫರ್ಡಿನೆಂಡ್-ಡಿ-ಲೆಸೆಪ್ಸ್‌ಗೆ ಪನಾಮಾ ಕಾಲುವೆಯನ್ನು ತೋಡುವುದು ಸಾಧ್ಯವಾಗಲಿಲ್ಲ. ಆದರೆ ೧೯೦೪-೧೪ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸರ್ಕಾರ ಮೊದಲು ಸಾರ್ವಜನಿಕ ನೈರ್ಮಲ್ಯದ ಮೇಲೆ ಅಪಾರವಾಗಿ ಹಣ ಖರ್ಚು ಮಾಡಿ ಬಾಯಿಲೆ ಹರಡುವ ಸೊಳ್ಳೆಗಳನ್ನು ಮೊದಲು ನಿರ್ಮೂಲ ಮಾಡಿ ಪನಾಮಾ ಕಾಲುವೆಯ ಕೆಲಸವನ್ನು ಜಯಪ್ರದವಾಗಿ ಮುಗಿಸಿತು. ಅಂದರೆ ಯಶಸ್ಸಿಗೆ ಪೂರ್ವಭಾವಿಯಾಗಿ ಸಾರ್ವಜನಿಕ ಆರೋಗ್ಯದ ಮೇಲೆ ಅಪಾರ ಹಣ ಹೂಡಿಕೆ ಅಗತ್ಯವಾಯಿತು. ಅಂದಿನಿಂದ ಉಷ್ಣ ದೇಶಗಳಲ್ಲಿ ಭಾರೀ ಪ್ರಮಾಣದ ಆರ್ಥಿಕ ಯೋಜನೆಗಳನ್ನು ಕೈಗೊಳ್ಳುವ ಮುಂಚೆ ಕೆಲಸಗಾರರನ್ನು ಸ್ಥಳೀಯ ರೋಗಗಳಿಂದ ಕಾಪಾಡುವುದು ಪರಿಪಾಠವಾಗಿದೆ. ಆದರೆ ಈ ವಿಶೇಷ ರೋಗ ಪ್ರತಿಬಂಧಕ ಕ್ರಮಗಳು ಅಲ್ಲಿಯ ಹೆಚ್ಚಿನ ಜನಸಂಖ್ಯೆಗೆ ದೊರಕುವುದೇ ಇಲ್ಲ. ಇದಕ್ಕೆ ಪ್ರತಿಯಾಗಿ ಇಂದಿನ ಕೈಗಾರಿಕಾ ದೇಶಗಳು ಬಡದೇಶಗಳಾಗಿದ್ದಾಗ ಆರ್ಥಿಕ ಬೆಳವಣಿಗೆಯ ಮೇಲೆ ರೋಗಗಳ ಪ್ರಭಾವದ ಬಗ್ಗೆ ಹೆಚ್ಚಿನ ಅರಿವಿದ್ದಿತು. ೧೮೫೦ರಲ್ಲಿ ಸರ್ ಎಡ್ವಿನ್ ಚಾಡ್ವಿಕ್‌ರು ಪ್ರಕಟಿಸಿದ 'ಗ್ರೇಟ್ ಬ್ರಿಟನ್ನಿನ ಕಾರ್ಮಿಕ ಜನತೆಯ ನೈರ್ಮಲ್ಯ ಪರಿಸ್ಥಿತಿ' ಎಂಬ ವರದಿಯಲ್ಲಿ ಬಡತನ ಮತ್ತು ರೋಗಗಳು ವಿಷವ್ಯೂಹವನ್ನು ರಚಿಸುತ್ತವೆ ಮತ್ತು ಬಡತನದ ವಿರುದ್ಧ ಏನಾದರೂ ಪ್ರಗತಿಯನ್ನು ಸಾಧಿಸಬೇಕಾದಲ್ಲಿ ರೋಗಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬ ಚಿಂತನೆಯನ್ನು ಎತ್ತಿ ಹಿಡಿದಿರುವುದನ್ನು ಕಾಣಬಹುದು.

ಅಭಿವೃದ್ಧಿ ಹಣಕಾಸು ಮತ್ತು ಆರೋಗ್ಯ

ಇಂದಿನ ಬಡದೇಶಗಳಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿದೆ. ಇಂದಿನ ಬಡದೇಶಗಳ ಸುಮಾರು ೨೦೦ ಕೋಟಿ ಜನಗಳನ್ನು ಪೀಡಿಸುತ್ತಿರುವ ಶಕ್ತಿ ಕುಂದಿಸುವ ರೋಗಗಳ ಬಗ್ಗೆ ಸಂಶೋಧನೆಗೆ ದೊರಕುತ್ತಿರುವ ಹಣಕಾಸು ಕೈಗಾರಿಕಾ ದೇಶಗಳು ತಮ್ಮ ಜನಗಳ ಆಯುಸ್ಸನ್ನು ಒಂದೆರಡು ವರ್ಷಗಳಷ್ಟು ಹೆಚ್ಚಿಸಲು

ಬಳಸುತ್ತಿರುವ ಹಣಕಾಸಿನ ಒಂದು ಅತ್ಯಲ್ಪ ಭಾಗ ಮಾತ್ರವಾಗಿದೆ. ಉದಾಹರಣೆಗೆ ಅಮೆರಿಕ ಒಂದರಲ್ಲೇ ೧೯೭೦ರಲ್ಲಿ ಕ್ಯಾನ್ಸರ್ ಸಂಶೋಧನೆಗಾಗಿ ೧೬೦ ಕೋಟಿ ಡಾಲರುಗಳನ್ನು ಒದಗಿಸಲಾಯಿತು. ಪ್ರಪಂಚದ ಎಲ್ಲ ಉಷ್ಣದೇಶಗಳ ರೋಗಗಳ ಸಂಶೋಧನೆಗೆ ಈ ಮೊತ್ತದ ಶೇ. ೧೦ರಷ್ಟು ಮಾತ್ರ ದೊರಕಿದರೂ ಸಾಕಾದೀತು.

ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಮತ್ತು ದ್ವಿಪಕ್ಷೀಯ ಸಹಾಯ ನೀಡಿಕೆ ಸಂಸ್ಥೆಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಫ್ರೆಂಚ್ ಭಾಷೆಯನ್ನಾಡುವ ಆಫ್ರಿಕನ್ ದೇಶಗಳಲ್ಲಿ ಉಷ್ಣವಲಯದ ರೋಗಗಳ ವಿರುದ್ಧ ಕ್ರಮ ಕೈಗೊಳ್ಳಲು ಸಂಸ್ಥೆಯೊಂದನ್ನು ಸ್ಥಾಪಿಸುವಲ್ಲಿ ಫ್ರೆಂಚ್ ಸರಕಾರ ನಿರತವಾಗಿದೆ.

ಈ ಸಮಸ್ಯೆಗಳನ್ನು ಎದುರಿಸುವಲ್ಲಿ ಧನಸಹಾಯ ಮಾಡುವಲ್ಲಿ ವಿಶ್ವ ಬ್ಯಾಂಕ್ ಸಮೂಹ ಎಚ್ಚರಿಕೆಯಿಂದ ಮುಂದುವರಿಯುತ್ತಿದೆ. ಬಡದೇಶಗಳಲ್ಲಿ ಕುಡಿಯುವ ನೀರು ಮತ್ತು ಚರಂಡಿ ಯೋಜನೆಗಳಿಗಾಗಿ ೧೯೬೦ರಲ್ಲಿ ಅದು ಸಾಲ ನೀಡಲು ಪ್ರಾರಂಭಿಸಿತು. ೧೯೭೦ರಲ್ಲಿ ಅದು ವಿಶ್ವ ಆರೋಗ್ಯ ಸಂಸ್ಥೆಯೊಂದಿಗೆ ಸಹಕಾರೀ ಯೋಜನೆಯೊಂದನ್ನು ತಯಾರಿಸಿತು. ಅದರ ಪ್ರಕಾರ ವಿಶ್ವ ಆರೋಗ್ಯ ಸಂಸ್ಥೆ ವಿಶ್ವ ಬ್ಯಾಂಕಿಗಾಗಿ ಬಡದೇಶಗಳಲ್ಲಿ ಕುಡಿಯುವ ನೀರು ಮತ್ತು ಚರಂಡಿ ಯೋಜನೆಗಳನ್ನು ಗುರುತಿಸಿ ತಯಾರಿಸಿಕೊಡಬೇಕಾಗಿತ್ತು.

ಜನವರಿ ೧೯೭೮ರಲ್ಲಿ ಅದು ಮಲಾವಿಗೆ ವ್ಯವಸಾಯ ಅಭಿವೃದ್ಧಿ ಯೋಜನೆಯ ಒಂದು ಭಾಗವಾಗಿ ಬಿಲ್ಹಾರ್ಜಿಯಾ ರೋಗವನ್ನು ತಡೆಗಟ್ಟುವುದಕ್ಕೆ ಸಾಲವನ್ನು ನೀಡಿತು. ಅಂದಿನಿಂದ ವಿಶ್ವ ಬ್ಯಾಂಕ್ ಸಮೂಹದ ಸಾಲ ನೀಡುವ ಗ್ರಾಮಾಭಿವೃದ್ಧಿ ಯೋಜನೆಗಳಲ್ಲಿ ರೋಗ ನಿಯಂತ್ರಣ ಅಥವಾ ನಿರ್ಮೂಲನ ಸಾಧಾರಣವಾಗಿ ಒಂದು ಅಂಗವಾಗಿರುತ್ತದೆ.

ನದೀಗುರುಡಿನ ವಿರುದ್ಧವಾಗಿಯೂ ಅಂತರರಾಷ್ಟ್ರೀಯ ಸಹಕಾರೀ ಕಾರ್ಯಕ್ರಮಗಳು ನಡೆದಿವೆ. ಪಶ್ಚಿಮ ಆಫ್ರಿಕದ ವೋಲ್ಟಾ ನದೀ ಮುಖಜ ಭೂಮಿಯಲ್ಲಿ ನದೀಗುರುಡು ರೋಗದ ವಿರುದ್ಧ ಯೋಜನೆಯೊಂದನ್ನು ಅಭಿವೃದ್ಧಿಪಡಿಸಿ ಕಾರ್ಯಗತಗೊಳಿಸುವ ವಿಧಾನಗಳನ್ನು ಯೋಜಿಸುವುದಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆ, ಆಹಾರ ಮತ್ತು ವ್ಯವಸಾಯ ಸಂಸ್ಥೆ (F.A.O.) ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆ (U.N.D.P.)ಮತ್ತು ವಿಶ್ವಬ್ಯಾಂಕ್ ಸಮೂಹ—ಈ ಸಂಸ್ಥೆಗಳು ೧೯೬೮ರಲ್ಲಿ ಒಂದು ನಿರ್ದೇಶನ ಸಮಿತಿಯನ್ನು ನೇಮಿಸಿದುವು. ಈ ಯೋಜನೆಯ ಸಿದ್ಧತಾ ಕಾರ್ಯಗಳು ಈಗ ನಡೆಯುತ್ತಿವೆ.

ಇಲ್ಲಿಯ ವರೆಗೆ ನಡೆದಿರುವುದೆಲ್ಲಾ ಆಶಾದಾಯಕ ಪ್ರಾರಂಭ ಮಾತ್ರ ಎಂಬುದನ್ನು ಮರೆಯಬಾರದು. ಅನೇಕ ನಿರ್ದಿಷ್ಟ ರೋಗಗಳು ಆರ್ಥಿಕ ಅಭಿವೃದ್ಧಿಗೆ ಹೇಗೆ ಅಡ್ಡಿಯಾಗಿವೆ ಎಂಬುದರ ವ್ಯವಸ್ಥಿತ ಆರ್ಥಿಕ ವಿಶ್ಲೇಷಣೆಯ ಬಗ್ಗೆ ಇನ್ನೂ ಏನು ಪ್ರಯತ್ನವೂ ನಡೆದಿಲ್ಲ. ಹಾಗೆ ಆ ರೋಗಗಳನ್ನು ನಿರ್ಮೂಲಗೊಳಿಸುವ ಯೋಜನೆಗಳ ಆರ್ಥಿಕ ಮತ್ತು ಸಾಮಾಜಿಕ ವೆಚ್ಚಗಳು ಮತ್ತು ಅನುಕೂಲಗಳ ವಿಶ್ಲೇಷಣೆಯ ಪ್ರಯತ್ನಗಳೂ ನಡೆದಿಲ್ಲ. ಅಂಥ ಮೂಲಭೂತ ಅಂಶಗಳ ತಿಳಿವಳಿಕೆಯ ಅಭಾವ ಇದ್ದಾಗ ಯಾವುದೇ ಸರ್ಕಾರ ಅಥವಾ ಸಹಾಯ ನೀಡುವ ಸಂಸ್ಥೆಗೆ ರೋಗ ನಿಯಂತ್ರಣ ಯೋಜನೆ ಮತ್ತು ರೂಢಿಗತ ಹೂಡಿಕೆ ಯೋಜನೆಗಳ ನಡುವೆ ಆಯ್ಕೆ ಮಾಡುವುದು ಅಸಾಧ್ಯವಾಗುತ್ತದೆ.

ವ್ಯವಸಾಯ: ಹಿಂದುಳಿದ ದೇಶಗಳಲ್ಲಿ ಭೂಮಿಯನ್ನು ಎಷ್ಟು ಉತ್ತಮವಾಗಿ ಬಳಸಿಕೊಳ್ಳಬಹುದು ಮತ್ತು ಅಭಿವೃದ್ಧಿಪಡಿಸಬಹುದು ಎಂಬುದರ ಬಗ್ಗೆ ತಿಳಿವಳಿಕೆ ಬಹಳ ಕಡಿಮೆಯಿದೆ. ಈ ವಿಚಾರದಲ್ಲಿ ಉಷ್ಣದೇಶಗಳು, ಶ್ರೀಮಂತ ಮತ್ತು ಮಧ್ಯಮ ಶ್ರೀಮಂತ ದೇಶಗಳಿಗಿಂತ ಭಿನ್ನವಾಗಿವೆ. ಇಂದಿನ ಶ್ರೀಮಂತ ದೇಶಗಳು ಬಡತನದಲ್ಲಿದ್ದಾಗ ಈ ಕ್ಷೇತ್ರದಲ್ಲಿ ಗಳಿಸಿದ ಜ್ಞಾನವನ್ನು ನಿಮ್ನಾಭಿವರ್ಧಿತ ದೇಶಗಳು ನೇರವಾಗಿ ಬಳಸುವುದು ಸಾಧ್ಯವಿಲ್ಲ. ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗಿರುವ ಉಷ್ಣದೇಶಗಳ ವ್ಯವಸಾಯದ ವಿಶಿಷ್ಟ ಸಮಸ್ಯೆಗಳನ್ನು ನಿರ್ದಿಷ್ಟವಾಗಿ ಗುರುತಿಸುವುದು ಅಗತ್ಯ.

ಮಣ್ಣು: ಮೆಕ್ಕಲು ಮಣ್ಣು ಮತ್ತು ಅಗ್ನಿಪರ್ವತಗಳಿಂದುಂಟಾದ ಮಣ್ಣಿನ ಹೊರತಾಗಿ ಉಷ್ಣದೇಶಗಳ ಮಣ್ಣಿನಲ್ಲಿ ಜೈವಿಕ ಅಂಶಗಳು ಅತಿ ಕಡಮೆಯಾಗಿ ಅಥವಾ ಏನೂ ಇಲ್ಲದೆ ಬರಡಾಗಿರುತ್ತವೆ. ಇದುವರೆಗೂ ಬಳಕೆಯಾಗಿರದ ದಟ್ಟ ಅರಣ್ಯದ ಭೂಮಿಯಲ್ಲಿ ಕೊಂಬೆಗಳು, ಕಾಂಡಗಳು ಮತ್ತು ಎಲೆಗಳು ಭೂಮಿಗೆ ಬಿದ್ದು ತಾವು ತೆಗೆದುಕೊಂಡ ಸಾರಾಂಶವನ್ನು ಭೂಮಿಗೆ ಹಿಂದಿರುಗಿಸಿ ಮಣ್ಣನ್ನು ಸಾರವತ್ತಾಗಿಸುತ್ತವೆ. ಅಂಥ ಪ್ರದೇಶಗಳಲ್ಲೂ ಸಹ ಸಾರದ ಸಮತೋಲ ಅತಿ ಸೂಕ್ಷ್ಮವಾಗಿರುತ್ತದೆ. ಅರಣ್ಯದ ಹೊದಿಕೆಯನ್ನು ಒಮ್ಮೆ ತೆಗೆದು ಹಾಕಿದರೆ ಜೈವಿಕ ಸಾರದ ಮೇಲ್ಪದರ ಬಹು ಬೇಗ ಇಂಗಿಹೋಗುತ್ತವೆ ಅಥವಾ ಒಂದೆರಡು ಭಾರಿ ಮಳೆಗೆ ಸಿಕ್ಕಿ ಕೊಚ್ಚಿಹೋಗುತ್ತವೆ.

ಉತ್ತಮವಾದ ಮಣ್ಣು ಅಸಂಖ್ಯಾತವಾದ ಅತಿ ಸೂಕ್ಷ್ಮ ಲೋಹಯುತ ಮಣ್ಣಿನ ಕಣಗಳು ಒಟ್ಟುಗೂಡಿದ ಧೃಢವಾದ ಮತ್ತು ಮೆದುವಾದ ರಚನೆಯಾಗಿರುತ್ತದೆ. ಈ ಅಂಗರಚನೆಯ ಗೂಡುಗಳಲ್ಲಿ ಜೈವಿಕ ಸಾರ ಅಂದರೆ ಮಣ್ಣಿನಲ್ಲಿ ಕೊಳೆತ ಸಸ್ಯಗಳ ಮೇಲೆ ಬ್ಯಾಕ್ಟೀರಿಯಾಗಳ ಕ್ರಿಯೆಯಿಂದ ಉಂಟಾದ ಜೈವಿಕ ಪದಾರ್ಥ ಶೇಖರವಾಗಿರುತ್ತದೆ. ಅದರೆ ಈ ಜೈವಿಕ ಅಂಶಗಳು ಇರುವುದಕ್ಕೆ ಮಣ್ಣಿನ ರಚನೆಯಲ್ಲಿ ಗಾಳಿ ಮತ್ತು ನೀರು ಸುಲಭವಾಗಿ ಹರಿದಾಡುವಂತಿರಬೇಕು. ಉಷ್ಣದೇಶಗಳಲ್ಲಿ ಈ ಜೈವಿಕ ಪದಾರ್ಥಗಳಿಗೆ ಅನೇಕ ಅಪಾಯಗಳು ತಗಲುತ್ತವೆ. ಅಪಾರವಾದ ಬಿಸಿಲಿನ ಶಾಖದಿಂದ ಬ್ಯಾಕ್ಟೀರಿಯಾಗಳು ಸತ್ತು ಜೈವಿಕ ಪದಾರ್ಥ ಸುಟ್ಟುಹೋಗಬಹುದು ಅಥವಾ ಧಾರಾಕಾರವಾದ ಮಳೆಯ ನೀರ ಹೊಡೆತದಿಂದಾಗಿ ಮೇಲ್ಪದರದ ಮಣ್ಣಿನ ರಚನೆ ಜರ್ಝರಿತವಾಗಿ ಕೆಳಪದರದಲ್ಲಿರುವ ಮಣ್ಣಿಗೆ ನೀರು ಮತ್ತು ಗಾಳಿ ಹೋಗದಂತಾಗಬಹುದು. ಅಥವಾ ಲೋಹಾಂಶಗಳು ಸೋರಿಹೋಗಬಹುದು ಅಥವಾ ಸಸ್ಯಗಳ ಬೇರುಗಳಿಗೆ ಎಟುಕಲಾರದಷ್ಟು ಆಳಕ್ಕೆ ಲೋಹಾಂಶಗಳು ತಳ್ಳಲ್ಪಡಬಹುದು. ಈ ಅಪಾಯಗಳ ವಿರುದ್ಧ ಮಣ್ಣನ್ನು ಕಾಪಾಡಬೇಕಾಗುತ್ತದೆ. ಮಣ್ಣನ್ನು ನೇರವಾಗಿ ಗಾಳಿ ಮತ್ತು ಶಾಖಕ್ಕೆ ಒಡ್ಡಿದಾಗ ಮಣ್ಣಿನ ಉಷ್ಣಾಂಶ ಏರುತ್ತದೆ ಮತ್ತು ಜೈವಿಕ ಪದಾರ್ಥ ವೇಗವಾಗಿ ನಾಶಹೊಂದುತ್ತದೆ. ಉಷ್ಣದೇಶಗಳಲ್ಲಿ ಹಗಲು ಮತ್ತು ರಾತ್ರಿಗಳ ನಡುವೆ ಉಂಟಾಗುವ ಉಷ್ಣಾಂಶದ ಭಾರೀ ಏರಿಳಿತ ಮಣ್ಣಿನ ಬಂಧದ ನಾಶವನ್ನು ತೀವ್ರಗೊಳಿಸುತ್ತದೆ ಹಾಗೂ ಗಾಳಿ ಮತ್ತು ಮಳೆ ಮಣ್ಣನ್ನು ಕೊಚ್ಚಿಹಾಕುತ್ತವೆ.

ತೇವಯುತ ಉಷ್ಣವಲಯದ ಬಹುಭಾಗಗಳಲ್ಲಿ ಮಣ್ಣು ಪುಡಿಪುಡಿಯಾಗುವ ಕೆಂಪು ಮಿಶ್ರಿತ ಜಂಬು ಮಣ್ಣಾಗಿರುತ್ತದೆ. ಈ ಮಣ್ಣಿನಲ್ಲಿ ಹೆಚ್ಚಾಗಿ ಕಬ್ಬಿಣ ಮತ್ತು ಅಲ್ಯೂಮಿನಾದ ಹೈಡ್ರಾಕ್ಸೈಡು ಬಿದ್ದು ಗಾಳಿಯ ಸಂಪರ್ಕಕ್ಕೆ ಬಂದ ಕೂಡಲೇ ಘನೀಕೃತವಾಗುತ್ತದೆ. ಶುದ್ಧವಾದ ಜಂಬು ಮಣ್ಣು ಮತ್ತು ಕೆಂಪು ಹಾಗೂ ಹಳದಿ ಮಿಶ್ರಿತ ಮಣ್ಣು ವ್ಯವಸಾಯದ ದೃಷ್ಟಿಯಿಂದ ನಿರುಪಯುಕ್ತವಾದುದು.

ಶತಶತಮಾನಗಳಿಂದ ಉಷ್ಣದೇಶಗಳ ಜನರು ಈ ಅನನುಕೂಲಕರ ಮಣ್ಣಿನ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿ ಒಂದು ರೀತಿಯ ಅಲೆಮಾರಿ ವ್ಯವಸಾಯ ಪದ್ಧತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಒಂದು ಪ್ರದೇಶದಲ್ಲಿ ಜಮೀನನ್ನು ಹಲವು ವರ್ಷಗಳು ಸಾಗುವಳಿ ಮಾಡಿ ಅನಂತರ ಸಾರ ವೃದ್ಧಿಗಾಗಿ ಬೀಳು ಬಿಡುವುದು. ಕುರುಚಲು ಗಿಡಗಳು ಬೆಳೆದು ಮಣ್ಣಿಗೆ ಸಾರ ಹಿಂದಿರುಗಲು ಈ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಒಮ್ಮೆ ಬೀಳುಬಿಟ್ಟ ಜಮೀನು ೨೦–೨೫ ವರ್ಷಗಳ ಕಾಲ ಆ ಸ್ಥಿತಿಯಲ್ಲಿರುವುದುಂಟು. ಅತಿ ಕಠಿಣ ಪರಿಸ್ಥಿತಿಗಳಲ್ಲಿ ಬದುಕಿಗಾಗಿ ಈ ಅಲೆಮಾರಿ ವ್ಯವಸಾಯ ಪದ್ಧತಿ ಅನುಕೂಲವಾಗಿದ್ದರೂ ನೆಲೆಯಾದ ಸಾಮೂಹಿಕ ಜೀವನ ಪದ್ಧತಿ ಇದರಿಂದ ಸಾಧ್ಯವಾಗುವುದಿಲ್ಲ.

ಆಹಾರ ಪೂರೈಕೆಯ ಲಕ್ಷಣ: ಉಷ್ಣ ವಾಯುಗುಣ ಆಹಾರ ಪೂರೈಕೆಯ ಲಕ್ಷಣದ ಮೇಲೂ ಪ್ರಭಾವ ಬೀರುತ್ತದೆ. ಉಷ್ಣದೇಶಗಳ ಮಣ್ಣಿನ ರಾಸಾಯನಿಕ ಗುಣದಿಂದಾಗಿ ಆಹಾರದಲ್ಲಿ ಸತತವಾಗಿ ಸಸಾರಜನಕದ ಅಭಾವವಿರುತ್ತದೆ. ಸಸಾರಜನಕದ ಅಭಾವದಿಂದ ಮನುಷ್ಯನಲ್ಲಿ ಕಾರ್ಯ ಸಾಮರ್ಥ್ಯ ಕುಂದಿ ಹೋಗುತ್ತದೆ. ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಸಸಾರಜನಕವು ಪ್ರಧಾನ ಅಂಶ

ವಾಗಿದೆ. ಮಕ್ಕಳ ಆಹಾರದಲ್ಲಿ ಸಸಾರಜನಕದ ಅಭಾವ ಬೆಳವಣಿಗೆಯನ್ನು ಕುಂಠಿತಗೊಳಿಸುವ ಅಂಶವಾಗುತ್ತದೆ. ಮಕ್ಕಳಲ್ಲಿ ಬೌದ್ಧಿಕ ವಿಳಂಬಿತ ಬೆಳವಣಿಗೆಗೂ ಆಹಾರದಲ್ಲಿ ಸಸಾರಜನಕದ ಅಭಾವಕ್ಕೂ ನಿಕಟ ಸಂಬಂಧವಿದೆ ಎಂಬುದಕ್ಕೆ ಈಚೆಗೆ ಹೆಚ್ಚು ಸಾಕ್ಷಿ ಪುರಾವೆಗಳು ದೊರಕುತ್ತಿವೆ.

ವ್ಯವಸಾಯ ರೋಗಗಳು ಮತ್ತು ಕ್ರಿಮಿ ಕೀಟಗಳು

ಉಷ್ಣದೇಶಗಳ ವ್ಯವಸಾಯದಲ್ಲಿರುವ ಮತ್ತೊಂದು ಭಾರಿ ಅನನುಕೂಲವೆಂದರೆ ವ್ಯವಸಾಯಕ್ಕೆ ಮಾರಕವಾದ ಸಾವಿರಾರು ವರ್ಗಗಳ ಸಸ್ಯಗಳು ಹಾಗೂ ಕ್ರಿಮಿಕೀಟಗಳು. ಇವು ಸದ್ಯದಲ್ಲಿ ವ್ಯವಸಾಯದ ಅಭಿವೃದ್ಧಿಗೆ ಭಾರಿ ಅಡಚಣೆಯಾಗಿವೆ. ಕಾಲಕ್ರಮದಲ್ಲಿ ಸಾಕಷ್ಟು ಸಂಶೋಧನೆ ನಡೆದಲ್ಲಿ ಈ ಅಸಂಖ್ಯಾತ ಸಸ್ಯವರ್ಗಗಳು ಉಷ್ಣದೇಶಗಳ ಅಮೂಲ್ಯ ಸಂಪತ್ತಾಗಬಹುದು. ಉಷ್ಣದೇಶಗಳಲ್ಲಿ ವ್ಯವಸಾಯದ ಮೇಲೆ ಪ್ರಭಾವ ಬೀರುವ ರೋಗಗಳು ಮತ್ತು ಕೀಟಗಳು ಆರ್ಥಿಕ ಅಭಿವೃದ್ಧಿಯ ಮೇಲೆ ಯಾವ ಪರಿಣಾಮ ಬೀರಬಹುದು ಎಂಬುದರ ಬಗ್ಗೆ ನಿಖರವಾದ ಹಾಗೂ ವ್ಯವಸ್ಥಿತ ಜ್ಞಾನ ಇನ್ನೂ ಸಾಕಷ್ಟಿಲ್ಲ. ಆದಾಗ್ಯೂ ಅಮೆರಿಕದ ವಿಜ್ಞಾನಗಳ ರಾಷ್ಟ್ರೀಯ ಅಕಾಡೆಮಿಯು 'ಟ್ರಾಪಿಕಲ್ ಹೆಲ್ತ್' ಎಂಬ ಸಮೀಕ್ಷೆಯಲ್ಲಿ ಈ ಸಮಸ್ಯೆಯ ವಿಸ್ತಾರವನ್ನು ವಿವರಿಸಿದೆ.

ಕರುಳಿನ ಪರೋಪಜೀವಿಗಳು ಇಡೀ ಉಷ್ಣವಲಯದ ಸಾಕುಪ್ರಾಣಿಗಳಲ್ಲಿ ಸಾಮಾನ್ಯವಾಗಿ ಹರಡಿವೆ. ಇವುಗಳ ಪರಿಣಾಮ ರೋಗ ತಗುಲಿದ ಪ್ರಾಣಿಗಳು ಸಾಯುವುದಷ್ಟೇ ಅಲ್ಲದೆ ಇನ್ನೂ ಅನೇಕ ರೀತಿ ಯಾಗಿದೆ. ಈ ಪರೋಪಜೀವಿಗಳು ಕರುಗಳ ವಿಳಂಬಿತ ಬೆಳವಣಿಗೆಗೆ, ಹಾಲು ಮತ್ತು ಮಾಂಸದ ಇಳುವರಿ ಕಡಿಮೆಯಾಗುವುದಕ್ಕೆ, ಕುರಿಗಳಲ್ಲಿ ಉಣ್ಣೆಯ ಉತ್ಪಾದನೆ ಕಡಿಮೆಯಾಗುವುದಕ್ಕೆ ಮತ್ತು ಕೆಲಸ ಮಾಡುವ ಪ್ರಾಣಿಗಳ ಕಾರ್ಯಸಾಮರ್ಥ್ಯ ಕುಂದುವುದಕ್ಕೆ ಕಾರಣವಾಗುತ್ತವೆ.

ಸಮಶೀತೋಷ್ಣ ವಲಯದಲ್ಲಿ ಚಳಿಗಾಲದಲ್ಲಿ ಉಷ್ಣಾಂಶ ಕಡಿಮೆಯಿರುವುದರಿಂದ ಕರುಳಿನ ಪರೋಪಜೀವಿಗಳ ಜೀವನಕ್ಕೆ ಮತ್ತು ಹರಡುವಿಕೆಗೆ ಪ್ರತಿಬಂಧವಿರುತ್ತದೆ. ಆದರೆ ಉಷ್ಣವಲಯಗಳಲ್ಲಿ ಈ ಅನುಕೂಲತೆಯೂ ಇರುವುದಿಲ್ಲ. ರೋಗಗಳು ಮತ್ತು ಪಿಡುಗುಗಳಿಂದ ಆಗಬಹುದಾದ ನಷ್ಟ ವನ್ನು ತಪ್ಪಿಸಲು ಹಲವು ಸರ್ಕಾರಗಳು ಕೃತಕವಾಗಿ ಚಳಿಗಾಲವನ್ನುಂಟು ಮಾಡಲು ಪ್ರಾರಂಭಿಸಿವೆ. ಹತ್ತಿ ಬೆಳೆಯುವ ಹಲವು ಉಷ್ಣದೇಶಗಳ ಸರ್ಕಾರಗಳು ಶಾಸನ ರೀತ್ಯ ಒಂದು ನಿರ್ದಿಷ್ಟ ದಿನಾಂಕ ದೊಳಗೆ ಎಲ್ಲ ಬೆಳೆಗಳನ್ನು ಕಿತ್ತು ಸುಟ್ಟು ಹಾಕಬೇಕೆಂದೂ ನಿರ್ದಿಷ್ಟ ದಿನಾಂಕದ ಅನಂತರವೇ ನಾಟಿಯನ್ನು ಆರಂಭಿಸಬಹುದೆಂದೂ ವಿಧಿಸುವುದರ ಮೂಲಕ ವಿರಾಮ ಅವಧಿಯನ್ನು ಹೇರುತ್ತವೆ.

ಉಷ್ಣವಾತಾವರಣವು ಸಸ್ಯ ಸಮೃದ್ಧಿಯ ವೇಗವಾದ ಬೆಳವಣಿಗೆಗೆ ಕಾರಣವಾಗುವಂತೆಯೇ ಪೋಷಕಾಂಶಕ್ಕೂ ಅನ್ನಾಂಶಗಳಿಗೂ ಬೆಳೆಗಳೊಂದಿಗೆ ಪೈಪೋಟಿ ನಡೆಸುವಂಥ ಕಳೆಗಳ ಸಮೃದ್ಧ ಬೆಳವಣಿಗೂ ಬೆಳೆಗಳ ನಾಶಕ್ಕೆ ಕಾರಣವಾಗುವ ಫಂಗೈ, ಸ್ಪೈಡರ್‌ಮೈಟ್ಸ್, ಈಲ್‌ವರ್ಮ್ಸ್ ಮತ್ತು ವೈರಸ್ ರೋಗಗಳ ಬೆಳವಣಿಗೆಗೂ ಅನುಕೂಲಕರವಾಗಿರುತ್ತದೆ.

ಉಷ್ಣದೇಶಗಳ ವ್ಯವಸಾಯದ ಮತ್ತೊಂದು ಪೀಡೆ ಎಂದರೆ ರಾಕ್ಷಸಾಕಾರದ ಮರುಭೂಮಿ ಮಿಡತೆಗಳ ಹಿಂಡು. ಈ ಹಿಂಡುಗಳು ಎಲ್ಲೂ ನಿಲ್ಲದೆ ೧೨೦೦ ಮೈಲಿ ಹಾರಬಲ್ಲವು. ಇವು ಪಶ್ಚಿಮ ಆಫ್ರಿಕದಿಂದ ಇಂಡಿಯದ ವರೆಗೆ ಎಲ್ಲಿ ಬೇಕಾದರೂ ಬೆಳೆಗಳನ್ನು ನಾಶಪಡಿಸಬಲ್ಲವು. ಅಂತರರಾಷ್ಟ್ರೀಯ ಸಹಕಾರದಿಂದ ಈಚೆಗೆ ಕೆಂಪು ಮಿಡಿತೆಗಳನ್ನು ಯಶಸ್ವಿಯಾಗಿ ಹತೋಟಿಗೆ ತರಲಾಗಿದೆ. ಆದರೆ ಮರುಭೂಮಿ ಮಿಡತೆಯನ್ನು ಭಾಗಶಃ ಮಾತ್ರ ಹತೋಟಿಗೆ ತರಲಾಗಿದೆ. ಈ ಎರಡೂ ಸಂದರ್ಭ ಗಳಲ್ಲಿ ಕೀಟನಾಶಕಗಳನ್ನು ಹೆಚ್ಚಾಗಿ ಅವಲಂಬಿಸಲಾಗಿದೆ. ಆದರೆ ಈಚೀಚೆಗೆ ಮಿಡತೆಗಳು ಕೀಟ ನಾಶಕಗಳ ವಿರುದ್ಧ ಪ್ರತಿರೋಧವನ್ನು ಬೆಳೆಸಿಕೊಳ್ಳತೊಡಗಿವೆ.

ಉಷ್ಣವಲಯದ ಆಫ್ರಿಕದ ಬಹುಭಾಗದಲ್ಲಿ ಟ್ಸೆಟ್ಸೆ ನೊಣಗಳ ಕಡಿತದಿಂದ ಬರುವ ಟ್ರಿಪನೋ-ಸೋಮಿಯಾಸಿಸ್ ಎಂಬ ರೋಗದಿಂದ ದನ ಕರುಗಳನ್ನು ಮತ್ತು ಕೆಲಸದ ಪ್ರಾಣಿಗಳನ್ನು ಸಾಕುವುದು ಕಷ್ಟಕರವಾಗಿದೆ. ಈ ಕಾರಣದಿಂದ ಆಫ್ರಿಕದ ವ್ಯವಸಾಯ ಇನ್ನೂ ಜೀವನಾಧಾರ ಮಟ್ಟದಲ್ಲೇ ಇದೆ.

ಉಷ್ಣದೇಶಗಳ ಅಸಂಖ್ಯಾತ ರೋಗಗಳು ಮತ್ತು ಪಿಡುಗುಗಳಿಗೆ ಮತ್ತೊಂದು ನಿದರ್ಶನ ಮೆವರೆ ಪೂರ್ವ ತೀರದ ಜ್ವರ. ಪೂರ್ವ ಮತ್ತು ಮಧ್ಯ ಆಫ್ರಿಕದಲ್ಲಿ ಉಣ್ಣೆಮಳುಗಳ ಮೂಲಕ ಹರಡುವ ಈ ರೋಗ ಪ್ರತಿ ವರ್ಷ ಐದು ಲಕ್ಷ ಕರುಗಳನ್ನು ಕೊಲ್ಲುತ್ತದೆ. ಹೊಸ ತಳಿಯ ಮತ್ತು ಸೀಮೆಯದನಕರುಗಳು ಈ ರೋಗಕ್ಕೆ ಹೆಚ್ಚಾಗಿ ಬಲಿಯಾಗುವುದರಿಂದ ಉತ್ತಮವಾದ ಮಿಶ್ರತಳಿ ಪ್ರಾಣಿಗಳನ್ನು ಅಭಿವೃದ್ಧಿಪಡಿಸುವುದು ಈ ಪ್ರದೇಶದಲ್ಲಿ ಅಸಾಧ್ಯವಾಗಿದೆ. ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆ(U.N.D.P.) ಮತ್ತು ಪೂರ್ವ ಆಫ್ರಿಕನ್ ದೇಶಗಳ ಸರಕಾರಗಳು ಹಾಗೂ ಅಮೆರಿಕ ಮತ್ತು ಇಂಗ್ಲೆಂಡಿನ ದ್ವಿಪಕ್ಷೀಯ ನೆರವು ನೀಡಿಕೆ ಸಂಸ್ಥೆಗಳ ಜಂಟಿ ಧನಸಹಾಯದಿಂದ ಈ ರೋಗ ಪ್ರತಿಬಂಧನಕ್ಕೆ ಪರಿಣಾಮಕಾರಿಯಾದ ವ್ಯಾಕ್ಸೀನನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳು ನಡೆದಿವೆ.

ಪರಿಹಾರಗಳು : ಉಷ್ಣವಾಯುಗುಣದಿಂದ ವ್ಯವಸಾಯದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಎದುರಿಸುವ ಬಗ್ಗೆ ಮತ್ತು ಹಲವು ಉಷ್ಣವಾಯುಗುಣದ ಲಕ್ಷಣಗಳನ್ನು ಅನುಕೂಲಕರವಾಗಿ ಪರಿವರ್ತಿಸಿಕೊಳ್ಳುವ ಬಗ್ಗೆ ತೀವ್ರ ಸಂಶೋಧನೆ ನಡೆಯುವುದು ಅಗತ್ಯವಾಗಿದೆ. ಆದರೆ ದುರದೃಷ್ಟ ದಿಂದ ಇತ್ತೀಚಿನ ವರೆಗೆ ಒಂದೆರಡು ರಫ್ತು ಪದಾರ್ಥಗಳು ಮತ್ತು ಗೋದಿ ಹಾಗೂ ಬತ್ತವನ್ನು ಬಿಟ್ಟು ಉಷ್ಣದೇಶಗಳ ವ್ಯವಸಾಯ ಸಮಸ್ಯೆಗಳ ಬಗ್ಗೆ ಹೆಚ್ಚಿನ ಕೆಲಸವೇನೂ ನಡೆದಿಲ್ಲ.

ಸಮಶೀತೋಷ್ಣ ದೇಶಗಳ ವ್ಯವಸಾಯ ಇಂದಿನ ಮುಂದುವರಿದ ಮಟ್ಟವನ್ನು ತಲುಪಲು ದೀರ್ಘಕಾಲವನ್ನೇ ತೆಗೆದುಕೊಂಡಿದೆ. ಅಲ್ಲಿನ ಅನೇಕ ವ್ಯವಸಾಯ ತಂತ್ರಗಳನ್ನು ಮತ್ತು ಪರಿಹಾರ ಗಳನ್ನು ಉಷ್ಣದೇಶಗಳಿಗೆ ನೇರವಾಗಿ ವರ್ಗಾಯಿಸಲು ಬರುವುದಿಲ್ಲವಾದರೂ ಮೂಲಭೂತ ಸಿದ್ಧಾಂತ ಗಳು ಸಾಧುವಾಗುತ್ತವೆ.

ದ್ವಿತೀಯ ಮಹಾಯುದ್ಧದಿಂದೀಚೆಗೆ ರಸಗೊಬ್ಬರಗಳು ಮತ್ತು ತಳಿ ಹಾಕುವ ಕ್ಷೇತ್ರಗಳಲ್ಲಿ ನಡೆದಿರುವ ಪ್ರಯೋಗಗಳಿಂದ ಸಸಿಗಳ ಉತ್ಪಾದಕತೆ ಹಾಗೂ ಗುಣಲಕ್ಷಣಗಳಲ್ಲಿ ಗಣನೀಯ ಪ್ರಗತಿ ಯನ್ನು ಸಾಧಿಸಲಾಗಿದೆ. ಆದರೆ ರಸಗೊಬ್ಬರಗಳು ಬಹಳ ದುಬಾರಿ ಹಾಗೂ ಉಷ್ಣದೇಶದ ಮಣ್ಣಿನಲ್ಲಿ ತುಂಬಬೇಕಾದ ಸಸ್ಯಗಳ ನಿರ್ದಿಷ್ಟ ಕೊರತೆಗಳ ಬಗ್ಗೆ ಹಾಗೂ ಆ ಕೊರತೆಯನ್ನು ಹೇಗೆ ತುಂಬಬೇಕು ಎಂಬುದರ ಬಗ್ಗೆ ತಿಳಿವಳಿಕೆ ಇನ್ನೂ ಸಾಲದು. ಉದಾಹರಣೆಗೆ ಸೀಮೆ ತಳಿಯ ದನಕರುಗಳನ್ನು ಆಫ್ರಿಕದ ಕೆನ್ಯಾ ದೇಶದಲ್ಲಿ ಅಭಿವೃದ್ಧಿ ಪಡಿಸಲು ಕೆನ್ಯಾದ ಮಣ್ಣಿನಲ್ಲಿ ಯಾವ Trace elements– ಅಂದರೆ ಮಣ್ಣಿನಲ್ಲಿ ಅತಿ ಸೂಕ್ಷ್ಮ ಪ್ರಮಾಣದಲ್ಲಿರುವ ತಾಮ್ರ, ಕೊಬಾಲ್ಟ್ ಮುಂತಾದುವು– ಇರಬೇಕು ಎಂಬುದನ್ನು ಪತ್ತೆ ಹಚ್ಚಲು ಸುಮಾರು ೨೦ ವರ್ಷಗಳ ಸಂಶೋಧನೆಯೇ ಬೇಕಾಯಿತು.

ಸಮಶೀತೋಷ್ಣ ದೇಶಗಳಲ್ಲಿ ವ್ಯವಸಾಯದ ಉತ್ಪಾದಕತೆಯನ್ನು ಹೆಚ್ಚಿಸಲು ಕಳೆದ ೭೦ ವರ್ಷ ಗಳಲ್ಲಿ ತಂತ್ರಸಮೂಹವೊಂದನ್ನು ಕ್ರಮೇಣವಾಗಿ ಅಭಿವೃದ್ಧಿಪಡಿಸಲಾಗಿದೆ. ನಿರ್ದಿಷ್ಟವಾದ ವಾಯು ಗುಣದ ಲಾಭ ಪಡೆದುಕೊಳ್ಳಬಲ್ಲ ಗುಣಲಕ್ಷಣವನ್ನು ಹೊಂದಿರುವಂಥ ಹೊಸ ಜಾತಿಯ ಸಸಿಗಳನ್ನು ಸೃಷ್ಟಿಸುವುದು ಬಯಲಾಜಿಕಲ್ ಇಂಜನಿಯರಿಂಗ್‌ನಿಂದ ಸಾಧ್ಯವಾಗಿದೆ. ಉದಾಹರಣೆಗೆ ಸಸಿಗಳು ಅಪಾರವಾಗಿ ಗೊಬ್ಬರವನ್ನು ಎಲೆಗಳನ್ನಾಗಿಸುವ ಬದಲು ಉಪಯುಕ್ತ ಪದಾರ್ಥವನ್ನಾಗಿ ಪರಿವರ್ತಿಸು ವಂತೆ ಮಾಡುವುದು ಸಾಧ್ಯವಾಗಿದೆ. ಕೀಟಗಳು ಮತ್ತು ಸಸ್ಯರೋಗಗಳ ವಿರುದ್ಧ ಪ್ರತಿರೋಧವನ್ನು ಸಸಿಯಲ್ಲೇ ಮೂಡಿಸುವ ಸಾಧ್ಯತೆ ಇದೆ.

ಇದುವರೆಗೆ ಈ ತಂತ್ರ ಸಮೂಹವನ್ನು ಉಷ್ಣದೇಶಗಳಲ್ಲಿ ಬಳಸುವ ಪ್ರಯತ್ನ ನಡೆದಿರಲಿಲ್ಲ. ಗಿಡ್ಡ ಜಾತಿಯ ಮೆಕ್ಸಿಕನ್ ಗೋಧಿಯನ್ನು ಅಭಿವೃದ್ಧಿ ಪಡಿಸುವಲ್ಲಿ ರಾಕ್‌ಫೆಲ್ಲರ್ ಪ್ರತಿಷ್ಠಾನದ ಪ್ರಯತ್ನ ಮತ್ತು ಅಧಿಕ ಇಳುವರಿ ಜಾತಿಯ ಬತ್ತವನ್ನು ಅಭಿವೃದ್ಧಿಪಡಿಸುವಲ್ಲಿ ಫಿಲಿಪೀನ್ಸ್‌ನ ಅಂತರ ರಾಷ್ಟ್ರೀಯ ಅಕ್ಕಿ ಸಂಶೋಧನ ಸಂಸ್ಥೆಯ ಪ್ರಯತ್ನಗಳು ಉಷ್ಣದೇಶಗಳಲ್ಲೂ ತಂತ್ರ ಸಮೂಹವು ಕೆಲಸ ಮಾಡಬಲ್ಲದೆಂಬುದನ್ನು ತೋರಿಸಿವೆ. ಅಧಿಕ ಇಳುವರಿ ತಳಿಯ ಸಸಿಗಳು. ಸರಿಯಾದ ರೀತಿಯ ರಸಗೊಬ್ಬರದ ಪೂರೈಕೆ ಮತ್ತು ಬಳಕೆ. ರೋಗಗಳು ಮತ್ತು ಕ್ರಿಮಿಕೀಟಗಳ ನಿಯಂತ್ರಣ. ಸರಿಯಾದ

ನಾಟಿ ಹಾಕುವಿಕೆ. ಸಾಗುವಳಿ ಮತ್ತು ನೀರಾವರಿ ವಿಧಾನಗಳ ಬಳಕೆ ಹಾಗೂ ಯೋಗ್ಯ ತಳಿಯ ಪ್ರಾಣಿಗಳನ್ನು ಸಾಕುವುದು, ಸತ್ವಯುತವಾದ ಮೇವು ಮತ್ತು ಸೂಕ್ತ ನಿರ್ವಹಣೆ—ಇವೇ ಮುಂತಾದ ತಂತ್ರ ಸಮೂಹದ ಬಳಕೆಯಿಂದ ಯಾವುದೇ ಬೆಳೆಯಲ್ಲಿ ಸರಾಸರಿ ಇಳುವರಿಯನ್ನು ವೇಗವಾಗಿ ಹೆಚ್ಚಿಸುವುದು ಸಾಧ್ಯವಿದೆ.

ಉಷ್ಣದೇಶಗಳ ಮಣ್ಣಿನ ಸತ್ವಹೀನತೆಯನ್ನು ಹೋಗಲಾಡಿಸಲು ರಸಗೊಬ್ಬರಗಳನ್ನು ಬಳಸುವುದರ ಜೊತೆಗೆ ಹಾಗೂ ಅನಿಯತವಾದ ಮಳೆಗಳನ್ನು ಎದುರಿಸಲು ಸುಧಾರಿತ ನೀರಾವರಿ ವ್ಯವಸ್ಥೆ ಮತ್ತು ಕಾಲುವೆಗಳನ್ನು ನಿರ್ಮಿಸುವುದೇ ಅಲ್ಲದೆ ತಂತ್ರ ಸಮೂಹ ಉಷ್ಣದೇಶಗಳ ಉಷ್ಣತೆ ಮತ್ತು ಅತಿ ಶೀತದ ಅಭಾವದ ಲಾಭ ಪಡೆದುಕೊಂಡು ವರ್ಷಕ್ಕೆ ೨ ಮತ್ತು ೩ ಬೆಳೆಗಳನ್ನು ತೆಗೆಯಲು ಸಹಾಯ ಮಾಡಬಲ್ಲುದು.

ಇದುವರೆಗೆ ಅಭಿವೃದ್ಧಿಶೀಲ ದೇಶಗಳು ಸಂಶೋಧನೆಗಳ ಕಡೆಗೆ ಹೆಚ್ಚು ಗಮನ ಕೊಡುತ್ತಿಲ್ಲ. ಕಾರಣ ಸಾಂಪ್ರದಾಯಿಕ ಲೆಕ್ಕಾಚಾರದ ಪ್ರಕಾರ ಸಂಶೋಧನೆಗಾಗಿ ಮಾಡುವ ವೆಚ್ಚವು ಹೂಡಿಕೆ ಎನಿಸುವುದಿಲ್ಲ. ಅಂತರ ರಾಷ್ಟ್ರೀಯ ನೆರವು ಸಂಸ್ಥೆಗಳೂ ಸಹ ಸಂಶೋಧನೆಗೆ ಹೆಚ್ಚು ಪ್ರಾಧಾನ್ಯವನ್ನು ಕೊಡುತ್ತಿಲ್ಲ. ಈಚೆಗೆ ಅಂದರೆ ೧೯೭೫ರಲ್ಲಿ ವಿಶ್ವ ಬ್ಯಾಂಕ್ ಸಮೂಹ ಅಭಿವೃದ್ಧಿಶೀಲ ದೇಶಗಳಲ್ಲಿ ಯೋಗ್ಯವಾದ ವ್ಯವಸಾಯ ಸಂಶೋಧನಾ ಯೋಜನೆಗಳಿಗೆ ಧನಸಹಾಯ ಮಾಡುವುದರ ಬಗ್ಗೆ ತೀವ್ರ ಗಮನ ಕೊಡಲು ನಿರ್ಧರಿಸಿತು. ವಿಶ್ವಬ್ಯಾಂಕ್ ಸಮೂಹವು ಸಹಾಯ ನೀಡುವ ವ್ಯವಸಾಯ ಯೋಜನೆಗಳಲ್ಲಿ ನಿರ್ದಿಷ್ಟ ಅನ್ವಯಿಕ ವ್ಯವಸಾಯ ಸಂಶೋಧನಾ ಯೋಜನೆಯೊಂದು ಸೇರಿಕೊಂಡಿರುವಂತೆ ನೋಡಿಕೊಳ್ಳುತ್ತಿರುವುದು ಗಮನಾರ್ಹವಾಗಿದೆ. ಉದಾಹರಣೆಗೆ ೧೯೭೮ರ ಫೆಬ್ರವರಿಯಲ್ಲಿ ಇಥಿಯೋಪಿಯಾ ಹೈಲ್ಯಾಂಡ್ಸ್ ಹತ್ತಿ ಯೋಜನೆಗೆ ನೆರವು ನೀಡುವಲ್ಲಿ ಹತ್ತಿ, ಅಕ್ಕಿ ಮತ್ತು ನೆಲಗಡಲೆ ಬೆಳೆಗಳ ಬಗ್ಗೆ ಸಂಶೋಧನ ಕಾರ್ಯಗಳು ಆ ಯೋಜನೆಯಲ್ಲಿ ಸೇರುವಂತೆ ಮಾಡಲಾಯಿತು.

೧೯೭೧ರಲ್ಲಿ ವಿಶ್ವ ಆಹಾರ ಯೋಜನೆ ವಿಶ್ವಬ್ಯಾಂಕ್ ಸಮೂಹ ಮತ್ತು ವಿಶ್ವ ಸಂಸ್ಥೆಯ ಅಭಿವೃದ್ಧಿ ಯೋಜನೆಗಳು ಒಂದುಗೂಡಿ ಅಂತರರಾಷ್ಟ್ರೀಯ ವ್ಯವಸಾಯ ಸಂಶೋಧನೆಗಾಗಿ ಅಂತರರಾಷ್ಟ್ರೀಯ ಸಲಹಾ ಮಂಡಳಿಯೊಂದನ್ನು ಸ್ಥಾಪಿಸಿದುವು. ಇದು ಉಷ್ಣದೇಶಗಳ ವ್ಯವಸಾಯ ಅಭಿವೃದ್ಧಿಯ ದೃಷ್ಟಿಯಿಂದ ಮಹತ್ತರ ಘಟನೆಯಾಗಿದೆ. ನಿಮ್ನಾಭಿವೃದ್ಧಿಯ ದೇಶಗಳ ವ್ಯವಸಾಯ ಸಮಸ್ಯೆಗಳ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಶೋಧನೆಗಳನ್ನು ನಡೆಸುವುದು ಮತ್ತು ಅದಕ್ಕಾಗಿ ಧನ ಸಹಾಯವನ್ನು ಒಟ್ಟುಗೂಡಿಸಿ ಸಂಯೋಜಿಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶಗಳಾಗಿವೆ. ಈ ಕಾರ್ಯಕ್ರಮದಲ್ಲಿ ತೊಡಗಿಸಿರುವ ಹಣಕಾಸಿನ ಪ್ರಮಾಣ ಅಂಥಾ ಭಾರಿಯೇನಲ್ಲ. ಅತಿ ಹೆಚ್ಚೆಂದರೆ ೮೦ ರಿಂದ ೮೫ ದಶಲಕ್ಷ ಡಾಲರುಗಳಿದ್ದೀತು. ಆದರೆ ಅಭಿವೃದ್ಧಿ ಪ್ರಭಾವದ ದೃಷ್ಟಿಯಿಂದ ಅದರ ಮಹತ್ವ ಅಪಾರವಾಗಿರುತ್ತದೆ. ಆದರೆ ಅಂತರರಾಷ್ಟ್ರೀಯ ಸಂಶೋಧನೆಯಿಂದಲೇ ಸಮಸ್ಯೆ ಪರಿಹಾರವಾಗಲಾರದು. ಪ್ರತಿಯೊಂದು ದೇಶವೂ ಸಂಶೋಧನೆಯ ಫಲಗಳನ್ನು ಅನ್ವಯ ಮಾಡಿಕೊಳ್ಳಬೇಕು ಮತ್ತು ಇದಕ್ಕೆ ಅಗತ್ಯವಾದ ಪೂರಕ ಸಂಶೋಧನೆಗಳನ್ನು ಸ್ಥಳೀಯವಾಗಿ ಕೈಗೊಳ್ಳಬೇಕು.

ಪ್ರಪಂಚದ ಮೊದಲ ಸಾಲಿನ ವ್ಯವಸಾಯ ತಜ್ಞರಲ್ಲಿ ಒಬ್ಬರಾದ ಚಾರ್ಲ್ಸ್ ಕೆಲ್ಲೋಗ್‌ರು ೧೯೬೭ರಲ್ಲಿ ಹೀಗೆ ಹೇಳಿದ್ದಾರೆ. "ಎಂದಾದರೊಂದು ದಿನ ಪ್ರಪಂಚದ ಅತಿ ಉತ್ಪಾದಕ ವ್ಯವಸಾಯ ಹೆಚ್ಚಾಗಿ ಉಷ್ಣದೇಶಗಳಲ್ಲಿ ಅದರಲ್ಲೂ ತೇವಯುಕ್ತ ಭಾಗಗಳಲ್ಲಿ ಇರುತ್ತದೆಂದು ಈ ಸಮೀಕ್ಷಕ ದೃಢವಾಗಿ ನಿರೀಕ್ಷಿಸುತ್ತಾನೆ."

ಸಲಹಾ ಮಂಡಳಿಯ ಸ್ಥಾಪನೆ ಮತ್ತು ಯಶಸ್ವೀ ಕಾರ್ಯ ನಿರ್ವಹಣೆಯು ಎಂದಾದರೊಂದು ದಿನ ಕೆಲ್ಲೋಗ್‌ರು ಊಹಿಸಿದುದಕ್ಕಿಂತಲೂ ಅನೇಕ ದಶಕಗಳು ಮುಂದಾಗಿಯೇ ಬರುವುದೆಂದು ಆಶಿಸಲು ಸಾಕಷ್ಟು ಆಧಾರವನ್ನು ಒದಗಿಸುತ್ತದೆ.

ಅನುವಾದ : ಬಿ. ಎಂ. ಕುಮಾರಸ್ವಾಮಿ

ಟಿ. ಎಸ್. ಸೂರ್ಯನಾರಾಯಣ

ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಅಂತ್ಯಕಾಲ ನಿರ್ಣಯ

ಹೊಯ್ಸಳ ಸಾಮ್ರಾಜ್ಯದ ಅಸ್ತಮಯ ಕಾಲದಲ್ಲಿ ಸಿಂಹಾಸನವನ್ನೇರಿದ ಮುಮ್ಮಡಿ ವೀರಬಲ್ಲಾಳ ತನ್ನ ಶೌರ್ಯ, ಸ್ಥೈರ್ಯ, ಅಪ್ರತಿಮ ಧುರೀಣತೆಗೆ ಪ್ರಸಿದ್ಧನಾದವನು. ಮುಮ್ಮಡಿ ವೀರಬಲ್ಲಾಳ ಕೇವಲ ವೈಯಕ್ತಿಕವಾಗಿ ಸಮರ್ಥನಾಗಿದ್ದನೆಂದೂ ಶ್ರೇಷ್ಠ ರಾಜನೊಬ್ಬನಲ್ಲಿರಬೇಕಾದ ಮಹದ್ ಗುಣಗಳಾವುವೂ ಅವನಲ್ಲಿರಲಿಲ್ಲವೆಂದೂ ಡೆರೆಟ್[1] ಮುಂತಾದ ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಈ ಹೇಳಿಕೆ ಎಷ್ಟರಮಟ್ಟಿಗೆ ಸತ್ಯ ಎಂಬುದು ಪ್ರಶ್ನಾರ್ಹ. ಮುಮ್ಮಡಿ ವೀರಬಲ್ಲಾಳನ ರಾಜಕೀಯ ಜೀವನವನ್ನು ಕೂಲಂಕಷವಾಗಿ ಅಧ್ಯಯನ ನಡೆಸಿದಾಗ ಮೇಲಿನ ಹೇಳಿಕೆಯ ಸತ್ಯಾಸತ್ಯತೆ ಗೋಚರವಾಗಬಲ್ಲದು.

ಮುಮ್ಮಡಿ ವೀರಬಲ್ಲಾಳ ಪ್ರತಿಭಾಶಾಲಿಯಾದರೂ ಅತ್ಯಂತ ದುರದೃಷ್ಟಶಾಲಿ. ಪ್ರಾಯಶಃ ಈತನ ಆಳ್ವಿಕೆಯಲ್ಲಿ ಕಂಡು ಬಂದಂತಹ ಸಂಕಷ್ಟಗಳು ಮತ್ತಾವ ಹೊಯ್ಸಳ ಅರಸರ ಆಳ್ವಿಕೆಯಲ್ಲಿಯೂ ಕಂಡುಬರಲಿಲ್ಲ. ಇಡೀ ದಕ್ಷಿಣಾಪಥವೇ ಮುಸ್ಲಿಮರ ಆಕ್ರಮಣಕ್ಕೆ ಒಳಗಾಗುವ ಪರಿಸ್ಥಿತಿಯಲ್ಲಿದ್ದಾಗ ಸುಮಾರು ಎಪ್ಪತ್ತು ವಸಂತ ಋತುಗಳ ಹಿರಿಯನಾದ ಈತ ನವಯುವಕನಂತೆ ಹರಿದು ಹಂಚಿಹೋಗಿದ್ದ ಹಲವಾರು ಸಾಮ್ರಾಜ್ಯಗಳನ್ನು ಒಗ್ಗೂಡಿಸಿ ಮುಸ್ಲಿಮರ ವಿರುದ್ಧ ಹುರಿದುಂಬಿಸಿ ನಿಲ್ಲಿಸಿದ ಸಾಹಸಿ. ದಕ್ಷಿಣಾಪಥದಲ್ಲಿ ಮುಸಲ್ಮಾನರ ಪ್ರಾಬಲ್ಯ ಕುಸಿಯುವಂತಹ ಪರಿಸ್ಥಿತಿಯನ್ನು ನಿರ್ಮಿಸಿದನಾದರೂ ಶತ್ರುಗಳ ಜಾಲಕ್ಕೆ ಬಲಿಯಾದ. ಇಂತಹ ಅಪ್ರತಿಮ ವೀರ ಮತ್ತು ಮೇಧಾವಿಯನ್ನು ಇತಿಹಾಸದಲ್ಲಿ ಕಡೆಗಣಿಸಿರುವುದು ನಿಜಕ್ಕೂ ಅತ್ಯಂತ ಶೋಚನೀಯ. ಮುಸ್ಲಿಮರನ್ನು ದಕ್ಷಿಣದಿಂದ ಹೊರದೂಡಿದ ಕೀರ್ತಿ ವಿಜಯನಗರದ ಕಂಪಣರಾಯನಿಗೆ ಸಲ್ಲುವುದಾದರೂ ಇದರಲ್ಲಿ ವೀರಬಲ್ಲಾಳನ ಪಾತ್ರವನ್ನು ಕಡೆಗಣಿಸುವಂತಿಲ್ಲ.

ಮುಮ್ಮಡಿ ವೀರಬಲ್ಲಾಳನ ಅಂತ್ಯಕಾಲದ ಬಗ್ಗೆ ನಮಗೆ ಖಚಿತವಾದ ಮಾಹಿತಿಗಳಾವುವೂ ದೊರೆತಿಲ್ಲ. ೧೩೪೨ರ ಸೆಪ್ಟೆಂಬರ್ ೮ರಂದು ಈತ ತಿರಿಚಿನಾಪಳ್ಳಿಯಲ್ಲಿ ಮಧುರೆಯವರ ವಿರುದ್ಧ ಕಾದಾಡುತ್ತ ಮೃತನಾದನೆಂಬುದಾಗಿ ಹಲವಾರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[2] ಕಡೂರು ತಾಲ್ಲೂಕಿನಲ್ಲಿ ದೊರೆತಿರುವ ಶಾಸನವೊಂದರ ಆಧಾರದ ಮೇಲೆ ಈ ರೀತಿಯ ಅಭಿಪ್ರಾಯಕ್ಕೆ ಅವರು ಬಂದಿದ್ದಾರೆ. ಆದರೆ ಆ ಶಾಸನವನ್ನು ಇನ್ನೂ ಸೂಕ್ಷ್ಮವಾಗಿ ಅವಲೋಕಿಸುವುದು ಅತ್ಯಗತ್ಯ.

ಕಡೂರು ತಾಲ್ಲೂಕಿನಲ್ಲಿ ಮೇಲೆ ಹೇಳಿರುವ ಶಾಸನ ದೊರಕಿದ ಸ್ಥಳ ಬಿದುರೆಯೆಂಬ ಕುಗ್ರಾಮ. ಈ ಶಾಸನದ ಕಾಲ ೧೩೪೮ ಎಂಬುದಾಗಿ ಆ ಶಾಸನದಿಂದ ತಿಳಿದುಬರುತ್ತದೆ. ಅಂದರೆ ಅದರಲ್ಲಿ ವ್ಯಕ್ತ

[1] Dr. J. D. M. Derret : *The Hoysalas*, p. 177

[2] William Coelho : *Hoysala Vamsa*, p. 250. S. Krishnaswami Aiyangar : *South India And Her Muhammadan Invaders*, p. 175

ವಾಗಿರುವ ಸಂಗತಿ ನಡೆದು ೨೬ ವರ್ಷಗಳ ಅನಂತರ ಬರೆಯಿಸಲ್ಪಟ್ಟ ಶಾಸನವಿದು. ಹೊಯ್ಸಳರ ಪರವಾಗಿ, ಮುಸ್ಲಿಮರ ವಿರುದ್ಧ ಕಂಕಯನೆಂಬ ವೀರ ಕಾದಾಡುತ್ತ ವೀರಸ್ವರ್ಗ ಪಡೆದ ಸಂದರ್ಭದಲ್ಲಿ ಆತನ ನೆನಪಿಗಾಗಿ ನಿಲ್ಲಿಸಿದ ವೀರಗಲ್ಲಿದು. ಶಾಸನದ ಬಹು ಮುಖ್ಯವಾದ ಹಾಗೂ ಪರಿಶೀಲಿಸಬೇಕಾದ ಭಾಗ ಹೀಗಿದೆ:

> "......ಕಂಕಯನು ಹಿಂದಣ ಚಿತ್ರಭಾನು ಸಂವಛರದ ಆಶ್ವೀಜ ಶು. ೮ ಬಲ್ಲಾಳದೇವನ ಕೂಡಿಚೀರಿಚೀ...ಪಳ್ಳಿಯಲು ತುರುಕರ ದಳದ ಕೂಡೆ ಹೊಯಿದಾಡಿ ರಣರಂಗದಲಿ ಕಾದಿ ದೇವರ ಕೂಡೆ ದೇವಲೋಕವ ಸೂರೆಗೊಂಡಂತ ಕಂಕಯನು ವೀರನಾಗಿ ಕಾದಿ ರಣ[ದ]ಲು ಬಿದ್ದ ವೀರಗಲಿದುವು......"

ಮೇಲಿನ ಶಾಸನದಲ್ಲಿ ಉಕ್ತವಾಗಿರುವ 'ದೇವರ ಕೂಡೆ' ಎಂಬ ಪದಕ್ಕೆ ವೀರಬಲ್ಲಾಳದೇವನ ಕೂಡೆ ಎಂದು ಅರ್ಥೈಸಿರುವುದರಿಂದ ಮಾತ್ರ ಕೊಯುಲ್ಹೋ, ಕೃಷ್ಣಸ್ವಾಮಿ ಐಯಂಗಾರ್ ಮುಂತಾದವರು ಮೇಲ್ಕಂಡಂತೆ ಅಭಿಪ್ರಾಯ ಪಡಲು ಸಾಧ್ಯವಾಗಿದೆ. 'ದೇವರ ಕೂಡೆ' ಎಂಬ ಪದದ ಅರ್ಥ, ಕಂಕಯನಿಗೆ ದೇವಲೋಕದಲ್ಲಿ ದೇವತೆಗಳ ಜೊತೆಗಿರುವ ಸುಯೋಗ ಲಭಿಸಿತು ಎಂದು ಮಾತ್ರವೆ ವಿನಾ ಮತ್ತೇನೂ ಆಗಿರಲು ಸಾಧ್ಯವಿಲ್ಲ.

ಹೊಯ್ಸಳ ಮುಮ್ಮಡಿ ವೀರಬಲ್ಲಾಳ ೧೩೪೨ರ ಸೆಪ್ಟೆಂಬರ್ ತಿಂಗಳ ಅನಂತರವೂ ಜೀವಿಸಿದ್ದ ನೆಂಬುದಕ್ಕೆ ಶಾಸನಗಳ ಮಾಹಿತಿ ದೊರಕಿದೆ. ಡಾ. ಜಿ.ಎಸ್. ಗಾಯಿಯವರ ರೀತ್ಯ ವೀರಬಲ್ಲಾಳ ೧೩೪೩ರ ಮೇ ತಿಂಗಳಲ್ಲಿಯೂ ಹೊಯ್ಸಳ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದ[3]. ಈರೋಡು ತಾಲ್ಲೂಕಿನ ಕುನ್ನತ್ತೂರಿನಲ್ಲಿ ದೊರಕಿರುವ ಅಪ್ರಕಟಿತ ಶಾಸನವೊಂದರ ಆಧಾರದಿಂದ ಅವರು ಈ ರೀತಿ ನಿರ್ಣಯಿಸಿದ್ದಾರೆ.

ಮುಮ್ಮಡಿ ವೀರಬಲ್ಲಾಳನ ಅನಂತರ ಹೊಯ್ಸಳ ಸಿಂಹಾಸನವನ್ನೇರಿದ ವಿರೂಪಾಕ್ಷ ನಾಲ್ವಡಿ ಬಲ್ಲಾಳ ಪ್ರಥಮ ಬಾರಿ ಶಾಸನದಲ್ಲಿ ಕಂಡುಬರುವುದು ಕ್ರಿ.ಶ. ೧೩೦೩ರಲ್ಲಿ.[4] ಮುಸ್ಲಿಮರಿಂದ ಸೋಲಿಸಲ್ಪಟ್ಟ ಮುಮ್ಮಡಿ ವೀರಬಲ್ಲಾಳ ಕಪ್ಪಗಳನ್ನು ಸಲ್ಲಿಸುವುದರ ಜೊತೆಗೆ ತನ್ನ ಮಗನನ್ನೂ ದೆಹಲಿಗೆ ಕಳುಹಿಸಬೇಕಾಯಿತು. ಅಲ್ಲಿ ಅವನನ್ನು ಸುಮಾರು ಎರಡು ವರ್ಷಗಳ ಕಾಲ ತನ್ನ ಆಸ್ಥಾನದಲ್ಲಿಯೇ ಇಟ್ಟುಕೊಂಡು ಸುಲ್ತಾನ ಗೌರವದಿಂದಲೇ ಹೊಯ್ಸಳ ರಾಜಧಾನಿಗೆ ಕಳುಹಿಸಿಕೊಟ್ಟ. ೧೩೦೫ರಲ್ಲಿ ಅವನು ದೆಹಲಿಯಿಂದ ಹಿಂದಿರುಗಿದ ಸಂತೋಷಾರ್ಥವಾಗಿ ಮುಮ್ಮಡಿ ವೀರಬಲ್ಲಾಳ ಕೂಡಲಿಯ ರಾಮನಾಥ ದೇವರಿಗೆ ದಾನಗಳನ್ನು ನೀಡಿ ಪೂಜೆಗಳನ್ನು ನಡೆಸಿದ.

ಪುನಃ ವಿರೂಪಾಕ್ಷ ಬಲ್ಲಾಳ ಶಾಸನದಲ್ಲಿ ಕಂಡುಬರುವುದು ೧೩೩೦ರಲ್ಲಿ: ತಿರುವಣ್ಣಾಮಲೈಯಲ್ಲಿ ಅವನಿಗೆ ಯುವರಾಜನಾಗಿ ಪಟ್ಟಾಭಿಷೇಕವಾದಾಗ[5]. ಇದಾದ ಅನಂತರ ೧೩೪೩ರ ಆಗಸ್ಟ್ ತಿಂಗಳ ವರೆವಿಗೂ ಅವನ ಹೆಸರು ಎಲ್ಲಿಯೂ ಕಂಡುಬರುವುದಿಲ್ಲ.

ನಾಲ್ವಡಿ ಬಲ್ಲಾಳನನ್ನು ಈ ಮೇಲೆ ಹೇಳಿದ ಎಲ್ಲ ಸಂದರ್ಭಗಳಲ್ಲೂ ವಿರೂಪಾಕ್ಷ ಬಲ್ಲಾಳನೆಂಬುದಾಗಿಯೇ ಕರೆಯಲಾಗಿದೆ. ೧೩೪೨ರ ಸೆಪ್ಟೆಂಬರ್‌ನಿಂದ ೧೩೪೩ರ ಮೇ ತಿಂಗಳಿನ ವರೆವಿಗೆ ಶಾಸನಗಳಲ್ಲಿ ಉಕ್ತವಾಗಿರುವ ವೀರಬಲ್ಲಾಳನೆಂಬುವನು ಈತನಲ್ಲ ಎನ್ನುವುದು ಖಚಿತ. ಲೂಯಿ ರೈಸರ ಪ್ರಕಾರ ಮುಮ್ಮಡಿ ವೀರಬಲ್ಲಾಳ ೧೩೪೨ರಲ್ಲಿಯೇ ಮೃತನಾಗಿದ್ದಿದ್ದರೆ ಆ ಕಾಲದಿಂದ ಈಚೆಗೆ ಬರುವ ಹೊಯ್ಸಳ ಶಾಸನಗಳಲ್ಲಿ ವ್ಯಕ್ತವಾಗಿರುವ ವೀರಬಲ್ಲಾಳನನ್ನು ವಿರೂಪಾಕ್ಷ ಬಲ್ಲಾಳನೆಂದೇ ಸಂಬೋಧಿಸಬೇಕಾಗಿತ್ತು. ವಿರೂಪಾಕ್ಷ ಬಲ್ಲಾಳನೆಂದು ಸಂಬೋಧಿಸದಿದ್ದ ಮಾತ್ರಕ್ಕೆ ಅದು ಮುಮ್ಮಡಿ ವೀರ ಬಲ್ಲಾಳನ ಶಾಸನಗಳೆಂದು ತಿಳಿಯುವುದು ತಪ್ಪು ಎನ್ನುವ ಕೆಲವು ವಿದ್ವಾಂಸರ ವಾದದಲ್ಲಿ ಹುರುಳಿಲ್ಲ.

---

[3] Dr. B. Sheik Ali (Ed.): *Hoysala Dynasty*, p.p. 28-30

[4] *EC*, VII, Sh, 61, p. 71

[5] *E.C.* IX, Bn III, p. 40

೧೩೪೨ರ ಸೆಪ್ಟೆಂಬರ್ ತಿಂಗಳ ೧೪ರಂದು, ಅಂದರೆ ರೈಸರ ಹೇಳಿಕೆಯಂತೆ ಮುಮ್ಮಡಿ ವೀರಬಲ್ಲಾಳನ ಮರಣವಾದ ಕೇವಲ ಐದು ದಿನಗಳ ಅನಂತರ, ಮತ್ತೊಂದು ಹೊಯ್ಸಳ ಶಾಸನ ದೊರಕಿದ್ದು ಇದು ವಿರೂಪಾಕ್ಷ ಬಲ್ಲಾಳನೆ ಕೆತ್ತಿಸಿದ ಶಾಸನವೆಂದು ಹೇಳಲು ಖಚಿತವಾದ ಸಾಕ್ಷ್ಯಾಧಾರಗಳೇನೂ ಇಲ್ಲ. ಕುರುವಂಗಿಯಲ್ಲಿ ದೊರೆತಿರುವ ಶಾಸನವೊಂದರ ಕಾಲ ೧೩೪೨ರ ಡಿಸೆಂಬರ್ ತಿಂಗಳು[6]. ಈ ಶಾಸನದಲ್ಲಿ ವೀರಬಲ್ಲಾಳನಿಗೆ ಮುಮ್ಮಡಿ ವೀರಬಲ್ಲಾಳನಿಗಿದ್ದ ಸಮಸ್ತ ಬಿರುದುಗಳೂ ಇವೆ. ಅದೇ ವೇಳೆಯಲ್ಲಿ ವಟ್ಟಂಪೂರಿನಲ್ಲಿರುವ ಮತ್ತೊಂದು ಶಾಸನದಲ್ಲಿಯೂ ಮುಮ್ಮಡಿ ವೀರಬಲ್ಲಾಳನಿಗಿದ್ದ ಎಲ್ಲ ಬಿರುದುಗಳೂ ಕಂಡುಬರುತ್ತವೆ.[7]

ಈ ಹಿಂದೆಯೇ ಹೇಳಿರುವಂತೆ ವಿರೂಪಾಕ್ಷ ಬಲ್ಲಾಳ ಬರೆಯಿಸಿದ ಮೊಟ್ಟಮೊದಲನೆಯ ಶಾಸನ ೧೩೪೩ರ ಆಗಸ್ಟ್ ತಿಂಗಳಿಗೆ ಸೇರಿದುದು. ಆ ಶಾಸನದಿಂದ ಆತನಿಗೆ ರಾಜ್ಯಾಭಿಷೇಕವಾದ ವಿಷಯವೂ ಕೆಲವು ದಾನಗಳನ್ನು ನೀಡಿದ ಸಂಗತಿಯೂ ತಿಳಿದುಬರುತ್ತದೆ. ಮುಮ್ಮಡಿ ವೀರಬಲ್ಲಾಳ ೧೩೪೩ರ ಮೇ ಮತ್ತು ಆಗಸ್ಟ್ ತಿಂಗಳುಗಳ ಮಧ್ಯದಲ್ಲಿಯೇ ಮುಸ್ಲಿಮರ ಕೈವಶನಾಗಿ ಹತನಾದನೆಂಬುದು ಖಚಿತ.

ಇಬನ್ ಬಟೂಟ ತನ್ನ ಪ್ರವಾಸಕಾಲದಲ್ಲಿ ಮಧುರೆಗೆ ಬಂದಾಗ ಊರ ಹೆಬ್ಬಾಗಿಲಿಗೆ ಹೊಯ್ಸಳ ವೀರಬಲ್ಲಾಳನ ದೇಹವನ್ನು ಹುಲ್ಲಿನಿಂದ ತುಂಬಿ ನೇತುಹಾಕಲಾಗಿತ್ತು. ಹಾಗೂ ತಾನು ಅದೇ ಸ್ಥಿತಿಯಲ್ಲಿ ಆ ಶರೀರವನ್ನು ನೋಡಿದೆ–ಎಂದು ತನ್ನ ಪ್ರವಾಸದ ದಿನಚರಿಯಲ್ಲಿ ತಿಳಿಸಿದ್ದಾನೆ. ಪ್ರಾಯಶಃ ಇಬನ್ ಬಟೂಟ ೧೩೪೩ರ ಮೇ–ಆಗಸ್ಟ್ ಅನಂತರದಲ್ಲಿಯೇ ಮಧುರೆಗೆ ಬಂದಿದ್ದನೆಂದು ಭಾವಿಸಿಕೊಳ್ಳಬಹುದು.

ಶಾಸನಗಳಿಂದ ಮುಮ್ಮಡಿ ವೀರಬಲ್ಲಾಳನ ಮರಣದ ಬಗ್ಗೆ ಹೆಚ್ಚು ಮಾಹಿತಿ ದೊರೆಯುವುದಿಲ್ಲವಾದರೂ ಇಬನ್ ಬಟೂಟನ ಹೇಳಿಕೆಗಳು ಈ ಬಗ್ಗೆ ಸ್ಪಷ್ಟವಾದ ಚಿತ್ರವನ್ನು ನೀಡಿವೆ.

ವಿರೂಪಾಕ್ಷ ಬಲ್ಲಾಳ ಸುಮಾರು ಮೂರು ವರ್ಷಗಳ ಕಾಲ ರಾಜ್ಯವಾಳಿದರೂ ಎಲ್ಲ ವಿಧದಲ್ಲಿಯೂ ಹೊಯ್ಸಳ ಸಾಮ್ರಾಜ್ಯ ಮುಮ್ಮಡಿ ವೀರಬಲ್ಲಾಳನೊಂದಿಗೆ ಅಳಿಸಿಹೋಯಿತು. ವಿರೂಪಾಕ್ಷ ಬಲ್ಲಾಳನ ಅನಂತರ ರಕ್ತಪಾತವಿಲ್ಲದೆಯೇ ಹೊಯ್ಸಳ ಸಾಮ್ರಾಜ್ಯ ವಿಜಯನಗರದ ಅರಸರ ಕೈಸೇರಿತು.

---

6 *E.C.* VI, Cm 45, p. 173

7 *E.C.* IX, Bn 41, p. 19

ಹನ್ನೊಂದನೆಯ ಶತಮಾನದ ಅಂತ್ಯದಲ್ಲಿ ದಕ್ಷಿಣ ಭಾಗದಲ್ಲಿ ಪ್ರಬಲರಾಗುತ್ತಿದ್ದ ಹೊಯ್ಸಳರು ೧೨-೧೩ನೆಯ ಶತಮಾನಗಳಲ್ಲಿ ಕರ್ನಾಟಕದ ಅತ್ಯಂತ ಪ್ರಮುಖಶಕ್ತಿಯಾಗಿ ಬಾಳಿದರು. ವಿಷ್ಣುವರ್ಧನ (೧೧೦೮-೧೧೫೨) ತಲಕಾಡು ವಿಜಯದೊಂದಿಗೆ (೧೧೧೬) ಈ ರಾಜವಂಶದ ಉಚ್ಛ್ರಾಯಕಾಲ ಆರಂಭವಾಯಿತು. ಈ ವಂಶದಲ್ಲಿ ನರಸಿಂಹ ಇಮ್ಮಡಿ ಬಲ್ಲಾಳ, ಸೋಮೇಶ್ವರ, ರಾಮನಾಥ ಮತ್ತು ಮುಮ್ಮಡಿ ಬಲ್ಲಾಳರಂಥ ಮಹಾವ್ಯಕ್ತಿಗಳು ತಲೆದೋರಿ ಉತ್ತರದಲ್ಲಿ ಯಾದವರನ್ನೂ ದಕ್ಷಿಣದಲ್ಲಿ ಚೋಳ, ಪಾಂಡ್ಯರನ್ನೂ ಹತೋಟಿಯಲ್ಲಿಟ್ಟುಕೊಂಡು ಕರ್ನಾಟಕದ ಪ್ರಸಿದ್ಧಿ ಹೆಚ್ಚಿಸಿದರು. ವಿಷ್ಣುವರ್ಧನ ಚೋಳರಿಂದ ತಲಕಾಡನ್ನು ಗೆದ್ದುಕೊಂಡ ಮೇಲೆ ಕೋಲಾರ ನಂಗಿಲಿಗಳನ್ನು ವಶಪಡಿಸಿಕೊಂಡದ್ದಲ್ಲದೆ ಕಂಚಿಯನ್ನೂ ಗೆದ್ದು ರಾಮೇಶ್ವರದ ವರೆಗೂ ಹೋಗಿ ಪಾಂಡ್ಯರೊಡನೆ ಹೋರಾಡಿದ ಕೊಂಗಾಳ್ವರನ್ನೂ ನಿಡುಗಲ್ಲಿನ ಚೋಳರನ್ನೂ ಬಗ್ಗಿಸಿದ. ಕೊಂಗುದೇಶವನ್ನೂ ಗೆದ್ದು ರಾಜ್ಯ ವಿಸ್ತರಿಸಿದ. ಅನಂತರ ಉಚ್ಚಂಗಿಯ ಪಾಂಡ್ಯರನ್ನೂ ಕುಮ್ಮಟವನ್ನೂ ಗೆದ್ದ. ಬೆಳ್ವಲನಾಡನ್ನು ಆಕ್ರಮಿಸಿದಾಗ ಚಾಳುಕ್ಯ ಚಕ್ರವರ್ತಿ ೬ನೆಯ ವಿಕ್ರಮಾದಿತ್ಯ ತನ್ನ ದಂಗೆಕೋರ ಸಾಮಂತನನ್ನು ಎದುರಿಸಿ ಸೋತುದರ ಫಲವಾಗಿ ಹೊಯ್ಸಳರು ನಿಜಕ್ಕೂ ಸ್ವತಂತ್ರರಾದರು.

ಕನ್ನಡ ವಿಶ್ವಕೋಶ, ಸಂ. ೪, ಪು. ೯೪

ಡಾ. ಕೆ. ಉಮಾಪತಿ ಶೆಟ್ಟಿ

ಪುಸ್ತಕ ಪ್ರಪಂಚದ ಮಾರ್ಗದರ್ಶಿ

ಕೆಲವರಿಗೆ ತಮಗೆ ಬೇಕಾದ ಪುಸ್ತಕದ ಹೆಸರು ತಿಳಿದಿದ್ದರೆ ಮತ್ತೆ ಕೆಲವರಿಗೆ ಆ ಪುಸ್ತಕದ ಕರ್ತೃವಿನ ಹೆಸರು ಮಾತ್ರ ತಿಳಿದಿರುತ್ತದೆ. ಹಲವರಿಗೆ ಎರಡೂ ತಿಳಿಯದಿದ್ದರೂ ಪುಸ್ತಕದ ವಿಷಯ, ಅದು ಕಥೆಯೆ ಕಾದಂಬರಿಯೆ ಚರಿತ್ರೆಯೆ ಖಗೋಳಶಾಸ್ತ್ರವೆ ಎಂಬುದು ಗೊತ್ತಿರುತ್ತದೆ. ಗ್ರಂಥಾಲಯದ ಸೂಚಿಯನ್ನು (catalogue) ನೋಡಿ ಆ ಪುಸ್ತಕ ಗ್ರಂಥಾಲಯದಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಪತ್ತೆಮಾಡಬಹುದು. ಪುಸ್ತಕ ಅಲ್ಲಿ ಇಲ್ಲವಾದಲ್ಲಿ ಅದರ ವಿಚಾರ ತಿಳಿಯಲು ಗ್ರಂಥ ಸೂಚಿಗಳ ಸಹಾಯ ಅಗತ್ಯವಾಗುತ್ತದೆ. ಪುಸ್ತಕಗಳ ಕ್ರಮಬದ್ಧವಾದ ಪಟ್ಟಿಯೇ ಗ್ರಂಥಸೂಚಿ ನಮಗೆ ಬೇಕಾದ ಪುಸ್ತಕ ಇದೆಯೋ ಇಲ್ಲವೋ, ಇದ್ದರೆ ಎಲ್ಲಿ ದೊರೆಯಬಹುದು ಎಂಬುದನ್ನು. ಅದು ತಿಳಿಸಬಲ್ಲದು. ನಮಗೆ ಬೇಕಾದ ಪುಸ್ತಕಗಳ ಆಯ್ಕೆ ಮಾಡಲೂ ಗ್ರಂಥಸೂಚಿ ಸಹಾಯ ಮಾಡುತ್ತದೆ.

೧೯೫೦–೧೯೭೦ರ ಅವಧಿಯಲ್ಲಿ ಪ್ರಪಂಚದ ಪುಸ್ತಕ ಪ್ರಕಾಶನ ಸೇ. ೨೦೦ರಷ್ಟು ಹೆಚ್ಚಿದೆ. ಪ್ರತಿ ವರ್ಷ ಪ್ರಪಂಚಾದ್ಯಂತ ೬ ಲಕ್ಷಕ್ಕಿಂತ ಹೆಚ್ಚಿನ ಪುಸ್ತಕಗಳು ಪ್ರಕಟವಾಗುತ್ತವೆ. ೧೯೭೪ರಲ್ಲಿ ಭಾರತ ದಲ್ಲೇ ಹದಿನೇಳು ಸಾವಿರಕ್ಕಿಂತ ಹೆಚ್ಚಿನ ಪುಸ್ತಕಗಳು ಪ್ರಕಟವಾದುವು. ಈ ಶತಮಾನದ ಆರಂಭದಲ್ಲಿ ಹತ್ತು ಸಾವಿರ ನಿಯತ ಕಾಲಿಕಗಳು ಪ್ರಕಟವಾಗುತ್ತಿದ್ದರೆ ಇಂದು ಅವುಗಳ ಸಂಖ್ಯೆ ಒಂದು ಲಕ್ಷಕ್ಕೂ ಹೆಚ್ಚಿದೆ. ಅಪಾರ ಸಂಖ್ಯೆಯ ಪುಸ್ತಕಲೋಕದಲ್ಲಿ ಗ್ರಂಥ ಸೂಚಿಗಳೇ ನಮ್ಮ ದಾರಿದೀಪಗಳು. ಅವುಗಳ ಸಹಾಯ ಇಲ್ಲವಾದಲ್ಲಿ ಮಹಾರಣ್ಯದಲ್ಲಿ ದಾರಿ ತಪ್ಪಿ ತೊಳಲುವ ಪ್ರಯಾಣಿಕನಂತೆ ಪಂಡಿತ ಪಾಮರರು ಪುಸ್ತಕ ಲೋಕದಲ್ಲಿ ದಿಕ್ಕುಕೆಟ್ಟು ಅಲೆಯಬೇಕಾಗುತ್ತದೆ. ಆದ್ದರಿಂದಲೇ ಇಂದು ಗ್ರಂಥಸೂಚಿಗಳ ಆವಶ್ಯಕತೆ ಎಂದಿಗಿಂತಲೂ ಹೆಚ್ಚು.

ಗ್ರಂಥಸೂಚಿಗಳ ವೈವಿಧ್ಯ

ಗ್ರಂಥಸೂಚಿ ಸಾಮಾನ್ಯವಾಗಿ ಪುಸ್ತಕದ ಹೆಸರು, ಕರ್ತೃವಿನ ಹೆಸರು, ಪ್ರಕಾಶಕರ ಹೆಸರು, ಪ್ರಕಟವಾದ ಸ್ಥಳ, ವರ್ಷ, ಪುಟಸಂಖ್ಯೆ ಇತ್ಯಾದಿ ವಿವರಗಳನ್ನು ಕೊಡುತ್ತದೆ. ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಕನ್ನಡ ಗ್ರಂಥಸೂಚಿ'ಯಿಂದ ಒಂದು ಉದಾಹರಣೆಯನ್ನಿಲ್ಲಿ ಕೊಡಲಾಗಿದೆ:

ನರಸಿಂಹಸ್ವಾಮಿ, ಕೆ. ಎಸ್. ⟶ **ಬರೆದವರ ಹೆಸರು**

ವಿ.ಸೀ. ⟶ **ಪುಸ್ತಕದ ಹೆಸರು**

ಪ್ರಕಟ ಆದ ಸ್ಥಳ ⟵ ಉಡುಪಿ ಎಂ.ಜಿ.ಎಂ. ಕಾಲೇಜು ೧೯೭೦ ⟵ **ಪ್ರಕಟ ಆದ ವರ್ಷ**

ಪುಟ ಸಂಖ್ಯೆ ⟵ ೬ + ೩೮ ೧೫.೫ × ೧೧ ⟶ **ಪುಸ್ತಕದ ಉದ್ದಗಲಗಳು ಬೆಲೆ,** ೦.೫೦

ಪುಸ್ತಕದಲ್ಲಿ ಏನಿದೆ ಎಂಬ ವಿವರಣೆ ಖ್ಯಾತ ಸಾಹಿತಿ, ವಿಮರ್ಶಕ ವಿ. ಸೀತಾರಾಮಯ್ಯನವರ ಜೀವನ–ಸಾಧನೆಗಳ ಪರಿಚಯ

ಗ್ರಂಥ ವಿವರಣ ಸೂಚಿಗಳು ಪುಸ್ತಕದಲ್ಲಿ ಏನಿದೆ ಎಂಬುದರ ಪರಿಚಯ ಮಾಡಿಕೊಡುತ್ತವೆ. ಇವರಿಂದ ಪುಸ್ತಕ ನಮಗೆ ಬೇಕಾದದ್ದೇ ಅಲ್ಲವೇ ಎಂಬುದನ್ನು ನಿರ್ಧರಿಸಲು ಸಹಾಯ ಆಗುತ್ತದೆ. ಕೆಲವು ಗ್ರಂಥ ವಿವರಣ ಸೂಚಿಗಳು ಪುಸ್ತಕ ಅಚ್ಚಾಗಿರುವ ಕಾಗದ, ಮಸಿ, ಮುದ್ರಣಕ್ಕೆ ಉಪಯೋಗಿಸಿರುವ ಅಚ್ಚಿನ ಮೊಳೆ ಮುಂತಾದ ಅಂಶಗಳ ಸುದೀರ್ಘ ವಿವರಣೆ ಕೊಡುತ್ತವೆ. ಮುದ್ರಣ ಯಂತ್ರ ಬಳಕೆಗೆ ಬಂದ ಆರಂಭದಲ್ಲಿ ಪ್ರಕಟವಾದ ಪುಸ್ತಕಗಳು ಈಗ ಅಪೂರ್ವ ಗ್ರಂಥಗಳೆನಿಸಿ ಅವಕ್ಕೆ ಈಗ ಅಪಾರ ಬೆಲೆ ಇದೆ. ಅಂಥ ಗ್ರಂಥಗಳು ನಿಜವಾಗಿ ಶತಮಾನಗಳ ಹಿಂದೆ ಪ್ರಕಟವಾದವೇ ಅಥವಾ ನಕಲಿ ಮಾಲೇ ಎಂಬುದನ್ನು ನಿರ್ಧರಿಸಲು ಇಂಥ ಸೂಚಿಗಳು ಸಹಕಾರಿ. ಪಾಠ ನಿರ್ಣಯ ಸೂಚಿ (Textual Bibliography) ಗ್ರಂಥಾಂತರಂಗ ಪರಿಶೀಲಿಸಿ, ಮುದ್ರಿತ ಪುಸ್ತಕಕ್ಕೂ ಹಸ್ತಪ್ರತಿಗೂ ಇರುವ ಹೋಲಿಕೆ ವ್ಯತ್ಯಾಸಗಳು, ಒಂದೇ ಪುಸ್ತಕದ ಹಲವು ಆವೃತ್ತಿಗಳ ನಡುವೆ ಇರುವ ವ್ಯತ್ಯಾಸಗಳು, ಇತ್ಯಾದಿಗಳನ್ನು ಎತ್ತಿ ತೋರಿಸುತ್ತದೆ. ಕೆಲವು ಗ್ರಂಥಸೂಚಿಗಳು ಪುಸ್ತಕಗಳನ್ನು ವಿಮರ್ಶಾ ದೃಷ್ಟಿಯಿಂದ ನೋಡಿ ಅವುಗಳ ವಿವರಣೆ ಕೊಡುತ್ತವೆ (Critical Bibliography). ಈ ಎಲ್ಲ ಅಂಶಗಳನ್ನೂ ಒಳಗೊಂಡ ಗ್ರಂಥಸೂಚಿಗಳೂ ಉಂಟು.

ವಿಶ್ವವ್ಯಾಪಿ ಗ್ರಂಥಸೂಚಿ

ವಿಶ್ವವ್ಯಾಪಿ ಗ್ರಂಥಸೂಚಿ (Universal Bibliography) ಪ್ರಪಂಚದ ಎಲ್ಲ ಪುಸ್ತಕಗಳ ಪಟ್ಟಿಯನ್ನು ಕೊಡಬೇಕಾದರೂ ಅಂಥ ಪುಸ್ತಕ ಸೂಚಿ ಇನ್ನೂ ಆದರ್ಶ ಪ್ರಪಂಚದ್ದೇ ಆಗಿದೆ. ಸಾಮಾನ್ಯವಾಗಿ ವಿಶ್ವವ್ಯಾಪಿ ಪುಸ್ತಕಸೂಚಿ ಪುಸ್ತಕಗಳ ಕಾಲ, ಭಾಷೆ, ರಾಷ್ಟ್ರ, ವಿಷಯಗ್ರಂಥ ಅಥವಾ ರೂಪಗಳಿಗೆ ಕಟ್ಟುಬೀಳದೆ ಎಲ್ಲವನ್ನೂ ಒಳಗೊಂಡಿರುತ್ತದೆ. ಭಾರತ, ಇಂಗ್ಲೆಂಡ್, ರಷ್ಯ, ಅಮೆರಿಕ, ಫ್ರಾನ್ಸ್ ಮೊದಲಾದ ರಾಷ್ಟ್ರಗಳ ರಾಷ್ಟ್ರೀಯ ಗ್ರಂಥ ಭಂಡಾರಗಳ ಪುಸ್ತಕ ಸೂಚಿಗಳು ಇಂಥವು. ಕೆಲವು ಗ್ರಂಥಸೂಚಿಗಳು ಒಂದು ರಾಷ್ಟ್ರದಲ್ಲಿ ಪ್ರಕಟವಾಗುವ ಪುಸ್ತಕಗಳ ವಿವರ ಮಾತ್ರ ಒದಗಿಸುತ್ತವೆ. ಭಾರತ ರಾಷ್ಟ್ರೀಯ ಗ್ರಂಥಸೂಚಿ (Indian National Bibliography) ಇಂಥದು. ಭಾರತದಲ್ಲಿ ಪ್ರಕಟವಾಗುವ ಎಲ್ಲ ಪ್ರಮುಖ ಭಾಷೆಗಳ ಪುಸ್ತಕಗಳ ಕ್ರಮಬದ್ಧ ಪಟ್ಟಿಗಳು ಇದರಲ್ಲಿರುತ್ತವೆ. ಕಳೆದ ವರ್ಷ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಪಟ್ಟಿ ಬೇಕಾದಲ್ಲಿ ಇದೊಂದು ಉತ್ತಮ ಸಮಾಚಾರ ಮೂಲ. ಹಲವು ದೇಶಗಳ ಪುಸ್ತಕ ಪ್ರಕಾಶಕರು ತಮ್ಮ ಪ್ರಕಟಣೆಗಳನ್ನೆಲ್ಲ ಕ್ರೋಡೀಕರಿಸಿದ ಪಟ್ಟಿಗಳನ್ನು ಪ್ರಕಟಿಸುತ್ತಿದ್ದಾರೆ. ಇದು ಸಹ ರಾಷ್ಟ್ರೀಯ ಗ್ರಂಥಸೂಚಿಗಳಂತೆಯೇ ಸಹಕಾರಿ. ಅಮೆರಿಕೆಯ Books In Print ಇಂಥ ಒಂದು ಉದಾಹರಣೆ. ಹಲವು ಗ್ರಂಥಸೂಚಿಗಳು ಹಿಂದೆ ಪ್ರಕಟವಾದ ಪುಸ್ತಕಗಳಿಗೆ ಮಾತ್ರ ಮೀಸಲಾದವು, ಕೆಲವು ಸಮಕಾಲೀನ ಪ್ರಕಟಣೆಗಳಿಗೋ ಮುಂದೆ ಪ್ರಕಟವಾಗಲಿರುವ ಪುಸ್ತಕಗಳಿಗೋ ಮೀಸಲಾಗಿರುತ್ತವೆ.

ಗ್ರಂಥಸೂಚಿಗಳು ಜ್ಞಾನಲೋಕದ ಎಲ್ಲ ವಿಭಾಗಗಳನ್ನೂ ಪ್ರತಿನಿಧಿಸುವ ಗುರಿಹೊಂದಿರಬಹುದು. ಅಥವಾ ಒಂದು ಅಥವಾ ಕೆಲವು ವಿಷಯಗಳಿಗೆ ಮಾತ್ರ ಸಂಬಂಧಪಟ್ಟ ಪುಸ್ತಕಗಳ ಪಟ್ಟಿಗಳಷ್ಟೇ ಆಗಿರಬಹುದು. ತಂಜಾವೂರಿನ ಸರಸ್ವತಿ ಮಹಲ್ ಗ್ರಂಥಾಲಯದ ತಮಿಳು ಹಸ್ತಪ್ರತಿಗಳ ಪರಿಚಯಾತ್ಮಕ ಸೂಚಿ ಕೇವಲ ತಮಿಳು ಹಸ್ತಪ್ರತಿಗಳಿಗೆ ಸೀಮಿತ. ಕೇವಲ ಚರಿತ್ರೆಯ ಪುಸ್ತಕಗಳನ್ನೋ ಪ್ರಾಣಿಶಾಸ್ತ್ರದ ಪುಸ್ತಕಗಳನ್ನೋ ಗ್ರಂಥಸೂಚಿಗಳು ಸೂಚಿಸಬಹುದು. ಅಶೋಕನ ಆಳ್ವಿಕೆಗೆ ಸಂಬಂಧಿಸಿದ ಪುಸ್ತಕಗಳು, ಮಹಾತ್ಮಗಾಂಧಿಯವರ ಉಪ್ಪಿನ ಸತ್ಯಾಗ್ರಹಕ್ಕೆ ಮಾತ್ರ ಮೀಸಲಾದ ಗ್ರಂಥಗಳು, ಅರವಿಂದರ ತತ್ತ್ವವಿಚಾರ ವಿಮರ್ಶೆಯ ಪುಸ್ತಕಗಳು, ಇತ್ಯಾದಿ ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟ ಗ್ರಂಥಸೂಚಿಗಳು ಬಹುಸಂಖ್ಯೆಯಲ್ಲಿವೆ. ಕಾಲೇಜು ವಿದ್ಯಾರ್ಥಿಗಳಿಗಾಗಿಯೇ ಆರಿಸಿದ ಕಾದಂಬರಿಗಳ ಗ್ರಂಥಸೂಚಿ ಇರಬಹುದು. ಹಲವೊಮ್ಮೆ ಗ್ರಂಥಸೂಚಿ ಲೇಖನಗಳ ವಿವರಗಳನ್ನು ಒಳಗೊಂಡಿರಬಹುದು. ಅವುಗಳ ವೈವಿಧ್ಯಕ್ಕೆ ಕೊನೆ ಇಲ್ಲ.

ಗ್ರಂಥಸೂಚಿಗಳ ಸೂಚಿಗಳು

ಪುಸ್ತಕ ಲೋಕದ ಅಪಾರತೆಯಿಂದ ಗ್ರಂಥಸೂಚಿಗಳ ಆವಶ್ಯಕತೆ ಇರುವಂತೆಯೇ ಅಸಂಖ್ಯಾತ ಗ್ರಂಥಸೂಚಿಗಳನ್ನು ಕಂಡುಕೊಂಡು. ನಮಗೆ ಬೇಕಾದ ಗ್ರಂಥಸೂಚಿಯನ್ನು ಆರಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಲು ಗ್ರಂಥಸೂಚಿಗಳ ಸೂಚಿಗಳಿವೆ. ನಾನಾ ವಿಷಯಗಳನ್ನು ಕುರಿತ ಗ್ರಂಥ ಸೂಚಿಗಳ ಪಟ್ಟಿಗಳನ್ನು ಇವು ಕ್ರಮಬದ್ಧ ರೀತಿಯಲ್ಲಿ ಕೊಡುತ್ತವೆ. ಥೀಯೊಡರ್ ಬೆಸ್ಟರ್ ಮನ್‌ರ ಗ್ರಂಥಸೂಚಿಗಳ ಪ್ರಪಂಚ ಗ್ರಂಥಸೂಚಿ (A World Bibliography fo Bibliographies) ಇಂಥದು.

ಸಹಸ್ರ ಸಂಖ್ಯೆಯ ಪುಸ್ತಕಗಳಲ್ಲೂ ನಿಯತಕಾಲಿಕ ಲೇಖನಗಳಲ್ಲೂ ಆಯಾ ವಿಚಾರಕ್ಕೆ ಸಂಬಂಧ ಪಟ್ಟ ಸೂಚಿಗಳು ಸದಾ ಪ್ರಕಟವಾಗುತ್ತಿರುತ್ತವೆ. ಸಮಕಾಲೀನತೆ ಇವುಗಳ ಉಪಯುಕ್ತತೆಯನ್ನು ಹೆಚ್ಚಿಸುತ್ತದೆ. ಇಂತಹ ಪುಸ್ತಕಸೂಚಿಗಳನ್ನು ನೇರವಾಗಿ ಹುಡುಕಹೋಗುವುದೆಂದರೆ ಹುಲ್ಲಿನ ಮೆದೆ ಯಲ್ಲಿ ಸೂಜಿ ಹುಡುಕಿದಂತೆಯೇ. ಇಂಥ ಗ್ರಂಥಸೂಚಿಗಳನ್ನು ಸಂಗ್ರಹಿಸಿ ಕ್ರಮಬದ್ಧ ರೀತಿಯಲ್ಲಿ ಒದಗಿಸುವುದೇ ಪುಸ್ತಕ ಸೂಚಿಗಳ ಸೂಚಿಯ ಮುಖ್ಯ ಉದ್ದೇಶ. ಅಮೆರಿಕೆಯ ವಿಲ್ಸನ್ ಕಂಪನಿಯ ಗ್ರಂಥಸೂಚಿಗಳ ಸೂಚಿ (Bibliographic Index) ನಿಯತಕಾಲಿಕ ಇಂಥ ಪುಸ್ತಕ ಪಟ್ಟಿಗಳ ಸೂಚಿ. ಗ್ರಂಥಸೂಚಿ ಒಬ್ಬ ಮನುಷ್ಯನನ್ನು ಕುರಿತದ್ದೋ, ಒಂದು ಸ್ಥಳಕ್ಕೆ ಸಂಬಂಧಪಟ್ಟದ್ದೋ ಅಥವಾ ಒಂದು ವಿಷಯಕ್ಕೆ ಸಂಬಂಧಪಟ್ಟದ್ದೋ ಆಗಿರಬಹುದು.

ಆಕರಗ್ರಂಥಸೂಚಿ

ಪುಸ್ತಕ ಪ್ರಪಂಚದಲ್ಲಿ ಆಕರಗ್ರಂಥಗಳೇ ಸಹಸ್ರ ಸಂಖ್ಯೆಯಲ್ಲಿದ್ದು, ಅವುಗಳ ಬಗ್ಗೆ ಸೂಚನೆ ಕೊಟ್ಟು ಸಹಾಯ ಮಾಡಲೆಂದೇ ಕೆಲವು ಗ್ರಂಥಸೂಚಿಗಳಿವೆ. ಎಚ್. ಡಿ. ಶರ್ಮಾರ 'ಭಾರತೀಯ ಪರಾಮರ್ಶನ ಮೂಲಗಳು (Indian Reference Sources) ವಾಲ್ಫರ್ಡ್ ಅವರ ಪರಾಮರ್ಶನ ಮೂಲಗಳ ಕೈಪಿಡಿ (Guide to Reference Materials) ಮತ್ತು ವಿಂಚಲ್‌ರವರ ಪರಾಮರ್ಶನ ಗ್ರಂಥ ಕೈಪಿಡಿ (Guide to Reference Books) ಇಂಥ ಪ್ರಮುಖ ಉದಾಹರಣೆಗಳು. ಇವು ಗಳ ಪರಿಶೀಲನೆಯಿಂದ ನಮಗೆ ಬೇಕಾದ ವಿಷಯ ಅಥವ ಆಸಕ್ತಿಗೆ ಅನುಗುಣವಾದ ಆಕರ ಗ್ರಂಥಗಳು ಯಾವುವು ಎಂಬುದನ್ನು ನಾವು ಸುಲಭವಾಗಿ ತಿಳಿದುಕೊಳ್ಳಬಹುದು. ಅವುಗಳ ಸಾರ್ಥಕ ಉಪಯೋಗಕ್ಕೆ ಇದು ಮೊದಲ ಹೆಜ್ಜೆ.

ಸಂಯುಕ್ತ ಗ್ರಂಥಸೂಚಿಗಳು

ಪ್ರಪಂಚದ ಪುಸ್ತಕ ಸಂಪತ್ತು ಅನೇಕ ಗ್ರಂಥಾಲಯಗಳಲ್ಲಿ ಸೇರಿದ್ದು ವಾಚಕರ ಉಪಯೋಗಕ್ಕೆಲಭ್ಯವಿದೆ. ಪುಸ್ತಕಾಲಯಗಳು ದೇಶ ವಿದೇಶಗಳಲ್ಲಿದ್ದು ಅವುಗಳ ಪುಸ್ತಕಪಟ್ಟಿಗಳು ಸಿಕ್ಕಲ್ಲಿ ಮಾತ್ರವೇ ಅವುಗಳಲ್ಲಿ ನಮಗೆ ಬೇಕಾದ ಪುಸ್ತಕ ಇದೆಯೆ, ಇಲ್ಲವೆ ಎಂಬುದನ್ನು ನಾವು ತಿಳಿಯಲು ಸಾಧ್ಯ. ಇಂಥ ತಿಳಿವು ನಮಗೆ ಬೇಕಾದ ಪುಸ್ತಕವನ್ನು ಅಂತರ ಗ್ರಂಥಾಲಯ ಎರವಲಾಗಿ (Inter-Library loan) ಪಡೆಯಬಹುದು. ಆದ್ದರಿಂದಲೇ ಭಾರಿ ಗ್ರಂಥಾಲಯಗಳು ಬ್ರಿಟಿಷ್ ಮ್ಯೂಸಿಯಂ, ಅಮೆರಿಕನ್ ಕಾಂಗ್ರೆಸ್ ಲೈಬ್ರರಿ ಮುಂತಾದ ಗ್ರಂಥಾಲಯಗಳ ಪುಸ್ತಕಪಟ್ಟಿಗಳನ್ನು ಇಟ್ಟುಕೊಂಡಿರುತ್ತವೆ: ವಾಚಕರ ಉಪಯೋಗಕ್ಕೂ ಅವನ್ನು ಒದಗಿಸುತ್ತವೆ.

ಕೆಲವು ವೇಳೆ ನಿರ್ದಿಷ್ಟ ಕ್ಷೇತ್ರದ ಹಲವಾರು ಗ್ರಂಥಾಲಯಗಳು ಸೇರಿ ಸಂಯುಕ್ತ ಪುಸ್ತಕ ವಿವರಣ ಸೂಚಿಗಳನ್ನು ರೂಪಿಸಿಕೊಳ್ಳುತ್ತವೆ. ಇದರಿಂದ ಇಂಥ ಯೋಜನೆಯಲ್ಲಿ ಸಹಕರಿಸುವ ಪ್ರತಿಯೊಂದು ಪುಸ್ತಕಾಲಯದ ಪ್ರತಿ ವಾಚಕನಿಗೂ ಎಲ್ಲ ಪುಸ್ತಕಾಲಯಗಳ ಪುಸ್ತಕ ಸಂಪತ್ತು ಲಭ್ಯವಾಗುತ ದೆ. ಸಂಯುಕ್ತ ಗ್ರಂಥ ಸೂಚಿಗಳು (union catalog) ಯಾವ ಪುಸ್ತಕ ಯಾವ ಪುಸ್ತಕಾಲಯದಲ್ಲಿದೆ ಎಂಬುದನ್ನು ಸೂಚಿಸುತ್ತವೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಹಾಗೂ ಕೆನಡದ

ಪ್ರಮುಖ ಪುಸ್ತಕಾಲಯಗಳ ರಾಷ್ಟ್ರೀಯ ಸಂಯುಕ್ತ ಗ್ರಂಥಸೂಚಿಯಲ್ಲಿ (The National Union Catalog) ಬೃಹದಾಕಾರದ ೧೮೪ ಸಂಪುಟಗಳಿವೆ ಎಂಬುದರಿಂದ ಅದರ ವಿಸ್ತಾರ ವೈವಿಧ್ಯಗಳನ್ನು ಊಹಿಸಬಹುದು. ಇಂಥ ಸೂಚಿಗಳಿಲ್ಲದೆ ನಮ್ಮ ದೃಷ್ಟಿ ವಿಶಾಲವಾಗಲಾರದು; ಪ್ರಪಂಚದ ಪುಸ್ತಕರೂಪಿ ಜ್ಞಾನ ನಮ್ಮದಾಗಲಾರದು; ಪಾಂಡಿತ್ಯ ಅರಳಲಾರದು; ವಿಜ್ಞಾನ ಬೆಳೆಯಲಾರದು.

ಲೇಖನಸೂಚಿಗಳು

ಇಂದು ಪ್ರಕಟವಾಗುತ್ತಿರುವ ಲಕ್ಷ ಸಂಖ್ಯೆಯ ನಿಯತಕಾಲಿಕಗಳು, ಬಹು ಸಂಖ್ಯಾತ ಬಿಡಿ ಲೇಖನಗಳ ಸಂಕಲನಗಳು–ಇವುಗಳಲ್ಲಿನ ಲೇಖನಗಳ ವಿವರ ತಿಳಿಯಲು ಪುಸ್ತಕ ಸೂಚಿಗಳು ಸಹಾಯ ಮಾಡಲಾರವು. ಪುಸ್ತಕಗಳನ್ನು ಕಂಡುಕೊಳ್ಳಲು ಪುಸ್ತಕಪಟ್ಟಿಗಳು ಸಹಾಯ ಮಾಡುವಂತೆಯೇ ಲೇಖನಗಳ ಬೃಹತ್ಪ್ರಪಂಚದಲ್ಲಿ ಮಾರ್ಗದರ್ಶನ ಮಾಡುವ ಉದ್ದೇಶದಿಂದ ಲೇಖನಸೂಚಿಗಳು ಹುಟ್ಟಿವೆ. ಪುಸ್ತಕಸೂಚಿಗಳಂತೆ ಲೇಖನಸೂಚಿಗಳೂ ಎಲ್ಲ ವಿಷಯಗಳಿಗೂ ಅನ್ವಯಿಸಬಹುದು ಅಥವಾ ಯಾವುದಾದರೊಂದು ವಿಷಯಕ್ಕೆ ಮಿತಿಗೊಂಡಿರಬಹುದು. ೧೮೪೮ರಲ್ಲಿ ವಿಲಿಯಂ ಪೂಲ್ ಎಂಬ ಗ್ರಂಥಾಲಯ ವಿಜ್ಞಾನಿ ಅಮೆರಿಕೆಯಲ್ಲಿ ಮೊದಲ ಬಾರಿ ಇಂಥ ಲೇಖನಸೂಚಿ ಒಂದನ್ನು ಪ್ರಕಟಿಸಿದ. ಇಂದು ಲೇಖನಸೂಚಿಗಳು ಗ್ರಂಥಸೂಚಿಗಳಷ್ಟೇ ವ್ಯಾಪಿಸಿ, ಉಪಯುಕ್ತ ಎನಿಸಿವೆ. ಲೇಖನ ಸೂಚಿಗಳು ಗತಕಾಲದ ಪ್ರಕಟಣೆಗಳನ್ನು ಒಳಗೊಂಡಿರಬಹುದು ಅಥವಾ ವೃತ್ತಪತ್ರಿಕೆಗಳ ಸುದ್ದಿ ಸೂಚಿಗಳಾಗಿರಬಹುದು. Index India ನಿಯತಕಾಲಿಕ ಲೇಖನ ಸೂಚಿ ಇಂಥದು.

ಭಾರತೀಯ ನಿಯತಕಾಲಿಕ ಸಾಹಿತ್ಯ ಕೈಪಿಡಿ (Guide to Indian Periodical Literature) ಲಲಿತಕಲೆ, ಸಮಾಜಶಾಸ್ತ್ರಗಳು, ಸಾಹಿತ್ಯಗಳಿಗೆ ಮೀಸಲಾದ ನಿರ್ದಿಷ್ಟ ನಿಯತಕಾಲಿಕಗಳಲ್ಲಿ ಪ್ರಕಟವಾಗುವ ಲೇಖನಗಳ ಸೂಚಿಯಾದರೆ ವ್ಯವಹಾರ ನಿಯತಕಾಲಿಕಗಳ ಸೂಚಿ (Business Periodicals Index) ವ್ಯಾಪಾರ ವಾಣಿಜ್ಯೋದ್ಯಮ ನಿಯತಕಾಲಿಕ ಲೇಖನಗಳ ಸೂಚಿ ಗ್ರಂಥಸೂಚಿಗಳಂತೆಯೇ ಲೇಖನಸೂಚಿಗಳಲ್ಲೂ ಹಿಂದೆ ಪ್ರಕಟ ಆದ ಲೇಖನಗಳ ಸೂಚಿಗಳೂ ಸಮಕಾಲೀನ ಲೇಖನಗಳ ಸೂಚಿಗಳೂ ಉಂಟು. Pool's Index to Periodical Literature ೧೮೦೨ರಿಂದ ೧೯೦೬ರ ವರೆಗೆ ಪ್ರಕಟವಾದ ಆರಿಸಿದ ನಿಯತಕಾಲಿಕ ಲೇಖನಗಳ ಸೂಚಿ.

ಲೇಖನ ಸಂಕಲನಗಳು ಬಹುಸಂಖ್ಯೆಯಲ್ಲಿ ಪ್ರಕಟವಾಗುತ್ತಿದ್ದು, ಪುಸ್ತಕಾಲಯದ ಸೂಚಿಗಳಾಗಲಿ ಇತರ ಗ್ರಂಥ ಸೂಚಿಗಳಾಗಲಿ ಲೇಖನ ಸೂಚಿಗಳಾಗಲಿ ಇಂಥ ಪ್ರಕಟಣೆಗಳಲ್ಲಿನ ಎಲ್ಲ ಲೇಖನಗಳನ್ನೂ ಸೂಚಿಸಲಾರವು. ಈ ಕೊರತೆ ನಿವಾರಿಸಿ ಸಂಕಲನ ಸಾಹಿತ್ಯಕ್ಕೂ 'ಬೀಗದ ಕೈ' ಒದಗಿಸುವ ಉದ್ದೇಶ ಪ್ರಬಂಧ ಹಾಗೂ ಸಾಮಾನ್ಯ ಸಾಹಿತ್ಯ ಲೇಖನ ಸೂಚಿಯದು (Essay and General Literature Index)

ಪುಸ್ತಕ ಪಟ್ಟಿಗಳೂ ಲೇಖನಸೂಚಿಗಳೂ ಸಹಜವಾಗಿಯೇ ಸ್ವಯಂ ನಿರ್ಮಿತ ಚೌಕಟ್ಟಿನಲ್ಲಿ ಕೆಲಸಮಾಡುತ್ತವೆ. Essay and General Literature Index ಅಮೆರಿಕೆಯ ವಿಲ್ಸನ್ ಕಂಪನಿಯ ಪ್ರಕಟಣೆಯಾಗಿದ್ದು ಅಮೆರಿಕೆಯಲ್ಲಿ ಪ್ರಕಟವಾಗುವ ಸಂಕಲನ ಲೇಖನಗಳ ಸೂಚನೆಗೆ ಅಗ್ರಸ್ಥಾನ. ಭಾರತದಲ್ಲಿ ಪ್ರಕಟವಾದ ಲೇಖನ ಸಂಗ್ರಹವೊಂದರ ಲೇಖನ ವಿವರವನ್ನದರಲ್ಲಿ ಹುಡುಕುವುದು ವ್ಯರ್ಥವೇ ಸರಿ. ನಿಯತಕಾಲಿಕ ಲೇಖನಸೂಚಿಗಳು ಸಾಮಾನ್ಯವಾಗಿ ತಾವು ಯಾವ ನಿಯತಕಾಲಿಕ ಲೇಖನಗಳ ಪಟ್ಟಿ, ಸೂಚಿಗಳನ್ನು ಕೊಡುವುವೋ, ಅಂಥ ನಿಯತಕಾಲಿಕ ಪಟ್ಟಿಗಳನ್ನು ಪ್ರಕಟಿಸುತ್ತವೆ. ಯಾವ ಸೂಚಿಯನ್ನೇ ಆಗಲಿ ಉಪಯೋಗಿಸುವ ಮೊದಲು ಅದರ ಇತಿಮಿತಿ, ಕಾರ್ಯವಿಧಾನಗಳ ವಿವರಣೆಯನ್ನು ಗಮನಿಸಿ ನಮ್ಮ ಆವಶ್ಯಕತೆಗನುಗುಣವಾಗಿ ಅವನ್ನು ಉಪಯೋಗಿಸಬೇಕು.

ವೃತ್ತಪತ್ರಿಕೆ ಸುದ್ದಿ ಸೂಚಿಗಳು

ಪ್ರಪಂಚದ ಖ್ಯಾತ ಪತ್ರಿಕೆಗಳಲ್ಲಿ ಕೆಲವು ಸುದ್ದಿಸೂಚಿಗಳನ್ನು ಪ್ರಕಟಿಸುತ್ತಿದ್ದು ಜಗತ್ತಿನ ಸುದ್ದಿ ಕಂಡುಕೊಳ್ಳಲು ಇಂಥ ಸೂಚಿ ನೆರವಾಗುತ್ತದೆ. ನ್ಯೂಯಾರ್ಕ್ ಟೈಂಸ್ ದಿನಪತ್ರಿಕೆಯ ಸೂಚಿ ಇಂಥ ಒಂದು

ಉದಾಹರಣೆ. ಸಾಮಾನ್ಯವಾಗಿ ಜಗತ್ತಿನ ಸುದ್ದಿ ಏಕಕಾಲದಲ್ಲಿ ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಗುವುದರಿಂದ ಇಂತಹ ವಿಷಯ ಸೂಚಿ ಎಲ್ಲ ಪತ್ರಿಕೆಗಳ ಪ್ರಕಟಿತ ಸುದ್ದಿಗೂ ಮಾರ್ಗದರ್ಶಿ ಆಗಬಲ್ಲದು.

ಲೇಖನ ಸಾರಾಂಶ ಸೂಚಿಗಳು

ನಿರ್ದಿಷ್ಟ ಲೇಖನ ಯಾವ ಪತ್ರಿಕೆಯಲ್ಲಿ ಪ್ರಕಟವಾಗಿದೆ, ಬರೆದವರು ಯಾರು, ಪ್ರಕಟಣೆಯ ತಾರೀಖು, ಲೇಖನ ಇರುವ ಪುಟಸಂಖ್ಯೆ ಮುಂತಾದ ವಿವರಗಳನ್ನು ಲೇಖನ ಸೂಚಿ ಕೊಡುವುದಾದರೂ ಲೇಖನದಲ್ಲಿ ಏನಿದೆ ಎಂಬುದರ ವಿವರ ಕೊಡುವುದಿಲ್ಲ. ಜ್ಞಾನಲೋಕದ ಪ್ರತಿ ವಿಭಾಗದಲ್ಲೂ ಹತ್ತಾರು ಸಾವಿರ ಲೇಖನಗಳು ಪ್ರತಿ ತಿಂಗಳೂ ಪ್ರಕಟವಾಗುತ್ತಿರುವ ಇಂದಿನ ದಿನಗಳಲ್ಲಿ ಇಂಥ ಸೂಚಿ ಉಪಯೋಗಿಸಿ, ನಮ್ಮ ಆಸಕ್ತಿ ಇರುವ ವಿಷಯದಲ್ಲಿ ಪ್ರಕಟವಾಗಿರುವ ಲೇಖನಗಳ ಪಟ್ಟಿ ಮಾಡಿ, ಅನಂತರ ನಿಯತಕಾಲಿಕಗಳನ್ನು ಹುಡುಕಿ, ಲೇಖನಗಳನ್ನು ಓದುವುದು ಕಷ್ಟದ ಕೆಲಸ. ಇದಕ್ಕೆ ಹೆಚ್ಚು ಕಾಲ, ಶ್ರಮ ಬೇಕು. ಅಷ್ಟೆಲ್ಲ ಮಾಡಿದ ಅನಂತರವೂ ಆ ಲೇಖನಗಳು ಅಷ್ಟು ಉಪಯೋಗ ಆಗದೆ ಹೋಗಬಹುದು. ವಾಚಕರಿಗೆ ಇಂಥ ವೃಥಾಶ್ರಮ ತಪ್ಪಿಸಲೆಂದು ಗ್ರಂಥಾಲಯ ವಿಜ್ಞಾನಿಗಳು ಗ್ರಂಥಸೂಚಿ, ಲೇಖನಸೂಚಿಗಳಿಗಿಂತ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಒದಗಿಸಿರುವ, ವಿದ್ಯಾರ್ಥಿಗಳ ಪಂಡಿತರ ಕಾಮಧೇನು ಲೇಖನ ಸಾರಾಂಶಸೂಚಿ (Abstract).

ಲೇಖನ ಸಾರಾಂಶ ಸೂಚಿಗಳು ಲೇಖನಸೂಚಿಗಳಂತೆಯೇ ಲೇಖನದ ಸಾಮಾನ್ಯ ವಿವರಗಳನ್ನು ಕೊಡುವುದರ ಜೊತೆಗೆ ಲೇಖನದ ಸಾರಾಂಶವನ್ನು ಕರಾರುವಾಕ್ಕಾಗಿ, ಸಂಕ್ಷಿಪ್ತ ರೀತಿಯಲ್ಲಿ ಕೊಡುತ್ತವೆ. ಅದನ್ನು ಓದಿ ಲೇಖನ ಉಪಯುಕ್ತ ಎಂದು ಕಂಡುಬಂದರೆ ಮಾತ್ರ ಮೂಲಲೇಖನ ಹುಡುಕಬಹುದು. ಇಂಥ ಲೇಖನ ಸಾರಾಂಶ ಸೂಚಿಗಳನ್ನು ಅವಲೋಕಿಸುವುದರಿಂದ ನಮಗೆ ಆಸಕ್ತಿ ಇರುವ ವಿಷಯದಲ್ಲಿ ಆಗುತ್ತಿರುವ ನಿರಂತರ ಬೆಳವಣಿಗೆಗಳನ್ನು ಸಾಕಷ್ಟು ತೃಪ್ತಿಕರವಾಗಿ ತಿಳಿಯಬಹುದು. Chemical Abstract ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ ಲೇಖನಗಳ ಸಾರಾಂಶ ಸೂಚಿಯಾದರೆ, Psychological Abstract ಮನಶ್ಶಾಸ್ತ್ರ ಲೇಖನಗಳ ಸಾರಾಂಶ ಸೂಚಿ. ಇಂಥ ಸಾರಾಂಶ ಸೂಚಿಗಳು ನಾನಾ ವಿಷಯಗಳಿಗೆ ಸಂಬಂಧಪಟ್ಟಂತೆ ಅನೇಕವಿವೆ. Historical Abstracts ಚಾರಿತ್ರಿಕ ಲೇಖನಗಳ ಸಾರಾಂಶ ಸೂಚಿಯ Fall ೧೯೭೦ರ ಸಂಚಿಕೆಯಿಂದ ಒಂದು ಉದಾಹರಣೆಯನ್ನಿಲ್ಲಿ ಕೊಡಲಾಗಿದೆ:

ಲೇಖಕರ ಹೆಸರು: Ghose, D. K. (Burdwan U.) ಲೇಖರ ಸಂಪರ್ಕ ಇರುವ ಸಂಸ್ಥೆ
ಲೇಖನದ ಹೆಸರು: Source Material for the History of Kashmir (Second Half of the Nineteenth Century)
ಪತ್ರಿಕೆಯ ಹೆಸರು: Q. R. of Hist. Studies (India)
ಪ್ರಕಟವಾದ ವರ್ಷ 1969/70 9 ಸಂಪುಟ (1) 7–ಸಂಚಿಕೆ 12 ಪುಟಸಂಖ್ಯೆ
ಲೇಖನದ ಸಾರಾಂಶ: Describes the nature, classification, extent, dependability, utilization, and problems of using sources for Kashmir history.
ಸಿದ್ಧಪಡಿಸಿದವರ ಹೆಸರು: J. M. M Carthy

ಪುಸ್ತಕ ವಿಮರ್ಶೆ ಸೂಚಿಗಳು

ಪುಸ್ತಕ ಪ್ರಪಂಚದಲ್ಲಿ ಪ್ರತಿದಿನ ಪ್ರಕಟವಾಗುವ ಪುಸ್ತಕಗಳಲ್ಲಿ ಒಂದೇ ವಿಷಯಕ್ಕೆ ಸಂಬಂಧಪಟ್ಟವೇ ಹಲವಿರಬಹುದು. ಅವುಗಳಲ್ಲಿ ಉತ್ತಮವಾದವನ್ನು ಮಾತ್ರ ಓದುವ ಅಥವಾ ಕೊಳ್ಳುವ ಯೋಚನೆ ನಮಗಿರಬಹುದು. ಇಂಥ ಅನುಕೂಲತೆಯನ್ನು ಪುಸ್ತಕ ವಿಮರ್ಶೆ ಸೂಚಿಗಳು ಒದಗಿಸುತ್ತವೆ. ಅನೇಕ ಪತ್ರಿಕೆಗಳು, ನಿಯತಕಾಲಿಕಗಳಲ್ಲಿ ಪುಸ್ತಕ ವಿಮರ್ಶೆಗಳು ಪ್ರಕಟವಾಗುತ್ತಿರುತ್ತವೆ. ಸಾಮಾನ್ಯವಾಗಿ

ಆಯಾ ವಿಷಯಗಳಲ್ಲಿ ಸಾಕಷ್ಟು ಪರಿಶ್ರಮ ಇರುವವರು ಪುಸ್ತಕಗಳನ್ನು ವಿಮರ್ಶಿಸುತ್ತಾರೆ. ಇಂಥ ವಿಮರ್ಶೆಗಳನ್ನು ಪರಿಶೀಲಿಸುವುದರಿಂದ ನಮಗೆ ಬೇಕಾದ ಪುಸ್ತಕಗಳ ಆಯ್ಕೆ ಸುಲಭವೂ ಉಪಯುಕ್ತವೂ ಆಗುತ್ತದೆ. ಪುಸ್ತಕ ವಿಮರ್ಶೆಗಳು ಸಾವಿರ ಸಂಖ್ಯೆಯ ನಿಯತಕಾಲಿಕಗಳಲ್ಲಿ ಪ್ರಕಟವಾಗುತ್ತವೆ. ಅವನ್ನು ಹುಡುಕುವ ಕೆಲಸ ಸುಲಭವಾಗುವಂತೆ ಪುಸ್ತಕ ವಿಮರ್ಶೆ ಸೂಚಿಗಳು ಸಹಾಯ ಮಾಡುತ್ತವೆ. ಅಮೆರಿಕದ ವಿಲ್ಸನ್ ಕಂಪನಿ ಪ್ರಕಟಿಸುವ Book Review Digest ಇಂಥದು. ನಾನಾ ಪತ್ರಿಕೆಗಳಲ್ಲಿ ವಿಮರ್ಶೆ ಆದ ಪುಸ್ತಕಗಳ ವಿವರ, ವಿಮರ್ಶೆಯ ಆಯ್ದ ಭಾಗಗಳು, ವಿಮರ್ಶೆ ಪ್ರಕಟ ಆಗಿರುವ ಮೂಲಗಳನ್ನು ಇದು ಕೊಡುತ್ತದೆ. ವಿಮರ್ಶಾ ಭಾಗಗಳನ್ನು ಕೊಡದೆ ಮೂಲವನ್ನು ಮಾತ್ರ ತಿಳಿಸುವ Book Review Index ಸಹ ಪ್ರಕಟವಾಗುತ್ತದೆ.

ಜ್ಞಾನದಾಹ ಇರುವ ವಿದ್ಯಾರ್ಥಿ ತನ್ನ ಆಸಕ್ತಿ ಇರುವ ಕ್ಷೇತ್ರದಲ್ಲಿ ಯಾವ ಪುಸ್ತಕ, ಲೇಖನ ಸೂಚಿಗಳಿವೆ, ಲೇಖನ ಸಾರಾಂಶ ಸೂಚಿ ಮತ್ತು ವಿಮರ್ಶಾಸೂಚಿಗಳಿವೆ ಎಂಬುದನ್ನು ಮೊದಲು ಕಂಡುಕೊಳ್ಳಬೇಕು. ಸ್ವಂತ ಪರಿಶ್ರಮದಿಂದಲೋ ವಿಷಯತಜ್ಞರಾದ ಅಧ್ಯಾಪಕರ ಮೂಲಕವೋ ಗ್ರಂಥಾಲಯ ವಿಜ್ಞಾನಿಗಳ ಸಹಾಯದಿಂದಲೋ ಇಂಥ ತಿಳಿವನ್ನು ಪಡೆಯಬಹುದು. ಈ ರೀತಿಯ ತಿಳಿವು, ಅನುಭವ ಇಲ್ಲದವನು ಪ್ರಕಾಶನ ಪ್ರಪಂಚದ ಚಕ್ರಕೋಟೆಯಲ್ಲಿ ದಾರಿ ಕಾಣದೆ ತೊಳಲುತ್ತಾನೆ. ಆಧುನಿಕ ಪ್ರಪಂಚದಲ್ಲಿ ವ್ಯಾಸಂಗಕ್ಕೆ ಇಂಥ ತಿಳಿವೇ ನಿಜವಾದ ಗಣಪತಿಪೂಜೆ. ಅದಿಲ್ಲದವನ ವ್ಯಾಸಂಗ ನಿತ್ಯ ವಿಘ್ನಕಾರಿ; ಸದಾ ಅಪೂರ್ಣ.

ಕೆಲವು ಪ್ರಮುಖ ಗ್ರಂಥ, ಲೇಖನ ಸೂಚಿಗಳು

೧ ಕನ್ನಡಗ್ರಂಥಸೂಚಿ (೧೮೧೭–೧೯೬೮, ೧೯೬೯–೭೧)
ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೭೪
೧೮೧೭ರಿಂದ ೧೯೭೧ರ ವರೆಗೆ ಪ್ರಕಟವಾಗಿರುವ ಕನ್ನಡ ಪುಸ್ತಕಗಳ ವಿವರಣಾತ್ಮಕ ಸೂಚಿ

೨ Indian National Bibliography
(ಭಾರತ ರಾಷ್ಟ್ರೀಯ ಗ್ರಂಥಸೂಚಿ)
ಇಂಗ್ಲಿಷ್ ಹಾಗೂ ರಾಜ್ಯಭಾಷೆಗಳಲ್ಲಿ ಪ್ರಕಟವಾಗುವ ಭಾರತೀಯ ಪುಸ್ತಕಗಳ ಸೂಚಿ

೩ National Bibliography of Indian Literature 1901-1953
(ಭಾರತೀಯ ಸಾಹಿತ್ಯದ ರಾಷ್ಟ್ರೀಯ ಪುಸ್ತಕಸೂಚಿ)
೧೯೦೧ರಿಂದ ೧೯೫೩ರ ವರೆಗೆ ಪ್ರಕಟವಾದ ಭಾರತ ಭಾಷೆಗಳ ಆಯ್ದ ಸಾಹಿತ್ಯ ಕೃತಿಗಳ ಸೂಚಿ

೪ British Museum: General Catalogue of Printed Books
(ಬ್ರಿಟಿಷ್ ಮ್ಯೂಸಿಯಂ ಮುದ್ರಿತ ಪುಸ್ತಕಗಳ ಸೂಚಿ) London :
Trustees of the British Museum, 1965-1966. 263 Vols.
ಬ್ರಿಟಿಷ್ ಮ್ಯೂಸಿಯಂ ಪುಸ್ತಕ ಸಂಪತ್ತಿನ ಸೂಚಿ

೫ Indian Books (ಭಾರತೀಯ ಗ್ರಂಥಗಳು) Varanasi : Indian Bibliographyic Center, 1969
ಭಾರತದಲ್ಲಿ ಪ್ರಕಟವಾಗುವ ಗ್ರಂಥಸೂಚಿ
ಪ್ರತಿವರ್ಷ ೩–೪ ಸಾವಿರ ಪುಸ್ತಕಗಳ ವಿವರ ಕೊಡುತ್ತದೆ.

೬ Besterman, Theodore
A World Bibliography of Bibliographies (ಗ್ರಂಥಸೂಚಿಗಳ

ಪ್ರಪಂಚ ಗ್ರಂಥಸೂಚಿ) 4th ed. Geneva : Societies Bibliographica, 1965-19675 Vols. ಜಗತ್ತಿನ ೪೦ ಭಾಷೆಗಳ ೧೭ ಸಾವಿರ ಪುಸ್ತಕ ಸೂಚಿಗಳ ಆಧಾರದಿಂದ ಸಿದ್ಧವಾದದ್ದು. ಲೇಖಕ ಸೂಚಿ, ವಿಷಯ ಸೂಚಿ, ಅನುವಾದ ಸೂಚಿಗಳನ್ನೊಳಗೊಂಡದ್ದು

೭ The National Union Catalog
(ರಾಷ್ಟ್ರೀಯ ಸಂಯುಕ್ತ ಪುಸ್ತಕ ಸೂಚಿ)
Washington D. C.: Library of Congress, 1956—
ಅಮೆರಿಕ ಸಂಯುಕ್ತ ಸಂಸ್ಥಾನ ಹಾಗೂ ಕೆನಡಗಳ ೭೫೦ ಪ್ರಮುಖ ಪುಸ್ತಕಾಲಯಗಳ ಗ್ರಂಥ ಸಂಪತ್ತಿನ ಸಂಯುಕ್ತ ಪುಸ್ತಕಸೂಚಿ.

೮ Index to Indian Medical Periodicals 1953—
ಭಾರತೀಯ ವೈದ್ಯಶಾಸ್ತ್ರ ನಿಯತಕಾಲಿಕ ಲೇಖನಗಳ ಸೂಚಿ

೯ New York : Times Index 1851—
ನ್ಯೂಯಾರ್ಕ್ ಟೈಂವ್ಸ್ ದಿನಪತ್ರಿಕೆಯಲ್ಲಿ ಪ್ರಕಟ ಆಗುವ ಸುದ್ದಿ, ಲೇಖನಗಳಸೂಚಿ.

೧೦ Granger's Index to Poetry. (ಗ್ರ್ಯಾಂಗರನ ಕಾವ್ಯಸೂಚಿ) 6th ed.
New York Columbia University Press, 1973
ಇಂಗ್ಲಿಷ್ ಕಾವ್ಯ ಸಂಗ್ರಹಗಳ ಕವನಸೂಚಿ. ಕವನದ ಹೆಸರು. ಕವಿಯ ಹೆಸರು. ಕವನದ ಮೊದಲ ಸಾಲು, ಇತ್ಯಾದಿಗಳಿಂದ ಹೆಚ್ಚಿನ ವಿವರಗಳನ್ನು ತಿಳಿಯಲು ಸಹಾಯಕ.

೧೧ Short Story Index
New York : Wilson Co., 1953 ನೂರಾರು ಸಂಖ್ಯೆಯ ಕಥಾಸಂಕಲನಗಳಲ್ಲಿನ ಕಥೆಗಳ ಸೂಚಿ

೧೨ Press in India: Annual Report of the Registrar of Newspapers for India New Delhi. Ministry of Information and Broadcasting.
ಭಾರತೀಯ ಪತ್ರಿಕಾ ಪ್ರಪಂಚದ ಸಾಮಾನ್ಯ ವಿವರಣೆ, ಅಂಕಿಅಂಶಗಳನ್ನು ಕೊಡುವುದರ ಜೊತೆಗೆ ಎಲ್ಲ ರಾಜ್ಯ ಭಾಷೆಗಳ ಹಾಗೂ ಇಂಗ್ಲಿಷ್ ಪತ್ರಿಕೆಯ ನಿಯತಕಾಲಿಕಗಳ ಸೂಚಿ

೧೩ Cumulative Book Index
New York: Wilson and Co., 1898—
ಪ್ರಪಂಚಾದ್ಯಂತ ಪ್ರಕಟವಾಗುವ ಇಂಗ್ಲಿಷ್ ಗ್ರಂಥಗಳ ಸೂಚಿ

೧೪ Historical Abstracts (ಚರಿತ್ರೆ ಲೇಖನ ಸಾರಾಂಶಸೂಚಿ)
Santa Barbara, Calif.; American Bibliographic Center, 1955- ಪ್ರಪಂಚಾದ್ಯಂತ ಪ್ರಕಟವಾಗುವ ಆಯ್ದ ನಿಯತಕಾಲಿಕಗಳಲ್ಲಿನ ಚರಿತ್ರೆ ಲೇಖನಗಳ ಸಾರಾಂಶ ಸೂಚಿ.

[ಬಹುಸಂಖ್ಯಾತ ಪುಸ್ತಕ, ಲೇಖನ ಸೂಚಿಗಳಿದ್ದು ಕೆಲವನ್ನು ಮಾತ್ರ ಇಲ್ಲಿ ಸೂಚಿಸಲಾಗಿದೆ. ಗ್ರಂಥಾಲಯ ವಿಜ್ಞಾನಿಯ ಸಹಾಯದಿಂದ ಆಸಕ್ತಿ ಇರುವ ಯಾವುದೇ ವಿಷಯದ ಗ್ರಂಥ-ಲೇಖನ ಸೂಚಿಗಳ ವಿಚಾರ ತಿಳಿಯಬಹುದು.]

'ಪುಸ್ತಕ' ಎಂಬ ಪದಕ್ಕೆ ಸಂವಾದಿಯಾಗಿ ಇಂದು ಗ್ರಂಥ. ಹೊತ್ತಗೆ (ಪುಸ್ತಕ ಎಂಬ ಸಂಸ್ಕೃತ ರೂಪದ ತದ್ಭವ) ಎಂಬ ಶಬ್ದಗಳು ಬಳಕೆಯಲ್ಲಿವೆ. ಇಂಗ್ಲಿಷಿನಲ್ಲಿ ಪುಸ್ತಕವನ್ನು ಬುಕ್ ಎನ್ನುತ್ತಾರೆ. ಚಿಕ್ಕಪುಸ್ತಕಕ್ಕೆ ಬುಕ್‌ಲೆಟ್– ಪುಸ್ತಿಕೆ ಎಂಬ ಮಾತುಗಳು ಬಳಕೆಯಲ್ಲಿವೆ. ಪುಸ್ತಕ, ಗ್ರಂಥ ಎಂಬ ಮಾತು ಹೊಲಗೆ ಇನ್ನೂ ಬಳಕೆಗೆ ಬಾರದಂದಿನ ಪುಸ್ತಕ ಸ್ವರೂಪವನ್ನು ಸೂಚಿಸುತ್ತವೆ. ಹಿಂದೆ ಹಾಳೆಗಳನ್ನು ಕ್ರಮವಾಗಿ ಜೋಡಿಸಿ ಒಂದು ಕಟ್ಟಾಗಿ ಗಂಟಾಗಿ ಹುರಿಸುತ್ತಿ ಯಿಡುತ್ತಿದ್ದರು. ಪೋಥಿ ಮತ್ತು ಗ್ರಂಥಿ (ಗಂಟು) ಎಂಬ ಪದಗಳಲ್ಲಿ ಮೂಲಾರ್ಥ ಉಳಿದು ಬಂದಿದೆ. ಈಗಲೂ ರಿಕಾರ್ಡುಗಳು, ದಫ್ತರಗಳು ಮೊದಲಾದುವನ್ನು ಕಟ್ಟುಕಟ್ಟಿ ಇಡುವ ಪದ್ಧತಿ ರೂಢಿಯಲ್ಲಿದೆಯಷ್ಟೆ. ಕಟ್ಟು ಎಂಬುದನ್ನು ಕಂಥಾ, ಕಂತೆ ಎಂದೂ ಕರೆವುದಿದೆ. ಬುಕ್ ಎಂಬ ಇಂಗ್ಲಿಷ್ ಪದ ಬೈಗೆನ್ ಎಂಬ ಜರ್ಮನ್ ಪದದಿಂದ ಬಂದಿದೆಯೆಂದು ಕೆಲವರ ವಾದ. ಆದರೆ ಜನಸಾಮಾನ್ಯರ ತಿಳುವಳಿಕೆ ಮತ್ತು ರೂಢಿಯನ್ನು ನೋಡಿದರೆ ಬುಕ್ ಶಬ್ದಕ್ಕೆ ಮೂಲತಃ ಬೀಚ್ ವೃಕ್ಷದ ತೊಗಟೆ ಅಥವಾ ಫಲಕ ಎಂಬ ಅರ್ಥ ಇರುವಂತೆ ಕಾಣುತ್ತದೆ. ಜನಪದ ಸಾಹಿತ್ಯವೂ ಇದನ್ನು ಪುಷ್ಟೀಕರಿಸುತ್ತದೆ. ಗ್ರೀಕರ ಬಿಬ್ಲೋಸ್ ಎಂಬುದು ಜಂಬುಕಾಗದವನ್ನೂ ರೋಮನ್ನರ ಕೋಡೆಕ್ಸ್ ಎಂಬುದು ಗಿಡದ ಬೊಡ್ಡೆಯನ್ನೂ ಸೂಚಿಸುವುದನ್ನು ಇಲ್ಲಿ ನೆನೆಯಬಹುದು."

ಕನ್ನಡ ವಿಶ್ವಕೋಶ, ಸಂ. ೬, ಪು. ೭೫೬

ಡಾ. ಆ. ನೇ. ಉಪಾಧ್ಯೆ

ಯಾಪನೀಯ ಸಂಘದ[1] ಮೇಲೆ ವಿಶೇಷ ಬೆಳಕು*

ನಿಗಂಠನಾತಪುತ್ತ ಅಥವಾ ಮಹಾವೀರನಿಗಿಂತ ಮುಂಚೆ ಆ ಪಂಥದ ಧಾರ್ಮಿಕ ಹಾಗೂ ಮುನಿಗಳ ಸಂಘಗಳು ಪಾರ್ಶ್ವನಾಥನ ನೇತೃತ್ವದಲ್ಲಿ ನಡೆದುವು. ಮಹಾವೀರ ಸ್ವತಃ 'ಪಾಸಾವಚ್ಚಿಜ್ಜ' ಆಗಿದ್ದ; ಎಂದರೆ ಆತ ಪಾರ್ಶ್ವನ ಅನುಯಾಯಿಯಾಗಿದ್ದ. ಆದರೂ ಉತ್ತರಾಧ್ಯಯನ XXIII, ಮಹಾವೀರನ ಹಾಗೂ ಪಾರ್ಶ್ವನ ಅನ್ನುಯಾಯಿ ಮುನಿಗಳು ತಮ್ಮತಮ್ಮಲ್ಲಿನ ಆಚಾರ ವಿಚಾರಗಳಲ್ಲಿದ್ದ ಭೇದಗಳ ಹೊಂದಾಣಿಕೆಗೆ ಪ್ರಯತ್ನ ಪಟ್ಟುದನ್ನು ಚಿತ್ರಿಸಿದೆ. ಈ ಬಗೆಯ ಭೇದಗಳೇ, ಕಾಲಗತಿಯಲ್ಲಿ ಜೈನ ಧರ್ಮದಲ್ಲಿ ಭಿನ್ನ ಪಂಗಡಗಳಿಗೆ, ಸಂಘಗಳಿಗೆ ಜನ್ಮವಿತ್ತಿರಬಹುದು.

ಮಹಾವೀರ ಅಥವಾ ನಿಗಂಠನಾತಪುತ್ತನ ಮರಣಾನಂತರ ಸ್ವಲ್ಪ ಸಮಯದಲ್ಲೆ ಜೈನ ಧರ್ಮದಲ್ಲಿ ಬುದ್ಧ ಒಡಕುಗಳನ್ನು ಕಂಡ ಹಾಗೆ 'ಸಮಾಗಮಸುತ್ತ' ಗ್ರಂಥ ವಿವರಿಸಿದೆ. ಅದರಲ್ಲಿ ಆತ ತನ್ನ ಅನುಯಾಯಿಗಳಿಗೆ ಅವರೂ ಆ ಬಗೆಯ ಒಡಕುಗಳಿಗೆ ಆಹುತಿಯಾಗಬಾರದೆಂದು ಬಿನ್ನಯಿಸಿಕೊಂಡುದಾಗಿ ಬರೆದಿದೆ[2]. ಮಹಾವೀರನ ಜೀವನಾವಧಿಯಲ್ಲೇ ಆತನ ಅಳಿಯ ಜಮಾಲಿ ಪ್ರತಿಪಾದಿಸಿದ 'ಬಹುರತ' ಹಾಗೂ ತಿಷ್ಯಗುಪ್ತ ಪ್ರತಿಪಾದಿಸಿದ 'ಜೀವಪ್ರದೇಶ' ಎಂಬ ತಾತ್ವಿಕಭೇದಗಳೂ ಬಳಕೆಯಲ್ಲಿದ್ದವು.[3] ಮಹಾವೀರನ ನಿರ್ವಾಣಾನಂತರದಲ್ಲಿ ಪ್ರಾಯಃ ಜೈನಮುನಿಗಳಲ್ಲಿ ಕೆಲವರು ದಕ್ಷಿಣಕ್ಕೆ ವಲಸೆ ಹೋದುದರಿಂದ ಶ್ವೇತಾಂಬರ ಮತ್ತು ದಿಗಂಬರ ಎಂಬ ಶಾಖಾ ಭೇದಕ್ಕೆ ಕಾರಣವಾಗಿರಬೇಕು. ಅದಕ್ಕೆ ಪೂರ್ವದ ಆಚಾರ ಭೇದಗಳೂ ಇನಿತು ಸಾಧನವಾಗಿರಬೇಕು.[4] ಆದರೆ ಆರ್ಯಾಷಾಢ ಮೊದಲಾದ

---

* ಈ ಲೇಖನವನ್ನು (ಮೂಲ) ಡಾ. ಎ. ಎನ್. ಉಪಾಧ್ಯೆ ಅವರು ಪ್ಯಾರಿಸ್ ನಗರದಲ್ಲಿ ನಡೆದ ಅಂತರರಾಷ್ಟ್ರೀಯ ಪ್ರಾಚ್ಯ ವಿದ್ವಾಂಸರ ಕಾಂಗ್ರೆಸ್ಸಿನಲ್ಲಿ (International Congress of Orientalists)ಓದಿದರು.

1 ಈ ವಿಷಯಕ್ಕೆ ಸಂಬಂಧಪಟ್ಟ ಪೂರ್ವ ಲೇಖನಾವಳಿ: *Ind. Ant.* VII, p.34 ; H. Luders : *E.I.* IV, p 338 ; N. Premi : *Jain Hitaishi,* XIII, pp. 250-75 ; A. N. Upadhye : *Journal of the University of Bombay.* I. vi, pp. 224 ff ; N. Premi : *Jaina Sahitya Aur Itihiasa*, 2nd ed, Bombay 1956, pp. 56f., 155f. 521f. : P. B. Desai : *Jainism in South India*, Sholapur, 1957, pp. 163-66, etc.

2 Nalinaksha Datta : *Early History of the spread of Buddhism and Buddhist Schools*, p. 200

3 E. Leuman : *Die alten Berichte von den Schisman der Jaina* I. S, *XVII*, p.p. 91-135

4 Dr. Hoernle quoted in *South Indian Jainism*, pp. 25-27

ವರಿಂದ[5] (ಮಹಾವೀರನ ನಿರ್ವಾಣಾನಂತರ ೨೧೪ ವರ್ಷಗಳ) ಅನಂತರದಲ್ಲಿ ಪ್ರಾರಂಭಗೊಂಡ ಭಿನ್ನಾಚಾರಗಳು ಜೈನಧರ್ಮದಲ್ಲಿ ಶಾಖಾಭೇದವಾಗುವಷ್ಟು ಪ್ರಬಲವಾಗಿ ಬಾಳಲಿಲ್ಲ.

ಕ್ರಿ.ಶ.ದ ಪ್ರಾರಂಭದ ಮಥುರೆಯ ಶಾಸನಗಳಿಂದ ಜೈನಧರ್ಮದಲ್ಲಿ ಗಣ, ಕುಲ, ಶಾಖೆ ಮತ್ತು ಸಂಭೋಗಗಳು ವಿಭಾಗಗಳ ನಡಾವಳಿಯಲ್ಲಿದ್ದುದು ಸ್ಪಷ್ಟವಿದೆ. ದಿಗಂಬರರಲ್ಲಿ ಸಂಘ (ಮೂಲ, ದ್ರಾವಿಡ), ಗಣ (ದೇಶಿ, ಸೇನ, ಕಾಣೂರ್ ಇತ್ಯಾದಿ), ಗಚ್ಛ (ಪುಸ್ತಕ ಇತ್ಯಾದಿ), ಅನ್ವಯ (ಕುಂದಕುಂದ ಇತ್ಯಾದಿ) ಮುಂತಾದ ಶಾಖೆಗಳಿದ್ದುವು. ಶ್ವೇತಾಂಬರರಲ್ಲಿ ಖರತರ, ತಪಾ, ಅಂಚಲ ಮುಂತಾದ ಗಚ್ಛಗಳಿದ್ದುವು.[6]

ದೇವಸೇನನ 'ದರ್ಶನಸಾರ' ಕೃತಿ (ಕ್ರಿ.ಶ. ಸು. ೯-೧೦ನೆಯ ಶತಮಾನ) ಕೆಲ ವಿಶೇಷ ವಿವರಗಳನ್ನು ಸಂಘಗಳ ಸಂಬಂಧವಲ್ಲಿ ಕೊಡುತ್ತದೆ. ಅದರಲ್ಲಿಯ ಕೆಲವನ್ನು ಇಲ್ಲಿ ಬರೆಯಬಹುದು. ಯಾಪನೀಯ ಸಂಘವು ಶ್ರೀಕಲಶನಿಂದ (ವಿಕ್ರಮ ಶಕೆ ೨೦೫ರಲ್ಲಿ), ದ್ರಾವಿಡ ಸಂಘವು ವಜ್ರನಂದಿಯಿಂದ (ವಿಕ್ರಮಶಕೆ ೫೨೬ರಲ್ಲಿ), ಕಾಷ್ಠಾ ಸಂಘವು ಕುಮಾರಸೇನನಿಂದ (ವಿಕ್ರಮಶಕೆ ೭೫೩ರಲ್ಲಿ) ಮತ್ತು ಮಾಥುರ ಸಂಘವು ರಾಮಸೇನನಿಂದ (ವಿಕ್ರಮ ಶಕೆ ೯೫೩ರಲ್ಲಿ) ಪ್ರಾರಂಭಿಸಲ್ಪಟ್ಟುವು.[7] ದೇಶದ ನಾನಾ ಭಾಗಗಳಲ್ಲಿ ವಾಸಿಸುತ್ತಿದ್ದುದು, ಭಿನ್ನಪ್ರದೇಶಗಳಲ್ಲಿ ವಿಹರಿಸುತ್ತಿದ್ದುದು, ಮುನಿಗಳ ಸಂಘಗಳಲ್ಲಿ ಈ ಬಗೆಯ ಶಾಖೆಗಳಾಗುವದಕ್ಕೆ ಕಾರಣವಾಯಿತು; ಅದು ಅನಿವಾರ್ಯವೇ; ಅದಕ್ಕೆ ಕಾರಣ ಭಿನ್ನರೀತಿಯ ಆಚಾರ ವಿಚಾರಗಳ ಆವಿಷ್ಕಾರ ಪದ್ಧತಿಯೇ.

ಗಣ, ಗಚ್ಛ, ಸಂಘ, ಮೊದಲಾದ ಶಬ್ದಗಳ ಬಗ್ಗೆ ಕೆಲವು ಸೂತ್ರಪ್ರಾಯವಾದ ವಿವರಣೆಗಳು ದೊರೆಯುತ್ತವೆ. ಮೂವರು ಮುನಿಗಳ ಗುಂಪಿಗೆ ಗಣವೆಂದೂ ಏಳು ಜನ ಮುನಿಗಳ ಗುಂಪಿಗೆ ಗಚ್ಛವೆಂದೂ ಅನೇಕ ಮುನಿಗಳ ಒಕ್ಕೂಟಕ್ಕೆ ಸಂಘವೆಂದೂ ಹೇಳಲಾಗುತ್ತದೆ.[8] ಆದರೆ ಈ ವಿವರಣೆಗಳನ್ನು ಸಾರ್ವತ್ರಿಕವೆಂದು ಒಪ್ಪಲಾಗುವುದಿಲ್ಲ. ಉದ್ಯೋತನನ (ಕ್ರಿ.ಶ. ೭೭೯)ಪ್ರಕಾರ ಗಚ್ಛವು ಮುನಿಯೊಬ್ಬನ ನೇತೃತ್ವದಲ್ಲಿ ಪರ್ಯಟನಗೆಯ್ಯುವ ಮುನಿಗಳ ಸಮೂಹವನ್ನು ಪ್ರಾರಂಭದಲ್ಲಿ ಸೂಚಿಸುತ್ತಿತ್ತೆಂದು ತೋರುತ್ತದೆ.[9] ಶ್ವೇತಾಂಬರ ಮತ್ತು ದಿಗಂಬರ ಪ್ರಮುಖ ಮುನಿಗಳಿಂದ ಸಂಪ್ರದಾಯಾರ್ಥಗಳನ್ನು ಸಂಗ್ರಹಿಸಬೇಕಾಗಿದೆ.

'ಗಣಭೇದ' ಎಂಬ ಕನ್ನಡ ಹಸ್ತಪ್ರತಿಯೊಂದರಲ್ಲಿ ಗಣಗಳಿಗೆ ಸಂಘಗಳಿಗಿಂತ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದೆ; ನಾಲ್ಕು ಗಣಗಳನ್ನು ಗುರುತಿಸಿದೆ; ಅವುಗಳೊಂದಿಗೆ ಹೊಂದಿದ ಸಂಘಗಳ ಸಂಬಂಧವನ್ನೂ ಸೂಚಿಸಿದೆ: (ಅ) ಸೇನಗಣ (ಮೂಲಸಂಘ); (ಆ) ಬಲವತ್ಕಾರಗಣ[10] (ನಂದಿಸಂಘ); (ಇ) ದೇಶೀಗಣ (ಸಿಂಹಸಂಘ) ಮತ್ತು ಕಾಲೋಗ್ರಗಣ (ಯಾಪನೀಯ ಸಂಘ).[11]

ದಿಗಂಬರ ಹಾಗೂ ಶ್ವೇತಾಂಬರ ಶಾಖೆಗಳಿಗೆ ಕೊಟ್ಟಿರುವಷ್ಟು ಲಕ್ಷ್ಯವನ್ನು ಯಾಪನೀಯ ಸಂಘಕ್ಕೆ ಕೊಟ್ಟಿಲ್ಲ. ಇದಕ್ಕೆ ಕಾರಣ, ಇಂದು ಅದು ಅಸ್ತಿತ್ವದಲ್ಲಿ ಇಲ್ಲದುದು ಮತ್ತು ಒಂದೊಮ್ಮೆ ಯಾಪನೀಯರ ಬಗ್ಗೆ ಇದ್ದ ಮಾತ್ಸರ್ಯ. ಯಾಪನೀಯರ ಮೂಲದ ಬಗ್ಗೆ ಇರುವ ವಿವರಣೆಗಳಲ್ಲಿ

---

5 ನೋಡಿ : ವಿಶೇಷಾವಶ್ಯಕ ಭಾಷ್ಯ. ಗಾಥೆಗಳು ೨೩೦೪-೨೫೪೮

6 See the *Introduction to Reportive D'epigraphie Jaina* by A Goverinot, Paris, 1908

7 *Annals of the B.O.R.I.*, xv. iii-iv, pp. 198ff, Poona 1934

8 ಮೂಲಾಚಾರಕ್ಕೆ ವಸನಂದಿಯ ಸಂಸ್ಕೃತ ಟೀಕೆ, , ೩೨, ಮುಂಬಯಿ ೧೯೨೦

9 ಕುವಲಯಮಾಲಾ, ಪು. ೮೦, ಪಂಕ್ತಿ ೧೭ *f* ಮುಂಬಯಿ ೧೯೫೯

10 ಬಲವತ್ಕಾರ=ಬಲಾತ್ಕಾರ, ಕನ್ನಡ 'ಬಳ(ಳೆ)ಗಾರ'ವನ್ನೂ ಸ್ಮರಿಸಿ

11 ಯಾಪನೀಯ ಸಂಘಕ್ಕೆ ಸಂಬಂಧಪಟ್ಟ ಕಾಣೂರ್ ಅಥವಾ ಕಣ್ಣೂರಗಣದ ವಿಶೇಷ ಸಂಸ್ಕೃತೀಕರಣಗೊಂಡ ರೂಪವೇ 'ಕಾಲೋಗ್ರಗಣ'ವೆಂದು ತೋರುತ್ತದೆ.

ಹಲವು ಸಂಪ್ರದಾಯಗಳಿವೆ. ವಿಕ್ರಮ ರಾಜನ ಮರಣಾನಂತರ ೯೦೯ ಅಥವಾ ೯೯೦ ವರ್ಷಗಳು ಗತಿಸಿದ ಮೇಲೆ ಬಾಳಿದ ದೇವಸೇನ ರಚಿಸಿದ ದರ್ಶನಸಾರದಲ್ಲಿ ಶ್ರೀಕಲಶನೆಂಬ ಶ್ವೇತಾಂಬರ ಯತಿ ಯಾಪನೀಯ ಸಂಘವನ್ನು ಕಲ್ಯಾಣನಗರದಲ್ಲಿ ವಿಕ್ರಮಶಕ ೨೦೫ರಲ್ಲಿ ಸ್ಥಾಪಿಸಿದನೆಂದಿದೆ. ಅನಂತರ ರತ್ನನಂದಿ[12] (ಕ್ರಿ.ಶ. ಸು. ೧೫ನೆಯ ಶತಮಾನದ ತರುವಾಯ) ತನ್ನ ಭದ್ರಬಾಹು ಚರಿತೆಯಲ್ಲಿ ಯಾಪನೀಯರ ಮೂಲವನ್ನು ಕುರಿತು ಹೀಗೆ ಬರೆದಿದ್ದಾನೆ: ಕರಹಾಟಕ ಭೂಭಾಗದಲ್ಲಿ ಭೂಪಾಲನೆಂಬ ರಾಜ ಆಳುತ್ತಿದ್ದ. ಆತನಿಗೆ ನೃಕುಲಾದೇವಿ ಎಂಬ ನಚ್ಚಿನ ರಾಣಿಯಿದ್ದಳು. ಆಕೆ ತನ್ನ ಪ್ರಿಯತಮನಿಗೆ ಒಮ್ಮೆ ತನ್ನ ತೌರೂರಿನಲ್ಲಿ ತನಗೆ ಧಾರ್ಮಿಕ ಗುರುಗಳಿದ್ದುದಾಗಿಯೂ ಅವರನ್ನು ವ್ರತಗಳ ಆಚರಣೆಯಲ್ಲಿ ಹೆಚ್ಚಳ ಉಂಟಾಗಲು ಕರೆದು ತರಬೇಕೆಂದೂ ಪ್ರಾರ್ಥಿಸಿಕೊಂಡಳು; ಅವರ ಮನವೊಲಿಸಬೇಕಾಗುವುದು ಎಂದೂ ತಿಳಿಸಿದಳು. ರಾಜ ಆಕೆಯ ಬಿನ್ನಹಕ್ಕೆ ಬಾಗಿ ಬುದ್ಧಿಸಾಗರನೆಂಬ ಮಂತ್ರಿಯನ್ನು ಆ ಗುರುಗಳನ್ನು ಕರೆತರುವುದಕ್ಕೆ ಕಳಿಸಿದ. ಬುದ್ಧಿಸಾಗರ ಆ ಮುನಿಗಳಲ್ಲಿ ಅನೇಕ ವಿಜ್ಞಾಪನೆಗಳನ್ನು ಮಾಡಿಕೊಂಡು ಕರೆದುಕೊಂಡು ಬಂದ. ಆ ಮುನಿಗಳನ್ನು ಸ್ವಾಗತಿಸಲು ರಾಜ ವಿಜೃಂಭಣೆಯಿಂದ ಹೋದ. ದೂರದಿಂದಲೇ ಅವರು ಬಟ್ಟೆಗಳನ್ನು ಧರಿಸಿದುದನ್ನು ಕಂಡು ದಿಗಂಬರರಲ್ಲವೆಂದು ತಿಳಿದು, ಹಾಗೆ ಬಟ್ಟೆಗಳನ್ನು ಧರಿಸಿದ, ಕೈಯಲ್ಲಿ ಪಾತ್ರೆ ಮತ್ತು ದಂಡವನ್ನು ಹಿಡಿದ ಅವರ ಬಗೆಗೆ ಆಶ್ಚರ್ಯವನ್ನೂ ತಳೆದ. ಅಷ್ಟೇ ಅಲ್ಲ, ಅವರಿಗೆ ಸನ್ಮಾನಗಳನ್ನೂ ಮಾಡದೆ ಹಾಗೆಯೇ ಹಿಂತಿರುಗಿದ. ಅನಂತರ ರಾಣಿಗೆ ಆ ಗುರುಗಳು ತನ್ನ ಧರ್ಮಕ್ಕೆ ವಿರುದ್ಧಾಚರಣೆಕಾರರೆಂದು ತಿಳಿಸಿದ; ಅವರು ಜೈನ ಮುನಿಗಳಲ್ಲವೆಂದೂ ನುಡಿದ; ತತ್ಕಾರಣ ಅವರನ್ನು ಸಮ್ಮಾನಿಸಲು ಅಸಿದ್ಧನೆಂದ. ಅದನ್ನು ಅರ್ಥಮಾಡಿಕೊಂಡ ರಾಣಿ. ಕೂಡಲೆ ಆ ಗುರುಗಳ ಹತ್ತಿರ ಹೋಗಿ ಅವರಿಗೆ ಧರಿಸಿದ ಬಟ್ಟೆಗಳನ್ನು ತ್ಯಜಿಸಲು ಬಿನ್ನಯಿಸಿಕೊಂಡಳು: ಮತ್ತೆ ನಿರ್ಗ್ರಂಥ ಪದ್ಧತಿಯನ್ನು ಒಪ್ಪಿಕೊಳ್ಳಲು ಕೇಳಿಕೊಂಡಳು. ಆಕೆಯ ವಿಜ್ಞಾಪನೆಯನ್ನು ಸ್ವೀಕರಿಸಿ, ಅವರು ಧರಿಸಿದ ಬಟ್ಟೆಗಳನ್ನು ತ್ಯಜಿಸಿ, ದಿಗಂಬರರಾಗಿ, ಕೈಯಲ್ಲಿ ಪಿಚ್ಛವನ್ನೂ ನೀರಿನ ಕುಂಬಳಕುಂಡಿಕೆಯನ್ನೂ (ಕಮಂಡಲು) ಹಿಡಿದುಕೊಂಡರು. ಆಗ ರಾಜ ಅವರನ್ನು ಯಥಾವಿಧಿ ಸತ್ಕರಿಸಿದ. ದಿಗಂಬರ ವೇಷದಲ್ಲಿದ್ದರೂ ಆ ಮುನಿಗಳು ಶ್ವೇತಾಂಬರರ ಪದ್ಧತಿಯನ್ನು ಅನುಸರಿಸಿದರು. ಅವರೇ ಯಾಪನೀಯ ಸಂಘಕ್ಕೆ ರೂಹನ್ನಿತ್ತರು.

ಕೆಲವು ದಿಗಂಬರ ಲೇಖಕರಿಂದ ಯಾಪನೀಯರನ್ನು ಜೈನಧರ್ಮದ ವಿರೋಧಿಗಳೆಂದು ಬಗೆಯಲಾಗಿದೆ. ಇಂದ್ರನಂದಿ 'ನೀತಿಸಾರ' ಗ್ರಂಥದಲ್ಲಿ (ಪದ್ಯ ೧೦)[13] ಅವರನ್ನು ಜೈನಾಭಾಸಗಳೆಂದು ಪರಿಗಣಿಸಿದ ಪಂಚ ಪಂಗಡಗಳಲ್ಲಿಯೇ ಹೇಳಿದ್ದಾನೆ:

> ಗೋಪುಚ್ಛಿಕಾಃ ಶ್ವೇತವಾಸಾ ದ್ರಾವಿಡೋ ಯಾಪನೀಯಕಃ।
> ನಿಃಪಿಂಚಶ್ಚೇತಿ ಪಂಚೈತೇ ಜೈನಾಭಾಸಾಃ ಪ್ರಕೀರ್ತಿತಾಃ॥

ಮೂಲತಃ 'ಯಾಪನೀಯ' ಎಂದರೇನು ಎಂಬುದು ತನ್ನಷ್ಟಕ್ಕೆ ಇನ್ನೂ ನಿಗೂಢ ಪ್ರಶ್ನೆಯೆ ಆಗಿದೆ. ವಿವಿಧ ರೀತಿಯಲ್ಲಿ ಬರೆಯಲಾದ ಅದರ ಉಲ್ಲೇಖಗಳು ಉಪಲಬ್ಧವಿವೆ: ಯಾಪನೀಯ, ಜಾಪನೀಯ, ಯಾಪನೀ, ಆಪನೀಯ, ಯಾಪುಲೀಯ, ಆಪುಲೀಯ, ಜಾಪುಲಿ, ಜಾವುಲಿಯ, ಜಾವಿಲಿಯ, ಜಾವಳಿಯ, ಮತ್ತು ಜಾವಳಿಗೆಯ. ವಿವಿಧ ಬಗೆಯ ವಿವರಣೆಗಳೂ ಉಪಲಬ್ಧವಿವೆ, 'ಯಾ'ಧಾತುವಿಗೆ ಕೃತ್ಪ್ರತ್ಯಯಗಳನ್ನು ಸೇರಿಸಿ ಅದರ ರೂಪನಿಷ್ಪತ್ತಿಯನ್ನು ವಿವರಿಸಲಾಗುತ್ತದೆ. ತೇಲಂಗ ಅದನ್ನು 'as those who wandered about without being stationary'[14] [ನಿಂತಲ್ಲಿ ನಿಲ್ಲದೆ ವಿಹಾರಗೈಯುವವರು] ಎಂದು ವಿವರಿಸುವರು. 'ಪ್ರವಚನಸಾರ'(III.೧೦)ಮುಂತಾದ ಪ್ರಾಚೀನಗ್ರಂಥಗಳಲ್ಲಿ 'ಪವ್ವಜ್ಜಾದಾಯಗ' ಮತ್ತು 'ಣಿಜ್ಜಾವಗ' ಎಂಬ ಇಬ್ಬಗೆಯ ಗುರುಗಳನ್ನು

12 ರತ್ನನಂದಿ, ಭದ್ರಬಾಹು ಚರಿತ, ಕೊಲ್ಹಾಪುರ ೧೯೨೧ ch. IV. 135–54; H. Jacobi: *Uber die Entstehung der Svētāmbar and Digambara Sektem*, ZDMG, xxxviiii, pp. 1–42; H. Luders: E.I. IV p. 338

13 'ತತ್ತ್ವಾನುಶಾಸನಾದಿ ಸಂಗ್ರಹಃ–ಮೋ.ದಿ.ಜೈ.ಗ್ರಂ. (Sam. 1975) ಪುಟ 58

14 ನೋಡಿ: I.A., VII, p. 34

ಹೇಳಿದೆ. ದಾರಿ ತಪ್ಪಿದ ಮುನಿಗಳನ್ನು ದಾರಿಗೆ ತರುವುದೇ 'ಜೆಜ್ಜಾವಗ' ಗುರುಗಳ ಕರ್ತವ್ಯವಾಗಿತ್ತು. ಆ ಗುರುವಿನ ಕೆಲಸವೆಂದರೆ ನಿಯಂತ್ರಿಸುವುದು ಮತ್ತು ಸರಿಯಾದ ಮಾರ್ಗವೊಂದನ್ನು ಯೋಜಿಸುವುದು. ನಡೆಸುವುದು: ಕಾರಣ 'ನಿರ್ಯಾಪಕ'[15] ಎಂಬುದಕ್ಕಿಂತ 'ನಿರ್ಯಾಮಕ'ವೇ ಸರಿಯಾದ, ಸಮನಾದ ಸಂಸ್ಕೃತ ಶಬ್ದ. ಪುರಾತನ ಜೈನಗ್ರಂಥಗಳಲ್ಲಿ 'ಜವಣಿಜ್ಜ' ಇದು ಏಕಾರ್ಥದಲ್ಲಿಯೆ ಪ್ರಯೋಗವಾಗಿಲ್ಲ. 'ನಾಯಾಧಮ್ಮಕಹಾಓ'ದಲ್ಲಿ 'ಇಂದಿಯ ಜವಣಿಜ್ಜೆ' ಎಂಬ ಪ್ರಯೋಗವಿದೆ. ಇಲ್ಲಿದು 'ಯಾಮನೀಯ' ಎಂಬ ಮೂಲದಿಂದ ಬಂದಂತೆ ತೋರುತ್ತದೆ ವಿನಾ 'ಯಾಪನೀಯ' ಎಂಬುದರಿಂದಲ್ಲ; ಈ ಸಂದರ್ಭದಲ್ಲಿ ನಿಯಂತ್ರಿಸು ಎಂಬರ್ಥದ 'ಯಮ' ಧಾತುವನ್ನು ಸ್ಮರಣೆಗೆ ತರಬಹುದು. ಮತ್ತೆ ಠಾವಣಿಜ್ಜ'ವು 'ಸ್ಥಾಪನೀಯ'ವನ್ನು ಪ್ರತಿನಿಧಿಸುವುದನ್ನೂ ಹೋಲಿಸಬಹುದು. ಆದುದರಿಂದ 'ಯಾಪನೀಯ' ಶಬ್ದ ಸ್ವರೂಪ ಸರಿಯಾದ ಸಂಸ್ಕೃತೀಕರಣವಲ್ಲ. ಅದು ಆ ಸಂಸ್ಕೃತದ ರೂಪವೆಂಬುದೇನೊ ನಿಜ. ಜವಣಿಜ್ಜ (ಯಾಪನೀಯರೆಂದು ಕರೆಯಿಸಿಕೊಳ್ಳುವ) ಮುನಿಗಳೆಂದರೆ 'ಯಮ' ಅಥವಾ 'ಯಾಮ' ಪದ್ಧತಿಯಿಂದ ಜೀವನ ನಡೆಯಿಸುವವರು. ಈ ಸಂಬಂಧದಲ್ಲಿ ಚಾಉಜ್ಜಾಮ–ಎಂದರೆ ಪಾರ್ಶ್ವನ ಚಾತುರ್ಯಾಮ ಧರ್ಮವನ್ನೂ ಇಲ್ಲಿ ಹೋಲಿಸಿ ನೋಡಬಹುದು.[16]

ಯಾಪನೀಯ ಸಂಘ ಹಾಗೂ ಅದರ ಮುನಿಗಳ ವಿಷಯವನ್ನು ತಿಳಿದುಕೊಳ್ಳಬೇಕಾದರೆ–ಅದರ ಸ್ಪಷ್ಟ ಚಿತ್ರ ಮೂಡಿಸಿಕೊಳ್ಳಬೇಕಾದರೆ–ದೇಶದ ವಿವಿಧ ಭಾಗಗಳಲ್ಲಿ ಇದ್ದ ಯಾಪನೀಯ ಗುರುಗಳ ವಿಷಯವನ್ನು ಸಂಗ್ರಹಿಸಿಕೊಳ್ಳುವುದು ಅತಿಮುಖ್ಯವಾದ ಕಾರ್ಯ.

ಖಾರವೇಲನ ಹಾತಿಗುಂಫ ಶಾಸನದಲ್ಲಿ 'ಯಾಪ–ಞಾವಕೆಹಿ' (ಪಂಕ್ತಿ–೧೪) ಎಂಬ ಪಾಠ (ಅನಿಶ್ಚಿತ)ವಿದೆ. ಕೆಲವರು ಇದು ಯಾಪನೀಯಕ್ಕೆ ಸಂಬಂಧಿಸಿದೆಯೆಂದು ಸಂದೇಹಿಸುತ್ತಾರೆ; ಸದ್ಯ ಇದನ್ನು ಯಾರೂ ಇದಮಿತ್ಥಂ ಎಂದು ಹೇಳುವಂತಿಲ್ಲ.[17]

ಕದಂಬ ವಂಶದ ಮೃಗೇಶವರ್ಮ (ಕ್ರಿ.ಶ. ೪೭೫–೪೯೦) ಯಾಪನೀಯರಿಗೆ, ನಿರ್ಗ್ರಂಥರಿಗೆ ಮತ್ತು ಕೂರ್ಚಕರಿಗೆ ದತ್ತಿಬಿಟ್ಟುದು ಸುಪ್ರಸಿದ್ಧ. ದಾಮಕೀರ್ತಿ ಮುನಿಯ ಹೆಸರನ್ನು ಆ ತಾಮ್ರ ಶಾಸನದಲ್ಲಿ ಹೇಳಿದೆ. ಮತ್ತೆ ಆತನ ಪುತ್ರ (ಕ್ರಿ.ಶ. ೪೯೭–೫೩೭) ಸಹ ಪೂಜೆ ಹಾಗೂ ಯಾಪನೀಯ ಮುನಿಗಳಿಗೆ ಚಾತುರ್ಮಾಸದ ಆಹಾರಕ್ಕಾಗಿ ಹಳ್ಳಿಯೊಂದನ್ನು ದತ್ತಿಬಿಟ್ಟ. ಈ ಶಾಸನದಲ್ಲಿ ಹೇಳಿದ ಗುರುಗಳೆಂದರೆ ದಾಮಕೀರ್ತಿ, ಜಯಕೀರ್ತಿ, ಬಂಧುಷೇಣ ಮತ್ತು ಕುಮಾರದತ್ತ. ಇವರೆಲ್ಲರೂ ಪ್ರಾಯಃ ಯಾಪನೀಯರಾಗಿದ್ದರು. ಅನಂತರ ಕೃಷ್ಣವರ್ಮನ (ಕ್ರಿ.ಶ. ೪೭೫–೮೦) ಪುತ್ರ ದೇವವರ್ಮನು ಯಾಪನೀಯ ಸಂಘದ ಚೈತ್ಯಾಲಯವೊಂದಕ್ಕೆ ಗ್ರಾಮವೊಂದನ್ನು ದತ್ತಿಬಿಟ್ಟ.[18]

ಕದಂಬರ ಕ್ರಿ.ಶ. ೮೧೨ರ ಶಾಸನವೊಂದು ಕೆಳಗಿನ ವಿವರಗಳನ್ನು ಕೊಡುತ್ತದೆ. ರಾಷ್ಟ್ರಕೂಟ ಪ್ರಭೂತವರ್ಷನು ಅರ್ಕಕೀರ್ತಿ ಎಂಬ ಗುರು ಅಧಿಪತಿಯಾದ ಜಿನಬಸದಿಗೆ ಸ್ವತಃ ದಾನವನ್ನು ಕೊಟ್ಟ. ಆ ಅರ್ಕಕೀರ್ತಿಯು, ಯಾಪನೀಯ ನಂದಿಸಂಘ, ಪುನ್ನಾಗವೃಕ್ಷ ಮೂಲಗಣದ ಶ್ರೀಕೀರ್ತಿ ಆಚಾರ್ಯನ (ಹಲವು ತಲೆಮಾರುಗಳ ಅನಂತರದಲ್ಲಿ) ಪರಂಪರೆಯಲ್ಲಿ ಬಂದ ಕೂಚಿ(ಲಿ) ಆಚಾರ್ಯನ ಶಿಷ್ಯನಾಗಿದ್ದ. ಆತ ಕುಣಿಗಲ ದೇಶಕ್ಕಧಿಪತಿಯಾದ ಮಹಾಮಾಂಡಲಿಕ ವಿಮಲಾದಿತ್ಯನಿಗೆ ಉಂಟಾದ ಶನಿಕಾಟವನ್ನು ದೂರಮಾಡಿದನೆಂದಿದೆ.[19] ಕಿರೈಪಕ್ಕಮ್‌ದ (ಚೆಂಗಲ್‌ಪಟ್, ತಮಿಳುನಾಡು) ೯ನೆಯ

---

15 ನೋಡಿ, ನನ್ನ ಲೇಖನ: On the meaning of Yapanīya-Śrīkanthika, pp. 197–98

16 ಈ ರೀತಿ ಅರ್ಥೈಸದಿದ್ದರೆ 'ನಾಯ ಧಮ್ಮ ಕಹಾಓ'ದಲ್ಲಿನ ಸಂಗತಿಯನ್ನು ಸರಿಯಾಗಿ ವಿವರಿಸಲು ಅಸಾಧ್ಯವಾಗುತ್ತದೆ.

17 E.I., XX, No. 7, p. 80

18 I.A., VI, pp. 24-7, VII, pp. 33-5

19 *E. C.* xii Gubbi-61

ಶತಮಾನದ ಶಾಸನವೊಂದು 'ದೇಶವಲ್ಲಭ' ಜಿನಾಲಯವನ್ನು ಪ್ರಸ್ತಾಪಿಸುತ್ತದೆ. ಅದನ್ನು ಯಾಪನೀಯ ಸಂಘದ ಕುಮಿಲಗಣದ ಮಹಾವೀರ ಗುರುವಿನ ಶಿಷ್ಯ ಅಮಲಮುದಲ್ಗುರು ಕಟ್ಟಿಸಿದನೆಂದಿದೆ. ಅದಕ್ಕೆ ಬಿಟ್ಟ ದತ್ತಿ ಮುನಿಗಳ ಆಹಾರ ದಾನಕ್ಕೆಂಬುದನ್ನು ವಿಶದಪಡಿಸುತ್ತದೆ.[20]

ಪೂರ್ವ ಚುಳುಕ್ಯ ಮನೆತನದ ಇಮ್ಮಡಿ ಅಮ್ಮನು ಮಲಯಪುಂಡಿ ಎಂಬ ಗ್ರಾಮವನ್ನು ಜಿನ ಬಸದಿಯೊಂದಕ್ಕೆ ದತ್ತಿಬಿಟ್ಟ (ಇದು ಆಂಧ್ರ ಪ್ರದೇಶದಲ್ಲಿದೆ.). ಅದು ಶ್ರೀಮಂದಿರದೇವ ಎಂಬ ಜೈನ ಗುರುವಿನ ಅಧೀನದಲ್ಲಿದ್ದಿತು. ಆತ ದಿವಾಕರನ ಶಿಷ್ಯ ಹಾಗೂ ಜಿನನಂದಿಯ ಪ್ರಶಿಷ್ಯನಾಗಿದ್ದ; ಯಾಪನೀಯ ಸಂಘ, (ಕೋಟಿ) ಮಡುವಗಣ ಮತ್ತು ಪುಣ್ಯಾರುಹ (ಪ್ರಾಯಃ ಪುನ್ನಾಗ ವೃಕ್ಷಕ್ಕೆ ಸಮ) ನಂದಿಗಚ್ಛಕ್ಕೆ ಸಂಬಂಧಪಟ್ಟಿದ್ದರು. ಇದಾದನಂತರ ಕ್ರಿ.ಶ. ೯೮೦ರ ಸೌದತ್ತಿಯ (ಸುಗಂಧವರ್ತಿ) ಶಾಸನ. ಇದು ಚಾಳುಕ್ಯ ತೈಲಪದೇವನನ್ನು ಉಲ್ಲೇಖಿಸಿದೆ. ಶಾಂತಿವರ್ಮ ಹಾಗೂ ಆತನ ರಾಣಿ ಚಂದಕಬ್ಬೆಯನ್ನು ಹೇಳಿದೆ. ಈ ಶಾಂತಿವರ್ಮ ತಾನು ಮಾಡಿಸಿದ ಜಿನಾಲಯಕ್ಕೆ ಇನಿತು ಭೂಮಿಯನ್ನು ದತ್ತಿಬಿಟ್ಟ. ಇದರಲ್ಲಿ ಹೇಳಿದ ಕೆಲವು ಜೈನ ಗುರುಗಳು ಯಾಪನೀಯ ಸಂಘ ಮತ್ತು ಕಣ್ಡೂರಗಣಕ್ಕೆ ಸಂಬಂಧಪಟ್ಟಿರುವರು; ಅವರ ಹೆಸರುಗಳು: ಬಾಹುಬಲಿದೇವ (ಭಟ್ಟಾರಕಃ, ಈತನನ್ನು ಚಂದ್ರ, ಸಿಂಹ ಎಂದು ಮುಂತಾಗಿ ಸ್ತುತಿಸಲಾಗಿದೆ); ರವಿಚಂದ್ರಸ್ವಾಮಿ, ಅರ್ಹನಂದಿ, ಶುಭಚಂದ್ರ–ಸಿದ್ಧಾನ್ತ ದೇವ, ಮೌನಿದೇವ ಮತ್ತು ಪ್ರಭಾಚನ್ದ್ರದೇವ.[21] ಡಾ. ಪಿ.ಬಿ. ದೇಸಾಯಿರು ಹೊಸೂರು (ಸೌದತ್ತಿ, ಬೆಳಗಾಂವ ಜಿಲ್ಲೆ) ಗ್ರಾಮದ ಶಾಸನವೊಂದನ್ನು ಉಲ್ಲೇಖಿಸಿ ಅದರಲ್ಲಿ ಯಾಪನೀಯ ಸಂಘದ ಕಣ್ಡೂರ ಗಣವನ್ನು ಹೇಳಿರುವದನ್ನು ತಿಳಿಸಿದ್ದಾರೆ. ಅದರಲ್ಲಿನ ಗುರು ಪರಂಪರೆ ಇಂತಿದೆ: ಶುಭಚನ್ದ್ರ (I), ಚಂದ್ರಕೀರ್ತಿ, ಶುಭಚನ್ದ್ರ (II), ನೇಮಿಚನ್ದ್ರ, ಕುಮಾರಕೀರ್ತಿ, ಪ್ರಭಾಚನ್ದ್ರ ಮತ್ತು ನೇಮಿಚನ್ದ್ರ (II)

ಬೆಳಗಾಂವದಲ್ಲಿಯ ದೊಡ್ಡ ಬಸದಿಯಲ್ಲಿರುವ ನೇಮಿನಾಥ ಮೂರ್ತಿ ಮೊದಲು ಅಲ್ಲಿಯ ಕೋಟೆಯಲ್ಲಿಯ ಬಸದಿಯಲ್ಲಿದ್ದಿತೆಂದು ತಿಳಿದುಬಂದಿದೆ. ಅದರ ಮೇಲಿರುವ ಶಾಸನದಿಂದ ಯಾಪನೀಯ ಸಂಘದ ಪಾರಿಸಯ್ಯ ಎಂಬವನು ಜಿನ ಬಸದಿಯನ್ನು ಕಟ್ಟಿಸಿದುದಾಗಿಯೂ ಅದಕ್ಕೆ ಕತ್ತಯ್ಯ ಮತ್ತು ಜಕ್ಕವ್ವೆ ಇವರು ಕಲ್ಲಹಳ್ಳಿಯಲ್ಲಿ (ಗೋಕಾಕದ ಬಳಿ) ಭೂಮಿಯನ್ನು ದತ್ತಿಬಿಟ್ಟರು ಎಂದೂ ತಿಳಿದು ಬರುತ್ತದೆ. ಜಕ್ಕವ್ವೆ ಸಾಹಣಾಧಿಪತಿಯ (ಪ್ರಾಯಃ ಕದಂಬ ಜಯಕೇಶಿಯ ದಂಡನಾಯಕನೇ ಆಗಿರ ಬಹುದು) ತಾಯಿಯಾಗಿದ್ದಳು. ಪಾರಿಸಯ್ಯನೂ ಗುರುವಾಗಿರದೆ ಸಾಮಾನ್ಯ ವ್ಯಕ್ತಿಯೇ ಆಗಿದ್ದನೆಂದು ತೋರುತ್ತದೆ. ಆತ ಯಾವ ಸಂಘದ ಅನುಯಾಯಿಯೆಂಬುದು ಶಾಸನದಿಂದ ಸ್ಪಷ್ಟವೇ ಇದೆ; ಇದರ ಕಾಲ ೧೧೧೩.[23] ೧೧೨೦ರ ರಾಯಬಾಗದ ಶಾಸನ ಹೂವಿನಬಾಗೆಯಲ್ಲಿ (ಈಗಣ ರಾಯ್‌ಬಾಗ್) ದಂಡನಾಯಕ ದಾಸಿಮರಸ ಯಾಪನೀಯ ಸಂಘದ ಪುನ್ನಾಗ ವೃಕ್ಷ ಮೂಲಗಣದ ಆಚಾರ್ಯ ಶ್ರೇಷ್ಠ ಕುಮಾರಕೀರ್ತಿ ಪಂಡಿತ ದೇವನಿಗೆ ಭೂಮಿ ದತ್ತಿಬಿಟ್ಟುದನ್ನು ತಿಳಿಸುತ್ತದೆ.[24] ೧೧೨೮–೨೯ರ ಹೊಸೂರ ಶಾಸನ, ಅಯ್ಚುಗೌಂಡ ಅಲ್ಲಿಯ ಬಸದಿಗೆ ಅಡಕೆಯ ತೋಟ ಹಾಗೂ ನಿವೇಶನಗಳನ್ನು ದತ್ತಿಬಿಟ್ಟುದಾಗಿ ತಿಳಿಸುತ್ತದೆ. ಅದರಲ್ಲಿ ಯಾಪನೀಯ ಸಂಘದ ಮತ್ತು (ಓದಲು ಸಂಪೂರ್ಣ ಸಾಧ್ಯ ವಿಲ್ಲದ ಪುನ್ನಾಗ ವೃಕ್ಷ ಮೂಲಗಣದ) ಗುರು ಜಯಕೀರ್ತಿಯ ಉಲ್ಲೇಖವಿದೆ.[25] ಹೂಲಿಯ ಶಾಸನ ಎರಡು ಭಾಗಗಳಲ್ಲಿ ದೊರಕಿದೆ; ಮೊದಲ ಭಾಗ ಆಹವಮಲ್ಲ ಸೋಮೇಶ್ವರನ (೧೦೪೪) ಹಾಗೂ ಎರಡನೆಯ ಭಾಗ ಜಗದೇಕಮಲ್ಲನ (೧೧೪೫) ಕಾಲದಲ್ಲಿ ಬರೆಯಲಾಗಿದೆ. ಜಿನಬಸದಿಯ ಜೀರ್ಣೋ-

---

20 *A.R.S I.E*, 1934-35, N. 22, p. 10 (1938)

21 *Journal of the B.B.R.A.S X*, 71-72, text pp. 206-7

22 *Jainism in South India*, p. 165

23 ಜಿನವಿಜಯ (ಕನ್ನಡ) ಜನವರಿ, ೧೯೩೧

24 *Journal of the Bombay Historical Society*, ii, pp. 192-200

25 *S I.I.*, XI. i., No. 65, Madras 1940

ದ್ಧಾರ ಹಾಗೂ ಮುನಿಗಳ ಆಹಾರ ದಾನಕ್ಕೂ ಆ ದತ್ತಿಗಳನ್ನು ಬಿಟ್ಟುದಾಗಿ ಬರೆದಿದೆ. ಮೊದಲನೆಯ ಶಾಸನಭಾಗ, ಯಾಪನೀಯ ಸಂಘದ ಪುನ್ನಾಗ ವೃಕ್ಷ ಮೂಲಗಣದ ಬಾಲಚಂದ್ರ ಭಟ್ಟಾರಕನನ್ನು ಹೇಳಿದರೆ ಎರಡನೆಯದರಲ್ಲಿ ರಾಮಚಂದ್ರದೇವನನ್ನು ಹೇಳಿದೆ.[26] ೧೦೪೫ರ ಮುಗುದದ ಶಾಸನ ಯಾಪನೀಯ ಸಂಘದ ಕುಮುದಿಗಣವನ್ನು ನಿರ್ದೇಶಿಸಿದೆ. ಅದರಲ್ಲಿ ಅನೇಕ ಗುರುಗಳ ಉಲ್ಲೇಖವೂ ಇದೆ: ಶ್ರೀಕೀರ್ತಿಗೊರವಡಿ, ಪ್ರಭಾಶಶಾಂಕ, ನಯಬೃತಿನಾಥ, ಹರವೀರ, ಮಹಾವೀರ, ನರೇನ್ದ್ರಕೀರ್ತಿ, ನಾಗವಿಕ್ಕವೃತೀನ್ದ್ರ, ನಿರವದ್ಯಕೀರ್ತಿ ಭಟ್ಟಾರಕ, ಮಾಧವೇಂದು, ಬಾಲಚನ್ದ್ರ, ರಾಮಚನ್ದ್ರ, ಮುನಿಚನ್ದ್ರ, ರವಿಕೀರ್ತಿ, ಕುಮಾರಕೀರ್ತಿ, ದಾಮನನ್ದಿ, ತ್ರೈವಿದ್ಯ ಗೋವರ್ದ್ಧನ, ದಾಮನನ್ದಿ ವಡ್ಡಾಚಾರ್ಯ, ಕೆಲವರ ವರ್ಣನೆಗಳು ಅಲಂಕಾರಿಕವೆಂದರೂ ಅವರಲ್ಲನೇಕರು ಘನ ವಿದ್ವಾಂಸರು ಎಂದೂ ಸಚ್ಚಾರಿತ್ರರು ಎಂದೂ ಪ್ರಸಿದ್ಧರು.[27] ಮೊರಬ್(ಧಾರವಾಡ ಜಿಲ್ಲೆ) ಶಾಸನ ಯಾಪನೀಯ ಸಂಘದ ಜಯಕೀರ್ತಿದೇವನ ಶಿಷ್ಯ ನಾಗಚಂದ್ರ ಸಿದ್ಧಾಂತದೇವನ ಸಮಾಧಿ ಮರಣವನ್ನು ಉಲ್ಲೇಖಿಸಿದೆ. ಕನಕಶಕ್ತಿಯು ನಾಗಚಂದ್ರನ ಶಿಷ್ಯ; ಆತ 'ಮಂತ್ರಚೂಡಾಮಣಿ' ಎಂದು ಖ್ಯಾತ[28]. ತ್ರಿಭುವನ ಮಲ್ಲನ ಕಾಲದ (ಕ್ರಿ.ಶ. ೧೦೯೬) ಡೋಣಿಯ (ಧಾರವಾಡ ಜಿಲ್ಲೆ) ಶಾಸನ ಯಾಪನೀಯ ಸಂಘದ ವೃಕ್ಷಮೂಲಗಣದ ಮುನಿಚಂದ್ರ ತ್ರೈವಿದ್ಯ ಭಟ್ಟಾರಕನ ಶಿಷ್ಯ ಚಾರುಕೀರ್ತಿ ಪಂಡಿತ ದೇವನಿಗೆ ತೋಟ ವನ್ನು ದತ್ತಿ ಬಿಟ್ಟುದಾಗಿ ತಿಳಿಸುತ್ತದೆ. ಆ ಶಾಸನವನ್ನು ಮುನಿಚಂದ್ರ ಸಿದ್ಧಾಂತದೇವನ ಶಿಷ್ಯ ದಾಯಿಮಯ್ಯ ಬರೆದಿದ್ದಾನೆ.[29] ಧರ್ಮಾಪುರಿಯ (ಜೀಡ್ ಜಿಲ್ಲೆ, ಮಹಾರಾಷ್ಟ್ರ) ಶಾಸನ ವಿವಿಧ ಸುಂಕಗಳಿಂದ ಬರುವ ಆದಾಯವನ್ನು ದೇವರಪೂಜೆ, ಮುನಿಗಳ ಆಹಾರಕ್ಕೆಂದು ಪೊಟ್ಟಲಕೆರೆಯ ಪಂಚಪಟ್ಟಣದ ಕಂಚುಗಾರರೂ ತೆಲುಂಗ ನಗರ (ನಖರ)ರೂ ಬಿಟ್ಟುದಾಗಿ ವಿವರಿಸುತ್ತದೆ. ಆ ತೆರಿಗೆ ಗಳ ದತ್ತಿಯನ್ನು ಯಾಪನೀಯ ಸಂಘದ ವಂದಿಯೂರ್ ಗಣದ ಜಿನಬಸದಿಯ ಆಚಾರ್ಯರಾದ ಮಹಾವೀರ ಪಂಡಿತರಿಗೆ ಒಪ್ಪಿಸಲಾಗಿತ್ತು. ಕಲ್ಬಾವಿಯ (ಕಲಭಾವಿ) ಕ್ರಿ.ಶ. ೧೧ನೆಯ ಶತಮಾನದ ರಾಮಲಿಂಗೇಶ್ವರ ದೇವಸ್ಥಾನದ ಹೊರಾಂಗಣದಲ್ಲಿಯ ಶಾಸನ ಪಶ್ಚಿಮ ಗಂಗಮನೆತನದ ಶಿವಮಾರನ ಕುಮುದವಾಡ ಗ್ರಾಮವನ್ನು ತಾನು ಕಟ್ಟಿಸಿದ ಜಿನಬಸದಿಗೆ ದತ್ತಿ ಬಿಟ್ಟುದಾಗಿ ತಿಳಿಸುತ್ತದೆ; ಆತ ಆ ದತ್ತಿಯನ್ನು ಮೈಲಾಪಾನ್ವಯದ ಕಾರೆಯ ಗಣದ (ಯಾಪನೀಯ ಸಂಘಕ್ಕೆ ಸಂಬಂಧಪಟ್ಟುದಾಗಿ ಬೈಲಹೊಂಗಲದ ದಾಖಲೆಯಿಂದ ತಿಳಿದು ಬರುತ್ತದೆ.) ಗುರು ದೇವಕೀರ್ತಿಗೆ ಕೊಟ್ಟುದಾಗಿ ತಿಳಿಸುತ್ತದೆ. ಆ ಶಾಸನದಲ್ಲಿ ಶುಭಕೀರ್ತಿ, ಜಿನಚಂದ್ರ, ನಾಗಚಂದ್ರ ಮತ್ತು ಗುಣಕೀರ್ತಿ ಇವರು ದೇವಕೀರ್ತಿಗಿಂತಲೂ ಪೂರ್ವದಲ್ಲಿದ್ದ ಆ ಶಾಖೆಯವರೆಂದೂ ತಿಳಿಸಿದೆ[30].

ಕ್ರಿ.ಶ. ೧೧೨೮ರ ಹೊನ್ನೂರ ಶಾಸನ,[31] ಬಲ್ಲಾಳದೇವ ಹಾಗೂ ಗಂಡರಾದಿತ್ಯರ (ಶಿಲಹಾರ ವಂಶ) ಕಾಲದಲ್ಲಿದ್ದ ಪುನ್ನಾಗವೃಕ್ಷ ಮೂಲಗಣ, ಮೂಲಸಂಘದ ರಾತ್ರಿಮತಿಗಂತಿಯ ಶಿಷ್ಯ ಬಮ್ಮಗೌಡ ಜಿನಬಸದಿಗೆ ದತ್ತಿಬಿಟ್ಟುದನ್ನು ಉಲ್ಲೇಖಿಸಿದೆ. ರಾತ್ರಿಮತಿಗಂತಿ ಜೈನಸನ್ಯಾಸಿನಿ ಎಂಬುದು ಸ್ಪಷ್ಟ. ಚಾಲುಕ್ಯ ತ್ರಿಭುವನಮಲ್ಲನ ಕಾಲದ ಬೈಲಹೊಂಗಲದ (ಬೆಳಗಾಂವ ಜಿಲ್ಲೆ) ಶಾಸನ-ರಟ್ಟ ಮಹಾಸಾಮಂತ ಅಂಕ, ಶಾಂತಿಯಕ್ಕ ಹಾಗೂ ಕೊಂಡಿ ಮಂಡಲಗಳನ್ನು ಹೇಳಿದೆ. ಅದು ಜಿನಬಸದಿಗೆ ಬಿಟ್ಟ ದತ್ತಿಯೇ ಆಗಿದೆ. ಅದರಲ್ಲಿ ಯಾಪನೀಯ ಸಂಘದ ಮೈಲಾಪಾನ್ವಯದ ಕಾರೆಯ ಗಣದ ಜಿನದೇವಸೂರಿ ಹಾಗೂ ಮುಳ್ಳ ಭಟ್ಟಾರಕರನ್ನೂ ಹೇಳಿದೆ.[32] ಹೂಲಿಯ ಇನ್ನೊಂದು ಶಾಸನ.

---

26 E. I., XVIII ಮತ್ತೆ ಪಿ. ಬಿ. ದೇಸಾಯರ ಪೂರ್ವೋಕ್ತಗ್ರಂಥ, ಪು. ೧೭೪

27 *S.I.I.* XI. i , No. 78

28 A.R S.I.E. 1928-29, No. 239, p.56

29 S.I.I., II. iii., No. 140 ; J.I S.I.–Dr. P.B. Desai, p. 144

30 I.A., XVIII, p. 309; P. B. Desai, IBidem—p.115

31 I.A. XII, p. 102

32 A.R.S.I.E. 1951-52, No. 33, p.12

ವಿಕ್ರಮಾದಿತ್ಯನ (VI) ಕಾಲಕ್ಕೇ ಸಂಬಂಧಿಸಿದೆ. ಅದು ಯಾಪನೀಯ ಸಂಘದ ಕಂಡೂರ್‌ಗಣದ ಬಾಹುಬಲಿ, ಶುಭಚಂದ್ರ, ಮೌನಿದೇವ ಮತ್ತು ಮಾಘನಂದಿಗಳನ್ನು ಹೆಸರಿಸಿದೆ. ವಿಜಯಾದಿತ್ಯನ (ಶಿಲಹಾರ ಗಂಡರಾದಿತ್ಯನ ಪುತ್ರ) ದಂಡನಾಯಕ ಕಾಳ[ಣ್ಣ] ಕಟ್ಟಿಸಿದ ಎಕ್ಸಂಬಿಯ (ಬೆಳಗಾಂವ ಜಿಲ್ಲೆ) ನೇಮಿನಾಥ ಬಸದಿಯಲ್ಲಿ ದೊರಕಿದ ಶಾಸನ, ಯಾಪನೀಯ ಸಂಘದ ಪುನ್ನಾಗ ವೃಕ್ಷಮೂಲ ಗಣದ ವಿಜಯಕೀರ್ತಿಗೆ (ಮಹಾಮಂಡಲಾಚಾರ್ಯ) ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಆತನ ಅನ್ವಯ ಇಂತಿದೆ: ಮುನಿಚಂದ್ರ, ವಿಜಯಕೀರ್ತಿ, ಕುಮಾರಕೀರ್ತಿ ಮತ್ತು ತ್ರೈವಿದ್ಯ ವಿಜಯಕೀರ್ತಿ. ಆ ಜಿನ ಬಸದಿಗೆ ೧೧೭೮ರಲ್ಲಿ ರಟ್ಟ ಕಾರ್ತವೀರ್ಯನು ದರ್ಶನಕ್ಕೆಂದು ಬಂದನಂತೆ.[33] (ಕ್ರಿ.ಶ. ೧೨ನೆಯ ಶತಮಾನದ) ಆರಸಿಕೆರೆಯ (ಮೈಸೂರು) ಶಾಸನ ಜಿನಬಸದಿಗೆ ದತ್ತಿ ಬಿಟ್ಟುದನ್ನು ತಿಳಿಸುತ್ತದೆ. ಆದರ ಪ್ರಾರಂಭದ ಪದ್ಯಗಳಲ್ಲಿ ಒಂದು, ಯಾಪನೀಯ ಸಂಘದ ಮಡುವಗಣವನ್ನು ಸ್ತುತಿಸಿದೆ. ಅಲ್ಲಿಯ ಜಿನಬಿಂಬವನ್ನು [ಯಾಪನೀಯ ಸಂಘದ] ಪುನ್ನಾಗ ವೃಕ್ಷ ಮೂಲಗಣದ ಅನುಯಾಯಿ ಮಾಣಿಕ ಸೆಟ್ಟಿಯಿಂದ ಹಾಗೂ ಯಾಪನೀಯ ಸಂಘದ ಮಡುವಗಣದ ಕುಮಾರ ಕೀರ್ತಿ ಸಿದ್ಧಾಂತ ರಿಂದ ಪ್ರತಿಷ್ಠಿಸಲಾಯಿತು. ಅಲ್ಲಿಯ ಇನ್ನೊಂದು ಶಾಸನದಲ್ಲಿ ಸೋವಯ್ಯನೆಂಬ ದಾತೃವನ್ನು ಯಾಪನೀಯ ಸಂಘದವನೆಂದು ಹೇಳಿದೆ. ಇಲ್ಲಿನ ಈ ಶಾಸನಗಳಲ್ಲಿ ಅನುಯಾಯಿಗಳು ಯಾಪನೀಯ ಸಂಘದವರು ಎಂಬುದನ್ನು ಸ್ಪಷ್ಟವಾಗಿ ಹೇಳಿದೆ; ಬೇರೆಡೆ ಇಷ್ಟು ಸ್ಪಷ್ಟವಾಗಿ ಸಂಘ ಹಾಗೂ ಆದರ ಅನುಯಾಯಿಗಳ ಸಂಬಂಧ ಕಾಣಸಿಗುವುದು ಅಪರೂಪ. ಈ ಶಾಸನಗಳ ಸಂಪಾದಕರು ಶಾಸನ ದಲ್ಲಿ 'ಯಾಪನೀಯ' ಎಂಬ ಶಬ್ದವನ್ನು ತರುವಾಯದಲ್ಲಿ ಯಾರೊ ಇನಿತು ಅಳಿಸಿ ಆದರ ಸ್ಥಳದಲ್ಲಿ 'ಕಾಳಾಮುಖ ಪ್ರತಿಬದ್ಧ' ಎಂದು ಬರೆಯಲಾಗಿದೆ ಎಂದಿದ್ದಾರೆ. ಆದರೆ ಅದು ಅನಗತ್ಯ ಸಂಗತಿ. ಮತ್ತೆ ಯಾಪನೀಯರ ಬಗೆಗೆ ಯಾರಿಗೊ ಇನಿತು ಮತ್ಸರವಿದ್ದುದು ಸ್ಪಷ್ಟವೇ ಇದೆ; ಏಕೆಂದರೆ ಯಾಪನೀಯರಿಗೂ ಕಾಳಾಮುಖರಿಗೂ ಸಂಬಂಧವಿದ್ದುದಕ್ಕೆ ಎಲ್ಲಿಯೂ ಆಧಾರಗಳಿಲ್ಲ. ಆ ಶಬ್ದ ವನ್ನು ಆನಂತರದಲ್ಲಿ ಯಾರೋ ಸೇರಿಸಿರುವರೆಂಬುದು ಖಚಿತವೇ ಇರುವದರಿಂದ 'ಕಾಳಾಮುಖ ಪ್ರತಿಬದ್ಧ' ಹಾಗೂ 'ಯಾಪನೀಯ' ಇವುಗಳ ಮಧ್ಯದ ಅಸಂಬದ್ಧತೆಯನ್ನು ಅಲ್ಲಗಳೆಯಲು 'ಯಾಪನೀಯ' ಎಂಬುದನ್ನು ಅಳಿಸಿರಬಹುದು ಎಂದು ಈಗ ಊಹಿಸಬಹುದು.[34] ಕ್ರಿ.ಶ. ೧೨ನೆಯ ಶತಮಾನದ ಲೋಕಾಪುರ (ಬೆಳಗಾಂವ ಜಿಲ್ಲೆ) ಶಾಸನದಿಂದ ಯಾಪನೀಯ ಸಂಘದ ಕಂಡೂರಗಣದ 'ಉಭಯ ಸಿದ್ಧಾಂತ ಚಕ್ರವರ್ತಿ'ಸಕಲೇಂದು ಸಿದ್ಧಾಂತಿಕನ ಆದೇಶದ ಮೇರೆಗೆ ಬ್ರಹ್ಮನು (ಕಲ್ಲಗೌಂಡನ ಮಗ) ಪುರುದೇವನ ಮೂರ್ತಿಯನ್ನು ಮಾಡಿಸಿದುದಾಗಿ ತಿಳಿದುಬರುತ್ತದೆ. ತೆಂಗಳಿಯಲ್ಲಿಯ (ಗುಲ್ಬರ್ಗ ಜಿಲ್ಲೆ) ಜಿನಬಿಂಬವೊಂದರಡಿಯಲ್ಲಿಯ ೧೨ನೆಯ ಶತಮಾನದ್ದಾಗಿರಬಹುದಾದ ಶಾಸನದಲ್ಲಿ ಅದನ್ನು ಯಾಪನೀಯ ಸಂಘದ ವಡಿ(ಂದಿ?) ಯೂರ್ ಗಣದ ನಾಗವೀರ ಸಿದ್ಧಾಂತದೇವರ ಗುಡ್ಡ ಬಮ್ಮದೇವ ಮಾಡಿಸಿದ ಪ್ರತಿಮೆ–ಎಂದಿದೆ.[36]. ಮನೋಳಿಯ (ಬೆಳಗಾಂವ ಜಿಲ್ಲೆ) ೧೨ನೆಯ ಶತಮಾನದ ಶಾಸನ ಯಾಪನೀಯ ಸಂಘದ ಮುನಿಚಂದ್ರ ದೇವನಿಗೆ ಸಮಾಧಿ ಕಟ್ಟಿದುದನ್ನೂ ಆ ಮುನಿಚಂದ್ರನ ಶಿಷ್ಯ ಪಾಲ್ಯಕೀರ್ತಿಯ ಸಮಾಧಿಮರಣವನ್ನೂ ತಿಳಿಸುತ್ತದೆ. ಮುನಿಚಂದ್ರ ಸಿರಿಯಾದೇವಿ ಕಟ್ಟಿಸಿದ ಬಸದಿಗೆ ಆಚಾರ್ಯನಾಗಿದ್ದ.[37]

---

33 A.R. of the Mysore Arch. Dept. 1916, pp. 48ff

34 Ed. S Shettar, Journal of Karnatak University, Vol. X· 1966, pp. 159 ff

35 *Kannada Research Institue*, Dharwar, 1942–48, No. 47

36 *A.R.S.I.E.* 1960–4 No. 511; also P.B. Desai, *Ibiden*, p.404

37 *A.R.S.I.E.* 1940-4, Nos. 6365, p.245

ಅಪ್ರಗಂಜಿಯ (ಧಾರವಾಡ ಜಿಲ್ಲೆ) ೧೩ನೆಯ ಶತಮಾನದ ಶಾಸನ (ಉಚ್ಚಂಗಿಯಲ್ಲಿಯ) ಯಾಪನೀಯ ಸಂಘದ ಕಾಡೂರ್ಗಣದ ಬಸದಿಯೊಂದಕ್ಕೆ ಬಿಟ್ಟ ದತ್ತಿ ಭೂಮಿಯ ಸೀಮಾರೇಖೆಗಳನ್ನು ಸೂಚಿಸುತ್ತದೆ.[38] ಹುಕ್ಕೇರಿಯ ೧೩ನೆಯ ಶತಮಾನದ (ಬೆಳಗಾಂವ ಜಿಲ್ಲೆ) ತುಂಡುಶಾಸನವೊಂದು ಯಾಪನೀಯ ಸಂಘದ (ಹೆಸರು ಅಳಿಸಿರುವ) ಗಣವೊಂದರ ತ್ರೈಕೀರ್ತಿಯನ್ನು ಉಲ್ಲೇಖಿಸುತ್ತದೆ.[39]

ಕಾಗವಾಡದ (ಬೆಳಗಾಂವ ಜಿಲ್ಲೆ) ನೆಲಮನೆಯೊಂದರಲ್ಲಿ ನೇಮಿನಾಥನ ಭವ್ಯಮೂರ್ತಿಯೊಂದಿದೆ. ನಿಸಿದಿಗಂಬವೊಂದರಲ್ಲಿ ಧರ್ಮಕೀರ್ತಿ ಹಾಗೂ ನಾಗಬೊಮ್ಮರಸರ ಉಲ್ಲೇಖನೆಯಿದ್ದು ಆ ಶಾಸನದಲ್ಲಿ ೧೩೯೪ಕ್ಕೆ ಸರಿಹೋಗುವ ಕಾಲವನ್ನೂ ಸೂಚಿಸಿದೆ. ಶಾಸನದಲ್ಲಿ ಅಲ್ಲಲ್ಲಿ ಸ್ಥಳ ಬಿಟ್ಟಿದ್ದು ಯಾಪನೀಯ ಸಂಘದ ಪುನ್ನಾಗ ವೃಕ್ಷಮೂಲಗಣದ ನೇಮಿಚಂದ್ರ (ಈತನನ್ನು ತುಳುವ ರಾಜ್ಯ ಸ್ಥಾಪನಾಚಾರ್ಯ ಎಂದು ಕರೆದಿದೆ) ಧರ್ಮಕೀರ್ತಿ ಹಾಗೂ ನಾಗಚಂದ್ರರನ್ನು ಹೇಳಿದೆ.[40]

ತೇದಿ ಇಲ್ಲದ ಕೆಲವು ಶಾಸನಗಳಿವೆ. ಹಿರೂರ (ಜಮಖಂಡಿ) ಶಾಸನ ಪಾರ್ಶ್ವನಾಥ ಭಟ್ಟಾರಕನ ಪ್ರತಿಮೆ ಯಾಪನೀಯ ಸಂಘದ ವೃಕ್ಷ ಮೂಲಗಣದ ಕುಸುಮ ಜಿನಾಲಯಕ್ಕೆ ಕಾಳಿಸೆಟ್ಟಿಯಿಂದ ಅರ್ಪಿತವಾಯಿತೆಂದು ತಿಳಿಸುತ್ತದೆ.[41] ಯಾಪನೀಯ ಸಂಘದ ಕುಮುದಿಗಣದ ಶಾಂತಿವೀರದೇವನ ಸಮಾಧಿಮರಣವನ್ನು ಗರಗ್ (ಧಾರವಾಡ ಜಿಲ್ಲೆ) ಶಾಸನ ತಿಳಿಸುತ್ತದೆ. ಅಲ್ಲಿಯೆ ಅಳಿಸಿ ನಿಂತ ಇನ್ನೊಂದು ಶಾಸನ. ಅದೇ ಸಂಘ ಹಾಗೂ ಗಣಗಳನ್ನು ಉಲ್ಲೇಖಿಸುತ್ತದೆ.[42] ರಾಯದುರ್ಗದ (ಬಳ್ಳಾರಿ ಜಿಲ್ಲೆ) ಶಾಸನವೊಂದು ನಿಸಿದಿಯ ನಿರ್ಮಾಣವನ್ನು ತಿಳಿಸುತ್ತದೆ. ಅದರಲ್ಲಿ ಉಕ್ತವಾದ ಎಂಟು ಹೆಸರುಗಳಲ್ಲಿ ನಮಗೆ ಮೂಲಸಂಘದ ಚಂದ್ರಭೂತಿ ಹಾಗೂ ಅಪನೀಯ ಸಂಘದ ಬಾದಯ್ಯ ಮತ್ತು ತಮ್ಮಣ್ಣ ಎಂಬುವರ ಹೆಸರುಗಳೂ ಕಾಣದೊರೆಯುತ್ತವೆ.[43]

ಇವಲ್ಲದೆ ಇನ್ನೂ ಕೆಲವು ಶಾಸನಗಳು ಇದ್ದು ಇತ್ತೀಚೆಗೆ ಬೆಳಕಿಗೆ ಬಂದಿವೆ. (ಅ) ಸೇಡಮ್‌ದ ೧೧೭೪ರ ಶಾಸನವೊಂದು ಮಡುವಗಣದ ಪ್ರಭಾಚಂದ್ರ ತ್ರೈವಿದ್ಯನನ್ನು ಉಲ್ಲೇಖಿಸಿದೆ; ಮಡುವಗಣವನ್ನು ಯಾಪನೀಯ ಸಂಘದ ಜೊತೆಗೆ ಸೇರಿಸಬಹುದು.[44] (ಆ) ೧೨೯೭ರ ಬದಲಿಗೆ (ಬೆಳಗಾಂವ ಜಿಲ್ಲೆ) ಶಾಸನವೊಂದು ಯಾಪನೀಯ ಸಂಘ ಹಾಗೂ ಕಾರೆಯ ಗಣವನ್ನು ತಿಳಿಸಿದೆ. ಅದರಲ್ಲಿ ಮಾಧವ ಭಟ್ಟಾರಕ, ವಿನಯದೇವ.......ಕೀರ್ತಿಭಟ್ಟಾರಕ, ಕನಕಪ್ರಭ ಮತ್ತು ಶ್ರೀಧರ ತ್ರೈವಿದ್ಯದೇವರ ಹೆಸರುಗಳನ್ನು ಉಲ್ಲೇಖಿಸಿದೆ.[45] (ಇ) ಹುಕ್ಕೇರಿಯ (೧೨೯೯ ಹಾಗೂ ೧೨೫೭) ಶಾಸನವೊಂದರಲ್ಲಿ ಯಾಪನೀಯ ಸಂಘ, ಮೈಲಾಪಾನ್ವಯ ಹಾಗೂ ಕಾರೆಯಗಣದ ಉಲ್ಲೇಖವಿದೆ. ಅದರಲ್ಲಿ ಉಲ್ಲೇಖಿತ ಗುರುಗಳೆಂದರೆ ಕನಕಪ್ರಭ (ಯಾರು 'ಜಾತರೂಪಧರ ವಿಖ್ಯಾತಂ' ಎಂದರೆ ತಮ್ಮ ನಗ್ನತೆಗೆ ಅಥವಾ ನಿರ್ಗ್ರಂಥತೆಗೆ ಪ್ರಸಿದ್ಧರೊ). ಶ್ರೀಧರ ಹಾಗೂ ಕನಕಪ್ರಭ ಪಂಡಿತ.[46] (ಈ) ಕೊಲ್ಹಾಪುರ ಮಂಗಳವಾರ ಪೇಟದ ಜಿನಬಸದಿಯ ಮೊದಲಂತಸ್ತಿನ ಪೀಠದಲ್ಲಿ ಇರುವ ಕನ್ನಡ ಶಾಸನವು ವೊಮಿಯಣ್ಣನು ಪಟ್ಟಶಾಲೆಯನ್ನು ಕಟ್ಟಿಸಿದನೆಂದಿದೆ. ಆತನನ್ನು ಯಾಪನೀಯ ಸಂಘದ ಪುನ್ನಾಗ ವೃಕ್ಷ ಮೂಲಗಣದ

---

38 *A.R.S.I.E.* 1941–42, No. 3, p. 255

39 ಅದೇ No. 6 p. 261

40 ಜನವಿಜಯ (ಬೆಳಗಾಮ್), ಜುಲೈ ೧೯೩೧

41 *A.R.S.I.E.*, 1938–39, No. 98. p. 219

42 A.R.S E., 1925–26, Nos. 441–42, p. 76

43 ಅದೇ. 1919, No. 109, p. 12

44 P. B. Desai : Ibidem p. 403

45 R. S. Panchamukhi ; Karnataka Inscriptions I, pp. 75–6

46 K. G. Kundangar, Inscriptions from N. Karnatak and Kolhapur States, Kolhapur, 1939

ವಿಜಯಕೀರ್ತಿಯ ಶಿಷ್ಯ ರವಿಯಣ್ಣನ ಸೋದರನೆಂದಿದೆ.[47]. (ಉ) ಅತ್ಯಂತ ಇತ್ತೀಚೆ ಡಾ. ಗುರುರಾಜ ಭಟ್ಟರು ವರಾಂಗದಲ್ಲಿಯ (ದ.ಕ.) ಪ್ರತಿಮೆಯ ಮೇಲಿನ ಶಾಸನವೊಂದನ್ನು ನನಗೆ ಕಳಿಸಿದ್ದಾರೆ. ಅವರಲ್ಲಿ ಕಾಣೂರ್‌ಗಣದ ಉಲ್ಲೇಖವಿದೆ. ಅವರು ಅದನ್ನು ಆಳವಾಗಿ ಅಭ್ಯಸಿಸುತ್ತಿದ್ದಾರೆ.

ಇದುವರೆಗಿನ ಈ ಕಾಲಾನುಪೂರ್ವಿಬದ್ಧ ಶಾಸನಗಳ (ಕ್ರಿ.ಶ. ೫ನೆಯ ಶತಮಾನದಿಂದ ೧೪ನೆಯ ಶತಮಾನದ ವರೆಗೆ) ಪರಿವೀಕ್ಷಣೆ ಯಾಪನೀಯ ಸಂಘದ ಬಗ್ಗೆ ಕೆಲ ಸ್ಪಷ್ಟ ವಿಶಾಲ ಸತ್ಯಗಳನ್ನು ಹೊರಗೆಡಹುತ್ತದೆ. ಯಾಪನೀಯರನ್ನು ನಿರ್ಗ್ರಂಥರಿಂದ, ಶ್ವೇತಪಟರಿಂದ ಹಾಗೂ ಕೂರ್ಚಕರಿಂದ ಭಿನ್ನರೆಂದು ಪರಿಗಣಿಸಲಾಗುತ್ತಿತ್ತೆಂದು ಅವುಗಳ ವಿವರಣೆಯನ್ನು ಆರಂಭಿಸಬಹುದು: ಯಾಪನೀಯ ಸಂಘವು ಕುಮುಲಿಗಣ (ಅಥವಾ ಕುಮುದಿಗಣ), (ಕೋಟಿ) ಮಡುವಗಣ, ಕಣ್ದೂರ್-ಅಥವಾ ಕಾಣೂರ್-ಗಣ, ಪುನ್ನಾಗ ವೃಕ್ಷ ಮೂಲಗಣ (ಮೂಲ ಸಂಘದೊಂದಿಗೆ ಬೆರಸಿಯೂ ಹೇಳಲಾಗುತ್ತದೆ), ವಂದಿಯೂರಗಣ, ಕಾರೆಯಗಣ, ನಂದಿಗುಚ್ಛ ಹಾಗೂ ಮೈಲಾಪಾನ್ವಯಗಳ ಜೊತೆಗೆ ಸೇರಿರುತ್ತದೆ. ಈ ಬಗೆಯಾಗಿ ಭಿನ್ನಗಣಗಳೊಂದಿಗೆ ಇರುವ ಸಂಬಂಧ ಯಾಪನೀಯ ಸಂಘಕ್ಕೆ ಅದು ಕಾಲಕ್ರಮದಲ್ಲಿ ಸ್ವಂತಿಕೆಯನ್ನು ಕಳೆದುಕೊಂಡು ಭಿನ್ನಗಣಗಳ ರೂಪದಲ್ಲಿ ಬಾಳಲು ಕಾರಣವಾಯಿತು. 'ಗಣಭೇದ' ಗ್ರಂಥ ಕರ್ನಾಟಕದಲ್ಲಿ ಹಾಗೂ ಸುತ್ತಮುತ್ತಲ 'ಗಣ'ಗಳಿಗೆ ಉಂಟಾದ ಪ್ರಾಮುಖ್ಯವನ್ನು ಸೂಚಿಸುತ್ತದೆ. ಪುನ್ನಾಗವೃಕ್ಷ ಮೂಲಗಣ ಅಥವಾ ಕಂಡೂರ ಗಣವು ಸಂಘವನ್ನು ಸೂಚಿಸದೆಯೆ ರೂಢಿಯಲ್ಲಿ ಬಂದಿತು. ಪ್ರಾಯಃ ಈ ಬಗೆಯ ಕಲಬೆರಕೆ ಮುಂದೆ ಯಾಪನೀಯ ಸಂಘ ದಿಗಂಬರರಲ್ಲಿ ಬೆರೆತುದಕ್ಕೆ ಒಂದು ವಿವರಣೆಯಾಗುವಂತಿದೆ–ದಕ್ಷಿಣದಲ್ಲಿ. ಈ ಸಂಘದ ಮುನಿಯೊಬ್ಬನನ್ನು 'ಜಾತ ರೂಪಧರ' ಎಂದು ಹೇಳಿದೆ; ಈ ಬಗೆಯಾಗಿ ಹೇಳುವುದು ದಿಗಂಬರ ಮುನಿಗಳಲ್ಲಿ ವಾಡಿಕೆ. ಈ ಸಂಘದ ಮುನಿಗಳ ಆಚಾರ ವಿಚಾರಗಳ ಪದ್ಧತಿಯ ಬಗ್ಗೆ ಇನ್ನೂ ಸಂಶೋಧನೆ ಆಗಬೇಕು. ಇಂದ್ರ ನಂದಿಯ ನೀತಿಸಾರದ (೭–೮) ಪ್ರಕಾರ ಪ್ರಾರಂಭದಲ್ಲಿ ಸಂಘಗಳು ಇದ್ದುವು: ಸಿಂಹ—, ನಂದಿ—, ಸೇನ—, ಮತ್ತು ದೇವ ಸಂಘ; ಮತ್ತು ಅನಂತರದಲ್ಲಿ ಗಣಗಚ್ಛ ಮುಂತಾದವು ಬೆಳೆದವು. 'ಗಣಭೇದ'ವು ಸೂಚಿಸುವಂತೆ ಗಣಗಳು ತರುವಾಯದಲ್ಲಿ ಸಂಘಗಳನ್ನು ತಮ್ಮಲ್ಲಿ ಅಂತರ್ಗತವಾಗಿಸಿಕೊಂಡು ಮುಂದುವರಿದವು. ಈ ಗಣಪಕ್ಷಪಾತವನ್ನು ಶ್ರುತಾವತಾರದಲ್ಲಿ ವಿವರಿಸಿದೆ (ಪದ್ಯ ೯೦); ಅದರಲ್ಲಿ ಹೆಸರಿನ ಕೊನೆಯಲ್ಲಿ–ನಂದಿ,—ವೀರ, —ದೇವ ಇತ್ಯಾದಿಗಳು ಬಳಕೆಗೆ ಬಂದ ವಿಧಾನವನ್ನೂ ವಿವರಿಸಿದೆ.[48]

ಶಾಸನಗಳು ದೊರೆತ ಸ್ಥಳಗಳಿಂದ[19] ಸ್ಪಷ್ಟವಾಗುವ ಸಂಗತಿಯೆಂದರೆ ಯಾಪನೀಯ ಸಂಘದ ಯತಿಗಳು ವಿಶೇಷವಾಗಿ ಇಂದಿನ ಧಾರವಾಡ ಬೆಳಗಾಂವ ಕೊಲ್ಹಾಪುರ ಹಾಗೂ ಗುಲ್ಬರ್ಗ ಜಿಲ್ಲೆಗಳ ಪ್ರದೇಶಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದರು. ಆಂಧ್ರ ಹಾಗೂ ತಮಿಳು ನಾಡುಗಳಲ್ಲಿ ದೊರೆತ ಶಾಸನಗಳ ಸಂಖ್ಯೆ ಅಲ್ಪ. ಶ್ರವಣಬೆಳ್ಗೊಳದಲ್ಲಿ ಯಾಪನೀಯರ ಒಂದೂ ಶಾಸನ ದೊರೆಯದೆ ಇರುವುದು ಏನನ್ನು ಸೂಚಿಸುತ್ತದೆಂದರೆ ಆ ಪೀಠ ಪ್ರಾಯಃ ಯಾಪನೀಯ ಗುರುಗಳಿಂದ ಅಕ್ಷಿಪ್ತವಾಗಿ ಬೆಳೆಯಿತು. ಕರ್ನಾಟಕದಲ್ಲಿ, ವಿಶೇಷತಃ ಅದರ ಉತ್ತರಭಾಗದಲ್ಲಿ ಯಾಪನೀಯ ಗುರುಗಳು ಜಿನ ಬಸದಿಗಳ ಜೊತೆಗೆ ಸಂಪರ್ಕ ಹೊಂದಿದ್ದರು. (ಸಾಮಾನ್ಯವಾಗಿ ಹೇಳುವುದಾದರೆ ನೇಮಿನಾಥ ಹಾಗೂ ಪಾರ್ಶ್ವನಾಥರ ಪ್ರತಿಮೆಗಳಿಗೆ ಪ್ರಾಶಸ್ತ್ಯವಿತ್ತಂತಿದೆ) ಅವರ ಬಗೆಗೆ ಹೊಳೆಯುವ ಸಂಗತಿಯೆಂದರೆ: ಅವರು ಜಿನಬಸದಿಗಳನ್ನೂ ಸಂಘವನ್ನೂ ಸರಿಯಾಗಿ ನಡೆಯಿಸಿಕೊಂಡು ಹೋಗುವ ಸ್ಥಾನಿಕ ಅಥವಾ ಧರ್ಮದರ್ಶಿಗಳಂತೆ ಇದ್ದು ರಾಜ ಮಹಾರಾಜರುಗಳಿಂದ, ಸಮಾಜದಲ್ಲಿನ ಇತರ ಪ್ರತಿಷ್ಠಿತರಿಂದ ಭೂಮಿಗಳ ದತ್ತಿಯನ್ನು ಪಡೆದು ಆ ಎರಡನ್ನೂ ನಡೆಸಿಕೊಂಡು ಹೋದರು. ಅವರ ಆ ಕಾರ್ಯಗಳು ಇಂದಿನ ಈ ಭಾಗದಲ್ಲಿ ಇನ್ನೂ ಬಾಳುತ್ತಿರುವ ಭಟ್ಟಾರಕರುಗಳ ಪದ್ಧತಿಗೆ ಪೂರ್ವಭಾವೀ ಬಗೆಯದೆಂದು

---

47 ಜಿನವಿಜಯ, ಬೆಳಗಾವ್ ೧೯೮೧ (ಮೇ–ಜೂನ್)

48 ನೋಡಿ, ಮೇಲೆ ಅ.ಟಿ. ೧೩

19 See also P. B. Desai, *Ibidem*, pp. 164 f.

ಸ್ವಲ್ಪ ಹೆಚ್ಚು ಕಡಿಮೆ ಭಾವಿಸಬಹುದು. ಸನ್ಯಾಸಿನಿಯರ (ಆರ್ಯಿಕಾ, ಕಂತಿ ಅಥವಾ ಕ್ಷಾಂತಿಕಾ) ಸಂಸ್ಥೆಗಳ ಅಸ್ತಿತ್ವಕ್ಕೂ ಜೈನ ಪದ್ಧತಿಯಲ್ಲಿರುವ ತಾತ್ತ್ವಿಕ ಪ್ರಶ್ನೆ 'ಸ್ತ್ರೀಯರಿಗೆ ಈ ಜನ್ಮದಲ್ಲೇ ಮೋಕ್ಷ ಸಾಧ್ಯವೇ' (ಸ್ತ್ರೀಣಾಂ ತದ್ಭವೇ ಮೋಕ್ಷಃ) ಎಂಬುದಕ್ಕೂ ಯಾವ ಸಂಬಂಧವೂ ಇಲ್ಲ. ಇದು ಜೈನ ದಂಡನಾಯಕರನೇಕರಿಗೆ ಅಹಿಂಸೆ ಹೇಗೆ ಅಡ್ಡ ಬರಲಿಲ್ಲವೋ ಅದಕ್ಕೆ ಸಮಾನವಾಗಿದೆ. ಸ್ತ್ರೀಮುಕ್ತಿ ಹಾಗೂ ಅಹಿಂಸಾ ತತ್ತ್ವಗಳನ್ನು ಸರಿಯಾಗಿ ಗ್ರಹಿಸುವುದೇ ಅಗತ್ಯವಾದ ಅಂಶವಾಗಿದೆ. ಈಗ ತೋರುವಂತೆ, ಬಹುಶಃ ಸಂಘವು ಜನತೆಯ ಮೇಲೆ ವಿಶೇಷ ಪ್ರಭಾವವನ್ನು ಬೀರಲಿಕ್ಕಿಲ್ಲ; ಅಂತೆಯೆ ಕೆಲವು ವ್ಯಕ್ತಿಗಳು, ಕೆಲವು ಕುಟುಂಬಗಳು ಮಾತ್ರ ಕೆಲವು ಆಚಾರ್ಯರಿಗೆ ಅನುಯಾಯಿಗಳಾದಂತಿದೆ.

(ಜೈನ) ಪಾರಿಭಾಷಿಕ ಪದಗಳಾದ ಸಂಘ, ಗಣ, ಗಚ್ಛ ಮತ್ತು ಅನ್ವಯ–ಇವು ತಮ್ಮಲ್ಲಿ ಅರ್ಥ ಬದಲಾವಣೆಯನ್ನು ಹೊಂದಿವೆ. ಸಂಘ ಹಾಗೂ ಗಣ ಇವು ಒಂದಕ್ಕೊಂದು ವ್ಯತ್ಯಯವಾಗಿವೆ. ಅವುಗಳ ಕೂಲಂಕಷ ಅಭ್ಯಾಸ, ಒಂದೊಂದಕ್ಕೂ ಇರುವ ಸಂಬಂಧ–ಇವುಗಳ ಒಂದು ಅಧ್ಯಯನ, ಅಗತ್ಯವಿದೆ.

ಇಂದ್ರನಂದಿ ತನ್ನ 'ನೀತಿಸಾರ'ದಲ್ಲಿ ಯಾಪನೀಯರನ್ನು 'ಜೈನಾಭಾಸ' ಎಂದು ಕರೆದುದನ್ನು ಮೇಲೆ ಉಲ್ಲೇಖಿಸಿದೆ; ಮತ್ತೆ ಶ್ರುತಸಾಗರನಿಗೆ ಅವರ ವಿರುದ್ಧ ನುಡಿಯಲು ಅನೇಕ ಸಂಗತಿಗಳಿವೆ. ಆತ ಅವರು ಪ್ರತಿಷ್ಠಾಪಿಸಿದ ಮೂರ್ತಿಗಳು ನಗ್ನವಾಗಿದ್ದರೂ ಪೂಜಿಸಬಾರದು ಎನ್ನುವಷ್ಟರ ಮಟ್ಟಕ್ಕೂ ಹೋಗಿದ್ದಾನೆ.[50] ಇಷ್ಟಾದರೂ ಶಾಸನಗಳಲ್ಲಿ ಯಾಪನೀಯ ಮುನಿಗಳು ತಮ್ಮ ಪಾಂಡಿತ್ಯ ಹಾಗೂ ತಪಶ್ಶಕ್ತಿಗಳಿಗೆ ಸಾಕಷ್ಟು ಪ್ರಸಿದ್ಧರಾಗಿದ್ದಾರೆ, ಪ್ರಶಂಸಿತರಾಗಿದ್ದಾರೆ; ಮತ್ತೆ ದಕ್ಷಿಣದಲ್ಲಿ ದಿಗಂಬರರು ಇಂದು ಪೂಜಿಸುತ್ತಿರುವ ಮೂರ್ತಿಗಳು ಒಂದೊಮ್ಮೆ ಯಾಪನೀಯರಿಗೇ ಸಂಬಂಧಿಸಿದ್ದವು. ಇದು ಯಾಪನೀಯರು ದಿಗಂಬರರೊಂದಿಗೆ ಹೇಗೆ ವಿಲೀನರಾದರೆಂಬುದನ್ನು ಸೂಚಿಸುತ್ತದೆ. ಇದಕ್ಕೆ ಯಾಪನೀಯಮುನಿಯನ್ನು 'ಜಾತರೂಪಧರ' ಎಂದು ವರ್ಣಿಸಿದ ಒಂದು ನಿದರ್ಶನವಂತೂ ಇದೆ.

ಯಾಪನೀಯರು ಒಂದು ಸಂಘವನ್ನು ಕಟ್ಟಿಕೊಂಡಿದ್ದರು ಮತ್ತು ಅವರ ಗುರುಗಳು ಜಿನಾಲಯಗಳ ನ್ಯಾಸಧಾರಿಗಳಾಗಿದ್ದರು. ಆ ಜಿನಾಲಯಗಳಿಗೆ ಸಾಕಷ್ಟು ದತ್ತಿ ಭೂಮಿಗಳಿದ್ದುದರಿಂದ ಅವರ ಜೀವನಕ್ಕಾಗಿ ಒಳ್ಳೆಯ ಆಶ್ರಯವಿದ್ದಿತು. ಆದುದರಿಂದ ಆ ವಾತಾವರಣ, ಸಾಹಿತ್ಯಕ ಚಟುವಟಿಕೆಗಳ ಕೃಷಿಗೆ ಪೋಷಕವಾಗಿದ್ದಿತು. ಹರಿಭದ್ರ (೮ನೆಯ ಶತಮಾನ) 'ಯಾಪನೀಯ ತಂತ್ರ'ವನ್ನು–ಹೀಗೆ ಉಲ್ಲೇಖಿಸಿದ್ದಾನೆ:[51]

> ಸ್ತ್ರೀ ಗ್ರಹಣಂ ತಾಸಾಮ್ ಅಪಿ ತದ್ಭವ ಏವೇ ಸಂಸಾರಕ್ಷಯೋ ಭವತಿ ಇತಿ ಜ್ಞಾಪನಾರ್ಥಂ ವಚಃ. ಯಥೋಕ್ತಂ ಯಾಪನೀಯ ತಂತ್ರೇಃ ಣೋಖಲು ಇತ್ಥೀ ಅಜೀವೋ, ಣ ಯಾವಿ ಅಭವ್ವಾ, ಣ ಯಾವಿ ದಂಸಣ ವಿರೋಹಿಣೀ, ಣೋ ಅಮಾಣುಸಾ, ಣೋ ಅಣಾರಿಉಪ್ಪತ್ತೀ, ಣೋ ಅಸಂಖೇಜ್ಜಾಉಯ, ಣೋ ಅಇಕೂರಮ್ಮೆ, ಣೋಣ ಉವಸಂತಮೋಹ, ಣೋಣ ಸುದ್ಧಾಚಾರಾ, ಣೋ ಅಸುದ್ಧ ಬೋಂದೀ, ಣೋವವಸಾಯವಜ್ಜಿಯಾ, ಣೋ ಅಪುವ್ವಕರಣ–ವಿರೋಹಿಣೀ, ಣೋಣವ-ಗುಣಠಾಣರಹಿಯಾ, ಣೋ ಅಜೋಗಲದ್ಧೀಎ, ಣೋ ಅಕಲ್ಲಾಣ ಭಾಯಣಂ ತಿ, ಕಹಂಣ ಉತ್ತಮಧಮ್ಮ–ಸಾಹಿಗತ್ತಿ॥

ಕಲ್ಪಸೂತ್ರದೊಂದಿಗೆ ಸಮೀಕರಿಸಲಾಗುವ ಕಲ್ಪವನ್ನೂ ಅವರು ಓದಿದ್ದರೆಂದು ಶ್ರುತಸಾಗರ ನಮಗೆ ತಿಳಿಸುತ್ತಾನೆ.[52]

---

50 ನೋಡಿ: ಆತನ ಟೀಕೆ, ಷಟ್ಪ್ರಾಭೃತಾದಿ ಸಂಗ್ರಹ (ಮುಂಬಯಿ–೧೯೨೦), ಪು. ೭೯

51 ನೋಡಿ: ನನ್ನ ಪೂರ್ವೋಕ್ತ ಲೇಖನ: ಅ.ಟಿ. ೧ ಹಾಗೂ ಹೇಮಚಂದ್ರನ 'ಯೋಗಶಾಸ್ತ್ರ (B.I. Ed.) ಪು. ೭೫೨

52 ನೋಡಿ: ನನ್ನ ಪೂರ್ವೋಕ್ತಲೇಖನ; ಅ.ಟಿ. ೧

ಪಾಲ್ಯಕೀರ್ತಿ ಎಂದೂ ಪ್ರಸಿದ್ಧನಾದ ಶಾಕಟಾಯನನನ್ನು ಮಲಯಗಿರಿಯು ಯಾಪನೀಯ ಎಂದು ವರ್ಣಿಸಿದ್ದಾನೆ. ಆತನ ವ್ಯಾಕರಣದ[53] ನಿರ್ಯುಕ್ತಿ ಹಾಗೂ ಭಾಷ್ಯ ಮುಂತಾದುವುಗಳಲ್ಲಿ ಬಂದಿರುವ ಉದಾಹರಣೆಗಳಲ್ಲಿ ಕೆಲವು. ಆತನಿಗೆ ಅರ್ಧಮಾಗಧಿಯಲ್ಲಿರುವ ಗ್ರಂಥಗಳಲ್ಲಿನ ತತ್ವಗಳೂ ಕೆಲವು ಒಪ್ಪಿಗೆಯಾಗಿದ್ದುವೆಂದು ತೋರುತ್ತವೆ. ಆತ ಅನೇಕ ಲೇಖಕರನ್ನು ಹೆಸರಿಸಿದ್ದಾನೆ. ಅವರಲ್ಲಿ ಕೆಲವರಾದರೂ ಯಾಪನೀಯ ಸಂಘಕ್ಕೆ ಸಂಬಂಧಪಟ್ಟಿರಬೇಕು. ಟಿಪ್ಪಣಿಯೊಂದು ತಿಳಿಸುವಂತೆ ಅಪಭ್ರಂಶ ಕವಿ ಸ್ವಯಂಭು, ಆಪುಲೀಯ ಅಥವಾ ಯಾಪನೀಯ ಸಂಘಕ್ಕೆ ಸಂಬಂಧಪಟ್ಟಿದ್ದ.[54] ವಿಮಲನೂ ಯಾಪನೀಯ ಸಂಘಕ್ಕೆ ಸಂಬಂಧಪಟ್ಟಿದ್ದನೆಂದು ಕೆಲವು ವಿದ್ವಾಂಸರ ಅಭಿಪ್ರಾಯ; ಪಉಮಚರಿಯದ ನಿಕಟ ಅಭ್ಯಾಸದಿಂದ ಪ್ರಮಾಣಿಸಬೇಕಾದ ಸಂಗತಿ ಇದು.

ವೈಯಾಕರಣಿ ಶಾಕಟಾಯನ. ತನ್ನ ಗ್ರಂಥದ ಪುಟವೊಂದರಲ್ಲೇ ಹೀಗೆ ಹೇಳಿದ್ದಾನೆ:[55] ಇತಿ ಶ್ರೀ ಶ್ರುತಾಕೇವಲಿ–ದೇಶೀಯಾಚಾರ್ಯಸ್ಯ ಶಾಕಾಟಾಯನಸ್ಯ ಕೃತೌ ಶಬ್ದಾನುಶಾಸನೇ ಇತ್ಯಾದಿ ಪ್ರಾಯಃ ಈ ಬಗೆಯಲ್ಲಿ ಯಾಪನೀಯ ಗುರುಗಳು ತಮ್ಮನ್ನು ಇತರರಿಂದ ಭಿನ್ನರೆಂದು ಸೂಚಿಸಿ ಕೊಳ್ಳುತ್ತಿರಬಹುದು. 'ತತ್ವಾರ್ಥ ಸೂತ್ರ'ದ ಕರ್ತೃ ಉಮಾಸ್ವಾತಿಯನ್ನು ಕೂಡ ಹೀಗೆಯೆ ವರ್ಣಿಸಿದೆ:

ತತ್ವಾರ್ಥ ಸೂತ್ರ ಕರ್ತಾರಮ್ ಉಮಾಸ್ವಾತಿ ಮುನೀಶ್ವರಮ್।
ಶ್ರುತಕೇವಲಿ ದೇಶೀಯಂ ವನ್ದೇಹಂ ಗುಣಮಂದಿರಮ್॥

ಸೂತ್ರಗಳು ಮತ್ತು ಭಾಷ್ಯ, ಅರ್ಧಮಾಗಧಿಯಲ್ಲಿರುವ ತತ್ವಗಳಿಗೆ ಕೆಲವೆಡೆ ಭೇದವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಪೂಜ್ಯಪಾದನು ಅನೇಕ ಕಡೆಗೆ ಸೂತ್ರಪಾಠಗಳ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿಲ್ಲ. ಉಮಾಸ್ವಾತಿ ಯಾಪನೀಯ ಸಂಘಕ್ಕೇ ಸಂಬಂಧಪಟ್ಟಿದ್ದನೆಂದು ತಿಳಿಸುವಲ್ಲಿ ದಿವಂಗತ ಪಂಡಿತ ಪ್ರೇಮಿಯವರು ಬೆಲೆಯುಳ್ಳ ಕಾರಣಗಳನ್ನು ಕೊಟ್ಟಿದ್ದಾರೆ.[56] ಅವರು ಶಿವಾರ್ಯ ಹಾಗೂ ಅಪರಾಜಿತಸೂರಿ ಇವರೂ ಯಾಪನೀಯರಾಗಿದ್ದಿರಬಹುದೆಂದು ಸೂಚಿಸಿದ್ದಾರೆ. ಇವರಲ್ಲಿ ಮೊದಲನೆಯವನು 'ಆರಾಧನಾ' ಗ್ರಂಥದ ಕರ್ತೃ ಆದರೆ ಇನ್ನೊಬ್ಬ ಅದರ ಸಂಸ್ಕೃತ ಟೀಕಾಕಾರ. ಆರಾಧನಾ ಗ್ರಂಥ ಪ್ರಾಕೃತದಲ್ಲಿರುವ ಸಾಕಷ್ಟು ಪುರಾತನ ಆಗಮ ಗ್ರಂಥವಾಗಿದೆ. ಈ ಈರ್ವರ ಕೃತಿಗಳಲ್ಲಿಯ ಕೆಲವು ವಿಷಯಗಳು ಶ್ವೇತಾಂಬರವಾಗಲಿ ಅಥವಾ ದಿಗಂಬರವಾಗಲಿ ಪಂಗಡಗಳ ವಿಚಾರ ಪ್ರಣಾಲಿಗೆ ಒಗ್ಗುವವಿಲ್ಲ.[57] ಅದೇ ಪ್ರಕಾರ ಸಿದ್ಧಸೇನ ದಿವಾಕರನೂ ಯಾಪನೀಯನಾಗಿರಬೇಕು.[58] ಪ್ರಾಯಃ ಆ ಕಾರಣದಿಂದಲೇ ಅವನನ್ನು ಹರಿಭದ್ರನು 'ಶ್ರುತಕೇವಲಿ' ಎಂದು ಕರೆದಿರಬಹುದು. ಸಿದ್ಧಸೇನನಲ್ಲೂ ಶ್ವೇತಾಂಬರ ಹಾಗೂ ದಿಗಂಬರ ಪಂಗಡಗಳ ಪ್ರಸಿದ್ಧವಾದ ತತ್ವಗಳೊಂದಿಗೆ ಭೇದಗಳಿವೆ. ಕಾಲಗತಿಯಲ್ಲಿ ಒಂದೊಮ್ಮೆ ಯಾಪನೀಯ ಗುರುಗಳಿಂದ ನಡೆಯಿಸಲಾದ ಜಿನಾಲಯಗಳೂ ಪ್ರತಿಷ್ಠಿಸಿದ ಪ್ರತಿಮೆಗಳೂ ಈಗ ದಿಗಂಬರರವೆಂದು ಹೇಳಿ ಅವರಿಂದ ಪೂಜಿಸಲಾಗುತ್ತದೆ. ಅಷ್ಟೇ ಸಹಜ–ಆ ಗುರುಗಳ ಅತ್ಯಂತ ಶ್ರೇಷ್ಠ ಕೃತಿಗಳೂ ದಕ್ಷಿಣದಲ್ಲಿ ಜನಬಳಕೆಯಲ್ಲಿ ಉಳಿದಿರಬೇಕು. ವಿಮಲನ 'ಪಉಮ

---

53 Śākaṭāyan Vyākaraṇa, Bhāratiya Jñānapiṭha Publication, Delhi, 1971; See the Introduction and also the General Editorial.

54. ನಾ. ಪ್ರೇಮಿ: ಜೈನ ಸಾಹಿತ್ಯ ಔರ್ ಇತಿಹಾಸ, ೨ನೆಯ ಮುದ್ರಣ. ಪು. ೧೯೭

55 ಶಾಕಟಾಯನ–ವ್ಯಾಕರಣಂ, ಕೊಲ್ಹಾಪುರ ೧೯೦೭

56 (a) ನಾ. ಪ್ರೇಮಿ, ಜೈನ ಸಾಹಿತ್ಯ ಔರ್ ಇತಿಹಾಸ, ಪು. ೫೬೩ (೨ನೆಯ ಮುದ್ರಣ)

b) *E.C.* VIII, Nagar No. 46. Though late in age it is a valuable record of traditional information.

57 ನಾ. ಪ್ರೇಮಿ, ಪೂರ್ವೋಕ್ತ. ಪು. ೫೭ ಹಾಗೂ ಪು. ೫೬೧ ಇತ್ಯಾದಿ.

58 See my Introduction to *Siddhasēna Divākara's Nyavatara and other works*, Jain Sahitya Vikāsa Maṇḍala, Bombay, 1971.

ಚರಿಯ' ರವಿಷೇಣನ 'ಪದ್ಮಚರಿತ' ಜಟಿಲನ (ಈತ ಸಿದ್ಧಸೇನ ಹಾಗೂ ಉಮಾಸ್ವಾತಿಗಳಿಗೆ ಬಹಳ ಋಣಿಯಾಗಿದ್ದಾನೆ.) 'ವರಾಂಗ ಚರಿತ' ಮತ್ತು ಸ್ವಯಂಭುವಿನ 'ಪಉಮಚರಿಉ' ಇವುಗಳ ಆಳವಾದ ಅಭ್ಯಾಸ ಆಗಬೇಕಾಗಿದೆ.

ನನಗೆ ತೋರಿದ ವಿಶೇಷ ಸಂಗತಿಯೊಂದನ್ನು ಇಲ್ಲಿ ಬರೆಯಬಹುದು. 'ಗಣಭೇದ'ದ ಪ್ರಕಾರ ಇಂದಿನ ಕೊಪ್ಪಳ ಯಾಪನೀಯರದೊಂದು ಕೇಂದ್ರವಾಗಿತ್ತು. ಅಲ್ಲಿನ ಪಾಲ್ಕಿಗುಂಡಿನ ಮೇಲೆ ಜಟಿಲ ಅಥವಾ ಜಟಾಚಾರ್ಯನ ಪಾದಮುದ್ರಿಕೆಗಳು ಇವೆ.[59] ಕನ್ನಡ ಕವಿ ಜನ್ನ (೧೩ನೆಯ ಶತಮಾನದ ಪೂರ್ವಾರ್ಧ) ಅನಂತನಾಥ ಪುರಾಣದಲ್ಲಿ ಜಟಾಸಿಂಹ ನಂದಿಯನ್ನು ಕಾಣೂರ್‌ಗಣದವನೆಂದು ಹೇಳಿದ್ದಾನೆ.[60] ಆ 'ಗಣ' ಯಾಪನೀಯ ಸಂಘದೊಂದಿಗೆ ನಿಕಟ ಸಂಬಂಧಹೊಂದಿದೆ. ನಾನು 'ವರಾಂಗ ಚರಿತ'ಗ್ರಂಥವನ್ನು ಸಂಪಾದಿಸಿ ಪ್ರಕಟಿಸುವ ಸಂದರ್ಭದಲ್ಲಿ ಅದರ ಕರ್ತೃ ದಿಗಂಬರನೇ ಅಥವಾ ಶ್ವೇತಾಂಬರನೇ ಎಂಬ ಪ್ರಶ್ನೆ ಎದ್ದಿತ್ತು.[61]

ಮೇಲಿನ ವಿವರಗಳಿಂದ ದಕ್ಷಿಣದಲ್ಲಿಯ ಶಾಸನಗಳಲ್ಲಿ ಯಾಪನೀಯರ ಅನೇಕ ಉಲ್ಲೇಖಗಳು ಇದ್ದುದು ಸ್ಪಷ್ಟವಿದೆ. ಕನ್ನಡ ಹಾಗೂ ಅದರ ಸೋದರ ಭಾಷೆಗಳ ಸಾಹಿತ್ಯ ಕೃತಿಗಳಲ್ಲಿ ಯಾಪನೀಯರ ಉಲ್ಲೇಖಗಳಿದ್ದುದನ್ನು ಸಂಶೋಧಿಸಬೇಕಾಗಿದೆ. ಹರಿಷೇಣನ (ಕ್ರಿ.ಶ. ೯೩೧-೩೨) ಬೃಹತ್ಕಥಾ ಕೋಶದ[62] ಕಥೆಯನ್ನೆ (ನಂ. ೧೩೧) ಸುಮಾರು ಅನುಸರಿಸಿದ ಕನ್ನಡ 'ವಡ್ಡಾರಾಧನೆ' ಜಾಪುಲಿ ಸಂಘದ ಉಲ್ಲೇಖವನ್ನೊಳಗೊಂಡಿದೆ.[63] ಸಂದರ್ಭಗಳಲ್ಲಿ ಕಿಂಚಿದ್ಭಿನ್ನತೆಗಳಿದ್ದರೂ ಎರಡೂ ಗ್ರಂಥಗಳಲ್ಲಿ ಅರ್ಧಫಾಲಕ, ಕಾಂಬಳಿಕ, ಶ್ವೇತಭಿಕ್ಷು ಮತ್ತು ಯಾಪನೀಯರ ಉಲ್ಲೇಖಗಳಿವೆ. ಜನ್ನ ಅನಂತನಾಥಪುರಾಣದಲ್ಲಿ ಕಾಣೂರ್ಗಣದ ರಾಮಚಂದ್ರದೇವನನ್ನು ಹೇಳಿದ್ದಾನೆ. ಮತ್ತೆ ಅಲ್ಲಿ ಮುನಿಚಂದ್ರ ತ್ರೈವಿದ್ಯನನ್ನು 'ಜಾವಳಿಗೆಯ' ಎಂದು ವಿಶೇಷಿಸಿ ವರ್ಣಿಸಲಾಗಿದೆ. 'ಜಾವಳಿಗೆಯ' ಇದನ್ನು ಸರಿಯಾಗಿ ವಿವರಿಸಿಯೂ ಇಲ್ಲ. ಪ್ರಾಯಃ ಅದೇ 'ಮುನಿ'ಚಂದ್ರ'ನನ್ನು ಅದೇ ವಿಶೇಷಣಗಳಿಂದ ಪಾರ್ಶ್ವಪಂಡಿತನಿಂದ (ಕ್ರಿ.ಶ. ೧೨೨೨)'ಪಾರ್ಶ್ವನಾಥ ಪುರಾಣ' ಗ್ರಂಥದಲ್ಲಿ ಸ್ತುತಿಸಲಾಗಿದೆ.[64] ನನ್ನ ಅಭಿಪ್ರಾಯದಲ್ಲಿ 'ಜಾವಳಿಗೆಯ' ಇದು ಆತನ ಸಂಘ, ಯಾಪನೀಯವನ್ನು ಸೂಚಿಸುತ್ತದೆ. ಆಶ್ಚರ್ಯದ ಸಂಗತಿಯೆಂದರೆ ಜನ್ನ, ಜಟಾಸಿಂಹನಂದಿ ಹಾಗೂ ಇಂದ್ರನಂದಿ ಇವರನ್ನು ಕಾಣೂರ್ ಗಣದವರೆಂದು ಹೇಳಿದುದು. ಏಕೆಂದರೆ ಅದು ಯಾಪನೀಯ ಸಂಘದೊಂದಿಗೆ ನಿಕಟ ಸಂಪರ್ಕ ಹೊಂದಿದೆ. ಜನ್ನ ಹಲವಾರು ಆಚಾರ್ಯರನ್ನು ಹೀಗೆ ಸ್ತುತಿಸಿದುದನ್ನು ನೋಡಿದರೆ ಈ ಕವಿಗಳು ಸಂಘ. ಗಣ ಇತ್ಯಾದಿಗಳಲ್ಲಿಯ ಭೇದಗಳಿಗೆ ಅಷ್ಟೊಂದು ಮಹತ್ವ ಕೊಡಲಿಲ್ಲವೆಂದು, ಆ ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಪರಿಪಾಲಿಸಿರಲಿಕ್ಕಿಲ್ಲವೆಂದು ತೋರುತ್ತದೆ.

ಶಾಸನ ಹಾಗೂ ಸಾಹಿತ್ಯಕ ಆಧಾರಗಳಿಂದ ಯಾಪನೀಯರು ದಿಗಂಬರರ ಜೊತೆಜೊತೆಯಾಗಿ ಬಾಳಿದಂತೆ ತೋರುತ್ತವೆ; ಮತ್ತೆ ಇಂದಿಗೂ ದಕ್ಷಿಣದಲ್ಲಿ, ಅವರ ಬಸದಿಗಳಲ್ಲಿಯ ಮೂರ್ತಿಗಳನ್ನು ದಿಗಂಬರರು ಅರ್ಚಿಸುತ್ತಿರುವರು. ಗುಣರತ್ನ (ಕ್ರಿ.ಶ. ೧೩೪೩-೧೪೧೮) ಯಾಪನೀಯರೊಂದಿಗೆ

---

59 My Intro. to the *Varāṅgacaharita*, 1938

60 ಜನ್ನ ಅನಂಥನಾಥ ಪುರಾಣ, ೧-೧೭

61 *Annals of the B.O.R.I*, XIV i-ii, Poona 1933

62 *Singhi Jaina Series*, 17, Bombay 1943

63 ಡಾ. ಡಿ. ಎಲ್. ನರಸಿಂಹಾಚಾರ್, ವಡ್ಡಾರಾಧನೆ, ಪು. ೯೩ (ನಾಲ್ಕನೆಯ ಮುದ್ರಣ)

64 ಪಾರ್ಶ್ವನಾಥ ಪುರಾಣ (ಸಂ. ಎಚ್. ಶೇಷಯ್ಯಂಗಾರ್) ಈ ಉಲ್ಲೇಖನೆಯತ್ತ 'ಕನ್ನಡ ನಿಘಂಟು' ಇದರ ಸಂಪಾದಕರಾದ ಜಿ. ವೆಂಕಟಸುಬ್ಬಯ್ಯನವರು ನನ್ನ ಗಮನವನ್ನು ಸೆಳೆದರು. ಶ್ರೀ ಹಂಪ ನಾಗರಾಜ ಅವರು ಕನ್ನಡದಲ್ಲಿ ಬೇರೆಡೆಯಲ್ಲಿ ತಮಗೆ 'ಜಾವಳಿಗೆಯ' ಕಾಣದೊರೆತಿಲ್ಲ ಎಂದು ಹೇಳಿದರು.

ವಿಶೇಷ ಸಂಪರ್ಕವಿದ್ದುದನ್ನು ಹೇಳಿಲ್ಲ; ಶ್ರುತಸಾಗರನಿಗೆ (ವಿ.ಶ. ೧೬ನೆಯ ಶತಮಾನ) ಅವರ ಬಗೆಗೆ ಕಿಂಚಿತ್ತೂ ಸಹಾನುಭೂತಿಯಿಲ್ಲ. ನಿಜವಾಗಿ ಹೇಳುವುದಾದರೆ ಇಂದು ಕೂಡ ಕೆಲವು ಸಂಪ್ರದಾಯಸ್ಥ ವಿದ್ವಾಂಸರು ದಿಗಂಬರರು ಪೂಜಿಸುತ್ತಿರುವ ಬಸದಿಗಳಲ್ಲಿರುವ ಕೆಲವು ಮೂರ್ತಿಗಳು ಯಾಪನೀಯರು ಪ್ರತಿಷ್ಠಾಪಿಸಿದ ಮೂರ್ತಿಗಳೆಂದು ತಿಳಿಯದೇ ಯಾಪನೀಯರು ಪ್ರತಿಷ್ಠೆಗೈದ ಮೂರ್ತಿಗಳನ್ನು ಪೂಜಿಸಬಾರದೆಂದು ಆಕ್ಷೇಪಿಸುತ್ತಾರೆ. ತ್ರೈವಿದ್ಯ, ಸೈದ್ಧಾಂತಿಕ ಮುಂತಾದ ಬಿರುದುಗಳನ್ನು ನೋಡಿದರೆ ಯಾಪನೀಯ ಆಚಾರ್ಯರು ಷಟ್ಖಂಡಾಗಮ ಮುಂತಾದವುಗಳನ್ನೂ ಅಭ್ಯಸಿಸುತ್ತಿದ್ದರೆಂದು ತೋರುತ್ತದೆ. ಈ ವಿಷಯದಲ್ಲಿ ಇನ್ನೂ ಸಂಶೋಧನೆ ಆಗಬೇಕು.

ಹರಿಭದ್ರನ 'ಷಡ್ದರ್ಶನಸಮುಚ್ಚಯ'ಕ್ಕೆ ವ್ಯಾಖ್ಯಾನ ಬರೆಯುತ್ತ ಗುಣರತ್ನ ಹೀಗೆ ಬರೆದಿದ್ದಾನೆ: ದಿಗಂಬರಾಃ ಪುನರ್ ನಾಗ್ನ್ಯ ಲಿಂಗಾಃ ಪಾಣಿಪಾತ್ರಶ್ಚ। ತೇ ಚತುರ್ಧಾ ಕಾಷ್ಠಾಸಂಘ–ಮೂಲಸಂಘ–ಮಾಥುರ ಸಂಘ–ಗೋಪ್ಯಸಂಘ–ಭೇದಾತ್। ಕಾಷ್ಠಸಂಘೇ ಚಮರೀಬಾಲೈಶ್ಚ ಪಿಚ್ಛಿಕಾ, ಮೂಲಸಂಘೇ ಮಯೂರಪಿಚ್ಛೈ ಪಿಚ್ಛಿಕಾ, ಮಾಥುರ ಸಂಘೇ ಮೂಲತೋಽಪಿ ಪಿಚ್ಛಿಕಾ ನಾದೃತಾ ಗೋಪ್ಯ ಮಾಯೂರಪಿಚ್ಛಿಕಾ। ಆದ್ಯತ್ರ್ರಯೋ ऽ ಪಿ ಸಂಘಾವಂದ್ಯಮಾನಾ ಧರ್ಮವೃದ್ಧಿಮ್ ಭಣನ್ತಿ, ಸ್ತ್ರೀಣಾಂ ಮುಕ್ತಿಂ ಕೇವಲಿನಾಂ ಭುಕ್ತಿಂ ಸದ್‌ವೃತಸ್ಯಾಪಿ ಸಚೀವರಸ್ಯ ಮುಕ್ತಿಂಚ ನ ಮನ್ವತೇ, ಗೋಪ್ಯಾಸ್ತು ವಂದ್ಯಮಾನಾ ಧರ್ಮಲಾಭಂ ಭಣನ್ತಿ, ಸ್ತ್ರೀಣಾಂ ಮುಕ್ತಿಂ ಕೇವಲಿನಾಮ್ ಭುಕ್ತಿಂ ಚ ಮನ್ಯನ್ತೇ। ಗೋಪ್ಯಾ ಯಾಪನೀಯಾ ಇತ್ಯುಚ್ಯನ್ತೇ.[65]

ಈ ಪ್ರಕಾರ 'ಗೋಪ್ಯ' ಯಾಪನೀಯ' ಎಂಬುದರ ಇನ್ನೊಂದು ಹೆಸರು. ಗುಣರತ್ನ ಅದನ್ನು ದಿಗಂಬರದ ಅಂತರ್ಗತವಾಗಿಸಿದ್ದಾನೆ. ಅವರು ಸ್ತ್ರೀಮುಕ್ತಿ ಮತ್ತು ಕೇವಲಿಭುಕ್ತಿಗಳನ್ನು ಒಪ್ಪಿಕೊಂಡಿದ್ದರು. ಅವರು ಈ ವಿಷಯಗಳನ್ನು ಒಪ್ಪಿಕೊಂಡಿದ್ದರೆಂಬುದಕ್ಕೆ ಆಧಾರಗಳೂ ಇವೆ. ಶಾಕಟಾಯನನ ವ್ಯಾಕರಣ ಗ್ರಂಥವಲ್ಲದೆ ಸ್ತ್ರೀ ಮುಕ್ತಿ ಹಾಗೂ ಕೇವಲಿಭುಕ್ತಿ ಪ್ರಕರಣ ಎಂಬ ಎರಡು ಪ್ರಕರಣಗಳನ್ನೂ ಬರೆದಿದ್ದಾನೆ; ಇವು ಈಗ ಪ್ರಕಟವಾಗಿವೆ.[66] ಇಲ್ಲಿ ಒಂದು ಕುತೂಹಲ ಸಂಗತಿಯೆಂದರೆ ಶಾಕಟಾಯನನ ವ್ಯಾಕರಣ ದಕ್ಷಿಣದಲ್ಲಿ ದಿಗಂಬರರಲ್ಲಿಯೂ ಆತನ ಎರಡು ಪ್ರಕರಣಗಳು ಶ್ವೇತಾಂಬರರಲ್ಲಿಯೂ ವಿಶೇಷ ಪ್ರಚಲಿತವಾಗಿವೆ.

ಅನಂತರದಲ್ಲಿ ಬಂದ ಶ್ರುತಸಾಗರ (ವಿ.ಶ. ೧೬ನೆಯ ಶತಮಾನ) ಇತರ ಪಂಗಡಗಳ ಬಗೆಗೆ ಸಹಿಷ್ಣುತೆಯನ್ನು ಹೊಂದಿಲ್ಲ. ಆತ ಇಂದ್ರನಂದಿ ಹೇಳಿದ ಯಾಪನೀಯ ಸಂಘ ಜಿನಾಭಾಸ ಎಂಬ ಶ್ಲೋಕವನ್ನು ಉಲ್ಲೇಖಿಸಿ ಗೋಪುಚ್ಛಕ, ಶ್ವೇತವಾಸ, ದ್ರಾವಿಡ ಮತ್ತು ಯಾಪನೀಯರ ಸಂಬಂಧದಲ್ಲಿ ಕೆಲವು ವಿವರಗಳನ್ನು ಕೊಟ್ಟಿದ್ದಾನೆ.[67] ಕೊನೆಯ ಎರಡರ ಬಗೆಗೆ ಹೀಗೆ ಹೇಳಿದ್ದಾನೆ:

> ದ್ರಾವಿಡಾಃ ಸಾವದ್ಯಂ ಪ್ರಾಸುಕಸವ್ ಚ ನ ಮನ್ಯಂತೇ, ಉದ್ಭೋಜನಂ ನಿರಾಕುರ್ವನ್ತಿ। ಯಾಪನೀಯಸ್ತು ವೇಸರಾ ಇವ್ರೋಭ್ಯಾಂ ಮನ್ಯನ್ತೇ, ರತ್ನತ್ರಯಂ ಪೂಜಯನ್ತಿ, ಕಲ್ಪಂ ಚ ವಾಚಯನ್ತಿ, ಸ್ತ್ರೀಣಾಂ ತದ್ಭವೇ ಮೋಕ್ಷಂ, ಕೇವಲಿ ಜಿನಾನಾಂ ಕವಲಾಹಾರಂ ಪ್ರಶಾಸನೇ ಸಗ್ರಂಥಾನಾಂ ಮೋಕ್ಷಂ ಚ ಕಥಯನ್ತಿ.[68]

ಅನುವಾದ : ಸೀತಾರಾಮ ಜಾಗೀರ್‌ದಾರ್

---

65 ಷಡ್ದರ್ಶನ ಸಮುಚ್ಚಯ (ಭಾರತೀಯ ಜ್ಞಾನಪೀಠ ಮುದ್ರಣ), ಪು. ೧೬೦–೬೧

66 ಶಾಕಟಾಯನ ವ್ಯಾಕರಣಕ್ಕೆ ಡಾ. ಬಿರ್ವೆ ಅವರು ಬರೆದ ಉಪೋದ್ಘಾತದ ಅನುಬಂಧವನ್ನು ನೋಡಿ: ಇದು ಪೂರ್ವೋಕ್ತ. ಮುನಿ ಶ್ರೀ ಜಂಬುವಿಜಯಜಿ ಅವರು ಇದರ ಹೊಸ ಸಂಸ್ಕರಣವೊಂದನ್ನು ಸ್ವೋಪಜ್ಞ ವ್ಯಾಖ್ಯೆಯೊಂದಿಗೆ ಪ್ರಕಟಿಸಲಿದ್ದಾರೆ.

67 ಪೂರ್ವೋಕ್ತ ಅ.ಟಿ. 13 ಮತ್ತು ಅ.ಟಿ. 50

68 ಷಟ್ ಪ್ರಾಭೃತ ಸಂಗ್ರಹ, ಪು. ೭೯

ಭಗವಾನ್ ಮಹಾವೀರ ತನ್ನ ಸಿದ್ಧಾಂತದ ಪ್ರಚಾರ ಮಾಡಲಿಕ್ಕೆಂದು–ತನ್ನ ಉಪದೇಶವನ್ನು ಜನಸಾಮಾನ್ಯರಿಗೆ ಮುಟ್ಟಿಸಲಿಕ್ಕೆಂದು–ಸಾಧು, ಸಾಧ್ವಿ, ಶ್ರಾವಕ, ಶ್ರಾವಿಕಾ, ಈ ಪ್ರಕಾರ ಚತುರ್ವಿಧ ಸಂಘವನ್ನು ಸ್ಥಾಪಿಸಿದ. ಇದಕ್ಕೆ ಜೈನ ಸಂಘವೆಂದು ಹೆಸರು. ಇದರಲ್ಲಿ ಸಾಧು ಸಾಧ್ವಿಗಳಿಗೆ ಮುನಿ ಆರ್ಯಿಕೆಯರೆಂದೂ ಹೆಸರಿದೆ. ಈ ಮುನಿ ಆರ್ಯಿಕೆಯರು ಗೃಹತ್ಯಾಗಿಗಳು. ಶ್ರಾವಕ ಶ್ರಾವಕಿಯರು ಗೃಹಜೀವನದವರು. ಸಂಘದ ಇವೆರಡೂ ವಿಭಾಗಗಳು ಒಂದಕ್ಕೊಂದು ಪರಸ್ಪರ ಪೋಷಕವಾಗಿವೆ.

ಉಚ್ಚ ಆಧ್ಯಾತ್ಮಿಕ ಮೆಟ್ಟಿಲನ್ನೇರಿದ ಮುನಿಗಳು ನಿರ್ಗ್ರಂಥರಾಗಿರುವರು. ಇವರಿಗೆ ದಿಗಂಬರ ಸಾಧುಗಳೆಂದೂ ಹೇಳುವರು. ಈ ದಿಗಂಬರತ್ವವನ್ನು ಆಚರಿಸಲಿಕ್ಕೆ ಸಾಧ್ಯವೆನಿಸದ ಕೆಲವು ಜನ ಸಾಧುಗಳು ಕಾಲಕ್ರಮದಲ್ಲಿ ಬಿಳಿಯ ಬಟ್ಟೆಗಳನ್ನು ಧರಿಸಿದವರಾಗಿರುತ್ತಿದ್ದರು. ಇಂಥವರಿಗೆ ಶ್ವೇತಾಂಬರ ಸಾಧುಗಳೆನ್ನುತ್ತಿದ್ದರು. ಆರಂಭದಲ್ಲಿ ಮುನಿಗಳಲ್ಲಿ ಮಾತ್ರ ಈ ದಿಗಂಬರ ಶ್ವೇತಾಂಬರ ಎಂದು ಎರಡು ವರ್ಗಗಳಿದ್ದವು. ಬರಬರುತ್ತ ಕ್ರಿ.ಪೂ. ೩೦೦ರ ಸುಮಾರಿಗೆ ಜೈನ ಸಂಘದಲ್ಲಿ ಸ್ಪಷ್ಟ ಎರಡು ವಿಭಾಗಗಳು ಕಂಡುಬರಹತ್ತಿದವು. ಶ್ರಾವಕರಲ್ಲಿ ದಿಗಂಬರತ್ವವನ್ನು ಮನ್ನಿಸುವವರು. ಶ್ವೇತಾಂಬರತ್ವವನ್ನು ಸ್ವೀಕರಿಸುವವರು ಎಂದು ಎರಡು ಪಂಗಡಗಳು ಆದುವು. ಈ ಎರಡು ಪಂಗಡಗಳು ಜೈನ ಸಂಘದಲ್ಲಿ ಇಂದಿಗೂ ಅಸ್ತಿತ್ವದಲ್ಲಿವೆ.'

ಕನ್ನಡ ವಿಶ್ವಕೋಶ, ಸಂ. ೮, ಪು. ೪೯೯–೫೦

ವಿ. ಎನ್. ಶೇಷಗಿರಿರಾವ್

ಬುದ್ಧ ಮತ್ತು ಹ್ಯೂಮ್

೧

ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಡೇವಿಡ್ ಹ್ಯೂಮ್ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾನೆ. ಆತ ಅಸಾಧಾರಣ ಪ್ರತಿಭಾಶಾಲಿ. ಯಾವುದಕ್ಕೂ ಹೆದರದೆ 'ಅನುಭವವಾದ'ವನ್ನು (Empiricism) ಹಿಡಿದು, ಅದು ಎಲ್ಲಿಗೆ ಕರೆದುಕೊಂಡು ಹೋಗುವುದೋ ಅಲ್ಲಿಯವರೆಗೂ ಹೋಗಿ, ಸ್ವಲ್ಪವೂ ತನ್ನ ವಾದವನ್ನು ಮತಧರ್ಮಗಳೊಡನೆ ರಾಜಿಮಾಡಿಕೊಳ್ಳದೆ ಅದನ್ನು ನಿಷ್ಠೆಯಿಂದ ಅನುಸರಿಸಿದ ಮಹಾ ಮೇಧಾವಿ ಈತ.

೧೮ನೆಯ ಶತಮಾನದ ಉತ್ತರ ಭಾಗದ ವರೆಗೆ ಜೀವಿಸಿದ್ದ ಸ್ಕಾಟಿಷ್ (ಬ್ರಿಟಿಷ್) ತತ್ವಜ್ಞಾನಿಯಾದ ಹ್ಯೂಮ್ ವಿಧೇಯ ಪುತ್ರನಾಗಿರಲಿಲ್ಲ ಎಂಬ ದೂರನ್ನು ನಾವು ಆತನ ಆತ್ಮಚರಿತ್ರೆಯನ್ನು ಅವಲೋಕಿಸಿದಾಗ ತಿಳಿಯುತ್ತೇವೆ. ಆತನ ತಂದೆ, ತನ್ನ ಮಗ ದೊಡ್ಡ ವಕೀಲನಾಗುತ್ತಾನೆಂದು ಕನಸು ಕಾಣುತ್ತಿದ್ದ. ಆದರೆ ಹ್ಯೂಮನ ದೃಷ್ಟಿಯೇ ಬೇರೆಯಾಗಿತ್ತು; ವಕೀಲಿ ಕೆಲಸ ಕಂಡರೆ ಆತನಿಗೆ ಎಲ್ಲಿಲ್ಲದ ಸಿಟ್ಟು ಬಂದುಬಿಡುತ್ತಿತ್ತು; ಅದನ್ನು ಅವನು ತನ್ನ ಅಂತರಾಳದಿಂದ ದ್ವೇಷಿಸುತ್ತಿದ್ದ.[1] ಆದುದರಿಂದ ತಂದೆಯ ಕನಸು ನನಸಾಗಲಿಲ್ಲ. ಹ್ಯೂಮನಿಗೆ ಸಾಹಿತ್ಯ ಮತ್ತು ತತ್ವಶಾಸ್ತ್ರಗಳೆಂದರೆ ಪಂಚಪ್ರಾಣ. ದೊಡ್ಡ ಸಾಹಿತಿ ಆಗಬೇಕೆಂದು ದಿನವೆಲ್ಲ ಕಾರ್ಯತತ್ಪರನಾಗಿರುತ್ತಿದ್ದ. ಮೊದಲು 'ಟ್ರೀಟೈಸ್ ಆನ್ ಹ್ಯೂಮನ್ ನೇಚರ್' ಎಂಬ ಗ್ರಂಥವನ್ನು ಬರೆದ. (೧೭೩೯). ಆದರೆ ಅದನ್ನು ಯಾರೂ ಆಸ್ಥೆಯಿಂದ ಓದಿದಂತೆ ಕಾಣಲಿಲ್ಲ. ಆದುದರಿಂದ ಜನಮನವನ್ನಾಕರ್ಷಿಸಲು ಅರ್ಥಶಾಸ್ತ್ರದ ಬಗ್ಗೆ ಸಣ್ಣಪುಟ್ಟ ಲೇಖನಗಳನ್ನು ಬರೆದು ಇವುಗಳಾವುದರಿಂದಲೂ ಖ್ಯಾತಿಪಡೆಯದೆ ಖಿನ್ನನಾದ. ಕೊನೆಗೆ ಚರಿತ್ರೆಯನ್ನು ಆಳವಾಗಿ ಅಭ್ಯಸಿಸಿ ಅದರ ಬಗ್ಗೆ ಬರೆಯಲು ಪ್ರಾರಂಭಿಸಿದ ಮೇಲೆ ತಾನಾಗಿಯೇ ಯಶಸ್ಸು ಬಂತು. ಹ್ಯೂಮ್ ಇಂದಿಗೂ ದೊಡ್ಡ ಚರಿತ್ರಕಾರನೆಂದೇ ಪ್ರಖ್ಯಾತನಾಗಿದ್ದಾನೆ.

ಚರಿತ್ರೆಯಿಂದ ಪ್ರಸಿದ್ಧಿಗೆ ಬಂದಮೇಲೆ ಹ್ಯೂಮ್ ಮತ್ತೆ ತತ್ತ್ವಶಾಸ್ತ್ರದ ಕಡೆಗೆ ಮನಸ್ಸು ತಿರುಗಿಸಿದ. ಮತಗಳನ್ನು ಖಂಡತುಂಡ ಮಾಡಿದವರಲ್ಲಿ ಹ್ಯೂಮ್ ಗಟ್ಟಿಗ. ಇವನು ದೇವರ ಅಸ್ತಿತ್ವವನ್ನಾಗಲಿ, ಆತ್ಮನ ಅಸ್ತಿತ್ವವನ್ನಾಗಲಿ 'ಅನುಭವ'ದಿಂದ ಸಾಧಿಸಿ ತೋರಿಸಲಾಗುವುದಿಲ್ಲ ಎಂದು ಬೋಧಿಸಿದ. ಕ್ರೈಸ್ತಮತ ಇವನ ಮತವಿರೋಧ ಬೋಧನೆಗಳಿಂದ ತತ್ತರಿಸಿತು.

ಗೌತಮ ಬುದ್ಧನಿಂದ ಪ್ರಚಾರಕ್ಕೆ ಬಂದ ಬೌದ್ಧಸಿದ್ಧಾಂತಕ್ಕೂ ಹ್ಯೂಮನ ಸಿದ್ಧಾಂತಕ್ಕೂ ಕೆಲವು ಸಾದೃಶ್ಯಗಳಿವೆ. ಅವನ್ನು ಇಲ್ಲಿ ಸೂಕ್ಷ್ಮವಾಗಿ ಚರ್ಚಿಸಿದೆ.

---

[1] *A Treatise on Human nature*, Vol. I, Introduction by A. D Lindsay

೨

ಹ್ಯೂಮನಂತೆ ಬುದ್ಧನೂ ಸ್ವತಂತ್ರ ಚಿಂತನಶೀಲ. ಯಾವ ಅಭಿಪ್ರಾಯವನ್ನೇ ಆಗಲಿ ವಿಚಾರದ ಮೂಸೆಯಲ್ಲಿ ಹಾಕಿ, ಬುದ್ಧಿಯೆಂಬ ಬೆಂಕಿಯಿಂದ ಕಾಯಿಸಿ, ಕತ್ತರಿಸಿ ಒರೆಹಚ್ಚಿ ಪರೀಕ್ಷಿಸಿದಾಗಲೇ ಅದನ್ನು ಒಪ್ಪಬೇಕು. ಅದನ್ನು ಬಿಟ್ಟು ಸಂಪ್ರದಾಯವೆಂದ ತತ್‌ಕ್ಷಣ ಶ್ರದ್ಧೆಯಿಂದ ನಂಬಬಾರದು; ಪ್ರಾಚೀನತೆಯೇ ಪರಮ ಪ್ರಮಾಣ ಎಂದು, ವಿಚಾರ ಮಾಡದೆ ಶರಣು ಹೋಗಬಾರದು. ತನ್ನನ್ನೇ ಆಗಲಿ, ಬರಿಯ ಗೌರವದಿಂದ ನಂಬಬೇಡಿರೆಂದು ಆತ ತನ್ನ ಶಿಷ್ಯರಿಗೆ ತಿಳಿಯಹೇಳುತ್ತಿದ್ದ. ಅಂದರೆ ಬುದ್ಧ ನಿರ್ವಿಚಾರ ವಾದಕ್ಕೆ (Dogmatism) ಎಡೆಕೊಟ್ಟಿರಲಿಲ್ಲ. ವಿಮರ್ಶೆ, ವಿಚಾರಪರತೆ, ಮನೋವೈಶಾಲ್ಯ, ಸಮತಾಭಾವ ಈ ಗುಣಗಳು ಬುದ್ಧನಲ್ಲಿದ್ದುವು.

ಬುದ್ಧ ಸಂಪ್ರದಾಯ ವಿಚಾರಗಳನ್ನು ತರಾಟೆಗೆ ತೆಗೆದುಕೊಂಡು ಸ್ವತಂತ್ರವಾಗಿ ಯೋಚಿಸಿ, ವಿಮರ್ಶಿಸಿ, ತತ್ತ್ವಗಳನ್ನು ಬೋಧಿಸಿದನೇ ಹೊರತು ಯಾವ ಗ್ರಂಥಗಳನ್ನೂ ಬರೆದಂತೆ ಕಾಣುವುದಿಲ್ಲ. ಮಹಾಸ್ಥವಿರರೆಂಬ ವಿದ್ವಾಂಸರು[2] ಸಂಗ್ರಹಿಸಿದ ಅವನ ಬೋಧನೆಗಳೆಲ್ಲವೂ ಸಂವಾದರೂಪದಲ್ಲಿವೆ. ಅಂದಿನ ಜನಸಾಮಾನ್ಯರ ಭಾಷೆಗಳಾದ ಮಾಗಧಿ, ಪಾಳಿ, ಹಾಗೂ ಪ್ರಾಕೃತ ಭಾಷೆಗಳಲ್ಲಿ ಅವನು ತನ್ನ ತತ್ತ್ವಗಳನ್ನು ಬೋಧಿಸಿದ. ಹೀಗೆ ಸಂಗ್ರಹಿಸಿದ ಅವನ ಉಪದೇಶಗಳನ್ನು ವಿದ್ವಾಂಸರು ಮುಖ್ಯತಃ ಮೂರು ಭಾಗ ಮಾಡುತ್ತಾರೆ. ಇವನ್ನು 'ತ್ರಿಪಿಟಕಗಳು' ಎಂದು ಕರೆಯುತ್ತಾರೆ. ಅವು, ಸೂತ್ರ ಪಿಟಕ, ವಿನಯಪಿಟಕ, ಮತ್ತು ಅಭಿದಮ್ಮಪಿಟಕ. 'ಪಿಟಕ' ವೆಂದರೆ ಪೆಟ್ಟಿಗೆ ಎಂದು ಅರ್ಥ. ಗ್ರಂಥಗಳನ್ನು ವಿಷಯಾನುಸಾರ ಮೂರು ಪೆಟ್ಟಿಗೆಗಳಲ್ಲಿ ಹಾಕಿದುದರಿಂದ 'ತ್ರಿಪಿಟಕ'ಗಳು ಎಂದು ಹೆಸರು ಬಂದಿದೆ. ಆತನ ಬೋಧನೆಯ ತಾತ್ತ್ವಿಕ ಅಂಶಗಳು ಅಭಿದಮ್ಮ ಹಾಗೂ ಸೂತ್ರಪಿಟಕಗಳಲ್ಲಿ ಕ್ರೋಡೀಕೃತವಾಗಿವೆ. ಹಾಗೆಯೇ ವಿನಯಪಿಟಕದಲ್ಲಿ ಬೌದ್ಧ ಭಿಕ್ಷುಗಳ ಚಾರಿತ್ರ್ಯ, ನಿಯಮ ಹಾಗೂ ರೀತಿ ನಡವಳಿಕೆಗಳಿವೆ. ಈ ಪಿಟಕಗಳು ನಿಶ್ಚಿತವಾಗಿ ಏನನ್ನು ಬೋಧಿಸುತ್ತವೆ ಎಂದು ತಿಳಿಯುವಲ್ಲಿ ಅನೇಕ ಎಡರುತೊಡರುಗಳಿವೆ. ಈ ಗ್ರಂಥಗಳಲ್ಲಿ ತತ್ತ್ವಗಳನ್ನು ಕೆಲವು ವೇಳೆ ರೂಪಕ (metaphor) ಮತ್ತು ಅನ್ಯೋಕ್ತಿ (allegory) ಗಳಲ್ಲಿ ಅಡಗಿಸಿರುವುದರಿಂದ, ರಹಸ್ಯವಿದ್ದು ನೇರ ಬುದ್ಧಿಗೆ ಅಗೋಚರ ಗಳಾದುದರಿಂದ ಬುದ್ಧ ಇದನ್ನೇ ಬೋಧಿಸಿದ ಎಂದು ಬೊಟ್ಟು ಮಾಡಿ ತೋರಿಸುವುದು ಕಷ್ಟಸಾಧ್ಯ ವಾಗುತ್ತದೆ.[3]

ಬುದ್ಧ ಪ್ರತ್ಯಕ್ಷಗೋಚರವಲ್ಲದುದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ತನ್ನ ಮುಂದೆ ಈಗ ಎಂಥ ಸಮಸ್ಯೆಗಳಿವೆ, ಅವನ್ನು ಪರಿಹರಿಸುವುದು ಹೇಗೆ ಎಂಬುದನ್ನು ಕಂಡುಹಿಡಿಯಲು ಅವನು ಆಸಕ್ತ ನಾಗಿದ್ದನೇ ಹೊರತು, ದೇವರು, ಆತ್ಮ ಮುಂತಾದ, ಇಂದ್ರಿಯಗಳಿಗೆ ಅಗೋಚರವಾದ, ವಿಚಾರಗಳನ್ನು ಅಷ್ಟಾಗಿ ಗಮನಿಸಲಿಲ್ಲ. ಆನಂದ ಎಂಬ ಶಿಷ್ಯ 'ದೇವರಿದ್ದಾನೆಯೆ?' ಎಂದು ಬುದ್ಧನನ್ನು ಪ್ರಶ್ನಿಸಿದಾಗ, ಆತ ಮೌನ ವಹಿಸಿದನೆಂದು ನಾವು ಬೌದ್ಧಗ್ರಂಥಗಳಿಂದ ತಿಳಿಯುತ್ತೇವೆ. ಹಾಗಾದರೆ ದೇವರ ಅಸ್ತಿತ್ವದ ಬಗ್ಗೆ ಬುದ್ಧನ ಅಭಿಪ್ರಾಯ ಏನು ಎಂದು ನಾವು ನಿಖರವಾಗಿ ನಿಷ್ಕರ್ಷಿಸಲು ಕಷ್ಟವಾಗುತ್ತದೆ.[4] ಅವನಿಗೆ ಅತಿಭೌತಿಕ ಶಕ್ತಿಯಲ್ಲಿ ನಂಬಿಕೆ ಇತ್ತೆ ಎಂಬ ವಿಷಯದ ಬಗ್ಗೆ ವಿದ್ವಾಂಸರಲ್ಲಿ ಒಮ್ಮತಾಭಿಪ್ರಾಯ ವಿಲ್ಲ. ಕೆಲವರು ಅತಿಭೌತಿಕ ಶಕ್ತಿಯಲ್ಲಿನ ನಂಬಿಕೆ ಬೌದ್ಧಧರ್ಮದ ಕೈಬಿಡಲಾಗದ ಸಂಗತಿ ಅಥವಾ ಅಂಶವೆಂದು ತಿಳಿಯುವರು; ಆದರೆ ಅರಿವಿನ ಜನತೆಯ ಮಾನಸಿಕ ಬೆಳವಣಿಗೆ ಆತನ ಈ ನಂಬಿಕೆ

---

[2] ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ, 'ಹಿಂದೂದರ್ಶನ ಸಾರ', ಮೈಸೂರು ವಿಶ್ವವಿದ್ಯಾನಿಲಯ. (೧೯೪೦) ಪು. ೨೩

[3] M. Hiriyanna, *Outlines of Indian Philosophy*. p. 135,

[4] ಬುದ್ಧನ ಈ ಮೌನ, ಬ್ರಹ್ಮಸೂತ್ರ ಶಾಂಕರ ಭಾಷ್ಯದಲ್ಲಿ ಬರುವ ವಾಷ್‌ಕಲಿನ್ ಮತ್ತು ಬಾಹ್ವ ಇವರ ನಡುವಿನ ಚರ್ಚೆಯನ್ನು ಹೋಲುತ್ತದೆ.
ವೇದಾಂತಸೂತ್ರಗಳು, ಭಾಗ೨, ಅನು: ಜಿ. ತೀಬೋ, ಪುಟ ೧೫೭

ಯನ್ನು ಗುರುತಿಸುವುದರಲ್ಲಿ ನಿಷ್ಫಲವಾಯಿತೆಂದೂ ಬುದ್ಧಿ ಮತ್ತು ಪ್ರತ್ಯಕ್ಷಗಳಿಗೆ ಅಗೋಚರವಾದ ಯಾವುದೇ ತತ್ತ್ವಗಳನ್ನು ಅವನು ಮನ್ನಿಸಲಿಲ್ಲವೆಂದೂ ನಂಬುವರು.

ಈ ಅಭಿಪ್ರಾಯಗಳು ಏನೇ ಇರಲಿ, ಹ್ಯೂಮ್ ಪ್ರತ್ಯಕ್ಷಗೋಚರವಲ್ಲದುದರ ಬಗ್ಗೆ ಕಾಲಹರಣ ಮಾಡಲಿಲ್ಲ. ಅಷ್ಟೇ ಅಲ್ಲ, ಅವು ಇಲ್ಲವೆಂದೇ ಸಾಧಿಸಲು ಹೊರಟ. ಬಿಷಪ್ ಬಾರ್ಕ್ಲಿ ಹೇಳಿದಂತೆ, ಇಂದ್ರಿಯಗೋಚರವಾದವು ಮಾತ್ರ ನಿಜವೆಂದು ಹ್ಯೂಮ್ ನಂಬಿದ್ದ. ಹಾಗಲ್ಲದೆ ಬೇರೆ ಯಾವುದನ್ನೂ ತಿಳಿಯಲಾಗುವುದಿಲ್ಲ, ಎಂದು ಸಾಧಿಸಿದ. ಇವನ ವಾದದ ಪ್ರಕಾರ ದೇವರು, ಆತ್ಮ—ಇವುಗಳಿಗೆ ಅಸ್ತಿತ್ವವಿಲ್ಲ.

೩

ನಿತ್ಯ, ಅಚಲ ಹಾಗೂ ಅಪರಿಣಾಮಿಕ ಕೂಟಸ್ಥನಾದ ಆತ್ಮನ ಇರುವಿಕೆಯನ್ನು ಬುದ್ಧ ಅಲ್ಲಗಳೆಯುತ್ತಾನೆ. ಅಂದರೆ ಸಂವೇದನೆಗಳು, ಭಾವನೆಗಳು (Ideas) ಮುಂತಾದವನ್ನು ತನ್ನಲ್ಲಿ ಹಿಡಿದಿಡುವ ಒಂದು ವಸ್ತು ಅಥವಾ ದ್ರವ್ಯ ಇಲ್ಲ. ಸುಖ, ದುಃಖ, ರಾಗದ್ವೇಷ, ಜ್ಞಾನ, ಸಂವೇದನೆ ಮುಂತಾದವು ಜೀವಾತ್ಮನನ್ನು ಆಧಾರವಾಗಿ ಹೊಂದಿರುತ್ತವೆ ಎಂದು ಹಿಂದೂ ತತ್ತ್ವಶಾಸ್ತ್ರ ಸಾರುತ್ತದೆ.[5] ಅಂದರೆ ಇಂದ್ರಿಯವ್ಯಾಪಾರಗಳಾದ ನೋಡುವುದು, ತಿಳಿಯುವುದು, ಮೂಸುವುದು ಇತ್ಯಾದಿಗಳು ತಮ್ಮಷ್ಟಕ್ಕೆ ತಾವೇ ಇರಲಾರವು; ಹಾಗೂ ತಮ್ಮ ಕೆಲಸಗಳನ್ನು 'ಆತ್ಮ' ಎಂಬ ತತ್ತ್ವವಿಲ್ಲದಿದ್ದರೆ ಮಾಡಲಾರವು. ಅವೆಲ್ಲವೂ 'ಆತ್ಮ' ಎಂಬ ಅಧಿಷ್ಠಾನದಲ್ಲಿ ಹಿಡಿದಿಡಲ್ಪಟ್ಟಿವೆ. ಆತ್ಮನನ್ನು ಬಿಟ್ಟು ಅವು ತಾವೇತಾವಾಗಿ ಇರಲಾರವು. ಸ್ಪಷ್ಟಮಾತುಗಳಲ್ಲಿ ಹೇಳಬೇಕೆಂದರೆ, ಮೇಲೆ ಹೇಳಿದ ಇಂದ್ರಿಯ ವ್ಯಾಪಾರಗಳನ್ನು ಹಿಡಿದಿಡುವ ಒಂದು ವಸ್ತು ಅಥವಾ ತತ್ತ್ವ ಇರಲೇಬೇಕು. ಆ ತತ್ತ್ವವೇ ಆತ್ಮ. ಆತ್ಮವೇ ಇಂದ್ರಿಯಗಳು ಸಕ್ರಿಯವಾಗುವಂತೆ ಮಾಡುವುದು; ಅದೇ ಅನುಭೋಗಿಸುವುದು, ದುಃಖಿಸುವುದು, ಕರ್ತೃ, ಭೋಕ್ತೃ.

ಬುದ್ಧ ಮತ್ತು ಹ್ಯೂಮ್ ಈ ವಾದವನ್ನು ಒಪ್ಪುವುದಿಲ್ಲ. ಬುದ್ಧನ ಪ್ರಕಾರ ಆತ್ಮ (ಭಾರತೀಯ ಷಡ್ದರ್ಶನಗಳು ಹೇಳುವ ಅರ್ಥದಲ್ಲಿ) ಎಂಬುದಿಲ್ಲ. ದೇಹ, ಮನಸ್ಸು, ಸಂವೇದನೆಗಳು, ಭಾವನೆಗಳು ಮುಂತಾದವುಗಳ ಸಂಘಾತ ಅಥವಾ ಒಕ್ಕೂಟವೇ ಆತ್ಮ ಎಂದು ಕರೆಯಲ್ಪಡುವುದು. ಅಷ್ಟೇ ಹೊರತು ದೇಹ, ಮನಸ್ಸು, ಸಂವೇದನೆಗಳು—ಇವನ್ನು ಬಿಟ್ಟು, ಇವಕ್ಕೆ ಆಧಾರಭೂತವಾದ ಆತ್ಮ ಅಥವಾ ಇನ್ನಾವುದೂ ಇಲ್ಲ. ಅವುಗಳ ಸಂಘಾತವೇ ಆತ್ಮವೆಂದು ನಮಗೆ ಅರಿವಾಗುತ್ತದೆ. ಬುದ್ಧನ ಈ ವಾದವನ್ನು 'ಅನಾತ್ಮವಾದ' ಎಂದು ಕರೆಯುವರು.

ಈ ಅನಾತ್ಮವಾದವನ್ನು ಮಂಡಿಸಲು ಬೌದ್ಧ ವಿದ್ವಾಂಸರು ಒಂದು ಉಪಕಥೆಯನ್ನು ಹೇಳುವರು. "ಮಿಲಿಂದ ರಾಜನ ಸಮಸ್ಯೆಗಳು"[6] ಎಂಬ ಉಪಕಥೆಯಲ್ಲಿ ಪ್ರಸಿದ್ಧ ಬೌದ್ಧವಿದ್ವಾಂಸನಾದ ನಾಗಸೇನ ಮಿಲಿಂದ ರಾಜನಿಗೆ ನೈರಾತ್ಮ್ಯವಾದವನ್ನು ಒಮ್ಮೆ ಬೋಧಿಸುತ್ತಾನೆ. ರಾಜ ಈ ವಾದವನ್ನು ಅರ್ಥ ಮಾಡಿಕೊಳ್ಳಲು ಅಸಮರ್ಥನಾಗಿ ಕಂಡುಬಂದುದರಿಂದ ರಾಜನಿಗೆ ಈ ಪ್ರಶ್ನೆಗಳನ್ನು ಕೇಳುತ್ತಾನೆ:

ರಾಜ, ನಿನಗೆ ನೈರಾತ್ಮ್ಯವಾದದ ಅರ್ಥ ಆಯಿತೆ?
ಇಲ್ಲ, ಸ್ವಾಮಿ.
ನೀನು ಯಾವ ವಾಹನದ ಮೂಲಕ ಬಂದೆ?
ರಥದಲ್ಲಿ, ಸ್ವಾಮಿ.

ಆಗ ಅವನು ರಥದ ಒಂದು ಕಂಬವನ್ನು ತೋರಿಸಿ, ಅದನ್ನು ಮಾತ್ರ 'ರಥ' ಎಂದು ಹೇಳಬಹುದೇ, ಎಂದು ಕೇಳುತ್ತಾನೆ. ರಾಜ ಸಹಜವಾಗಿ 'ಇಲ್ಲ' ಎನ್ನುತ್ತಾನೆ. ನಾಗಸೇನ ಇನ್ನೂ ಮುಂದು

---

5 S. K. Saksena, *Nature of Consciousness in Hindu Philosophy*, Benares (1944), p.e.

6 ಪ್ರೊ. ಎಂ. ಹಿರಿಯಣ್ಣ, *Outlines of Indian Philosophy*, ಪು. 140

ವರಿದು. ಚಕ್ರಗಳನ್ನಷ್ಟೆ ಅಥವಾ ಕುದುರೆಗಳನ್ನಷ್ಟೆ ರಥ ಎಂದು ಹೇಳಲಾಗುವುದಿಲ್ಲ. ಅನೇಕ ಭಾಗಗಳು ಒಟ್ಟಿಗೆ ಸೇರಿರುವುದರಿಂದ ಅದು ರಥ ಎಂಬುದಾಗಿ ನಮಗೆ ಕಾಣುತ್ತದೆ. ಈ ಅನೇಕ ಭಾಗಗಳಲ್ಲಿ ಕೆಲವನ್ನು ತೆಗೆದು ಹಾಕಿದರೂ ಅವನ್ನು ರಥ ಎಂದು ಕರೆಯಲಾಗುವುದಿಲ್ಲ. ಈ ಅನೇಕ ಭಾಗಗಳ ಸಂಘಾತವೇ ರಥ. ಹಾಗೆಯೇ ದೇಹ, ಮನಸ್ಸು, ಭಾವನೆ ಮುಂತಾದವುಗಳ ಸಂಘಾತವೇ ಆತ್ಮ. ಈ ಅನೇಕ ಅಂಶಗಳನ್ನು ಬಿಟ್ಟು ಆತ್ಮ ಎಂಬ ಆಧಾರಭೂತವಾದುದಿಲ್ಲ ಎಂದು ರಾಜನಿಗೆ ಸ್ಪಷ್ಟ ಮಾತುಗಳಲ್ಲಿ ವಿವರಿಸುತ್ತಾನೆ.

ಹ್ಯೂಮ್ ಮೇಲೆ ಹೇಳಿದ ಬುದ್ಧನ ಅಭಿಪ್ರಾಯವನ್ನು ಅಂಗೀಕರಿಸಿ ಅನುಮೋದಿಸುತ್ತಾನೆ. ಆತ ಆತ್ಮವನ್ನು 'ಸಂವೇದನೆಗಳ ಕಂತೆ' (Bundle of sensations) ಎಂದು ಕರೆಯುತ್ತಾನೆ. ಅವನ ಮಾತುಗಳಲ್ಲೇ ಹೇಳಬೇಕೆಂದರೆ: "………I may venture to affirm of the rest of mankind, that they are nothing but a bundle or collection of different perceptions, which succeed each other with an inconceivable rapidity and are in a perpetual flux and movement"[7] ಇಬ್ಬರೂ ಈ ವಾದವನ್ನು ಭೌತಿಕವಸ್ತು ಹಾಗೂ ಮನಸ್ಸಿಗೆ ಹೊಂದಿಸುತ್ತಾರೆ. ಸಂವೇದನೆಗಳು (ರಸ, ಗಂಧ, ಗುಣ, ಸ್ಪರ್ಶ, ಶಬ್ದ, ಬಣ್ಣ) ಮಾತ್ರ ಇವೆ. ಇವನ್ನು ಹಿಡಿದಿಡುವ ಯಾವ ವಸ್ತುವೂ ಇಲ್ಲ ಎಂದು ಇವರು ಪ್ರಬಲವಾಗಿ ವಾದಿಸುತ್ತಾರೆ.

ಮೇಲೆ ಚರ್ಚಿಸಿರುವ ಅಂಶ ವಿವಾದಾಸ್ಪದವಾದ, ದ್ರವ್ಯ-ಗುಣಗಳ ಸಂಬಂಧದ, ಸಮಸ್ಯೆಯಾಗಿದೆ. ನ್ಯಾಯದರ್ಶನದಲ್ಲಿ ಜ್ಞಾನವು ಆತ್ಮದ ವಿಶೇಷ ಗುಣವೆಂದು ಹೇಳಲಾಗಿದೆ. ಆತ್ಮ ಒಂದು ದ್ರವ್ಯ. ಅದು ಜ್ಞಾನವೆಂಬ ಗುಣವನ್ನು ಹಿಡಿದಿಡುವ ಪೆಟ್ಟಿಗೆಯಂತೆ. ಜಾನ್ ಲಾಕ್ ಪ್ರತಿಪಾದಿಸಿದ ಮನಸ್ಸಿನಂತೆ. ಮನಸ್ಸು ತನ್ನಷ್ಟಕ್ಕೆ ತಾನೇ ಪ್ರಜ್ಞೆಯಿಂದ ಕೂಡಿಲ್ಲ; ಅದು ಚೈತನ್ಯವನ್ನು ಹಿಡಿದಿಟ್ಟಿದೆ. ಬುದ್ಧ ಮತ್ತು ಹ್ಯೂಮರಲ್ಲಿ ಈ ದ್ರವ್ಯ-ಗುಣಗಳ ನಡುವಿನ ಸಮಸ್ಯೆಯೇ ಏಳುವುದಿಲ್ಲ; ಏಕೆಂದರೆ ಅವರಿಬ್ಬರ ಪ್ರಕಾರ ದ್ರವ್ಯವೆಂಬುದೇ ಇಲ್ಲ. ಇರುವುದೆಲ್ಲ ಬರೀ ಭಾವನೆಗಳು, ಸಂವೇದನೆಗಳು ಮಾತ್ರ; ಅವೂ ಕೂಡ ಕ್ಷಣಿಕವಾದವು, ನಶ್ವರವಾದವು, ಸದಾ ಬದಲಾಯಿಸುವ ಗುಣವನ್ನು ಹೊಂದಿದವು ಎಂದು ಇಬ್ಬರೂ ಸಾರುತ್ತಾರೆ.

ಬುದ್ಧ ಇನ್ನೂ ಮುಂದುವರಿದು, ನಾವು ಆತ್ಮ ಎಂದು ಕರೆಯುವುದನ್ನು ಹೀಗೆ ವಿಶ್ಲೇಷಿಸುತ್ತಾನೆ: ಪಂಚವಿಧದ ಸಂವೇದನೆ ಅಥವಾ ಸ್ಕಂದಗಳ ಸಂಘಾತವೇ ಆತ್ಮ. ಈ ಪಂಚ ಸ್ಕಂದಗಳು ಯಾವುವೆಂದರೆ ೧ ರೂಪ (ಭೌತಿಕ ಶರೀರ), ೨ ವಿಜ್ಞಾನ (ಸ್ವಪ್ರಜ್ಞೆ), ೩ ವೇದನ (ಭಾವನೆ, feeling) ,೪ ಸಂಜ್ಞಾ (ಪ್ರತ್ಯಕ್ಷ) ಮತ್ತು ೫ ಸಂಸ್ಕಾರ (ಮಾನಸಿಕ).[8] ಈ ಸ್ಕಂದಗಳು ಒಟ್ಟಿಗೆ ಸೇರಿದಾಗ ನಮಗೆ 'ಆತ್ಮ' ಎಂಬ ಕಲ್ಪನೆ ಬರುತ್ತದೆಯೇ ಹೊರತು, ಶಾಶ್ವತವಾದ, ನಿತ್ಯನಿರಂತರವಾದ ಆತ್ಮ ಇಲ್ಲ ಎಂದು ಬುದ್ಧ ಒತ್ತಿ ಹೇಳುತ್ತಾನೆ. ಮೇಲಿನ ಚರ್ಚೆಯಿಂದ ಬುದ್ಧ ಮತ್ತು ಹ್ಯೂಮ್ ಇಬ್ಬರೂ ಬಹುತೇಕ ತಾತ್ತ್ವಿಕ ಅಂಶಗಳಲ್ಲಿ ತುಂಬ ಹತ್ತಿರವಾಗಿದ್ದಾರೆಂದು ಅರ್ಥವಾಗುತ್ತದೆ. ಆದರೆ ಇವರಿಬ್ಬರ ನಡುವೆ ವೈದೃಶ್ಯ ಇಲ್ಲದಿಲ್ಲ: ಕಾರ್ಯಕಾರಣವಾದದ ಬಗ್ಗೆ ಇಬ್ಬರಲ್ಲೂ ಭಿನ್ನಾಭಿಪ್ರಾಯಗಳಿವೆ. ಸಾಮಾನ್ಯ ತಿಳುವಳಿಕೆ ಒಂದು ಕಾರ್ಯಕ್ಕೆ ಒಂದು ಕಾರಣವಿರಲೇಬೇಕೆಂದು ನಂಬುತ್ತದೆ. ಕಾರ್ಯ ಮತ್ತು ಕಾರಣಗಳ ನಡುವೆ ಅವಶ್ಯ ಹಾಗೂ ಅನಿವಾರ್ಯ ಸಂಬಂಧ ಇದೆ ಎಂಬುದನ್ನು ವಿಜ್ಞಾನವೂ ಪುಷ್ಟೀಕರಿಸುತ್ತದೆ.

---

[7] ಹ್ಯೂಮ್, *A Teatise on Human Nature*, Vol. I, London, ಪು. ೨೩೯

[8] ಇದು 'ಆತ್ಮ' ಎಂದು ಷಟ್‌ದರ್ಶನಗಳಲ್ಲಿ ಕರೆಯಲ್ಪಡುವುದರ ಮಾನಸಿಕ ವಿಶ್ಲೇಷಣೆ (Psychological analysis). ನೋಡಿ: ಡಾ. ದಾಸಗುಪ್ತ, *A history of Indian Philosophy*, Vol. I, Cambridge (1963)ಪು. 93–94

ಕಾರ್ಯಕಾರಣಗಳ ನಡುವೆ ಅವಶ್ಯ ಸಂಬಂಧ ಇದೆ ಎಂಬುದನ್ನು ಬುದ್ಧ ಒಪ್ಪಿದರೂ. 'ಕಾರಣ'[9] ಎಂಬುದನ್ನು ಬೇರೆ ರೀತಿಯಲ್ಲಿ ಅರ್ಥೈಸುತ್ತಾನೆ; ಅವನು ತನ್ನದೇ ಆದ ವಾದವನ್ನು ಮಂಡಿಸುತ್ತಾನೆ. ಆ ವಾದವೇ ಗೌತಮನನ್ನು ಬುದ್ಧನನ್ನಾಗಿ ಮಾಡಿದ 'ಪ್ರತೀತ್ಯಸಮುತ್ಪಾದ'. ಈ ವಾದದ ಪ್ರಕಾರ ಕಾರ್ಯ ಮತ್ತು ಕಾರಣಗಳ ನಡುವೆ ಸಂಬಂಧ ಅವಶ್ಯವಿದ್ದರೂ ಆ ಸಂಬಂಧ ಅನೇಕ ಷರತ್ತು ಅಥವಾ ನಿಬಂಧನೆಗಳ ಮೇಲೆ ನಿಂತಿರುತ್ತದೆ. ಈ ನಿಬಂಧನೆಗಳನ್ನು ನಾವು ನಿಯಂತ್ರಣದಲ್ಲಿ ಹಿಡಿದಿಟ್ಟುಕೊಂಡರೆ ಕಾರ್ಯವನ್ನು ನಿಯಂತ್ರಿಸಬಹುದು; ಕಾರಣವನ್ನು ಹೊರತೆಗೆಯುವುದರಿಂದ ಕಾರ್ಯವನ್ನೂ ತೆಗೆದುಬಿಡಬಹುದು. ಈ ವಾದವನ್ನು ವಿಶದಪಡಿಸಲು ಸಾಮಾನ್ಯವಾಗಿ ನೀಡುವ ಉದಾಹರಣೆ ದೀಪ. ದೀಪದ ಉರಿಯುವಿಕೆ ಬತ್ತಿ, ಎಣ್ಣೆ, ಗಾಳಿ, ಬೆಂಕಿ, ಮುಂತಾದವುಗಳನ್ನು ಅವಲಂಬಿಸಿದೆ. ಇವುಗಳಲ್ಲಿ ಯಾವ ನಿಬಂಧನೆಯನ್ನು ಸಡಿಲಿಸಿದರೂ ದೀಪದ ಉರಿಯುವಿಕೆಗೆ ಧಕ್ಕೆ ಬರುತ್ತದೆ. ಈ ನಿಬಂಧನೆಗಳನ್ನು ನಾವು ನಿಯಂತ್ರಣದಲ್ಲಿ ಇಟ್ಟುಕೊಂಡರೆ ಅದರ ಉರಿಯುವಿಕೆಯೂ ನಮ್ಮ ಅಧೀನದಲ್ಲಿರುತ್ತದೆ. ಹೀಗೆ ಇಲ್ಲಿ ನಿಬಂಧನೆಗಳನ್ನು ಕಾರಣ (cause) ಎಂಬ ಅರ್ಥದಲ್ಲಿ ಬಳಸಲಾಗಿದೆ. ಆದರೆ ಮಾತ್ರ ಆತ್ಯಂತಿಕ ಕಾರಣ (ultimate or final cause) ಎಂಬುದಿಲ್ಲ ಎಂಬುದನ್ನು ಸ್ಪಷ್ಟಪಡಿಸಲು ಬುದ್ಧ ಹಿಂದುಮುಂದೆ ನೋಡುವುದಿಲ್ಲ. ಆಸೆ ದುಃಖಕ್ಕೆ ಕಾರಣ. ಆಸೆಯನ್ನು ನಿಯಂತ್ರಿಸಿದರೆ ದುಃಖವನ್ನು ಬೇರು ಸಹಿತ ಕಿತ್ತೊಗೆಯಬಹುದು ಎಂಬುದು ಬುದ್ಧನ ಕಾರ್ಯ-ಕಾರಣ ವಾದದ ಮುಖ್ಯ ಅಂಶ.

ಹ್ಯೂಮ್ ಬುದ್ಧನ ಈ ವಾದವನ್ನು ಒಪ್ಪಿದಂತೆ ಕಂಡುಬರುವುದಿಲ್ಲ. ಅವನು ತನ್ನ ಅನುಭವ ವಾದವನ್ನು ಹಿಡಿದು ಹೊರಟು, ಕಾರ್ಯ–ಕಾರಣಗಳ ನಡುವಿನ ಸಂಬಂಧ ಅಗೋಚರವಾದುದರಿಂದ, ಅವುಗಳ ನಡುವೆ ಅವಶ್ಯ ಹಾಗೂ ಅನಿವಾರ್ಯ ಸಂಬಂಧ ಇಲ್ಲ ಎಂದು ಹೇಳುತ್ತಾನೆ. ಅನುಭವ ಪ್ರಪಂಚದಲ್ಲಿ ಒಂದು ಘಟನೆ ಸಂಭವಿಸುತ್ತದೆ; ತದನಂತರ ಮತ್ತೊಂದು ಘಟನೆ ಸಂಭವಿಸುತ್ತದೆ. ಹೀಗೆ ಒಂದಾದ ಮೇಲೆ ಒಂದು ಘಟನೆ ಸಂಭವಿಸುತ್ತದೆಯಷ್ಟೇ ಹೊರತು, ಮೊದಲು ಸಂಭವಿಸಿದ ಘಟನೆ ಹಾಗೂ ಅನಂತರ ಸಂಭವಿಸಿದ ಘಟನೆಗಳ ನಡುವೆ ಯಾವ ಸಂಬಂಧವೂ ಇಲ್ಲ; ಮೊದಲು ಸಂಭವಿಸಿದ ಘಟನೆ ಅನಂತರ ಸಂಭವಿಸಿದ ಘಟನೆಯ ಕಾರಣವಲ್ಲ. ಅವುಗಳ ನಡುವೆ ಸಂಬಂಧವಿದೆ ಎಂದು ತಿಳಿಯುವುದು ಮನಸ್ಸಿನ ಹವ್ಯಾಸ. ಅದು ಒಂದು ನಂಬಿಕೆ[10]ಯೆ (feeling) ಹೊರತು, ಅವುಗಳ ನಡುವೆ ಅನಿವಾರ್ಯ ಸಂಬಂಧ ಇವೆ ಎಂಬುದನ್ನು ಬುದ್ಧಿಯಿಂದಾಗಲಿ (Reason) ಅನುಭವದಿಂದಾಗಲಿ ಸಾಧಿಸಲಾಗುವುದಿಲ್ಲ ಎಂದು ವಾದಿಸುತ್ತಾನೆ. ಅಂದರೆ ಬುದ್ಧ್ಯರೂಢವಾದಿಗಳು (Rationalistes) ಹೇಳುವಂತೆ ಮೊದಲೇ ಕಾರ್ಯ, ಕಾರಣದಲ್ಲಿ ಅಡಗಿರುವುದಿಲ್ಲ;[11] ಅವುಗಳ ನಡುವೆ ಅನಿವಾರ್ಯ ಸಂಬಂಧವಿಲ್ಲ; ಕಾರ್ಯವೂ ಇಲ್ಲ, ಕಾರಣವೂ ಇಲ್ಲ; ಇರುವುದೆಲ್ಲ ಬರೀ ಸಂವೇದನೆಗಳು (impressions)—ಎಂಬುದು ಹ್ಯೂಮನ ಪ್ರಬಲವಾದ. ವಿಜ್ಞಾನದ ಸಾಧ್ಯತೆಗೆ ಹ್ಯೂಮ್ ಬಲವಾದ ಕೊಡಲಿ ಪೆಟ್ಟನ್ನು ಕೊಟ್ಟಿದ್ದಾನೆಂದು ಬೇರೆ ಹೇಳಬೇಕಾಗಿಲ್ಲ.

ಹ್ಯೂಮ್ ಕಾರ್ಯ–ಕಾರಣಗಳ ನಡುವಿನ ಸಂಬಂಧವನ್ನು ನಿರಾಕರಿಸಲು ಆತ ಅನುಸರಿಸಿದ ಮಾರ್ಗವೇ ಕಾರಣ. ಕಾರ್ಯ–ಕಾರಣಗಳ ನಡುವೆ ಅನಿವಾರ್ಯ ಸಂಬಂಧವಿಲ್ಲ ಎಂದು ಹೇಳಿದರೆ ವ್ಯವಹಾರಕ್ಕೆ ಅದರಿಂದ ಅಪಚಾರವೆಸಗಿದಂತೆ ಆಗಲಿಲ್ಲವೆ? ಎಂಬುದು ಒಂದು ಜ್ವಲಂತ ಪ್ರಶ್ನೆ. ಹ್ಯೂಮ್ ತಾತ್ತ್ವಿಕವಾಗಿ ಕಾರ್ಯ ಕಾರಣಗಳ ನಡುವಿನ ಸಂಬಂಧವನ್ನು ನಿರಾಕರಿಸಿದನೇ ಹೊರತು

---

9 ಬುದ್ಧನು ಕಾರಣ ಎಂಬುದನ್ನು ಬಾದರಾಯಣರ ಅರ್ಥದಲ್ಲಿ ಉಪಯೋಗಿಸಿಲ್ಲ. ಸೂತ್ರ I. i. ii. 'ವೇದಾಂತಸೂತ್ರಗಳು' ಅನು: ಜಿ. ತೀಬೋ

10 ನೋಡಿ: ರಾಲ್ಫ್. ಡಬ್ಲ್ಯು, ಚರ್ಚ್. *Hume's Theory of undesstanding,* George Allen & Unwin Ltd., (1968) ಪು. 130

11 ಸಾಂಖ್ಯದರ್ಶನದ ಸತ್ಕಾರ್ಯವಾದವಂತೂ ಅಲ್ಲವೇ ಅಲ್ಲ.

ವ್ಯಾವಹಾರಿಕವಾಗಿ ಅಲ್ಲ. ವ್ಯಾವಹಾರಿಕವಾಗಿ ಅವನು ಕಾರ್ಯ ಕಾರಣವಾದವನ್ನು ನಿರಾಕರಿಸಲಿಲ್ಲ ಎಂಬುದಕ್ಕೆ ಅವನಲ್ಲೇ ಪುರಾವೆಗಳಿವೆ. ಅವನು ಹೀಗೆ ಹೇಳುತ್ತಾನೆ: I never asserted so absurd a proposition as that anything might arise without a cause. I only maintained that our certainty of the falsehood of that proposition, proceeded neither from intuition nor Demonstration, but from another source.[12]

ಇಲ್ಲಿ ನಾವು ಒಂದು ಅಂಶವನ್ನು ಗಮನಿಸಬೇಕು. ಹ್ಯೂಮನ ತತ್ತ್ವಜ್ಞಾನದಲ್ಲಿ ವಿಚಾರ ಮತ್ತು ಆಚಾರಗಳ ನಡುವೆ ಕೂಡಿಸಲಾಗದ ಬಹು ದೊಡ್ಡ ಕಂದಕವಿದೆ. ಈ ಮಾತಂತೂ ಆತನ ಕಾರ್ಯ–ಕಾರಣವಾದಕ್ಕೆ ಅಕ್ಷರಶಃ ಅನ್ವಯಿಸುತ್ತದೆ. ಸತ್ಯವು ವ್ಯವಹಾರಕ್ಕೆ ಅನುಗುಣವಾಗಿರಬೇಕೆಂಬ ನಿಯಮ ಇಲ್ಲದಿದ್ದರೂ ವ್ಯವಹಾರ ಬೇರೆ, ಸತ್ಯಬೇರೆ ಆದರೆ ಅದು ವಿಪರ್ಯಾಸವಲ್ಲವೆ? ತಾನು ಬೋಧಿಸಿದ ತತ್ತ್ವಜ್ಞಾನದಲ್ಲಿ ತಾನೇ ತೊಡಗಲು ಅಸಾಧ್ಯವಾದದ್ದು ಹ್ಯೂಮನ ಒಂದು ದೊಡ್ಡ ದೋಷ; ಈ ದೋಷವೇ ಅವನ ತತ್ತ್ವಜ್ಞಾನದಲ್ಲಿ ಕಂಡುಬರುವ ವಿಚಾರ–ಆಚಾರಗಳ ನಡುವಿನ ಕಂದಕ್ಕೆ ಮೂಲವೆನ್ನಬಹುದು. ಹೀಗಾಗಲು ಇನ್ನೊಂದು ಕಾರಣ, ಅವನು ತತ್ತ್ವಜ್ಞಾನವನ್ನು ನೋಡುವ ದೃಷ್ಟಿ; ಹ್ಯೂಮನದು ಮುಖ್ಯತಃ ಪ್ರೇಕ್ಷಕ ದೃಷ್ಟಿ.

ಬುದ್ಧನ ತತ್ತ್ವಜ್ಞಾನದಲ್ಲಿ ಈ ಕಂದಕವಿಲ್ಲದಿಲ್ಲ[13]. ಆದರೂ ಒಂದು ಅರ್ಥದಲ್ಲಿ ಬುದ್ಧ ಬೋಧಿಸಿದ್ದು ತತ್ತ್ವವೂ ಹೌದು, ಧರ್ಮವೂ ಹೌದು. ಆಸೆಯೇ ದುಃಖಕ್ಕೆ ಕಾರಣ; ಆಸೆ ಮತ್ತು ದುಃಖಗಳ ನಡುವೆ ಅನಿವಾರ್ಯ ಸಂಬಂಧವಿದೆ; ಆಸೆಯನ್ನು ನಿಯಂತ್ರಿಸಿದರೆ ದುಃಖವನ್ನು ನಿಯಂತ್ರಿಸಬಹುದು ಎಂಬುದರಲ್ಲಿ ತತ್ತ್ವವೂ ವ್ಯವಹಾರವೂ ಸಮ್ಮಿಳಿತವಾಗಿವೆ. ಇಲ್ಲಿ ಮಾನವನಿಗೆ ಒಂದು ಗುರಿ ಇದೆ; ಆ ಗುರಿಗೆ ಮಾರ್ಗವನ್ನೂ ಸೂಚಿಸಿದೆ.

---

12 ಎನ್. ಕೆ. ಸ್ಮಿತ್. *The Philosophy of David Hume* ಪು. ೪೧೩

13 ಶಾಶ್ವತವಾದ. ಆತ್ಮವನ್ನು ತಿರಸ್ಕರಿಸಿದ ಬೌದ್ಧಸಿದ್ಧಾಂತ, ಪುನರ್ಜನ್ಮದಲ್ಲಿ ನಂಬಿಕೆಯನ್ನು ಇಟ್ಟಿದೆ. ಈ ಅಂತರವನ್ನು ಗಮನದಲ್ಲಿಟ್ಟುಕೊಂಡು ಕೆಲವು ವಿದ್ವಾಂಸರು ಬೌದ್ಧದರ್ಶನ ಸ್ವವಿರೋಧ ದೋಷದಿಂದ ಆವೃತವಾಗಿದೆ ಎಂದು ದೂರುತ್ತಾರೆ.

ಎಸ್. ನಾರಾಯಣ ಮೂರ್ತಿ

ಜಾಮೀನು ಮುಚ್ಚಳಿಕೆ

X ಎಂಬವನಿಗೆ ಜರೂರಾಗಿ ಸಾವಿರ ರೂಪಾಯಿಗಳ ಅಗತ್ಯವಿತ್ತು. ಯಾರಾದರೂ ಜಾಮೀನು ಕೊಟ್ಟಲ್ಲಿ ಒಂದು ಸಾವಿರ ರೂಪಾಯಿಗಳನ್ನು ಕೊಡಬಹುದಾಗಿ ಬ್ಯಾಂಕಿನ ವ್ಯವಸ್ಥಾಪಕರು ಹೇಳಿದರು. ಕೃಷ್ಣನ ಜಾಮೀನು ಕೊಟ್ಟು ರಾಮ ಹಣ ಪಡೆದು ಮಗಳ ವಿವಾಹಕಾರ್ಯ ಜರಗಿಸಿದ. ಜಾಮೀನಾಗುವುದು, ಜಾಮೀನು ಮುಚ್ಚಳಿಕೆ ಎಂದರೇನು?

ಜಾಮೀನು ಮುಚ್ಚಳಿಕೆಯ ರೂಪರೇಷೆ :

ಯಾವುದಾದರೂ ವಾಗ್ದಾನವನ್ನು ನೆರವೇರಿಸುವಂತೆ ಅಥವಾ ಯಾರಾದರೂ ಮೂರನೆಯವನು ತನ್ನ ಸಾಲದ ಋಣವನ್ನು ನಿವಾರಿಸಲು ತಪ್ಪಿದಲ್ಲಿ ತಾನೇ ಅದನ್ನು ಕೊಟ್ಟು ತೀರಿಸುವುದಾಗಿ ಒಪ್ಪುವುದಕ್ಕೆ ಜಾಮೀನಾಗುವುದು ಎಂದು ಹೆಸರು. ತಾನು ಖಿಲಾಸೆ ಮಾಡುವುದಾಗಿ ಒಪ್ಪಿ ಮಾಡಿಕೊಟ್ಟ ಒಪ್ಪಂದಕ್ಕೆ ಜಾಮೀನು ಮುಚ್ಚಳಿಕೆ ಎಂದು ಹೆಸರು. ಮೇಲಿನ ಉದಾಹರಣೆಯಲ್ಲಿ ಕೃಷ್ಣನೇ ಜಾಮೀನುದಾರ; ರಾಮ ಸಾಲಗಾರ; ಹಣ ಕೊಟ್ಟ ಬ್ಯಾಂಕು ಸಾಲಿಗ ಎಂದು ಕರೆಯಲ್ಪಡುತ್ತದೆ. ಜಾಮೀನಾಗಬೇಕಾಗಿದ್ದರೆ ಸಾಲಿಗ, ಸಾಲಗಾರ ಮತ್ತು ಜಾಮೀನುದಾರ ಇವರು ಮೂವರೊಳಗೆ ಒಡಂಬಡಿಕೆಯೇರ್ಪಡಬೇಕು. ಸಾಲಿಗ, ಸಾಲಗಾರರೊಳಗೆ ಸಾಲ ಪಡಕೊಳ್ಳುವುದರ ಬಗ್ಗೆ ಒಪ್ಪಂದವಾಗಬೇಕು; ಸಾಲಗಾರ ತಾನು ಪಡೆದ ಋಣವನ್ನು ತೀರಿಸಲು ತಪ್ಪಿದರೆ ಜಾಮೀನುದಾರ ತಾನು ತೀರಿಸುವುದಾಗಿ ಒಪ್ಪಿ, ಜಾಮೀನುದಾರ, ಸಾಲಿಗ ಇವರೊಳಗೆ ಒಪ್ಪಂದವಾಗಬೇಕು; ಅಂತೆಯೇ, ತನ್ನ ಬದಲು ಜಾಮೀನುದಾರ ಋಣವನ್ನು ತೀರಿಸಿದಲ್ಲಿ ಜಾಮೀನುದಾರನನ್ನು ನಿರ್ಭಾಧಿತಗೊಳಿಸುವುದಾಗಿ ಸಾಲಗಾರ, ಜಾಮೀನುದಾರರೊಳಗೂ ಒಪ್ಪಂದವಾಗಬೇಕು. ಇವಿಷ್ಟು ಜಾಮೀನು ಮುಚ್ಚಳಿಕೆಯೊಳಗೆ ಅಡಗಿರುವ ಅಂಶಗಳೆನ್ನಬಹುದು.

ಜಾಮೀನು ಮುಚ್ಚಳಿಕೆಗೆ ಒಳಪಡುವ ಮೂವರೂ ಪಕ್ಷಗಾರರು ಕರಾರಿನಿಂದ ಬಂಧಿತರಾಗಲು ಅರ್ಹತೆಯನ್ನು ಪಡೆದವರಾಗಿರಬೇಕು. ಅಂಥ ಕರಾರಿಗೆ ಸಾಲಗಾರ ಹೊಂದಿಕೊಂಡ ಸಾಲವೇ ಪ್ರತಿಫಲ (Consideration) ವಾಗಿರುತ್ತದೆ. ಅಂಥ ವ್ಯವಹಾರದಲ್ಲಿ ಜಾಮೀನುದಾರನಿಗೂ ಏನಾದರೊಂದು ಲಾಭ ಅಥವಾ ಪ್ರತಿಫಲ ಸಿಕ್ಕಿರಲೇಬೇಕಾದ ಅಗತ್ಯವಿಲ್ಲ.

ಜಾಮೀನುದಾರನ ಹೊಣೆಗಾರಿಕೆ :

ಸಾಲಗಾರನ ಮತ್ತು ಜಾಮೀನುದಾರನ ಋಣ ತೀರಿಸುವ ಹೊಣೆಗಾರಿಕೆಯು ಸಮವ್ಯಾಪಕವಾಗಿರುತ್ತದೆ ಎಂದರೆ, ಸಾಲಿಗ ತನ್ನ ಸಾಲದ ಹಣದ ವಸೂಲಾತಿಗಾಗಿ ಅವರಿಬ್ಬರ ಮೇಲೂ ಏಕಕಾಲದಲ್ಲಿ ಪ್ರಕರಣ ಹೂಡಬಹುದು. ಅಂಥ ಸಂದರ್ಭದಲ್ಲಿ ಸಾಲ ಮರುಪಾವತಿ ಮಾಡುವ ಆದ್ಯ ಹೊಣೆಗಾರಿಕೆ ಸಾಲಗಾರನದೇ ಆಗಿದೆ ಎಂಬ ವಾದವಾಗಲೀ ಅಥವಾ ಸಾಲಗಾರನಿಂದ ವಸೂಲಾಗದಿದ್ದ ಪಕ್ಷದಲ್ಲಿ ಮಾತ್ರ ತಾನು ಹೊಣೆಗಾರನೆಂಬ ವಾದವಾಗಲೀ ಜಾಮೀನುದಾರನಿಗೆ ಸಿಗಲಾರದು. ಏಕೆಂದರೆ, ಅಂಥ ವಾದವು ಸಾಲಗಾರ. ಜಾಮೀನುದಾರ ಇವರಿಬ್ಬರ ಹೊಣೆಗಾರಿಕೆಯು ಸಮವ್ಯಾಪಕವಾಗಿರತಕ್ಕದ್ದು

ಎಂಬ ಕಾನೂನಿನ ಸ್ಪಷ್ಟ ನಿರೂಪಣೆಗೆ ಪ್ರತಿಕೂಲವಾಗುತ್ತದೆ. ಆದ್ದರಿಂದ ಹಣ ವಸೂಲಾತಿ ಬಗ್ಗೆ ಸಾಲಿಗ ಜಾಮೀನುದಾರನ ಮೇಲೆಯೇ ಕ್ರಮವನ್ನು ಕೈಗೊಳ್ಳಬಹುದು. ಜಾಮೀನುದಾರನ ಸಾಲದ ಹೊಣೆ ಎಷ್ಟೆಂದರೆ ಸಾಲಗಾರನು ಮಾಡಿದ ಸಾಲವಷ್ಟೇ ಆಗುತ್ತದೆ. ಅದಕ್ಕಿಂತ ಹೆಚ್ಚು ಜಾಮೀನುದಾರ ಯಾವ ಸಂದರ್ಭದಲ್ಲಿಯೂ ತೆರಲು ಬದ್ಧನಾಗುವುದಿಲ್ಲ.

ಜಾಮೀನುದಾರನ ಹಕ್ಕು ಬಾಧ್ಯತೆಗಳು

ಸಾಲ ಮರುಪಾವತಿಗೆ ಮುಂಚೆ ಜಾಮೀನುದಾರನು ಕೋರ್ಟಿನಲ್ಲಿ ಕ್ರಮಕೈಗೊಂಡು ಸಾಲಗಾರನೇ ಆ ಸಾಲಕ್ಕೆ ಪೂರ್ಣ ಹೊಣೆಗಾರನೆಂದೂ ಮತ್ತು ಸಾಲವನ್ನು ಸಾಲಗಾರನಿಂದಲೇ ವಸೂಲು ಮಾಡಿ ಕೊಳ್ಳತಕ್ಕದೆಂದೂ ಕೋರ್ಟಿನ ಆದೇಶವನ್ನು ಪಡೆಯಬಹುದು. ಜಾಮೀನುದಾರ ಸಾಲ ಮರು ಪಾವತಿ ತಾನೇ ಮಾಡಿದಲ್ಲಿ ಅಷ್ಟು ಹಣವನ್ನು ಸಾಲಗಾರನಿಂದ ವಸೂಲು ಮಾಡಲು ಸಾಲಿಗನಂತೆಯೇ ಹಕ್ಕುಳ್ಳವನಾಗುತ್ತಾನೆ. ಅಲ್ಲದೆ, ಅಂಥ ಪ್ರಸಂಗದಲ್ಲಿ ಸಾಲಿಗ ಹೊಂದಿದ್ದ ಎಲ್ಲ ಪ್ರತಿಭೂತಿಗಳಿಗೂ ಅವನೇ ಹಕ್ಕುದಾರನಾಗಿರುತ್ತಾನೆ.

ಜಾಮೀನಿನಿಂದ ಬಿಡುಗಡೆ

ಜಾಮೀನು ಮುಚ್ಚಳಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದರಿಂದ ಕೆಲವೊಂದು ವೇಳೆ ಜಾಮೀನು ರದ್ದಾಗುತ್ತದೆ. ಜಾಮೀನುದಾರನ ಮರಣವೂ ಜಾಮೀನಿನ ರದ್ದತಿಗೆ ಕಾರಣವಾಗುತ್ತದೆ. ಸಾಲಿಗನೂ ಸಾಲಗಾರನೂ ಸಾಲದ ಬಗ್ಗೆ ಹೊಸತೊಂದು ಕರಾರು (Contract) ಮಾಡಿಕೊಂಡರೆ ಜಾಮೀನು ರದ್ದಾಗುತ್ತದೆ. ಸಾಲಿಗ, ಸಾಲಗಾರ ಇವರೀರ್ವರ ಮೊದಲ ಒಪ್ಪಂದ ಅನೂರ್ಜಿತವೆಂದಾದರೆ, ಜಾಮೀನುದಾರ ಆ ಮೊತ್ತವನ್ನು ಕೊಡಲು ಒಪ್ಪಿದ್ದರೆ ಅವನು ಅದರಿಂದ ಪಾರಾಗಲಾರ. ಸಾಲಗಾರನ ಹೊಣೆಗಾರಿಕೆ ಯಾವುದಾದರೂ ಕಾರಣದಿಂದ ಅಂತ್ಯಗೊಂಡಿದ್ದಲ್ಲಿ ಜಾಮೀನು ರದ್ದಾಗುತ್ತದೆ. ತಪ್ಪು ತಿಳುವಳಿಕೆ ಕೊಟ್ಟು ಜಾಮೀನು ಮುಚ್ಚಳಿಕೆ ಮಾಡಿಸಿಕೊಂಡಿದ್ದರೆ ಅದು ಜಾಮೀನಿನ ರದ್ದತಿಗೆ ಕಾರಣವಾಗುತ್ತದೆ. ಜಾಮೀನು ಮುಚ್ಚಳಿಕೆಗೆ ಪ್ರತಿಫಲವಿಲ್ಲವೆಂದಾದರೂ ಜಾಮೀನು ರದ್ದಾಗುತ್ತದೆ. ಆದರೆ ಮರುಪಾವತಿ ಮಾಡದೆ ಸಾಲಗಾರ ಮರಣ ಪಟ್ಟರೆ ಜಾಮೀನುದಾರ ಅಂಥ ಹೊಣೆಗಾರಿಕೆಯಿಂದ ಬಿಡುಗಡೆಯಾಗಲಾರ.

ಜಾಮೀನು ಕೊಟ್ಟು ಹಣದ ಲೇವಾದೇವಿ ಮಾಡುವುದು ಅನುಚಾನವಾಗಿ ನಡೆದುಬಂದಿದೆ. ಬ್ಯಾಂಕಿನ ವ್ಯವಹಾರಗಳು ಜಾಮೀನು ಇಲ್ಲದ ಹೊರತು ನಡೆಯುವುದೇ ಇಲ್ಲ. ಜಾಮೀನುದಾರ ಸಾಲಗಾರನ ವಿಶ್ವಾಸಿ. ಸಾಲಗಾರನ ಆಪತ್ತು ನಿವಾರಣೆಗಾಗಿ ಜಾಮೀನುದಾರ ಜಾಮೀನು ನಿಂತು, ಹಣ ಪಡೆದು ಸಾಲಗಾರನ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡುತ್ತಾನೆ. ಜಾಮೀನುದಾರನ ಈ ತ್ಯಾಗ ನಿಜವಾಗಿಯೂ ಪ್ರಶಂಸನೀಯ. ಆದರೆ, ಸಾಲಗಾರ ಜಾಮೀನುದಾರನ ಈ ಒಳ್ಳೆಯ ಗುಣದ ದುರ್ಲಾಭವನ್ನು ಪಡೆದು ಅವನನ್ನು ನಷ್ಟ, ಕಷ್ಟಕ್ಕೀಡುಮಾಡುವ ಪ್ರಸಂಗಗಳು ಕಡಿಮೆಯೇನಿಲ್ಲ. ತಾನು ತಿನ್ನದೆ ಮತ್ತೊಬ್ಬನಿಗೆ ಸಹಾಯ ಮಾಡಿ, ಕೊನೆಗೆ ಜಾಮೀನು ನಿಂತುದರ ತಪ್ಪಿಗಾಗಿ, ತನ್ನ ಆಸ್ತಿ ಪಾಸ್ತಿ ಕಳೆದುಕೊಂಡ ನಿದರ್ಶನಗಳು ಅನೇಕವಿವೆ. ಆದರೂ, ಜಾಮೀನು ಮುಚ್ಚಳಿಕೆಯ ಆಧಾರದ ಮೇಲೆ ಕೋಟ್ಯಂತರ ರೂಪಾಯಿಗಳ ವ್ಯವಹಾರ ದಿನವಹಿ ನಡೆದೇ ನಡೆಯುತ್ತಿದೆ.

ಎಚ್. ಆರ್. ರಘುನಾಥ ಭಟ್

ತ್ರೈಲಪದೇವನ ಹರೀಶಿ ಶಾಸನ

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನಲ್ಲಿರುವ ಒಂದು ಗ್ರಾಮ ಹರೀಶಿ. ಚಂದ್ರಗುತ್ತಿಯ ಉತ್ತರಕ್ಕೆ ಸುಮಾರು ೧೦ ಕಿ.ಮೀ. ಅಂತರದಲ್ಲೂ ಸೊರಬದ ವಾಯುವ್ಯಕ್ಕೆ ಸುಮಾರು ೨೮ ಕಿ.ಮೀ. ದೂರದಲ್ಲೂ ಇರುವ ಈ ಹಳ್ಳಿ ಪುರಾತನ ಪ್ರಸಿದ್ಧ ಬನವಾಸಿನಾಡಿನಲ್ಲಿ ಇದ್ದಿರಬೇಕು. (ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿರುವ ಬನವಾಸಿ ಹರೀಶಿಯಿಂದ ಕೇವಲ ೧೦ ಕಿ.ಮೀ. ದೂರದಲ್ಲಿದೆ.) ಹರೀಶಿಯಲ್ಲಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೊರೆತ ಕೆಲವು ಶಾಸನಗಳೇ ಇದಕ್ಕೆ ಸಾಕ್ಷಿ.[1] ಇತ್ತೀಚೆಗೆ ನಾನು ಸಂಶೋಧನಾರ್ಥವಾಗಿ ಹರೀಶಿಗೆ ಹೋದಾಗ ಊರ ಹೊರವಲಯದ ಶಿವಾಲಯದ ಬಳಿ ತ್ರೈಲಪದೇವನ ಸ್ತಂಭಶಾಸನವೊಂದು ಪತ್ತೆಯಾಯಿತು.

ಈ ಶಿಲಾಶಾಸನ ಸ್ತಂಭವನ್ನು ಕಲ್ಲೇಶ್ವರನೆಂದು ಹೇಳಲಾಗುವ ಶೈವ ದೇವಾಲಯದ ಮುಂಭಾಗದಲ್ಲಿ ಈಗ ನೆಡಲಾಗಿದೆ. ಆದರೆ ಇದು ಮೂಲತಃ ಈ ಸ್ಥಳದಲ್ಲಿತ್ತೋ ಅಥವಾ ಬೇರೆಡೆಯಿಂದ ಸ್ಥಳಾಂತರಿಸಲ್ಪಟ್ಟಿತೊ ಎಂಬುದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ.[2] ಈ ಸ್ತಂಭದ ಎರಡು ಮುಖಗಳಲ್ಲಿ ಪ್ರಸ್ತುತ ಶಾಸನವನ್ನು ಕೆತ್ತಲಾಗಿದೆ. ಕಂಬದ ಕೆಳಭಾಗ ಚೌರಸವಾಗಿಯೂ ಶಿರೋಭಾಗ ಅಷ್ಟಕೋನಾಕಾರವಾಗಿಯೂ ಇದೆ. ಕಂದುಬಣ್ಣದ ಅಗ್ನಿಶಿಲೆಯ (basalt) ಸ್ತಂಭದ ಎತ್ತರ ಸುಮಾರು ೧.೫ ಮೀ. ೪೦ × ೨೫ ಸೆಂಮೀ. ಪ್ರದೇಶದಲ್ಲಿ ಶಾಸನವನ್ನು ಕೆತ್ತಲಾಗಿದೆ. ಸ್ತಂಭದ ಮೇಲ್ಭಾಗದಿಂದ ಕೆಳಭಾಗದ ವರೆಗೆ ೨೫ ಸಾಲುಗಳಲ್ಲಿ ಬರೆಯಲಾದ ಈ ಶಾಸನವನ್ನು ಸುರಕ್ಷಿತವಾಗಿರಿಸಲಾಗಿದೆ. ಆದರೂ ಶಾಸನದ ಎರಡನೆಯ ಮುಖ ಮೊದಲನೆಯ ಮುಖದಷ್ಟು ಸ್ಪಷ್ಟವಾಗಿಲ್ಲ.

ಶಾಸನವನ್ನು ಸುಮಾರು ೧೧ನೆಯ ಶತಮಾನದ ಕನ್ನಡ ಲಿಪಿಯಲ್ಲಿ ಬರೆಯಲಾಗಿದೆ. ಈ ಕಾಲದ ಲಿಪಿಯನ್ನು ಬ್ಯೂಲರ್ ಮತ್ತು ಫ್ಲೀಟರು 'ಹಳಗನ್ನಡ ಲಿಪಿ' ಎಂದು ಕರೆದಿದ್ದಾರೆ. ಅಂತೆಯೇ ಕನ್ನಡ ಅಕ್ಷರದ ಪ್ರಾಚೀನ ಲಿಪಿಲಕ್ಷಣಗಳನ್ನು ಪರಿಶೀಲಿಸಬಹುದು. ಅನೇಕ ಅಕ್ಷರಗಳು ಗುಂಡಗಾಗುವ ಪ್ರವೃತ್ತಿ ಎದ್ದುಕಾಣುತ್ತದೆ. ಅಲ್ಲಿಯ ವರೆಗೂ ಸಣ್ಣ ರೇಖೆಯಾಕಾರದಲ್ಲಿದ್ದ ತಲೆಕಟ್ಟು ಈ ಕಾಲದಲ್ಲಿ ಕಮಾನಿನಂತೆ ಅಥವಾ ಅರ್ಧಚಂದ್ರನಂತೆ ಬಾಗುತ್ತದೆ. ಗ, ಥ, ಕ, ಮುಂತಾದ ಅಕ್ಷರಗಳ ಅವಿಭಾಜ್ಯ ಅಂಗವಾಗಿ ಸೇರಿಕೊಂಡಿದ್ದ ತಲೆಕಟ್ಟು ಈ ಕಾಲದಲ್ಲಿ ಸ್ವತಂತ್ರರೂಪ ತಾಳುತ್ತದೆ. 'ಣ' ಕಾರ ಹೊಸ ರೂಪ ಪಡೆಯುತ್ತದೆ. ಒಟ್ಟಿನಲ್ಲಿ ಕನ್ನಡ ಲಿಪಿಯ ವಿಕಾಸದ ದೃಷ್ಟಿಯಿಂದ ಈ ಕಾಲದ ಶಾಸನ ಲಿಪಿಗಳ ಅಧ್ಯಯನ ಮಹತ್ತ್ವಪೂರ್ಣವಾದ್ದಾಗಿದೆ.[3]

---

1 ಎ.ಕ. VIII, Sb. ೪೭೨, ೪೭೭

2 ಈ ಶಾಸನವಿರುವಜಾಗ ಉಳಿದೆಡೆಗಿಂತ ತುಸು ದಿಣ್ಣೆಯ ಪ್ರದೇಶವಾಗಿದೆ: ಅದನ್ನು ಅಗೆದರೆ ಪುರಾತನ ಅವಶೇಷಗಳು ಸಿಗುವ ಸಾಧ್ಯತೆಯಿದೆ.

3 ನೋಡಿ: ಡಾ. ಎ. ವಿ. ನರಸಿಂಹಮೂರ್ತಿ: ಕನ್ನಡ ಲಿಪಿಯ ಉಗಮ ಮತ್ತು ವಿಕಾಸ. ಮೈಸೂರು, ೧೯೭೫, ಪು. ೩೩

ಪ್ರಸ್ತುತ ಶಾಸನದ ಅಕ್ಷರಗಳನ್ನು, ಅದರಲ್ಲೂ ಪ್ರಾರಂಭದ ೧೦ ಸಾಲುಗಳಲ್ಲಿ ಕಂಡುಬರುವ ಅಕ್ಷರಗಳನ್ನು, ಸ್ಪಷ್ಟವಾಗಿ, ಆಳವಾಗಿ, ಕಲಾತ್ಮಕವಾಗಿ ಕೊರೆಯಲಾಗಿದೆ. ಆದರೂ ಉಳಿದ ಕೆಲವು ಅಕ್ಷರಗಳ ಪ್ರಮಾಣದಲ್ಲಿ ಏಕರೂಪತೆ ಕಂಡುಬರುವುದಿಲ್ಲ. ೩.೨ ಸೆಂಮೀ. ಅಕ್ಷರದಿಂದ ಹಿಡಿದು ೧.೨ ಸೆಂಮೀ. ಲಿಪಿಯ ವರೆಗೂ ವ್ಯತ್ಯಾಸವನ್ನು ಗಮನಿಸಬಹುದು. ಉದಾ: 'ಶ' ಮತ್ತು 'ಮ' (ಸಾಲು ೧); 'ಬ' (ಸಾಲುಗಳು ೨, ೩, ೮). ಇನ್ನು ಕೆಲವು ಅಕ್ಷರಗಳನ್ನು ಪ್ರಾಚೀನ ಲಿಪಿಶೈಲಿಯಲ್ಲಿ ಬರೆಯಲಾಗಿದೆ. ಉದಾ: 'ಮ' (ಸಾಲು ೧); 'ರ' (ಸಾಲುಗಳು ೫, ೭, ೧೨); 'ವ' (ಸಾಲು ೫). ಕೆಲವು ಅಕ್ಷರಗಳ ವೈವಿಧ್ಯ ಗಮನ ಸೆಳೆಯುತ್ತದೆ. ಉದಾ: 'ಮ' (ಸಾಲುಗಳು ೨ ಮತ್ತು ೧೦); 'ರ' (ಸಾಲು ಗಳು ೫ ಮತ್ತು ೧೯): 'ಬ' (ಸಾಲುಗಳು ೩ ಮತ್ತು ೮). ಜಿಹ್ವಾಮೂಲೀಯ ಹಾಗೂ ಉಪಧ್ಮಾನೀಯ ಚಿಹ್ನೆಗಳೆರಡೂ ಕಂಡುಬರುತ್ತವೆ. ಉದಾ: ಗಱ್ಣ್ (ಸಾಲು ೧೭), 'ಒಡಗೆಜಿ' (ಸಾಲು ೧೦); ೫೦ ಎಂಬುದನ್ನು ಕನ್ನಡದ ಸಂಖ್ಯೆಯಲ್ಲಿ ಬರೆಯಲಾಗಿದೆ (ಸಾಲು ೧೮).

ಲಿಪಿಸಂಯೋಜನೆಗೆ ಸಂಬಂಧಿಸಿದಂತೆ ಒಂದೆರಡು ಸಂಗತಿಗಳನ್ನು ಪರಿಶೀಲಿಸಬಹುದು: ಕೆಲವೆಡೆ ಅನುಸ್ವಾರಗಳ ಬದಲು ವರ್ಗಾನುನಾಸಿಕವನ್ನು ಉಪಯೋಗಿಸಲಾಗಿದೆ. ಉದಾ: 'ಮಹಾಮಾಣ್ಡಳಿಕ' (ಸಾಲು ೩): ಪಞ್ಚಮಹಾಪಾತಕ (ಸಾಲು ೨೧); ನನ್ದು (ಸಾಲು ೧೩). ಇನ್ನು ಕೆಲವೆಡೆ ಲಿಪಿ ಸ್ಖಾಲಿತ್ಯ ವಿಲ್ಲದಿಲ್ಲ. ಉದಾ: 'ಸೋಮೇಶ್ವರ' ಎನ್ನುವ ಬದಲು 'ಸೋಮೇಸ್ವರ' ಎಂದೂ (ಸಾಲು ೧೧) 'ಆದಿತ್ಯನ' ಎಂದು ಬರೆಯುವ ಜಾಗದಲ್ಲಿ 'ಯಾದಿತ್ಯನ' ಎಂದೂ (ಸಾಲು ೧೨) 'ದಾಸಯ್ಯ' ಎಂದು ಬರೆಯುವ ಜಾಗದಲ್ಲಿ 'ದಾಶಯ್ಯ' ಎಂದೂ ಬರೆಯಲಾಗಿದೆ (ಸಾಲು ೧೫). 'ಗದ್ದೆ' ಎಂಬುದರ ಹಳಗನ್ನಡ ರೂಪವಾದ ಗಱ್ದೆ[4] ಎಂಬ ಶಬ್ದವನ್ನೂ ಗಮನಿಸಬಹುದು.

ಹಳಗನ್ನಡ ಭಾಷೆಯಲ್ಲಿ, ಗದ್ಯಶೈಲಿಯಲ್ಲಿ ಶಾಸನವನ್ನು ರಚಿಸಲಾಗಿದೆ. 'ಗಡಿಗಳ ಭೀಮ' (ಸಾಲು ೯–೧೦), 'ಒಡಗೆಜಿಮಲ್ಲ' (ಸಾಲು ೧೦), 'ನುಡಿದುಮತ್ತೆನ್ನ' (ಸಾಲು೧೦–೧೧) ಮುಂತಾದ ಬಿರುದಾವಳಿಗಳಲ್ಲಿ ಕಾವ್ಯಶೈಲಿಯನ್ನು ಗಮನಿಸಬಹುದು.

ಪ್ರಸ್ತುತ ಶಾಸನದಲ್ಲಿಯೂ ಕಾಲಮಾನದ ವಿಚಾರ ಬರುವುದಿಲ್ಲ. ಲಿಪಿಶಾಸ್ತ್ರದ ದೃಷ್ಟಿಯಿಂದ ಹಾಗೂ ಶಾಸನ ಬರೆದ ವಿಶಿಷ್ಟವಾದ ಶೈಲಿಯನ್ನು ಆಧರಿಸಿ ಹೇಳುವುದಾದರೆ ಇದು ಸುಮಾರು ೧೧ನೆಯ ಶತಮಾನದ ಮಧ್ಯಕಾಲಕ್ಕೆ ಸೇರಿದ್ದಿರಬಹುದು.

ಹಳೇಬೀಡು ಶಾಸನ 'ಮಹಾಮಾಂಡಳಿಕನಾದ[5] ತೈಲಪದೇವನ ಪ್ರಶಸ್ತಿಯೊಂದಿಗೆ ಆರಂಭ ವಾಗುತ್ತದೆ. ಈತನನ್ನು ಸಮಧಿಗತ ಪಂಚಮಹಾಶಬ್ದ ಪಡೆದವನೆಂದೂ ಬನವಾಸಿ ಪುರವರಾಧೀಶ್ವರ ನೆಂದೂ ವರ್ಣಿಸಲಾಗಿದೆ. ಅಲ್ಲದೆ ಬನವಾಸಿಯಲ್ಲಿ ಸುಖಸಂಕಥಾ ವಿನೋದದಿಂದ ರಾಜ್ಯಭಾರಮಾಡು ತ್ತಿದ್ದನೆಂದೂ ಹೇಳಲಾಗಿದೆ (ಸ್ವಸ್ತಿ ಶಮಧಿಗತ ಪ[ಞ್ಚ]ಮಹಾಶಬ್ದ ಮಹಾ[ಮಾ]ಣ್ಡಳಿಕ ಬನವಾಸಿ ಪುರವ[ರಾ]ಧೀಶ್ವರ ಸ್ವಸ್ತಿ ಶ್ರೀಮತ್ ತೈಲಪದೇವರ್ ಬನವಾಸಿಯಲು ಸುಕಸಂಕಥಾ ವಿನೋದದಿಂ ರಾಜ್ಯ[ಂ]* ಗೆಯ್ಯುತ್ತಮಿರೆ). ಈತ ಯಾವ ರಾಜವಂಶದವನು ಮತ್ತು ಯಾವಾಗ ಬನವಾಸಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನೆಂಬುದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಆದರೆ ಈತನ ಬಿರುದಾವಳಿ ಗಳನ್ನೂ ಶಾಸನದ ಲಿಪಿಶೈಲಿಯನ್ನೂ ಗಮನಿಸಿದರೆ ಈತ ಹಾನುಗಲ್ಲು ಕದಂಬವಂಶದ ಇಮ್ಮಡಿ ತೈಲಪದೇವನಿರಬೇಕೆಂದು ಊಹಿಸಲು ಅವಕಾಶವಿದೆ.

---

[4] ಈ ಪದರೂಪ ಕಿಟ್ಟೆಲ್‌ರವರ ನಿಘಂಟಿನಲ್ಲಿಲ್ಲ;

[5] ಒಂದು ಪ್ರಾಂತ್ಯದ ಸಾಮಂತನಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಬಿರುದು. ವಾಸ್ತವವಾಗಿ ೪೦ ಯೋಜನ ವಿಸ್ತೀರ್ಣಪ್ರದೇಶ ಮತ್ತು ಒಂದು ಲಕ್ಷ ಹಳ್ಳಿಗಳ ಮೇಲೆ ಒಡೆತನವಿರುವ ಸಮ್ರಾಟನನ್ನು 'ಮಹಾಮಂಡಲೇಶ್ವರ' ಅಥವಾ 'ಮಹಾಮಾಂಡಳಿಕ' ಎಂದು ಕರೆಯುತ್ತಾರೆ. ನೋಡಿ: ಡಿ. ಸಿ. ಸರ್ಕಾರ್: 'Indian Epigraphical Glossary,' ದೆಹಲಿ, ೧೯೬೬, ಪು. ೧೭೯

ಕರ್ನಾಟಕದ ಮಹಾಮಾಂಡಳಿಕರಲ್ಲಿ ಹಾನುಗಲ್ಲಿನ ಕದಂಬರು ಅಗ್ರಗಣ್ಯರು. ಕಲ್ಯಾಣದ ಚಾಲುಕ್ಯರೇ ಮುಂತಾದ ಸಮ್ರಾಟರಿಗೆ ವಿಶೇಷ ನೆರವು ನೀಡಿದ್ದಲ್ಲದೆ, ಅವರ ಆಡಳಿತ ವ್ಯವಸ್ಥೆಯಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಕೆಲವೊಮ್ಮೆ ಇವರು ಸ್ವತಂತ್ರರಾಜರಂತೆ ರಾಜ್ಯಭಾರಮಾಡಿದ್ದುಂಟು. ಕರ್ನಾಟಕದ ಪಶ್ಚಿಮಭಾಗದಲ್ಲಿ, ಅದರಲ್ಲೂ ಧಾರವಾಡ, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ, ದೊರೆತಿರುವ ಹಲವು ಶಾಸನಗಳಿಂದ ಇವರು ಕೆಲವು ಶತಮಾನಗಳ ಕಾಲ ಆ ಭಾಗದಲ್ಲಿ ಆಳಿದ್ದರೆಂಬುದು ಗೊತ್ತಾಗುತ್ತದೆ.[6] ಪ್ರಸ್ತುತಶಾಸನದಲ್ಲಿ ವರ್ಣಿಸಲ್ಪಟ್ಟಿರುವ ತೈಲಪ ಈ ವಂಶದ ಇಮ್ಮಡಿ ತೈಲಪನಾಗಿರಬೇಕೆಂದು ಒಪ್ಪುವ ಪಕ್ಷದಲ್ಲಿ ಈತ ಸುಮಾರು ೧೧ನೆಯ ಶತಮಾನದಲ್ಲಿ ಬನವಾಸಿಯಲ್ಲಿ ಆಳುತ್ತಿದ್ದನೆಂದು ಹೇಳಬಹುದು. ಕ್ರಿ.ಶ. ೧೦೯೦–೧೧೩೦ರಲ್ಲಿ ಈ ಭಾಗದಲ್ಲಿ ಆಳುತ್ತಿದ್ದನೆಂದು ತಿಳಿಸುವ ಈತನ ಅನೇಕ ಶಾಸನಗಳೂ ಇದನ್ನು ಸ್ಪಷ್ಟೀಕರಿಸುತ್ತವೆ. ಈ ಶಾಸನಗಳಲ್ಲಿ ನಿರೂಪಿತವಾಗಿರುವಂತೆ ತೈಲಪದೇವ ಬನವಾಸಿ ಹಾಗೂ ಹಾನಗಲ್ಲು ಪ್ರಾಂತ್ಯಗಳಲ್ಲಿ ಆಳುತ್ತಿದ್ದ. ಕ್ರಿ.ಶ. ೧೧೨೫–೨೬ರ ಶಾಸನವೊಂದರಲ್ಲಿ ತೈಲಪ ಬನವಾಸಿ ಪ್ರಾಂತ್ಯದಿಂದ ರಾಜ್ಯಭಾರಮಾಡುತ್ತಿದ್ದನೆಂದು ಹೇಳಲಾಗಿದೆ.[7] ಆದರೆ ಹರೀಶಿ ಶಾಸನದಲ್ಲಿ ಈತ ಬನವಾಸಿಯಲ್ಲಿ ಆಳುತ್ತಿದ್ದನೆಂದು ಸ್ಪಷ್ಟವಾಗಿ ವರ್ಣಿಸಿದೆ. (ಬನವಾಸಿಯಲು ಸುಕಸಂಕಥಾ ವಿನೋದದಿಂ ರಾಜ್ಯ[ಂ]ಗೆಯ್ಯುತ್ತಮಿರೆ.)

ಇಮ್ಮಡಿ ತೈಲಪದೇವ ಆಡಳಿತಚತುರನೂ ಖ್ಯಾತಯೋಧನೂ ಆಗಿದ್ದನಲ್ಲದೆ ನಾಡಿನ ಆಂತರಿಕ ಆಡಳಿತ ಭದ್ರತೆಗಾಗಿ ಶ್ರಮಿಸಿದ. ಈ ದಿಸೆಯಲ್ಲಿ ಈತ ಅನೇಕ ಜನಹಿತ ಕಾರ್ಯಗಳನ್ನು ಮಾಡಿದ್ದುಂಟು.[8] ಪ್ರಾಚೀನ ದೇವಾಲಯಗಳ ಜೀರ್ಣೋದ್ಧಾರ ಮಾಡಿದ್ದಲ್ಲದೆ ಅವುಗಳಿಗೆ ಅನೇಕ ದಾನ ದತ್ತಿಗಳನ್ನು ನೀಡಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ.[9] ಪ್ರಸ್ತುತ ಶಾಸನದಿಂದಲೂ ಈ ಮಾತಿಗೆ ಸಮರ್ಥನೆ ದೊರೆಯುತ್ತದೆ.

ಹರೀಶಿ ಶಾಸನ ಬಾಣಸಿದಾಸಯ್ಯನನ್ನು, ಬಹುಶಃ ಮೊದಲ ಬಾರಿಗೆ, ಪರಿಚಯಿಸುತ್ತದೆ. ಈತನನ್ನು ಹರಿಲಸೆಯ ಬಾಣಸಿದಾಸಯ್ಯನೆಂದೂ ಈ ಪ್ರಾಂತ್ಯದಲ್ಲಿ ಆಳುತ್ತಿದ್ದನೆಂದೂ ವರ್ಣಿಸಲಾಗಿದೆ (ಹರಿಲಸೆಯ ಬಾಣಸಿದಾಸಯ್ಯನಾಳುತ್ತಮಿರೆ). ಈತ ತೈಲಪದೇವನ ಆಶ್ರಯದಲ್ಲಿ ಆಡಳಿತ ನಡೆಸುತ್ತಿದ್ದ ಸ್ಥಳೀಯ ನಾಯಕನಾಗಿದ್ದಿರಬೇಕು. ಈತನ ವ್ಯಕ್ತಿತ್ವವನ್ನೂ ಸಿದ್ಧಿಸಾಧನೆಗಳನ್ನೂ ಈಗ ದೊರೆತಿರುವ ಈ ಶಾಸನವೊಂದರಿಂದಲೇ ನಿರ್ಧರಿಸಲಾಗದು. 'ಬಾಣಸವೇರ್ಗಡೆ', 'ಬಾಣಸುವೇಗ್ಗಡೆ' (=ಪೆಗ್ಗಡೆ, ಹೆಗ್ಗಡೆ) ಮುಂತಾದ ಹಳಗನ್ನಡದ ಅಧಿಕಾರಸೂಚಕ ಪದಗಳು ಶಾಸನಗಳಲ್ಲಿ ಹಾಗೂ ಸಾಹಿತ್ಯದಲ್ಲಿ ಕಂಡುಬರುವುದು.[10] ಡಿ. ಸಿ. ಸರ್ಕಾರರವರು ಹೇಳುವಂತೆ ಬಾಣಸುವೆರ್ಗಡೆಯೆಂದರೆ 'ಮಹಾನಸಾಧ್ಯಕ್ಷ' ಎಂದು, ರಾಜನ ಭೋಜನಾಲಯದ ಮೇಲಧಿಕಾರಿಯೆಂದು, ಅರ್ಥೈಸಬಹುದು.[11] ಆದರೆ ಪ್ರಸ್ತುತ ಶಾಸನದ ದಾಸಯ್ಯನಿಗೆ ಬಹುಶಃ ವಿಶೇಷಣವಾಗಿರುವ 'ಬಾಣಸಿ' ಎಂಬುದರ ಸಾಂದರ್ಭಿಕ ಅರ್ಥವೇನೆಂಬುದು ಸುಸ್ಪಷ್ಟವಾಗುವುದಿಲ್ಲ.

ಈ ಶಾಸನದ ಮುಖ್ಯ ಉದ್ದೇಶ ಸ್ಪಷ್ಟವಾಗಿದೆ: ಈಗ ಕಲ್ಲೇಶ್ವರ ದೇವಾಲಯವೆಂದು ಕರೆಯಲಾಗುವ ಗುಡಿಯ ಎದುರಿನಲ್ಲಿ ಸೂರ್ಯಮಂಟಪ (?) ಅಥವಾ ಪ್ರತಿಮೆ(?)ಯನ್ನೂ ನಂದಿಯ ವಿಗ್ರಹವನ್ನೂ ಬಾಣಸಿಮಯ್ಯನೆಂಬಾತ ಮಾಡಿಸಿದ (ಯಾದಿತ್ಯನ [ಕಿರಣ]ವಂ ನನ್ದಿಯುಮ[ಂ]*

---

6 ನೋಡಿ: J.K.U. (Social Sciences), Vol. III (1967), pp 115ff.

7 ಫ್ಲೀಟ್ D.K.V. ಪು. ೫೬೧

8 ಎ.ಕ. VIII, Sb. ೩೫೯

9 ಎ.ಕ. VII. Sk. 100; ಇ.ಆಂ. X ಪು.೨೫೪

10 ಎ.ಇ. ೮–೩; ಕುಮಾರವ್ಯಾಸ ಭಾರತ ೧, ೧೦, ೧೪; ಬಸವಪುರಾಣ ೪೭, ೪; ಜೈಮಿನಿ ಭಾರತ ೨,೬೧

11 ಡಿ. ಸಿ. ಸರ್ಕಾರ್: Indian Epigraphical Glossary, ದೆಹಲಿ, ೧೯೬೬, ಪು.೪೫

ಮಾಡಿಸಿದ ಬಾಣಸಿಮಯ್ಯ). ಈತನನ್ನು 'ಗಡಿಗಳ ಭೀಮ. ಒಡಗೆಱೆಮಲ್ಲ[12]. ನುಡಿದುಮತ್ತೆನ್ನ, ಸೋಮೇಸ್ವರದಾಸಗುಲದ ಭಕ್ತ' ಎಂದು ಮುಂತಾಗಿ ಸ್ತುತಿಸಲಾಗಿದೆ. ಇಷ್ಟಾದರೂ ಈತನಾರು, ಇವನಿಗೂ ಬಾಣಸಿದಾಸಯ್ಯನಿಗೂ ಏನಾದರೂ ಸಂಬಂಧವಿತ್ತೆ–ಎಂಬುದು ನಿಖರವಾಗಿ ತಿಳಿದು ಬರುವುದಿಲ್ಲ. ಈತನ ಬಿರುದಾವಳಿಗಳನ್ನು ಆಧರಿಸಿ ಹೇಳುವುದಾದರೆ ಬಾಣಸಿಮಯ್ಯ ಖ್ಯಾತಯೋಧನೂ ಒಡಗೆರೆ ಊರಿನ ಪ್ರಸಿದ್ಧ ಮಲ್ಲನೂ ನುಡಿದಂತೆ ನಡೆಯುವ ನಿಷ್ಠಾವಂತನೂ ಸೋಮೇಶ್ವರ ದಾಸ ಕುಲದ ಭಕ್ತನೂ ಆಗಿದ್ದ.

ಹರೀಶಿ ಸ್ತಂಭಶಾಸನದ ಎರಡನೆಯ ಮುಖದಲ್ಲಿ ಬಾಣಸಿದಾಸಯ್ಯ ಸೋಮೇಶ್ವರ ದೇವರಿಗೆ(?) ಬಿಟ್ಟ ದತ್ತಿಯ ವಿಚಾರವಿದೆ. ಈತ ೫೦ ಕಮ್ಮ ಗದ್ದೆ (ಗಟ್ಟೆ)ಯನ್ನು ದತ್ತಿ ನೀಡಿದನೆಂದೂ ಈ ಧರ್ಮವನ್ನು ಕೆಡಿಸಿದವನಿಗೆ ಸಾವಿರ ಗೋವುಗಳನ್ನೂ ಸಾವಿರ ಬ್ರಾಹ್ಮಣರನ್ನೂ ಕೊಂದ ಪಂಚಮಹಾಪಾತಕ ಬರುವುದೆಂದೂ ಈ ಧರ್ಮವನ್ನು ಕಾಪಾಡಿದವರಿಗೆ (ಕೊಟ್ಟು ನಡೆದಂಗೆ) ಸಾವಿರ ಬ್ರಾಹ್ಮಣರಿಗೆ ಗೋದಾನ (ಉಭಯಮುಖಿ) ಕೊಟ್ಟ ಫಲ ಬರುವುದೆಂದೂ ಹೇಳಲಾಗಿದೆ. 'ಕಮ್ಮ' ಎಂಬ ಹಳಗನ್ನಡ ಪದ 'ಸ್ಕಂಭ' ಅಥವಾ 'ಸ್ತಂಭ' ಎಂಬುದರ ತದ್ಭವವಾಗಿದೆ. ಕದಂಬರ ಶಾಸನಗಳಲ್ಲಿ ಸಾಮಾನ್ಯವಾಗಿ ಕಮ್ಮ, ಮತ್ತರ್, ನಿವರ್ತನ ಮುಂತಾದ ಪ್ರಮಾಣ–ಸೂಚಕ ಪದಗಳಿವೆ. ಇವುಗಳ ನಿರ್ದಿಷ್ಟ ಪ್ರಮಾಣವನ್ನು ನಿರ್ಧರಿಸುವುದು ಕಷ್ಟಸಾಧ್ಯ. ಒಂದು ಕಂಬ ೪ ೧೭೬/೫೦೦ ಎಕರೆಗೆ ಸಮಾನವೆಂದು ಬುಕನೆನ್ ಭಾವಿಸಿದ್ದಾನೆ.[14] ಮಾರಿಂಗೆ ಬಳಿಯಿರುವ ಮೂಗೂರಿನಲ್ಲಿದ್ದ ಒಂದು ಹಳೆಯ ಅಳತೆಯನ್ನು ಆಧರಿಸಿ ಎಸ್. ಚಂದ್ರಶೇಖರಶಾಸ್ತ್ರಿಯವರು ೧೦೦೦ ಕಂಬಗಳು ೪೧೩ ಎಕರೆಗಳಿಗೆ ಸಮಾನವೆಂದೂ ಹೇಳಿದ್ದಾರೆ.[15] ಡಿ. ಸಿ. ಸರ್ಕಾರರ ಅಭಿಪ್ರಾಯದಂತೆ ೧ ಕಮ್ಮವೆಂದರೆ ೧/೫೦೦ ಮತ್ತರುಗಳೆಂಬುದು ಗಮನಾರ್ಹ. ಒಟ್ಟಿನಲ್ಲಿ ಕಮ್ಮ(ಕಂಬ) ಎಂಬ ಅಳತೆಯ ಪ್ರಮಾಣವು ಕಾಲ ದೇಶಕ್ಕನುಗುಣವಾಗಿ ಬದಲಾಗುತ್ತಿತ್ತೆ ಅಥವಾ ಒಂದು ನಿರ್ದಿಷ್ಟವಾದ ಪ್ರಮಾಣವಾಗಿತ್ತೆ ಎಂಬುದನ್ನು ಖಚಿತವಾಗಿ ಹೇಳಲು ಸದ್ಯಕೆ ಸಾಕಷ್ಟು ಆಧಾರಗಳಿಲ್ಲ.

ಸ್ಥಳನಾಮಗಳಿಗೆ ಸಂಬಂಧಿಸಿದಂತೆ ಒಂದು ಮಾತು: ಬನವಾಸಿ ಪ್ರಖ್ಯಾತ ಐತಿಹಾಸಿಕ ಸ್ಥಳ. ಕ್ರಿ.ಪೂ. ೩ನೆಯ ಶತಮಾನದಿಂದ ಕ್ರಿ.ಶ. ೧೮–೧೯ನೆಯ ಶತಮಾನಗಳ ವರೆಗೂ ಪ್ರಸಿದ್ಧ ನಗರವಾಗಿತ್ತು ಎಂಬ ವಿಚಾರ ಜನಜನಿತವಾಗಿದೆ. ಈಗಿನ ಹರೀಸಿ ಅಥವಾ ಹರೀಶಿಯೇ ಹರಿಲಸೆಯಾಗಿದ್ದಿರಬೇಕು. ಈ ಊರಿನ ಹೆಸರು ಕದಂಬ ಕಾವರಸನ ಶಾಸನದಲ್ಲೂ ಕಂಡುಬರುವುದು.[16]

ಶಾಸನದ ಪಾಠ

ಪ್ರಥಮ ಭಾಗ: ೧ [ಸ್ವಸ್ತಿ]*ಶಮದಿಗತ ಪ[ಞ್ಚ]
೨ ಮಹಾಶಬ್ದ ಮಹಾ [ಮಾ]
೩ ಣೆಳಿಕ ಬನವಾ[ಸಿ] ಪುರವ[ರಾ]

---

12 'ಒಡಗೆಱೆ' ಎಂಬುದು ಸಿದ್ದಾಪುರ ತಾಲೂಕಿನಲ್ಲಿರುವ 'ವಡಗೇರಿ' ಇರಬಹುದು. ಈ ಹೆಸರಿನ ಎರಡು ಊರುಗಳು ಆ ತಾಲೂಕಿನಲ್ಲಿದ್ದು ಒಂದು ಹರೀಶಿಗೆ ಸಮೀಪದಲ್ಲಿದೆ: ಸಿರ್ಸಿ ತಾಲೂಕಿನ ವಾಯುವ್ಯಕ್ಕೂ ಒಡಗೆರೆಯೆಂಬ ಊರಿದೆ.

13 ಟಿ. ವಿ. ಮಹಾಲಿಂಗಮ್: *South Indian Polity*, ಪು. ೧೫೦–೧; ನೋಡಿ: ಕ.ಸಾ.ಪ.ನಿ. ಪು. ೧೫೧೭

14 *Economic Conditions in South India*, ಪು. 410

15 The Half-yearly Journal of the Mysore University, II, ಪು. ೨೦೭

16 ಎ.ಕ. VIII. Sb. 472. (1188)

೪ ಧೀಶ್ವರ ಸ್ವಸ್ತಿ ಶ್ರೀಮತ್
೫ ತೈಲಪ ದೇವರ್ ಬನವಾ
೬ ಸಿಯಲು ಸುಕಸಂಕಥಾ ವಿನೋ
೭ ದದಿಂ ರಾಜ್ಯ[ಂ]*ಗೆಯ್ಯುತ್ತವಿರೆ
೮ ಹರಿಲಸೆಯ ಬಾಣಸಿ ದಾ
೯ ಸಯ್ಯನಾಳುತ್ತವಿರೆ ಗಡಿಗ
೧೦ ಳ ಭೀವ(ಮ) ಒಡಗೆಜಿ³ಮಲ್ಲ ನುಡಿ
೧೧ ದು ಮತ್ತೆನ್ನ ಸೋಮೇಸ್ವರ ದಾಸಗು
೧೨ ಲದ ಭಕ್ತ ಯಾದಿತ್ಯನ [ಕಿರಣ]
೧೩ ವ[ಂ]* ನನ್ದಿಯುಮ[ಂ]* ಮಾಡಿಸಿದ ಬಾ
೧೪ ಣಸಿ ಮಯ್ಯ ಮಂಗಳ ಮಹಾ[ಶ್ರೀ]

ದ್ವಿತೀಯ ಭಾಗ: ೧೫ [ಬಾಣ]ಸಿ ದಾಶಯ್ಯಂ [ಚೈತ್ರ]*
೧೬ ಪವಿತ್ರಕೆ [ಸಿಯ್ದ] ......
೧೭ ಪ್ಪದೇವರ್ಗ್ಗೆ ಬಿಟ್ಟ ಗಟ್ದಿ ಕ[ಮ್ಮ]
೧೮ ೫೦ ಆವಾತ.........ಧರ್ಮ ಸಾಸಿ
೧೯ ರ ಕವಿಲೆಯುಮಂ ಸಾಸಿ
೨೦ ರ್ವ ಬ್ರಾಹ್ಮಣರುಮಂ
೨೧ ನಳಿದ ಪಞ್ಚ ಮಹಾ
೨೨ ಪಾತಕಮಕ್ಕು[ಂ] ಕೊಟ್ಟು
೨೩ ನಡೆದಂಗೆ ಸಾಸಿರ್ವ
೨೪ ಬ್ರಹಾ[ಹ್ಮ*]ಣರಿಗೆಯು[ಮಂ]
೨೫ [ಉ]*ಭ[ಯಮುಃಖಿ]* ಕೊಟ್ಟ ಫಲ[ಂ]*

ಬಹುಶಃ ತಮಿಳುನಾಡನ್ನು ಬಿಟ್ಟರೆ ಕರ್ನಾಟಕದಲ್ಲಿ ದೊರೆಯುವಷ್ಟು ಶಾಸನಗಳು ಭಾರತದ ಯಾವ ಪ್ರಾಂತದಲ್ಲೂ ಇಲ್ಲ. ಸುಮಾರು ೨೦,೦೦೦ಕ್ಕೂ ಹೆಚ್ಚು ಶಾಸನಗಳು ಅಚ್ಚಾಗಿವೆ. ಕರ್ನಾಟಕದಲ್ಲಿ ದೊರೆಯುವ ಅತ್ಯಂತ ಪ್ರಾಚೀನವಾದ ಶಾಸನಗಳೆಂದರೆ ಮೌರ್ಯವಂಶದ ಅಶೋಕ ಚಕ್ರವರ್ತಿಯ (ಕ್ರಿ.ಪೂ. ೨೭೨–೨೩೨) ಧರ್ಮಲಿಪಿಗಳು. ಭಾರತದ ಇತರೆಡೆಗಳಲ್ಲೂ ಈವರೆಗೆ ದೊರಕಿರುವ ಅತ್ಯಂತ ಪ್ರಾಚೀನ ಬರಹಗಳೆಂದರೆ ಈತನ ಧರ್ಮಶಾಸನಗಳೇ. ಇದಕ್ಕೂ ಪೂರ್ವದ ಹರಪ್ಪಾ ಸಂಸ್ಕೃತಿಯ ಮುದ್ರೆಗಳ ಮೇಲಿರುವ ಚಿತ್ರಲಿಪಿಯನ್ನು ಇನ್ನೂ ಸಮರ್ಪಕವಾಗಿ ಓದಿ ಗುರುತಿಸಿಲ್ಲ. ಇಡೀ ಭಾರತದಲ್ಲಿ ಇದುವರೆಗೆ ದೊರೆತ ಅಶೋಕನ ಒಟ್ಟು ೧೩ ಲಘುಶಿಲಾಲೇಖಗಳಲ್ಲಿ (ಮೈನರ್ ರಾಕ್ ಈಡಿಕ್ಟ್ಸ್) ೭ ಶಾಸನಗಳು ಕರ್ನಾಟಕದಲ್ಲಿ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ. ಸಿದ್ದಾಪುರ. ಮತ್ತು ಜಟಿಂಗ–ರಾಮೇಶ್ವರಗಳಲ್ಲಿಯೂ ರಾಯಚೂರು ಜಿಲ್ಲೆಯ ಮಾಸ್ಕಿ. ಗವಿಮಠ ಮತ್ತು ಪಾಲ್ಕಿಗುಂಡು ಎಂಬಲ್ಲಿಯೂ ದೊರೆತಿವೆ. ಇವು ಮೌರ್ಯಕಾಲದ ಬ್ರಾಹ್ಮೀಲಿಪಿಯಲ್ಲಿ ಪ್ರಾಕೃತ ಭಾಷೆಯಲ್ಲಿವೆ. ಬ್ರಹ್ಮಗಿರಿ ಗುಂಪಿನ ಮೂರು ಶಾಸನಗಳ ಕೊನೆಯ ವಾಕ್ಯವಾದ ಚಪಡೇನ ಲಿಖಿತೇ ಲಿಪಿಕರೇಣ ಎಂಬಲ್ಲಿ ಮೊದಲಿನ ಎರಡು ಶಬ್ದಗಳನ್ನು ಬ್ರಾಹ್ಮೀಲಿಪಿಯಲ್ಲಿ ಮತ್ತು ಲಿಪಿಕರೇಣ ಎಂಬ ಶಬ್ದವನ್ನು ಖರೋಷ್ಠಿಲಿಪಿಯಲ್ಲಿ ಬರೆಯಲಾಗಿದೆ. ಕರ್ನಾಟಕ ಶಾಸನಗಳ ಮೊದಲ ಲಿಪಿಕಾರ ಚಪಡ ತನಗೆ ಖರೋಷ್ಠಿ ಲಿಪಿಯ ಜ್ಞಾನ ಇದ್ದಿತೆಂದು ತಿಳಿಸುವುದಕ್ಕಾಗಿ ಆ ಶಬ್ದವನ್ನು ಖರೋಷ್ಠಿಯಲ್ಲಿ ಬರೆದಿರಬಹುದು. ಅಶೋಕನ ಶಾಸನಗಳಲ್ಲಿ ಉಪಯೋಗಿಸಿದ ಬ್ರಾಹ್ಮೀಲಿಪಿಯಿಂದಲೇ ಉತ್ತರ ಹಾಗೂ ದಕ್ಷಿಣ ಭಾರತದ ಎಲ್ಲ ಪ್ರಚಲಿತ ಲಿಪಿಗಳೂ ಉದ್ಭವಿಸಿರುತ್ತವೆ.

ಕನ್ನಡ ವಿಶ್ವಕೋಶ, ಸಂ. ೪. ಪು. ೧೬೪

ಎಸ್. ವಿ. ಸ್ವರ್ಣಲತಾ

ಐತಿಹಾಸಿಕ ದಾಖಲೆಗಳ ವರ್ಗೀಕರಣ ಮತ್ತು ಸಂರಕ್ಷಣೆ

ಮಾನವ ನಾಗರಿಕತೆಯನ್ನು ಇತಿಹಾಸ ಕಾಲ, ಇತಿಹಾಸಪೂರ್ವಕಾಲ ಎಂದು ಎರಡು ಪ್ರಮುಖ ಭಾಗಗಳನ್ನಾಗಿ ಮಾಡುವುದುಂಟು. ಇತಿಹಾಸಪೂರ್ವದ ಕಾಲವನ್ನು ಪ್ರಾಗಿತಿಹಾಸಕಾಲವೆಂದೂ ಕರೆಯುವರು. ಇವೆರಡೂ ಕಾಲಗಳನ್ನು ಪ್ರತ್ಯೇಕಿಸುವುದಕ್ಕೆ ಅವುಗಳಿಗೆ ಬಳಸುವ ಸಾಕ್ಷ್ಯಾಧಾರಗಳ ಸ್ವರೂಪವೇ ಕಾರಣ. ಬಾಯಿಂದ ಬಾಯಿಗೆ ಸಾಗಿ ಬರುತ್ತಿದ್ದ ಪುರಾಣಾದಿಗಳಿಂದ ಆಯ್ದ ಆಧಾರಗಳನ್ನು ಬಳಸಿಕೊಂಡು ಹಿಂದೆ ಇತಿಹಾಸಪೂರ್ವಕಾಲದ ಸ್ವರೂಪವನ್ನು ಅರಿಯಲು ಯತ್ನಿಸಲಾಗುತ್ತಿತ್ತು. ಈಚೆಗೆ ಅವುಗಳ ಜೊತೆಗೆ ಭೂಶೋಧನೆಯಿಂದ ದೊರೆತ ಗತಕಾಲದ ಮಾನವ ಜೀವಿತದ ಕುರುಹುಗಳ ಅವಶೇಷಗಳ ರೂಪದ ಮರ, ಶಿಲೆ, ಲೋಹ. ಮೂಳೆ ಮುಂತಾದವುಗಳಿಂದ ಮಾಡಿದ ಉಪಕರಣ, ಆಯುಧ, ಆಭರಣ ಮೊದಲಾದವನ್ನೂ ಅವರು ವಾಸಿಸುತ್ತಿದ್ದ ಮನೆಗಳು, ಗುಡಿ ಗೋಪುರಗಳು ಮುಂತಾದ ಆಧಾರಗಳನ್ನೂ ಬಳಸಿಕೊಳ್ಳುವುದು ಮೊದಲಾಗಿದೆ. ಇತಿಹಾಸ ರಚನೆಗೆ ಇತರ ಆಧಾರಗಳ ಜೊತೆಗೆ ಲಿಖಿತ ದಾಖಲೆಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಇವೆರಡು ಇತಿಹಾಸ ಹಾಗೂ ಪ್ರಾಗಿತಿಹಾಸಗಳ. ವ್ಯತ್ಯಾಸವನ್ನು ಸೂಚಿಸಬಹುದಾದರೂ ಅವೆರಡನ್ನು ಪ್ರತ್ಯೇಕಿಸುವ ಕಾಲವನ್ನು ನಿರ್ದಿಷ್ಟವಾಗಿ ಹೇಳುವಂತಿಲ್ಲ. ಸಾಮಾನ್ಯವಾಗಿ ಬರೆವಣಿಗೆ ಪ್ರಚಾರಕ್ಕೆ ಬರುವುದಕ್ಕೆ ಮುಂಚಿನ ಕಾಲವನ್ನು ಇತಿಹಾಸಪೂರ್ವಕಾಲವೆಂದೂ ಅನಂತರದ ಕಾಲವನ್ನು ಇತಿಹಾಸ ಕಾಲವೆಂದೂ ಸ್ಥೂಲವಾಗಿ ಹೇಳಬಹುದು. ಆದರೆ ಬರೆವಣಿಗೆ ಎಲ್ಲ ದೇಶಗಳಲ್ಲೂ ಏಕಕಾಲದಲ್ಲಿ ಪ್ರಚಾರಕ್ಕೆ ಬರಲಿಲ್ಲ. ಇಂಗ್ಲೆಂಡಿನಲ್ಲಿ ಅದು ಸಹಸ್ರಾರು ವರ್ಷಗಳ ಹಿಂದೆಯೆ ಪ್ರಚಾರಕ್ಕೆ ಬಂದಿದ್ದರೂ ಅಮೆರಿಕದ ರೆಡ್ ಇಂಡಿಯನ್ನರಲ್ಲಿ ಈಚೆಗೆ ಪ್ರಚಾರಕ್ಕೆ ಬಂತು. ಭಾರತದಲ್ಲಿ ಅದು ಕ್ರಿ.ಪೂ. ೪೦೦ರ ಸುಮಾರಿನಲ್ಲಿ ಪ್ರಚಾರಕ್ಕೆ ಬಂದಿರಬಹುದೆಂದು ಭಾವಿಸಿ, ಅದಕ್ಕೆ ಹಿಂದಿನ ಕಾಲವನ್ನು ಇತಿಹಾಸಪೂರ್ವದ ಕಾಲವೆಂದು ಪರಿಗಣಿಸಲಾಗುತ್ತಿದೆ.

ಇತಿಹಾಸ ರಚನೆಗೆ ದಾಖಲೆಗಳ ಪ್ರಾಮುಖ್ಯ

ಪ್ರಾಗಿತಿಹಾಸ ಕಾಲವನ್ನರಿಯುವುದಕ್ಕೆ ಪುರಾಣಾದಿಗಳಲ್ಲಿ ಕಂಡುಬರುವ ರಾಜರ ವಂಶಾವಳಿ. ಅವರ ಆಡಳಿತದ ಸ್ವರೂಪ, ಅಂದಿನ ಸಮಾಜ ರಚನೆ, ಜನರ ಜೀವನ ದೃಷ್ಟಿ, ಅದರಿಂದ ಪ್ರೇರಿತವಾದ ಘಟನೆಗಳು, ಅಂದಿನ ಸಾಮಾಜಿಕ ಸಂಘ ಸಂಸ್ಥೆಗಳು ಮುಂತಾದ ಆಧಾರಾಂಶಗಳು ಬೇಕಾದ ಹಾಗೆ ಸಿಕ್ಕುತ್ತವೆ. ಆದರೆ ಅವುಗಳಲ್ಲಿ ಅವಾಸ್ತವವೆನ್ನಬಹುದಾದ ಪವಾಡಗಳೂ ತುಂಬಿವೆ. ಆದ್ದರಿಂದ ಇತಿಹಾಸಕ್ಕೆ ಅದಷ್ಟೇ ಆಧಾರ ಸಾಲದು. ಈಚೆಗೆ ಉತ್ಖನನದಿಂದ ದೊರೆತ ಅವಶೇಷಗಳನ್ನು ಅವುಗಳೊಡನೆ ಹೋಲಿಸಿಕೊಂಡು ಹೆಚ್ಚು ವಾಸ್ತವವೆನಿಸುವಂತೆ ಪ್ರಾಗಿತಿಹಾಸ ಕಾಲವನ್ನು ಪುನರ್ರಚಿಸುವ ಯತ್ನ ನಡೆದಿದೆ.

ಬ್ರಿಟಿಷರು ಭಾರತದಲ್ಲಿ ಮೊದಮೊದಲು ರಾಜ್ಯ ಕಟ್ಟುವ ಕಡೆ ಗಮನ ಕೊಟ್ಟರೇ ಹೊರತು ಇಲ್ಲಿನ ಕಲೆ, ಸಂಸ್ಕೃತಿ, ನಾಗರಿಕತೆಗಳ ಕಡೆ ಗಮನ ಹರಿಸಲಿಲ್ಲ. ಆದರೆ ಕೆಲವರು ಇಲ್ಲಿನ ಪ್ರಾಚೀನ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನ ಮಾಡಿ ಅದರ ಮಹತ್ವವನ್ನು ಪ್ರಪಂಚಕ್ಕೆ ತೋರಿಸಿಕೊಡಲು ದೃಢ ಪ್ರಯತ್ನ ನಡೆಸಿದರು. ಜೇಮ್ಸ್ ಪ್ರಿನ್ಸೆಪ್ ಎಂಬುವನು ಬ್ರಾಹ್ಮೀ ಲಿಪಿಯನ್ನು ಅರ್ಥಮಾಡಿಕೊಟ್ಟು ಮೌರ್ಯರ ಕಾಲದ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳನ್ನು ಓದಿ ಅರ್ಥಮಾಡಿಕೊಳ್ಳಲು ಸಹಾಯ ಮಾಡಿದ. ವಿಲಿಯಂ ಜೇಮ್ಸ್ ರಂಥ ಪಂಡಿತರು ಸಂಸ್ಕೃತದ ಮಹಾಕೃತಿಗಳನ್ನು ಓದಿ ವ್ಯಾಖ್ಯಾನಗಳನ್ನು ಬರೆದು ಪ್ರಾಚೀನ ಕಾಲದ ಭಾರತದ ಸಂಸ್ಕೃತಿ ಸಾಹಿತ್ಯಗಳ ವೈಭವವನ್ನು ಬೆಳಕಿಗೆ ತಂದರು. ಅನಂತರ ಅಲೆಕ್ಸಾಂಡರ್ ಕನಿಂಗ್‌ಹ್ಯಾಂ ಎಂಬ ತರುಣ ಅಧಿಕಾರಿಯೊಬ್ಬ ಇಲ್ಲಿಯ ತನ್ನ ಅಧಿಕಾರಾವಧಿಯಲ್ಲಿ (೧೮೬೧–೧೮೬೫) ಪ್ರಿನ್ಸೆಪ್‌ರ ಸಹೋದ್ಯೋಗಿಯಾಗಿದ್ದು ಇಲ್ಲಿಯ ಪ್ರಾಚೀನ ಸ್ಮಾರಕಗಳ ಸಮೀಕ್ಷೆ ನಡೆಸಿ ದೇಶಾದ್ಯಂತ ಹರಡಿಕೊಂಡಿದ್ದ ಶಾಸನಗಳನ್ನು ಸಂಗ್ರಹಿಸಿ ಓದಿ ಅರ್ಥಮಾಡಿ ಕೊಡುವ ಕಾರ್ಯದಲ್ಲಿ ಅಮೋಘ ಸೇವೆ ಸಲ್ಲಿಸಿದ. ಆದ್ದರಿಂದಲೇ ಅವನನ್ನು ಪುರಾತತ್ವಶಾಸ್ತ್ರದ ಪಿತಾಮಹ ಎಂದು ಭಾರತ ಗೌರವಿಸುತ್ತಿರುವುದು. ಅನಂತರ ಲಾರ್ಡ್ ಕರ್ಜನ್ (೧೮೯೯–೧೯೦೫) ಪುರಾತತ್ವಶಾಸ್ತ್ರ ಶಾಖೆಯನ್ನೇ ರ್ಪಡಿಸಿ ಜಾನ್ ಮಾರ್ಷಲ್ ಎಂಬ ಪಂಡಿತನನ್ನು ಅದರ ಪ್ರಥಮ ನಿರ್ದೇಶಕನನ್ನಾಗಿ ನೇಮಿಸಿದ. ಅವನು ಸಿಂಧೂನದಿಯ ಬಯಲಿನಲ್ಲಿ ಹರಪ್ಪ–ಮೊಹೆಂಜೊದಾರೊ ಪ್ರದೇಶದಲ್ಲಿ ನಡೆಸಿದ ಭೂಶೋಧನೆಯಲ್ಲಿ ದೊರೆತ ಅವಶೇಷಗಳ ಆಧಾರದ ಮೇಲೆ ೪–೫ ಸಹಸ್ರ ವರ್ಷಗಳ ಹಿಂದೆ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ನಾಗರಿಕತೆಯೊಂದನ್ನು ಮೊಟ್ಟಮೊದಲು ಬೆಳಕಿಗೆ ತಂದ. ಪುರಾತತ್ವ ಶಾಸ್ತ್ರದಲ್ಲಿ ಅನೇಕರಿಗೆ ತರಬೇತು ನೀಡಿ ಆ ಕಾರ್ಯಕ್ಕಾಗಿ ತಜ್ಞರನ್ನೂ ರೂಪಿಸಿದ. ಅನಂತರದ ದಿನಗಳಲ್ಲಿ ಭಾರತದ ಬೇರೆ ಬೇರೆ ಭಾಗಗಳಲ್ಲಿ ನಡೆದ ಉತ್ಖನನಗಳ ಫಲವಾಗಿ ಇಲ್ಲಿಯ ಪ್ರಾಗಿತಿಹಾಸದ ಬಗ್ಗೆ ಹೊಸ ಹೊಸ ಅಂಶಗಳು ಬೆಳಕಿಗೆ ಬರುತ್ತಿವೆ. ಪುರಾಣಗಳಲ್ಲಿ ಹೇಳಿರುವ ಘಟನೆಗಳ ಕಾಲವನ್ನು ನಿರ್ಣಯಿಸುವಾಗ ರಾಜರ ವಂಶಾವಳಿ, ಅವಶೇಷಗಳು, ಕಾರ್ಬನ್–೧೪ ಪರೀಕ್ಷೆ, ಜ್ಯೋತಿಷ್ಯ ಮತ್ತು ಅಡ್ಡ ಸಂಪರ್ಕ (cross contact) ಮುಂತಾದ ವಿಧಾನಗಳಿಂದ ಹೆಚ್ಚು ನಿಕರತೆಯನ್ನು ಸಾಧಿಸುವ ಯತ್ನ ನಡೆದಿದೆ. ದೆಹಲಿಯ ಕಾಲಗಣನ ಶಾಸ್ತ್ರಜ್ಞರು ಈಚೆಗೆ ಪ್ರಕಟಿಸಿರುವ ಒಂದು ಗ್ರಂಥದಲ್ಲಿನ ಮೇಲಿನ ತಂತ್ರವನ್ನನುಸರಿಸಿ ಪುರಾಣಾದಿಗಳಲ್ಲಿ ಕಂಡುಬರುವ ಅನೇಕ ಸಂಗತಿಗಳ ಕಾಲ ನಿರ್ಣಯಮಾಡಿರುವರು. ಮಹಾ ಭಾರತ ಯುದ್ಧದ ಕಾಲವನ್ನು ಕ್ರಿ.ಪೂ. ೧೪೨೪ ಎಂದು ನಿರ್ಧರಿಸಿರುವರು. ಅದನ್ನೇ ಅವರು ಆರಂಭ ವರ್ಷವೆಂದು ಪರಿಗಣಿಸಿ ಇತಿಹಾಸಪೂರ್ವದ ಅನೇಕ ಸಂಗತಿಗಳ ಕಾಲನಿರ್ಣಯವನ್ನು ಮಾಡಿರುವರು. ಹಾಗೂ ಸಾಪೇಕ್ಷ, ನಿರಪೇಕ್ಷ ಕಾಲಗಳೆರಡನ್ನೂ ಗುರುತಿಸಿರುವರು.

ಇತಿಹಾಸ ಆರಂಭವಾದಂತೆ ಬರವಣಿಗೆ ರೂಪುಗೊಂಡಿದ್ದರಿಂದ ಜನರು ತಮ್ಮ ಸಾಧನೆಗಳನ್ನು ಗುರುತಿಸಲು ಆ ಮಾಧ್ಯಮವನ್ನು ಬಳಸಿಕೊಳ್ಳಲಾರಂಭಿಸಿದರು. ರಾಜರು ತಾವು ಸಾಧಿಸಿದ ವಿಜಯ, ಆಚರಿಸಿದ ಯಜ್ಞಯಾಗಾದಿಗಳು, ನಿರ್ಮಿಸಿದ ಗುಡಿ ಗೋಪುರಗಳು, ಸ್ಥಾಪಿಸಿದ ಸಂಘ ಸಂಸ್ಥೆಗಳು, ನೀಡಿದ ದಾನದತ್ತಿಗಳು–ಇವೇ ಮುಂತಾದುವನ್ನು ಶಿಲೆ ಅಥವಾ ಲೋಹದ ಮೇಲೆ ಬರೆಸಿಡುವ ಪದ್ಧತಿ ಬೆಳೆದು ಬಂತು. ಸಾಮಾನ್ಯ ಜನರೂ ತಮ್ಮ ಕಾಲದ ಸಾಹಸ ಕಾರ್ಯಗಳ ಬಗ್ಗೆ ಶಿಲಾಶಾಸನ, ತಾಮ್ರಶಾಸನ, ವೀರಗಲ್ಲು, ಮಾಸ್ತಿಕಲ್ಲು ಮುಂತಾದವುಗಳ ರೂಪದಲ್ಲಿ ಉಲ್ಲೇಖಿಸಿರುವುದುಂಟು. ಹೀಗೆ ಅಸ್ತಿತ್ವಕ್ಕೆ ಬಂದ ಶಾಸನಗಳೂ ಇತರ ಸ್ಮಾರಕಗಳೂ ಒಮ್ಮೊಮ್ಮೆ ವೈಯಕ್ತಿಕ ಅಶೋತ್ತರಗಳಿಂದ ರಚನೆಯಾಗಿದ್ದರೂ ಆ ಕಾಲದ ಇತಿಹಾಸವನ್ನು ಬರೆಯುವವರಿಗೆ ಅಮೂಲ್ಯ ಆಧಾರಗಳೆನಿಸಿವೆ. ಅವು ತಾವು ಅಸ್ತಿತ್ವಕ್ಕೆ ಬಂದ ಕಾಲ, ಅಂದು ನಡೆದ ಘಟನೆಗಳು, ಅವುಗಳಿಗೆ ಪ್ರೇರಣೆಗಳು, ಅಂದಿನ ಜೀವನ ದೃಷ್ಟಿ, ಜನಜೀವನದಲ್ಲಿ ಗೋಚರಿಸಿದ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಆಂದೋಳನಗಳು–ಇವೇ ಮುಂತಾದ ಅಂಶಗಳನ್ನು ಒಳಗೊಂಡಿವೆ. ಬೇರೆ ಬೇರೆ ಕಾಲಗಳಲ್ಲಿ ರಚನೆಯಾದ ಶಾಸ್ತ್ರ, ಕಾವ್ಯ, ನಾಟಕ ಮುಂತಾದ ಸಾಹಿತ್ಯ ಕೃತಿಗಳಲ್ಲೂ ಇತಿಹಾಸಕ್ಕೆ ಸೇರಬಹುದಾದ ಸಂಗತಿಗಳಿವೆ. ರಾಜರ ವಂಶಾವಳಿಗಳು, ಅಂದಿನ ಪ್ರಸಿದ್ಧ ವ್ಯಕ್ತಿಗಳ ವಿಷಯ, ಜನಜೀವನದ ಸ್ವರೂಪ ಮುಂತಾದ ಅಂಶಗಳನ್ನು ಅಲ್ಲಿ ಕಾಣಬಹುದು. ಶಾಸನ ಸಾಕ್ಷ್ಯಗಳೊಡನೆ ಹೋಲಿಸಿ ನೋಡಿ ಸತ್ಯಾಂಶ

ಗಳನ್ನು ನಿರ್ಧರಿಸಲು ಅವು ಸಹಾಯವಾಗುತ್ತವೆ. ಹಾಗೂ ಹಲವು ಇತಿಹಾಸದ ಕೃತಿಗಳೇ ಆಗಿ ರೂಪುಗೊಂಡಿವೆ. ಅಂಥ ಕೃತಿಗಳು ಭಾರತದಲ್ಲಿ ಗ್ರೀಸ್, ಚೀನ ಮುಂತಾದ ಪ್ರಾಚೀನ ಸಂಸ್ಕೃತಿಯ ದೇಶಗಳಲ್ಲಿ ರಚನೆಯಾದಷ್ಟು ಹಿಂದೆ ರಚನೆಯಾಗಿಲ್ಲದಿದ್ದರೂ ಹತ್ತನೆಯ ಶತಮಾನದ ಅನಂತರ ಅವುಗಳ ರಚನೆ ಆರಂಭವಾಗಿದೆ. ಪ್ರಾಚೀನ ಕಾಲದ ಇತಿಹಾಸ ರಚನೆಗೆ ಶಾಸನ ಮತ್ತು ಸಾಹಿತ್ಯ ಕೃತಿಗಳಂತೆ ಗುಡಿ ಗೋಪುರಗಳೂ ಚೈತ್ಯ, ಬಸದಿ ವಿಹಾರಾದಿಗಳೂ ಪ್ರಮುಖ ಆಧಾರಗಳನ್ನೊದಗಿಸುತ್ತವೆ.

ಆಧುನಿಕ ಕಾಲದ ಇತಿಹಾಸ ರಚನೆಗೆ ಮೇಲಿನ ಆಧಾರಗಳಿಗಿಂತ ಹೆಚ್ಚು ನಂಬಲರ್ಹವೂ ಉಪಯುಕ್ತವೂ ಆದ ಆಧಾರಗಳು ರೂಪುಗೊಂಡಿವೆ. ಅವೆಲ್ಲ ಬಹುಮಟ್ಟಿಗೆ ಲಿಖಿತ ಪತ್ರಗಳ ರೂಪದಲ್ಲಿವೆ. ಸರ್ಕಾರದ ದಾಖಲೆ ಪತ್ರಗಳು ಅವುಗಳಲ್ಲಿ ಮುಖ್ಯವಾದವು. ಜೊತೆಗೆ, ಪ್ರಮುಖ ವ್ಯಕ್ತಿಗಳು ನಡೆಸಿದ ಪತ್ರವ್ಯವಹಾರಮಾಲೆ. ಕೋರ್ಟಿನ ತೀರ್ಮಾನಗಳು, ರಾಜಕೀಯ ಧಾರ್ಮಿಕ ಪಕ್ಷ ಪಂಥಗಳ ಸಮ್ಮೇಳನಗಳ ವರದಿಗಳು, ಅಂತಿಮ ಇಷ್ಟಪತ್ರಗಳು, ಪತ್ರಿಕೆಗಳಲ್ಲಿ ಪ್ರಕಟವಾದ ವರದಿ ಮತ್ತು ಸಂಪಾದಕೀಯ, ಲೇಖನಗಳು, ಆಕಸ್ಮಿಕ ಉಲ್ಲೇಖಗಳು, ಪ್ರಮುಖ ಘಟನೆಗಳು ಮತ್ತು ಮಹಾಪುರುಷರ ನೆನಪಿಗಾಗಿ ಏರ್ಪಡುವ ಸ್ಮಾರಕಗಳು, ಸಮಾರಂಭಗಳ ಉಲ್ಲೇಖಗಳು-ಇವೆಲ್ಲ ಆ ಕಾರ್ಯದಲ್ಲಿ ನೆರವಾಗಬಲ್ಲವು. ಮೇಲಿನ ದಾಖಲೆಗಳಲ್ಲಿ ಸರ್ಕಾರದ ಪತ್ರಗಳು ಸಂಖ್ಯೆಯಲ್ಲೂ ನಿಷ್ಕೃಷ್ಟತೆ ಮತ್ತು ವ್ಯಾಪ್ತಿಯಲ್ಲೂ ಪ್ರಮುಖ ದಾಖಲೆಗಳೆನಿಸುತ್ತವೆ. ಸಾಮಾನ್ಯವಾಗಿ ಅಂಥ ದಾಖಲೆಗಳನ್ನು ಆಯಾ ಕಾರ್ಯಾಲಯದಲ್ಲಿ ನಿರ್ದಿಷ್ಟ ಕಾಲಾವಧಿಯವರೆಗೆ ಪ್ರಚಲಿತ ದಾಖಲೆಗಳೆಂದು ಪರಿಗಣಿಸಿ ರಕ್ಷಿಸಿಡುವುದುಂಟು. ಅನಂತರ ಅವು ಅಪ್ರಚಲಿತ ದಾಖಲೆಗಳಾಗುತ್ತವೆ. ಅವನ್ನು ಯಾವುದಾದರೂ ಕೋಣೆಯಲ್ಲಿ ಒಟ್ಟಲು ಹಾಕುವುದುಂಟು. ಮುಂದೆ ಇತಿಹಾಸ ಲೇಖಕರಿಗೆ ಅವುಗಳಲ್ಲಿರಬಹುದಾದ ಆಧಾರಗಳ ಬಗ್ಗೆ ಯಾವ ಕಾರ್ಯಾಲಯವೂ ಅಷ್ಟಾಗಿ ಗಮನ ಕೊಡುವುದಿಲ್ಲ. ಏಕೆಂದರೆ ಅದು ಅವರ ಕರ್ತವ್ಯ ಪರಿಮಿತಿಯಲ್ಲಿ ಸೇರುವುದಿಲ್ಲ. ಅನೇಕ ವೇಳೆ ಆಕಸ್ಮಿಕಗಳಿಂದಲೊ ಇತರ ಕಾರಣಗಳಿಂದಲೊ ಅವೆಲ್ಲ ಇದ್ದೆಡೆಯೆ ಹಾಳಾಗುವುದುಂಟು. ಅದರಿಂದ ಇತಿಹಾಸ ರಚನೆಗೆ ಅನೇಕ ವೇಳೆ ಪರಿಹರಿಸಲಾಗದ ನಷ್ಟ ಸಂಭವಿಸಬಹುದು. ಎಂದ ಮೇಲೆ ಐತಿಹಾಸಿಕ ಪ್ರಾಮುಖ್ಯವುಳ್ಳ ಸರ್ಕಾರದ ಕಾಗದ ಪತ್ರಗಳ ಸಂರಕ್ಷಣೆ ಎಷ್ಟು ಮುಖ್ಯ ಕಾರ್ಯವೆಂಬುದು ಸ್ಪಷ್ಟಪಡುತ್ತದೆ.

ಆಧುನಿಕ ಸ್ವರೂಪದಲ್ಲಿ ಇತಿಹಾಸ ಒಂದು ಜ್ಞಾನಶಾಖೆಯಾಗಿರುವುದು ಅದರ ವ್ಯವಸ್ಥಿತ ಜ್ಞಾನಕ್ಕಾಗಿ. ಈ ವ್ಯವಸ್ಥೆ ತನ್ನದೇ ಆದ ವಿಧಾನವನ್ನು ರೂಪಿಸಿಕೊಂಡಿದೆ. ಐತಿಹಾಸಿಕ ಘಟನೆಗಳನ್ನು ಗುರುತಿಸುವುದು. ಅದರ ಸತ್ಯಾಂಶಗಳನ್ನು ದೃಢಪಡಿಸಿಕೊಳ್ಳುವುದು, ಅವಕ್ಕೆ ಪ್ರೇರಕವಾಗಿ ಕೆಲಸ ಮಾಡಿದ ಸನ್ನಿವೇಶ, ಸಂದರ್ಭ, ಭಾವುಕತೆ ಮುಂತಾದವುಗಳನ್ನು ಗುರುತಿಸಿ ಕಾರ್ಯಕಾರಣ ಸಂಬಂಧದಿಂದ ಬಿಡಿಬಿಡಿಯಾದ ಅಂಶಗಳನ್ನು ಕೊಂಡಿಗೂಡಿಸಿ ಸಂತತ ಪ್ರವಾಹದೋಪಾದಿಯಲ್ಲಿ ವಿವರಿಸುವುದು, ಕಾಲಗಣನೆ–ಇವೇ ಮುಂತಾದ ಅಂಶಗಳನ್ನು ನಿರೂಪಿಸುವುದಕ್ಕಾಗಿ ನಿರ್ದಿಷ್ಟ ಕ್ರಮಗಳೂ ತಂತ್ರಗಳೂ ರೂಪುಗೊಂಡಿವೆ. ಗತಕಾಲದ ಘಟನೆಗಳು ಇತಿಹಾಸರಚನೆಗೆ ಮೂಲಭೂತ ಅಂಶ; ಹಾಗೆ ಗುರುತಿಸಿದ ಘಟನೆಗಳಿಗೆ ಅರ್ಥ ಕಲ್ಪಿಸಿ ಕಾರ್ಯಕಾರಣ ಸಂಬಂಧಗಳ ಕೊಂಡಿಗೂಡಿಸಿದಾಗ ಅದು ಇತಿಹಾಸದ ಒಂದು ಸಂಗತಿಯಾಗುತ್ತದೆ. ಹಾಗೆ ರೂಪಿಸಿದ ಸಂಗತಿ ವಸ್ತುನಿಷ್ಠವಾಗಿದ್ದು ಸರ್ವರೂ ಪರಿಗ್ರಹಿಸುವಂತಿರಬೇಕು. ಅದು ಒಂದು ವೈಯಕ್ತಿಕ ನಿರೂಪಣೆಯಾಗಿರುವುದರ ಬದಲು ಸಾಧಾರವಾಗಿ ಕ್ರಮಬದ್ಧವಾಗಿ ಸಂಶೋಧನೆಯಿಂದ ನಿಷ್ಕರ್ಷಿಸಿದ್ದಾಗಿರಬೇಕು. ಆಧುನಿಕ ಇತಿಹಾಸದ ಲೇಖಕರು ಅದರ ನಿರೂಪಣೆಯಂತೆ ಅದನ್ನು ನಿರೂಪಿಸುವ ವಿಧಾನವೂ ಮುಖ್ಯವೆಂದು ಭಾವಿಸುವರು. ಎಂದರೆ ಗತಕಾಲದ ಘಟನೆಯೊಂದರ ಮೇಲೆ ತಜ್ಞರು ಬರೆದ ನಿರೂಪಣೆ ಇತಿಹಾಸದ ಸಂಗತಿಯೆನಿಸುತ್ತದೆ. ಇದರ ಜೊತೆಗೆ ಕಾಲ, ಸಂಖ್ಯೆ, ಘಟನೆಗೆ ಸಂಬಂಧಿಸಿದ ಪ್ರಮಾಣಗಳೂ ಇತಿಹಾಸ ರಚನೆಗೆ ಅಗತ್ಯವಾಗುತ್ತವೆ. ಇವು ಇತಿಹಾಸದ ಮೂಲವಸ್ತುಗಳು ಮಾತ್ರ ಅವನ್ನು ಒಟ್ಟುಗೂಡಿಸುವಾಗ ಬಳಸುವ ಲೇಖಕನ ಭಾಷೆ ಪ್ರಮುಖ ಪಾತ್ರವಹಿಸುತ್ತದೆ. ಅದು ಎಷ್ಟು ಉಚಿತವಾಗಿದ್ದರೆ ಅಷ್ಟೂ ವಾಸ್ತವ ರೂಪವನ್ನು ತರುತ್ತದೆ. ಉದಾ: 'ತಿಳಿಸಿದ' ಎಂಬುದನ್ನು 'ಸಾರಿದ', 'ಹೇಳಿದ' 'ಸೂಚಿಸಿದ' 'ಘೋಷಿಸಿದ' 'ಪ್ರಕಟಿಸಿದ'–ಈ ಮೊದಲಾದ ಅನೇಕ ಪದಗಳಿಂದ ವ್ಯಕ್ತಪಡಿಸಬಹುದು. ಒಂದೊಂದು ಪದವೂ

ತನ್ನದೇ ಆದ ಅರ್ಥಛಾಯೆಯನ್ನು ಹೊಂದಿರುವುದರಿಂದ ಸಂಗತಿ ವಸ್ತುನಿಷ್ಠವಾಗುವುದರ ಬದಲು ಕೃತಕವೂ ವ್ಯಕ್ತಿನಿಷ್ಠವೂ ಆಗಬಹುದು. ಸರಿಯಾದ ಭಾಷೆಯ ಬಳಕೆಯ ಔಚಿತ್ಯದ ಬಗ್ಗೆಯೂ ಇತಿಹಾಸ ರಚಿಸುವವರು ಎಚ್ಚರ ವಹಿಸಬೇಕಾಗುತ್ತದೆ.

ಕಾರ್ಯಕಾರಣ ಸಂಬಂಧ ಕಲ್ಪನೆ ಮತ್ತು ವಿವರಣೆ

ಇತಿಹಾಸ ಸಂಬಂಧಪಟ್ಟ ಬಿಡಿ ಘಟನೆಗಳ ಸಂಗ್ರಹವಲ್ಲ: ಆ ಘಟನೆಗಳನ್ನು ಕಾಲಕ್ರಮದಲ್ಲಿ ಅಳವಡಿಸಿ ಅರ್ಥ ಕಲ್ಪನೆಯ ವಿವರಣೆಗಳಿಂದ ಸಮಗ್ರತೆಯನ್ನು ನೀಡಬೇಕು. ಅದಕ್ಕೆ ಬಳಸುವ ವಿವರಣೆ ಅರ್ಥ ಕಲ್ಪಿಸುವ ಸಂಕೀರ್ಣ ಕ್ರಿಯೆ. ಅಂಥ ವಿವರಣೆಗಳು ನಿರೂಪಣೆಗಳ ರೂಪದಲ್ಲಿರುವುದು ಒಳ್ಳೆಯದು. ಅನೇಕ ವೇಳೆ ಒಂದೊಂದು ಘಟನೆಗೂ ಹಲವಾರು ಕಾರಣಗಳು ಸಂಬಂಧಿಸಿರುವುದುಂಟು. ಇತಿಹಾಸದಲ್ಲಿ ಅವನ್ನು ಅಳವಡಿಸುವಾಗ ಅವು ಒಂದಕ್ಕೊಂದು ಪೂರಕವಾಗಿರುವಂತೆ ನೋಡಿಕೊಳ್ಳಬೇಕು. ಆದರಿಂದ ಹಲವು ಅಂಶಗಳಿಂದ ಒಂದು ಘಟನೆ ಸಂಘಟಿಸಿತೆಂಬ ವಿಚಾರ ಸ್ಪಷ್ಟವಾಗಿ. ಆ ನಿರೂಪಣೆ ಒಂದು ನಿಯಮದ ಸ್ವರೂಪವನ್ನು ತಾಳುತ್ತದೆ. ಇತಿಹಾಸದಲ್ಲಿ ಸ್ಪಷ್ಟಪಡುವ ಇಂಥ ಹಲವಾರು ನಿಯಮಗಳ ಆಧಾರದ ಮೇಲೆ ಸಾಮಾನ್ಯ (ಸಾರ್ವತ್ರಿಕ) ನಿಯಮಗಳನ್ನು ರೂಪಿಸಿ ಅವುಗಳ ಆಧಾರದ ಮೇಲೆ ಹಿಂದಿನ ಸಂಗತಿಗಳನ್ನು ಪುನರ್ನಿರ್ಮಿಸುವ, ಹಾಗೂ ಮುಂದಿನ ಸಂಗತಿಗಳ ಬಗ್ಗೆ ಭವಿಷ್ಯ ಹೇಳುವ ಕಾರ್ಯವನ್ನೂ ಮಾಡಬಹುದು ಎಂದು ಕೆಲವರು ಭಾವಿಸುವರು. ಅಂಥವರು ಇತಿಹಾಸವನ್ನು ಒಂದು ವಿಜ್ಞಾನವನ್ನಾಗಿ ಮಾಡಬಯಸುವರು. ಇದು ವಾದಗ್ರಸ್ತವಾದ ಪ್ರಯತ್ನವೆನ್ನಬಹುದು.

ಲಿಖಿತ ಆಧಾರಗಳ ಉಪಯುಕ್ತತೆ

ಆಧುನಿಕ ಇತಿಹಾಸ ಲೇಖನಕ್ಕೆ ಇತರ ಆಧಾರಗಳು ಅಗತ್ಯವಾಗುವುದಾದರೂ ಕಾಗದ ಪತ್ರಗಳು ಬಹುಮುಖ್ಯ ಆಧಾರಗಳಾಗುತ್ತವೆ. ವ್ಯಕ್ತಿಗಳ ದಿನಚರಿ, ಪತ್ರಿಕೆಗಳ ವರದಿ ಮತ್ತು ಸಂಪಾದಕೀಯ, ಸಂಘ ಸಂಸ್ಥೆಗಳು ಪ್ರಕಟಪಡಿಸುವ ಕಾರ್ಯಕ್ರಮಗಳ ವರದಿ, ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಕಾರ್ಯಕಲಾಪಗಳ ವರದಿ, ರಾಷ್ಟ್ರ ರಾಷ್ಟ್ರಗಳ ನಡುವೆ ಏರ್ಪಡುವ ಕೌಲು, ಒಪ್ಪಂದ ಮುಂತಾದವುಗಳ ಪತ್ರಗಳು, ಆಡಳಿತ ವರದಿಗಳು, ಯುದ್ಧ ಕಾರ್ಯಾಚರಣೆಯ ವರದಿಗಳ ಪ್ರಕಟಣೆ, ಸರ್ಕಾರದ ಆಯೋಗ ನಿಯೋಗಗಳ ವರದಿಗಳು, ಕೋರ್ಟು-ಕಛೇರಿಗಳ ದಾಖಲೆಗಳು-ಇವೆಲ್ಲ ಸರ್ಕಾರದ ಕಾಗದಪತ್ರಗಳು-ಬಹುಮುಖ್ಯ ಆಧಾರಗಳಾಗುತ್ತವೆ. ಸಾಮಾನ್ಯವಾಗಿ ಅವು ನಿಷ್ಪಕ್ಷಪಾತವಾದ ವಾಸ್ತವಿಕ ಅಂಶಗಳನ್ನು ಒಳಗೊಂಡಿದ್ದು ಅವುಗಳ ಬಳಕೆ ಇತಿಹಾಸ ಲೇಖನಕ್ಕೆ ವಸ್ತುನಿಷ್ಠೆಯನ್ನು ತರುತ್ತದೆ. ಹಾಗೂ ಘಟನೆಯೊಂದಕ್ಕೆ ಸಂಬಂಧಿಸಿದ ಬೆಳವಣಿಗೆಯನ್ನು ಕಾರ್ಯಕಾರಣ ದೃಷ್ಟಿಯಿಂದ ಪರಿಶೀಲಿಸುವ ಪತ್ರಗಳು ಅನುಕ್ರಮವಾಗಿ ಜೋಡಿರುವುದರಿಂದ ಸಂಗತಿಗಳ ನಿರೂಪಣೆಗೆ ತುಂಬ ಸಹಾಯಕವೆನಿಸುತ್ತವೆ. ಆಧುನಿಕ ಕಾಲದಲ್ಲಿ ಎಲ್ಲ ದೇಶಗಳಲ್ಲೂ ಸರ್ಕಾರ ಒಂದು ಶಾಶ್ವತ ಸಂಸ್ಥೆಯ ರೂಪದಲ್ಲಿ ಮುಂದುವರಿಯುವುದರಿಂದಲೂ ಆಯಾ ರಾಷ್ಟ್ರದ ಎಲ್ಲ ಜೀವನ ಕ್ಷೇತ್ರಗಳೂ ಅದರ ಆಡಳಿತ ಪರಿಮಿತಿಯಲ್ಲಿ ಬರುವುದರಿಂದಲೂ ಅಲ್ಲಿಯ ಇತಿಹಾಸದ ಬಹುಭಾಗದ ರಚನೆಗೆ ಸಂತತವಾಗಿ ಬೆಳೆದು ಬಂದಿರುವ ದಾಖಲೆಗಳಿರುತ್ತವೆ. ಆದ್ದರಿಂದಲೆ ಈಚೆಗೆ ಎಲ್ಲ ದೇಶಗಳಲ್ಲೂ ಸರ್ಕಾರದ ಕಾಗದ ಪತ್ರಗಳನ್ನು ಕ್ರಮವಾಗಿ ಸಂಗ್ರಹಿಸುವ ಕಾರ್ಯ ಆರಂಭವಾಗಿದೆ.

ಭಾರತದಲ್ಲಿ ೧೮೯೧ರಲ್ಲಿ ಬ್ರಿಟಿಷರು ಸಾಮ್ರಾಜ್ಯ ಸರ್ಕಾರದ ದಾಖಲೆಗಳನ್ನು ಕಲ್ಕತ್ತದ ಆಡಳಿತ ಸೌಧದ ಒಂದು ಕೊಠಡಿಯಲ್ಲಿ ಸಂಗ್ರಹಿಸಿಡುವ ಕಾರ್ಯ ಕೈಗೊಂಡರು. ಅನಂತರ ಅದು ೧೯೨೬ರಲ್ಲಿ ಅಲ್ಲಿಂದ ದೆಹಲಿಗೆ ವರ್ಗವಾಯಿತು. ಸ್ವಾತಂತ್ರ್ಯಾನಂತರ ಅದು ರಾಷ್ಟ್ರೀಯ ಪತ್ರಾಗಾರವೆಂಬ ಹೆಸರನ್ನು ತಳೆಯಿತು. ಅಲ್ಲಿ ಭಾರತದ ಆಧುನಿಕ ಇತಿಹಾಸಕ್ಕೆ ಸಂಬಂಧಿಸಿದ ಲಕ್ಷಾಂತರ ಕಾಗದಪತ್ರಗಳನ್ನು ಸಂಗ್ರಹಿಸಲಾಗಿದೆ. ಇತಿಹಾಸಕಾರರಿಗೆ ಅಗತ್ಯ ದಾಖಲೆಗಳನ್ನೊದಗಿಸುವ ಕಾರ್ಯವನ್ನು ಅದು ನಿರ್ವಹಿಸುತ್ತದೆ.

ಪ್ರಾದೇಶಿಕ ಪಾತ್ರಾಗಾರಗಳು :

ದೆಹಲಿಯಲ್ಲಿರುವ ರಾಷ್ಟ್ರೀಯ ಪತ್ರಾಗಾರದಲ್ಲಿ ಅಖಂಡ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳು ಸಂಗ್ರಹವಾಗುತ್ತಿದ್ದರೂ ರಾಜ್ಯಗಳ ಇತಿಹಾಸ ದೃಷ್ಟಿಯಿಂದ ಪ್ರಾಮುಖ್ಯವುಳ್ಳ ದಾಖಲೆಗಳು ಅಲ್ಲಿ ಸಂಗ್ರಹವಾಗದಿರಬಹುದು. ರಾಜ್ಯಗಳ ಪುನರ್ವಿಂಗಡಣೆಯಿಂದ ಭಾರತದಲ್ಲಿ ಪ್ರತಿ ರಾಜ್ಯವೂ ಒಂದೊಂದು ಭಾಷಾವಾರು ಪ್ರಾಂತವಾಗಿದೆ. ಒಂದೊಂದು ರಾಜ್ಯವೂ ತನ್ನ ಭಾಷೆ, ಸಂಸ್ಕೃತಿ, ಇತಿಹಾಸ, ಸಾಹಿತ್ಯ, ಉದ್ಯೋಗ, ರಾಜಕೀಯ ಮುಂತಾದ ವಿಷಯಗಳಲ್ಲಿ ಆಸಕ್ತಿಯನ್ನು ಬೆಳೆಸಿ ಕೊಂಡಿದೆ. ಮುಂದೆ ಆಯಾ ರಾಜ್ಯದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಇತಿಹಾಸ ರಚನೆ ಅಗತ್ಯ ವಾಗುತ್ತದೆ. ಅಂಥ ಇತಿಹಾಸದ ರಚನೆಯಲ್ಲಿ ತೊಡಗುವವರಿಗೆ ಅಗತ್ಯ ದಾಖಲೆಗಳನ್ನೊದಗಿಸುವುದು ರಾಜ್ಯ ಸರ್ಕಾರದ ಹಾಗೂ ಅಲ್ಲಿಯ ಸಂಘಸಂಸ್ಥೆಗಳ ಮತ್ತು ಸ್ಥಳೀಯ ಸರ್ಕಾರಗಳ ಕರ್ತವ್ಯವಾಗುತ್ತದೆ. ಆದ್ದರಿಂದ ಇತಿಹಾಸಪ್ರಾಮುಖ್ಯದ ದಾಖಲೆಗಳನ್ನು ಸಂಗ್ರಹಿಸಿ ವ್ಯವಸ್ಥೆಗೊಳಿಸುವುದು ಅಗತ್ಯ ವೆನಿಸುತ್ತದೆ. ಇದು ರಾಜ್ಯ ಸರ್ಕಾರಗಳಿಗೆ ಸಂದ ಹೊಣೆಗಾರಿಕೆ. ರಾಜ್ಯದ ವಿವಿಧ ಸಚಿವ ಶಾಖೆಗಳ ಅಪ್ರಚಲಿತ ಕಾಗದ ಪತ್ರಗಳನ್ನು ರಾಜ್ಯದ ಪತ್ರಾಗಾರಕ್ಕೆ ತರಿಸಿಕೊಳ್ಳುವ ಶಾಶ್ವತ ವ್ಯವಸ್ಥೆಯಿರಬೇಕು. ಹಾಗೆ ಬಂದ ದಾಖಲೆಗಳಲ್ಲಿ ಇತಿಹಾಸಪ್ರಾಮುಖ್ಯವುಳ್ಳವನ್ನು ಆಯ್ದು ವರ್ಗೀಕರಿಸಿ ಕಟ್ಟುಗಳಾಗಿ ವಿಂಗಡಿಸಿ ರಕ್ಷಿಸಬೇಕು. ಈ ಕಾರ್ಯವನ್ನು ಸಾಮಾನ್ಯ ಗುಮಾಸ್ತರಿಗೆ ವಹಿಸುವುದು ಉಚಿತವಲ್ಲ. ಪತ್ರಾಗಾರ ವಿಜ್ಞಾನದಲ್ಲಿ ನುರಿತ ತಜ್ಞರನ್ನು ಅದಕ್ಕಾಗಿ ನೇಮಿಸಿಕೊಳ್ಳಬೇಕು. ಈ ಕಾರ್ಯಕ್ಕೆ ಅಗತ್ಯ ವಾದ ತಾಂತ್ರಿಕ ನೆರವನ್ನು ಕೇಂದ್ರ ಸರ್ಕಾರದ ಪತ್ರಾಗಾರದಿಂದ ಪಡೆದುಕೊಳ್ಳಬಹುದು. ಸದ್ಯದಲ್ಲಿ ಎಲ್ಲ ರಾಜ್ಯಗಳಲ್ಲೂ ಪುರಾತತ್ವ ಶಾಖೆಗಳು ಏರ್ಪಟ್ಟಿವೆ. ಅವು ರಾಜ್ಯದ ಗುಡಿಗೋಪುರಾದಿ ಪ್ರಾಚೀನ ಸ್ಮಾರಕಗಳ ಮತ್ತು ಶಾಸನಗಳ ಬಗ್ಗೆ ಸಂಗ್ರಹ ಮತ್ತು ಸಂಶೋಧನೆ ಮತ್ತು ಪ್ರಕಟಣೆಯ ಕಾರ್ಯ ವನ್ನು ನಿರ್ವಹಿಸುತ್ತಿವೆ. ಅಲ್ಲಿ ಸಾಮಾನ್ಯವಾಗಿ ಪ್ರಾಚೀನ ಮತ್ತು ಅರ್ವಾಚೀನ ಯುಗಗಳ ಇತಿಹಾಸಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಬಹುದು. ಆಧುನಿಕ ಕಾಲದ ಇತಿಹಾಸ ಬಹುಮಟ್ಟಿಗೆ ಸರ್ಕಾರ ಹಾಗೂ ಖಾಸಗಿ ವ್ಯಕ್ತಿ, ಸಂಘಸಂಸ್ಥೆಗಳು ಸಂಗ್ರಹಿಸಿರುವ ಕಾಗದ ಪತ್ರಗಳ ಆಧಾರಗಳನ್ನು ಅವಲಂಬಿ ಸಿರುತ್ತದೆ. ಆದ್ದರಿಂದ ರಾಷ್ಟ್ರೀಯ ಪತ್ರಾಗಾರದಂತೆ ಪ್ರಾದೇಶಿಕ ಪತ್ರಾಗಾರಗಳೂ ಅಗತ್ಯವಾಗಿ ಆರಂಭ ವಾಗಬೇಕು.

ಕೆಲವು ರಾಜ್ಯಗಳಲ್ಲಿ ಹಳೆಯ ದಾಖಲೆಗಳನ್ನು ಹಳೆಯ ಕಾಗದಗಳೆಂದೇ ಭಾವಿಸಿ ನಾಶಪಡಿಸು ತ್ತಿರುವುದು ಕಂಡುಬರುತ್ತದೆ. ಅಂಥ ಹಳೆಯ ಕಾಗದಪತ್ರಗಳು ಪ್ರಾದೇಶಿಕವಾಗಿ ಸಂಗ್ರಹವಾಗಿದ್ದರೂ ಇಡೀ ರಾಷ್ಟ್ರದ ಇತಿಹಾಸಕ್ಕೆ ಸಂಬಂಧಿಸಿದ ಪ್ರಮುಖ ದಾಖಲೆಗಳನ್ನು ಒಳಗೊಂಡಿರಬಹುದು. ಹೈದರಾಬಾದಿನ ಇನಾಯಿತ್ ಸಂಗ್ರಹಾಲಯದ ಹಳೆಯ ಕಾಗದಪತ್ರಗಳ ಕಟ್ಟುಗಳನ್ನು ಕೇಂದ್ರ ಸರ್ಕಾರ ತರಿಸಿಕೊಂಡು ಪರೀಕ್ಷಿಸಿದಾಗ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಪರ್ಷಿಯನ್ ಭಾಷೆಯ ಬಹು ಅಮೂಲ್ಯ ದಾಖಲೆಗಳು ದೊರೆತುವು. ಅವನ್ನೂ ಈಗ ರಾಷ್ಟ್ರೀಯ ಪತ್ರಾಗಾರದಲ್ಲಿ ರಕ್ಷಿಸಿಟ್ಟಿದೆ. ಹಾಗೆಯೇ ಮದ್ರಾಸು, ಬೊಂಬಾಯಿ ಮುಂತಾದ ಬ್ರಿಟಿಷ್ ಆಡಳಿತ ಪ್ರಾಂತ್ಯಗಳಲ್ಲಿ ಆಧುನಿಕ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ದಾಖಲೆಗಳಿರುವುದು ಸಂಭವ. ಈಚೆಗೆ ತಮಿಳುನಾಡಿನಲ್ಲಿ ಅಂಥ ಕಾಗದಪತ್ರಗಳ ಸಂಗ್ರಹವನ್ನು ನಾಶಪಡಿಸಿದ ವಿಷಯ ಎಲ್ಲರಿಗೂ ತಿಳಿದಿದೆ. ಈಸ್ಟ್ ಇಂಡಿಯ ಕಂಪನಿಯ ಆರಂಭ ಕಾಲದಿಂದ ಇದ್ದ ಆ ಸಂಗ್ರಹದಲ್ಲಿ ಸದ್ಯದ ಇತಿಹಾಸ ಲೇಖನಗಳಲ್ಲಿ ಕಂಡು ಬರದಿರುವ ಹಲವು ಅಂಶಗಳ ಬಗ್ಗೆ ಆಧಾರಗಳು ಇದ್ದಿರಬಹುದು. ಕಚತೀವು ಮುಂತಾದ ದಕ್ಷಿಣ ದ್ವೀಪಗಳ ಬಗ್ಗೆ ರಾಮನಾಡು ಜಮೀನ್ದಾರರಿಗೆ ಸಂಬಂಧಿಸಿದ ಪರ್ಷಿಯನ್ ಭಾಷೆಯ ಹಲವು ದಾಖಲೆಗಳಿದ್ದುವು. ಅವು ಉಳಿದಿದ್ದರೆ ಆ ಪುಟ್ಟ ದ್ವೀಪ ಯಾರಿಗೆ ಸೇರಿದ್ದು ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತಿದ್ದುವೊ ಏನೊ. ಹೀಗೆಯೆ, ದರ್ಭಾಂಗ ಜಮೀನ್ದಾರಿಯ ಪತ್ರಾಗಾರದಲ್ಲಿ ಅಕ್ಬರನ ಕಾಲದಿಂದಲೂ ಸಂಗ್ರಹವಾಗಿದ್ದ ಪತ್ರಗಳಿದ್ದುವೆಂದೂ ಅವುಗಳ ಬಹುಭಾಗ ನಾಶವಾಗಿದೆಯೆಂದೂ ತಿಳಿದುಬರುತ್ತದೆ. ಇದೇ ರೀತಿ ಖಾಸಗಿಯವರ ಹಾಗೂ ಖಾಸಗಿ ಸಂಸ್ಥೆಗಳ ಬಳಿ ಸಂಗ್ರಹವಾಗಿದ್ದ ದಾಖಲೆಗಳೂ ನಾಶ

ವಾಗಿವೆ. ಇಂಥ ದಾಖಲೆಗಳ ಪ್ರಾಮುಖ್ಯವನ್ನು ಕಂಡುಕೊಂಡ ಭಾರತ ಸರ್ಕಾರ ಅವುಗಳ ಸಂರಕ್ಷಣೆಯಲ್ಲಿ ರಾಜ್ಯ ಸರ್ಕಾರಗಳು ಕೈಗೊಳ್ಳಬಹುದಾದ ಕಾರ್ಯದ ಬಗ್ಗೆ ಪರಿಶೀಲನೆ ನಡೆಸಲು ನಾಲ್ಕು ಮಂದಿ ಸದಸ್ಯರ ಸಮಿತಿಯೊಂದನ್ನು ನೇಮಿಸಿದೆ. ಅದರ ಸಲಹೆಗಳು ಬಂದಮೇಲೆ ಆ ಬಗ್ಗೆ ನಿರ್ದಿಷ್ಟ ಶಾಸನವೊಂದನ್ನು ಮಾಡಬಹುದು. ಪ್ರಾಚೀನ ಸ್ಮಾರಕಗಳನ್ನು ಹೊಂದಿರತಕ್ಕವರು ಅವುಗಳ ಬಗ್ಗೆ ಸರ್ಕಾರಕ್ಕೆ ವಿವರಗಳನ್ನು ತಿಳಿಸಬೇಕೆಂದು ಈಚೆಗೆ ಮಾಡಿರುವ ಕಾನೂನು ಕೂಡ ಆ ಮುಂಬಿನಲ್ಲಿ ನಡೆದಿರುವ ಒಂದು ಯತ್ನ.

ರಾಜ್ಯ ಸರ್ಕಾರಗಳ ಆದಾಯ ಸೀಮಿತವಾಗಿರುವುದರಿಂದ ತಜ್ಞರನ್ನು ನೇಮಿಸಿಕೊಂಡು ಪತ್ರಾಗಾರವನ್ನು ಶಾಸ್ತ್ರೀಯ ರೀತಿಯಲ್ಲಿ ವ್ಯವಸ್ಥೆಗೊಳಿಸಿ ನಡೆಸಿಕೊಂಡು ಬರುವುದು ಕಷ್ಟವಾಗಬಹುದು. ಕೇಂದ್ರ ಸರ್ಕಾರ ಅದಕ್ಕಾಗಿ ರಾಜ್ಯ ಸರ್ಕಾರಗಳಿಗೆ ಧನಸಹಾಯ ಮಾಡಬೇಕು. ವಿಶ್ವವಿದ್ಯಾಲಯ, ಪೌರಸಭೆ, ಖಾಸಗಿ ಸಂಸ್ಥೆ ಮುಂತಾದವು ನಡೆಸುತ್ತಿರುವ ಅಂಥ ಸಂಗ್ರಹಾಲಯಗಳಿಗೂ ಸರ್ಕಾರದ ಅನುದಾನ ದೊರೆಯಬೇಕು.

ಪತ್ರಾಗಾರದ ವ್ಯವಸ್ಥೆ

ಸರ್ಕಾರದ ಅಪ್ರಕಟಿತ ಕಾಗದಪತ್ರಗಳ ಕಟ್ಟುಗಳನ್ನು ಕ್ರಮವಾಗಿ ಸಂಗ್ರಹಿಸುವುದಕ್ಕಾಗಿ ಶಾಶ್ವತವಾದ ವ್ಯವಸ್ಥೆ ಮಾಡಬೇಕು. ಸಾಮಾನ್ಯವಾಗಿ ನ್ಯಾಯಾಲಯಗಳ ತೀರ್ಮಾನಗಳು, ಅಂತಿಮ ಇಚ್ಛಾಪತ್ರಗಳು, ದಾನಪತ್ರಗಳು, ದಸ್ತೈವಜುಗಳು, ಗುಡಿಗೋಪುರ, ಕೋಟೆ ಮುಂತಾದವುಗಳ ಜೀರ್ಣೋದ್ಧಾರಕ್ಕೆ ಸಂಬಂಧಿಸಿದ ಕಾಗದಗಳು, ರಾಜ್ಯದಲ್ಲಿ ನಡೆದ ಕಾಮಗಾರಿಗಳ ಪತ್ರ, ಕ್ಷಾಮಡಾಮರಾದಿ ಘಟನೆಗಳಿಗೆ ಸಂಬಂಧಿಸಿದ ಪತ್ರಗಳು, ಆಡಳಿತದ ವರದಿಗಳು ಮುಂತಾದವು ಇತಿಹಾಸ ಲೇಖಕರಿಗೆ ಅಮೂಲ್ಯ ಸಾಮಗ್ರಿಗಳನ್ನೊದಗಿಸುತ್ತವೆ. ಕೇಂದ್ರ ಸರ್ಕಾರದ ಪತ್ರಾಗಾರಕ್ಕೆ ಕೇಂದ್ರದ ವಿವಿಧ ಸಚಿವಾಲಯಗಳಿಂದಲೂ ಪ್ರಮುಖ ಶಾಖೆಗಳಿಂದಲೂ ಅಪ್ರಕಟಿತ ದಾಖಲೆಗಳನ್ನು ತರಿಸಿಕೊಳ್ಳುವ ವ್ಯವಸ್ಥೆ ಮಾಡಿರುವಂತೆ ರಾಜ್ಯ ಸರ್ಕಾರವಿಂದ ರಾಷ್ಟ್ರೀಯ ಇತಿಹಾಸದ ಪ್ರಾಮುಖ್ಯವುಳ್ಳ ದಾಖಲೆಗಳನ್ನೂ ತರಿಸಿಕೊಳ್ಳಬೇಕು.

ದಾಖಲೆಪತ್ರಗಳ ಆಯ್ಕೆ

ವಿವಿಧ ಸೇವಾ ಶಾಖೆಗಳಿಂದ ಬರತಕ್ಕ ಪತ್ರಗಳು ಅಗಾಧ ಪ್ರಮಾಣವನ್ನು ಮುಟ್ಟುವುದರಿಂದ ಅವನ್ನೆಲ್ಲ ರಕ್ಷಿಸಿಡುವ ಕಾರ್ಯ ಸುಲಭವಲ್ಲ. ಜೊತೆಗೆ ಹಾಗೆ ಬರತಕ್ಕ ಪತ್ರಗಳೆಲ್ಲ ಇತಿಹಾಸ ಪ್ರಾಮುಖ್ಯವನ್ನು ಪಡೆದಿರಲಾರವು. ಆದ್ದರಿಂದ ಇತಿಹಾಸ ಪ್ರಾಮುಖ್ಯವುಳ್ಳವನ್ನು ಆ ಕಟ್ಟುಗಳಿಂದ ಆಯ್ಕೆ ಮಾಡುವುದು ಅಗತ್ಯವಾಗುತ್ತದೆ. ಆದರೆ ಆಯ್ಕೆಯ ಕಾರ್ಯ ಅಷ್ಟು ಸುಲಭವಲ್ಲ. ತಜ್ಞರು ಆ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಆ ಕಾರ್ಯ ನಿರ್ವಹಿಸುವ ತಜ್ಞರು ಕೂಡ ನಿರ್ದಿಷ್ಟ ತತ್ತ್ವ ದೃಷ್ಟಿಯನ್ನು ರೂಢಿಸಿಕೊಂಡಿದ್ದು ಅದರ ಬೆಳಕಿನಲ್ಲಿ ಆಯ್ಕೆ ಮಾಡಬೇಕಾಗುತ್ತದೆ.

ಐತಿಹಾಸಿಕ ಪ್ರಾಮುಖ್ಯವುಳ್ಳ ಪತ್ರಗಳನ್ನು ಗುರುತಿಸುವಾಗ ಹಲವು ಅಂಶಗಳನ್ನು ಗಮನಿಸಬೇಕು. ಅವು ಸಾಮಾನ್ಯ ಮತ್ತು ಆಕಸ್ಮಿಕ ಘಟನೆಗಳಿಗೆ ಸಂಬಂಧಿಸಿದಂತಿರಬೇಕು; ವ್ಯಕ್ತಿ ಅಥವಾ ಸಮಾಜ ರೂಪಿಸಿ ಅನುಷ್ಠಾನಕ್ಕೆ ತಂದಿರುವ ಸಂಘಸಂಸ್ಥೆಗಳು, ಸಂಪ್ರದಾಯಗಳು ಮುಂತಾದವಕ್ಕೆ ಸಂಬಂಧಿಸಿರಬಹುದು. ಕ್ಷಾಮ, ಅತಿವೃಷ್ಟಿ ಅನಾವೃಷ್ಟಿಗಳು, ಭೂಕಂಪ, ಸಾಂಕ್ರಾಮಿಕರೋಗ, ಪ್ರವಾಹ ಮುಂತಾದ ನಿಸರ್ಗದ ಆಕ್ರೋಶಗಳು, ಆಗ ಜನರ ಸಂಕಷ್ಟವನ್ನು ಪರಿಹರಿಸಲು ಸರ್ಕಾರವೂ ಸಾರ್ವಜನಿಕರೂ ಕೈಗೊಂಡ ಕಾರ್ಯಗಳು ಮತ್ತು ಅವುಗಳ ಪರಿಣಾಮ ಇವಕ್ಕೆ ಸಂಬಂಧಿಸಿರಬಹುದು; ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಪ್ರಾಮುಖ್ಯವುಳ್ಳ ಕಲೆ, ವಿಜ್ಞಾನ, ವೈದ್ಯ, ಇಂಜಿನಿಯರಿಂಗ್, ತಂತ್ರಶಾಸ್ತ್ರ ಮುಂತಾದ ಕ್ಷೇತ್ರಗಳ ಮುನ್ನಡೆಗೆ ಸಂಬಂಧಿಸಿರಬಹುದು. ಜನಜೀವನದಲ್ಲಿ ಆವಿರ್ಭವಿಸಿರುವ ನೂತನ ಜೀವನದೃಷ್ಟಿಗೂ ಸಂಬಂಧಿಸಿರಬಹುದು. ಆಯಾ ಘಟನೆಗಳಿಗೆ ಸಂಬಂಧಿಸಿದ ಪ್ರೇರಕಗಳನ್ನು ಒಳಗೊಂಡ ಪತ್ರಗಳನ್ನೂ ಸಂಗ್ರಹಿಸಬೇಕು. ಏಕೆಂದರೆ ಘಟನೆಗಳಿಗೆ ಕಾರ್ಯಕಾರಣ ಸಂಬಂಧವನ್ನು ಕಲ್ಪಿಸಿ ಸಂಗತಿಯ

ರೂಪದಲ್ಲಿ ವಿವರಿಸಲು ಅವು ಅಗತ್ಯವಾಗುತ್ತವೆ. ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ, ಔದ್ಯೋಗಿಕ. ಮತ್ತು ಕೃಷಿಕ, ಸಾಂಸ್ಕೃತಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಪತ್ರಗಳನ್ನೂ ಮೇಲೆ ಸೂಚಿಸಿದ ತತ್ವದೃಷ್ಟಿಯ ಬೆಳಕಿನಲ್ಲಿ ಆರಿಸಿಕೊಳ್ಳಬೇಕು.

ಇತಿಹಾಸ ಒಂದು ಜ್ಞಾನಶಾಖೆಯಾಗಿರುವುದರ ಜೊತೆಗೆ ವಾಚಕರಲ್ಲಿ ಗತಕಾಲದ ನಮ್ಮವರ ಸಾಧನೆಯನ್ನು ಅರಿತು ದೇಶಾಭಿಮಾನ ಮೂಡುವಂತೆಯೂ ಮಾಡಬೇಕು : ಪೌರಜೀವನಕ್ಕೆ ಸಿದ್ಧತೆಯನ್ನೂ ನೀಡಬೇಕು; ನೈತಿಕ ದೃಷ್ಟಿ ಮೂಡಿಸಬೇಕು, ಸಂಸ್ಕೃತಿ ಸಂಪತ್ತನ್ನು ಹೆಚ್ಚಿಸಿ ರಾಷ್ಟ್ರೀಯತೆಯನ್ನು ಪೋಷಿಸಬೇಕು. ಆಯ್ಕೆಗೆ ಈ ಅಂಶಗಳೆಲ್ಲ ಆಧಾರವಾಗಬೇಕು. ಅವು ಕೇಂದ್ರ ಸಚಿವಾಲಯಗಳಿಂದ ದೆಹಲಿಯ ರಾಷ್ಟ್ರೀಯ ಪತ್ರಾಗಾರಕ್ಕೆ ಬರುತ್ತವೆ. ಅವುಗಳಲ್ಲಿ ಕೆಲವು ಪ್ರಾಂತೀಯ ಇತಿಹಾಸಕ್ಕೆ ಸಂಬಂಧಿಸಿರುತ್ತವೆ. ಅವುಗಳ ಪ್ರತಿಯನ್ನು ಆಯಾ ಪ್ರಾಂತಕ್ಕೆ ಕಳಿಸಬೇಕು. ಹಾಗೆಯೇ ಪ್ರಾಂತೀಯ ಪತ್ರಾಗಾರಕ್ಕೆ ಬಂದ ಕಟ್ಟುಗಳಲ್ಲಿ ಅಖಂಡ ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಕಾಗದ ಪತ್ರಗಳಿದ್ದರೆ ಅವುಗಳ ಪ್ರತಿಗಳನ್ನು ರಾಷ್ಟ್ರೀಯ ಪತ್ರಾಗಾರಕ್ಕೆ ಆಯ್ದು ಕಳಿಸಬೇಕು.

ದಾಖಲೆಗಳ ವರ್ಗೀಕರಣ

ಪತ್ರಾಗಾರದಲ್ಲಿ ಸಂಗ್ರಹವಾಗಿರುವ ದಾಖಲೆಗಳಲ್ಲಿ ಸಂಶೋಧಕರಿಗೂ ಇತಿಹಾಸ ಲೇಖಕರಿಗೂ ಬೇಕಾದ ದಾಖಲೆಗಳು ಬೇಗ ದೊರಕುವಂತಾಗಲು ಅವನ್ನು ಸೂಕ್ತ ರೀತಿಯಲ್ಲಿ ವರ್ಗೀಕರಿಸಿಡುವುದು ಅಗತ್ಯ. ವರ್ಗೀಕರಣ ಕಾರ್ಯದಲ್ಲಿ ಹಲವು ವಿಧಾನಗಳು ಬಳಕೆಯಲ್ಲಿವೆ. ಸಂಗ್ರಹವಾದ ಕಾಗದ ಪತ್ರಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ ಕಟ್ಟುಗಳಾಗಿ ಕಟ್ಟಿಡುವುದು ಒಂದು ಸರಳವಾದ ಕ್ರಮ. ಆದರೆ ಅದರಿಂದ ಅಷ್ಟಾಗಿ ಅನುಕೂಲವಾಗುವುದಿಲ್ಲ. ಬೇರೆ ಬೇರೆ ಶಾಖೆಗಳ ಕಾಗದಪತ್ರಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ ಆಯಾ ಸೇವಾಶಾಖೆಗೇ ಪ್ರತ್ಯೇಕ ಕಟ್ಟುಗಳನ್ನಾಗಿ ಮಾಡಿಡುವುದು ಇನ್ನೊಂದು ವಿಧಾನ. ಇದು ಮೊದಲ ಕ್ರಮಕ್ಕಿಂತ ಹೆಚ್ಚು ಉಪಯುಕ್ತವೆನ್ನಬಹುದು. ಇದಕ್ಕಿಂತ ಹೆಚ್ಚು ಶಾಸ್ತ್ರೀಯವೆನ್ನಬಹುದಾದ ಕ್ರಮವೆಂದರೆ ಒಂದೊಂದು ಪ್ರಧಾನ ಘಟನೆಗೂ ಸಂಬಂಧಿಸಿದ ಕಾಗದಪತ್ರಗಳನ್ನೆಲ್ಲ ಕಾಲಾನುಕ್ರಮದಲ್ಲಿ ಅಳವಡಿಸಿ ಒಂದೊಂದು ಕಟ್ಟಾಗಿ ವಿಂಗಡಿಸಿ ಜೋಡಿಸುವ ವಿಧಾನ. ಇದರಿಂದ ಇತಿಹಾಸಕಾರರು ತಾವು ಪರಿಶೀಲಿಸುತ್ತಿರುವ ಘಟನೆಗೆ ಸಂಬಂಧಿಸಿದ ಕಾಗದ ಪತ್ರಗಳನ್ನೆಲ್ಲ ಒಂದೆಡೆ ಸುಲಭವಾಗಿ ದೊರಕಿಸಿಕೊಳ್ಳಬಹುದು. ಯಾವ ಕ್ರಮವನ್ನೆ ಅನುಸರಿಸಲಿ, ಪತ್ರಗಳನ್ನು ಅವುಗಳು ಉದ್ಭವಿಸಿದ ಕಾಲಾನುಕ್ರಮದಲ್ಲಿ ಜೋಡಿಸಿಡುವುದು ಅಗತ್ಯ. ಹೀಗೆ ಪತ್ರಗಳನ್ನು ವರ್ಗೀಕರಿಸಿ ಜೋಡಿಸಿದ ಕಟ್ಟುಗಳನ್ನು ಬೀರುಗಳಲ್ಲಿ ಅಕಾರಾದಿಯಾಗಿ ಜೋಡಿಸಬೇಕು. ಆಯಾ ಕಟ್ಟಿನ ಮೇಲೆ ಅದರಲ್ಲಿರುವ ಕಾಗದ ಪತ್ರಗಳ ವಿವರವನ್ನು ಕಾಲಾನುಕ್ರಮದಲ್ಲಾಗಲಿ ಅಕಾರಾದಿಯಲ್ಲಾಗಲಿ ಬರೆದು ಸೇರಿಸಬೇಕು. ಹಾಗೂ ಆ ಘಟನೆಗೆ ಸಂಬಂಧಿಸಿದ ದಾಖಲೆಗಳು ಬೇರೆ ಕಟ್ಟಿನಲ್ಲಿರುವುದಾದರೆ ಆಯಾ ಕಟ್ಟಿನ ಮುಖಪತ್ರದಲ್ಲಿ ಅಡ್ಡ ಸೂಚಿಯ ಮೂಲಕ ಆ ಅಂಶವನ್ನು ಸೂಚಿಸಬೇಕು.

ಸೂಚೀಕರಣ ಕಾರ್ಯ

ಪತ್ರಗಳನ್ನು ವರ್ಗೀಕರಿಸಿ ಜೋಡಿಸಿದ ಅನಂತರ ಅವನ್ನು ಸುಲಭವಾಗಿ ಗುರುತಿಸಿ ತೆಗೆದುಕೊಳ್ಳಲು ಅನುಕೂಲವಾಗುವಂತೆ ಪತ್ರ ಸೂಚಿಗಳನ್ನು ತಯಾರಿಸಿಡಬೇಕು. ಈ ಸೂಚಿಗಳು ಪರಾಮರ್ಶ ಮಾಧ್ಯಮಗಳು (reference media): ಅಕಾರಾದಿ ವಿಷಯ ಸೂಚಿ. ವಿವರಣಾತ್ಮಕ ಅಕಾರಾದಿ ವಿಷಯಸೂಚಿ, ವಿಷಯಗಳ ಪೂರ್ಣಪಟ್ಟಿ ಮುಂತಾದ ಆಕರ ಸೂಚಿಗಳನ್ನು ಸಿದ್ಧಪಡಿಸಿಡಬೇಕು. ಮುಸುಕಾಗಿ ಉಳಿದಿರುವ ಇತಿಹಾಸದ ಸಮಸ್ಯೆಗಳ ಬಗ್ಗೆ ಹೊಸ ಬೆಳಕನ್ನು ಬೀರಬಲ್ಲ ದಾಖಲೆಗಳು ಪತ್ರಾಗಾರದಲ್ಲಿರಬಹುದು. ಅಂಥ ದಾಖಲೆಗಳು ಕಂಡುಬಂದರೆ ವಿವರಗಳೊಡನೆ ಪ್ರಕಟಣೆಗಳ ಮೂಲಕ ಸಾರ್ವಜನಿಕರ ಗಮನಕ್ಕೆ ತರಬೇಕು. ಆ ಮೂಲಕ ಇತಿಹಾಸ ಲೇಖಕರು ನೇರವಾಗಿ ಆ ದಾಖಲೆಯನ್ನು ಬಳಸಿಕೊಂಡು ಆ ವಿಷಯದ ಬಗ್ಗೆ ಹೆಚ್ಚು ವಾಸ್ತವಿಕ ವಿವರಗಳನ್ನು ಅಳವಡಿಸಿ

ಕೊಳ್ಳಬಹುದು. ಪ್ರತಿಯೊಂದು ದಾಖಲೆಯ ಹೆಸರಿನ ಮುಂದೆ ಅದು ಯಾವ ಬೀರುವಿನಲ್ಲಿ ಯಾವ ಅಟ್ಟಿನಲ್ಲಿ ಅಥವಾ ಪೆಟ್ಟಿಯಲ್ಲಿ ಸಂಗ್ರಹವಾಗಿದೆಯೆಂಬ ಬಗ್ಗೆಯೂ ಸೂಚನೆಯಿರಬೇಕು.

ಪತ್ರಗಳ ಸಂರಕ್ಷಣೆ

ಒಂದು ಕಾಲದಲ್ಲಿ ರಚನೆಯಾದ ಇತಿಹಾಸವನ್ನು ಮುಂದಿನ ಇತಿಹಾಸಕಾರರು ತಮ್ಮದೇ ಆದ ರೀತಿಯಲ್ಲಿ ಪುನರ್ರಚಿಸಬಹುದು: ಮೂಲಭೂತ ಘಟನೆಗಳಲ್ಲಿ ವ್ಯತ್ಯಾಸ ಮಾಡಲಾಗದಿದ್ದರೂ ಅವಕ್ಕೆ ಪ್ರೇರಕವಾಗಿದ್ದ ಕಾರಣಗಳ ಮತ್ತು ಆ ಘಟನೆಯ ಪರಿಣಾಮಗಳ ಬಗ್ಗೆ ನೂತನ ಅಂಶಗಳನ್ನು ದರ್ಶಿಸಿ ತಮ್ಮದೇ ಆದ ರೀತಿಯಲ್ಲಿ ಸಂಗತಿಯನ್ನು ವಿವರಿಸಬಹುದು. ಹಿಂದಿನವರು ಪರಿಗಣಿಸದೆ ಕೈಬಿಟ್ಟಿದ್ದ ಹಲವು ಆಧಾರಾಂಶಗಳನ್ನು ಅವು ಸಂಪರ್ಕದಿಂದ ದೊರಕುವ ಸಂಬಂಧಗಳನ್ನು ಮುಂದಿನವರು ಪ್ರಮುಖವಾಗಿ ಪರಿಗಣಿಸಬಹುದು. ಅದರ ಫಲವಾಗಿಯೂ ಇತಿಹಾಸದ ಆ ಭಾಗಕ್ಕೆ ಹೊಸ ಬಣ್ಣ ಬರಬಹುದು. ಆದ್ದರಿಂದ ದಾಖಲೆ ಪತ್ರಗಳು ಹಿಂದಿನ ಕಾಲದವಾದರೂ ಬರುವ ಪೀಳಿಗೆಗೆ ಅವನ್ನು ಸಂರಕ್ಷಿಸಿಡುವುದು ಅಗತ್ಯ. ಅಲ್ಲದೆ ಹಿಂದಿನವರು ಇತಿಹಾಸದ ಆ ಭಾಗವನ್ನು ರಚಿಸುವಾಗ ಸಂಬಂಧಿಸಿದ ಹಲವು ದಾಖಲೆಗಳು ಇನ್ನೂ ದೊರೆಯದಿದ್ದಿರಬಹುದು. ಆ ದೃಷ್ಟಿಯಿಂದಲೂ ದಾಖಲೆಗಳ ಸಂರಕ್ಷಣೆ ಅಗತ್ಯವಾಗುತ್ತದೆ.

ದಾಖಲೆಗಳ ರಕ್ಷಣೆ ಹಲವಾರು ಆಯಾಮಗಳನ್ನೊಳಗೊಂಡಿದೆ. ಸಂಗ್ರಹಿಸಿಟ್ಟಿರುವ ಕಾರ್ಯಾಲಯಕ್ಕೆ ಬೆಂಕಿ, ಮಳೆ, ಗಾಳಿ ಮುಂತಾದುವುಗಳಿಂದ ಆಘಾತವಾಗಿ ಪತ್ರಗಳು ನಾಶವಾಗಬಹುದು. ಆದ್ದರಿಂದ ರಾಷ್ಟ್ರದ ಸಂಸ್ಕೃತಿ ಸಂಪತ್ತೆಂದು ಭಾವಿಸಿ ಪತ್ರಾಗಾರಗಳಿಗೆ ಉಚಿತವಾದ ಕಟ್ಟಡಗಳನ್ನು ನಿರ್ಮಿಸಿ ಅಗ್ನಿಯೇ ಮುಂತಾದ ಆಕಸ್ಮಿಕಗಳಿಂದ ಅಗತ್ಯ ರಕ್ಷಣೋಪಾಯಗಳನ್ನು ಕೈಗೊಂಡಿರಬೇಕು. ಬೇರೆಬೇರೆ ಕಾರ್ಯಾಲಯಗಳಿಂದ ಬರುವ ಹಳೆಯ ಕಡತಗಳು ಆಗಲೆ ಧೂಳು ಹಿಡಿದು ಹುಳು ಹುಪ್ಪಟೆಗಳಿಂದ ತುಂಬಿರುತ್ತದೆ. ಆದ್ದರಿಂದ ಅವನ್ನು ಹಾಗೇ ಜೋಡಿಸುವುದರಿಂದ ಹುಳುಗಳು ಕಾಗದಪತ್ರಗಳನ್ನು ಕ್ರಮಕ್ರಮವಾಗಿ ನಾಶಪಡಿಸುತ್ತವೆ. ಪತ್ರಾಗಾರಕ್ಕೆ ಬಂದ ದಾಖಲೆಗಳ ದೂಳನ್ನು ಒರೆಸಿ ಕ್ರಿಮಿನಾಶಕದ ಧೂಪನ ಮಾಡಬೇಕು. ಈ ಸಂಸ್ಕರಣದಿಂದ ಹಳೆಯ ಕಡತಗಳ ಕ್ರಿಮಿಗಳು ನಾಶವಾಗುತ್ತವೆ. ಅನಂತರವೂ ಹೇಗೋ ಹುಳುಗಳು ಸೇರಿಕೊಳ್ಳಬಹುದು. ಅಂಥ ಹುಳುಗಳಲ್ಲಿ ಜಿರಲೆ, ಗೆದ್ದಲು, ನುಸಿ, ಬೂಸ್ಟು ಮುಖ್ಯವಾದವು. ಗೆದ್ದಲು ಸಾಧಾರಣ ಇಟ್ಟಿಗೆ ಗಾರೆ ಕಟ್ಟಡಗಳಾಗಿದ್ದರೆ ಹೊರಗಿನಿಂದ ಬಂದು ಬೀರುಗಳನ್ನು ಕೊರೆದುಕೊಂಡು ದಾಖಲೆಗಳನ್ನು ಬಹು ಬೇಗ ನಾಶಪಡಿಸುತ್ತವೆ. ಅದನ್ನು ತಪ್ಪಿಸಲು ಪತ್ರಾಗಾರದ ಕಟ್ಟಡಗಳ ತಳಹದಿ, ನೆಲ ಮತ್ತು ಗೋಡೆಗಳನ್ನು ಸಿಮೆಂಟಿನಿಂದ ನಿರ್ಮಿಸುವುದು ಅಗತ್ಯ. ಆದರೂ ಗೆದ್ದಲು ಹತ್ತಬಹುದು. ಆದ್ದರಿಂದ ಕಟ್ಟಡದ ತಳಪಾಯದಲ್ಲೂ ಗೋಡೆಗಳ ಸುತ್ತಲೂ ಟ್ರೈಕ್ಲೋರೋಬೆಂಜಿನ್, ಪೆಂಟಕ್ಲೋರೋಫಿನಾಲ್, ಸೋಡಿಯಂ ಆರ್ಸನೈಟ್ ಮುಂತಾದ ಕ್ರಿಮಿನಾಶಕ ದ್ರವಗಳನ್ನು ಸವರಿ ಬಿರುಕುಗಳನ್ನು ಸಿಮೆಂಟ್ ಕಾಂಕ್ರೀಟ್ ಹಾಕಿ ಮುಚ್ಚಬೇಕು. ಗೆದ್ದಲ ಚಿಟ್ಟೆಗಳು ಕಿಟಕಿಗಳ ಮೂಲಕ ಹಾರಿ ಬಂದು ಬೀರುಗಳನ್ನು ಸೇರಿ ಅಲ್ಲಿ ಮರಿ ಮಾಡಿ ಕಾಗದಗಳನ್ನು ತಿಂದು ಹಾಕಬಹುದು. ಆದ್ದರಿಂದ ಕಿಟಕಿಗಳಿಗೆ ತಂತಿಯ ಜಾಲವನ್ನೋ, ಬಟ್ಟೆಯ ಪರದೆಯನ್ನೋ ಬಳಸಬೇಕು. ಕಪಾಟುಗಳ ಹಲಗೆಗಳಿಗೆ ಲೋಹದ ತಗಡನ್ನು ಹಾಸುವುದು ಒಳ್ಳೆಯದು. ಅಲ್ಲಿ ಉಲ್ಮನ್ ಲವಣ ಅಥವಾ ಕ್ಸೈಲಮಾನ್ ಮುಂತಾದ ಕ್ರಿಮಿನಾಶಕಗಳನ್ನು ಮರದ ಹಲಗೆಗೆ ಸವರಬಹುದು.

ಜಿರಲೆಗಳು ಪತ್ರಗಳನ್ನೂ ಕಟ್ಟುಗಳ ರಟ್ಟು ಮತ್ತು ಅಂಟನ್ನೂ ತಿಂದು ಹಾಕುವುದರ ಜೊತೆಗೆ ಕಾಗದದ ಮೇಲೆ ಕಪ್ಪು ಬಣ್ಣದ ಹೊಲಸನ್ನು ಸುರಿಸಿ ಕೆಡಿಸುತ್ತವೆ. ಅವು ಸೇರದಂತೆ ನೋಡಿಕೊಳ್ಳಬೇಕು. ಕಟ್ಟುಗಳ ತಳವನ್ನು ಮೇಲುಗಡೆ ತಿರುಗಿಸಿಡಬೇಕು. ಪೆಟ್ಟಿಗೆ ಅಥವಾ ಕಪಾಟುಗಳ ತಳಭಾಗದ ಹಲಗೆಯಲ್ಲಿ ಒಂದು ಕುಳಿಮಾಡಿ ಅಲ್ಲಿ ಕ್ರಿಮಿನಾಶಕಗಳನ್ನು ಇರಿಸಬೇಕು. ಅದಕ್ಕೆ ಥೈಮಾಲ್ ಮುಂತಾದ ಕ್ರಿಮಿನಾಶಕಗಳನ್ನು ಬಳಸುವುದುಂಟು. ಕಪಾಟಿನಲ್ಲಿ ಥೈಮಾಲ್ ಇಟ್ಟರೆ ಅದರಿಂದ ಬರುವ ಅನಿಲಕ್ಕೆ ಜಿರಲೆಗಳು ಸಾಯುವುವು.

ಇವೆಲ್ಲಕ್ಕಿಂತ ಕಾಗದ ಪತ್ರಗಳಿಗೆ ಬಹುಸುಲಭವಾಗಿ ಬೂಸ್ಟು ಹಿಡಿದು ಅದನ್ನು ರೂಪುಗೆಡಿಸುವುದು. ತೇವವಾದ ಹವೆಯಿದ್ದರೆ ಸಾಕು, ಗಾಳಿಯಲ್ಲಿ ತೇಲಿ ಬರುವ ಬೂಸ್ಟು ಬೀಜಾಣುಗಳು ಕಾಗದದ ಮೇಲೆ ಕುಳಿತು ಮೊಳೆತು ಹಬ್ಬಿ ಹರಡಿ ಅದನ್ನು ತಿಂದು ಹಾಕುವುವು. ತೇವ ಸೋಕದಂತೆ ಬೂಸ್ಟು ಹಿಡಿದ ಕಟ್ಟುಗಳನ್ನು ಪ್ರತ್ಯೇಕಿಸಿ ಚೆನ್ನಾಗಿ ಒರಸಿ ಒಣಗಿಸಿಡಬೇಕು. ಒಮ್ಮೆ ಅದು ಬರುವುದು ಸಂಭವವೆಂದು ಕಂಡು ಬಂದರೆ ಕಪಾಟುಗಳಿಗೆ ಅರಗಿನಿಂದ ತಯಾರಿಸಿದ ಮೆರುಗೆಣ್ಣೆ ಸಿಂಪಡಿಸಬೇಕು. ಪತ್ರಗಳ ಕಟ್ಟುಗಳಿಗೂ ಪಿಷ್ಟವನ್ನು ಸವರಿರುವ ಅವುಗಳ ಮೇಲ್ಭಾಗಕ್ಕೂ ಮೆರುಗೆಣ್ಣೆ ಸಿಂಪಡಿಸಬಹುದು. ಥೈಮಾಲ್ ಧೂಪವೂ ಬೂಷ್ಟಿಗೆ ಒಳ್ಳೆಯ ನಿರೋಧಕ ವಸ್ತು.

ಸೂಕ್ಷ್ಮಛಾಯಾ ಚಿತ್ರಣದ ಕಾರ್ಯ

ಎಷ್ಟೇ ಎಚ್ಚರಿಕೆ ವಹಿಸಿದರೂ ಕಾಲಕ್ರಮದಲ್ಲಿ ದಾಖಲೆಗಳು ಶಿಥಿಲವಾಗಿ ಹಾಳಾಗಬಹುದು. ಹಾಗೆ ನಶಿಸಿಹೋಗುತ್ತಿರುವ ಪತ್ರಗಳ ಫೋಟೋಸ್ಟ್ಯಾಟ್ ಪ್ರತಿಮಾಡಿಡಬಹುದು. ಅಥವಾ ಸೂಕ್ಷ್ಮ ಛಾಯಾಚಿತ್ರಣದಿಂದ ಪ್ರತಿಮಾಡಿಕೊಳ್ಳಬಹುದು. ಇವೆರಡಕ್ಕೂ ಮೂಲದಾಖಲೆಗಳ ಮೌಲ್ಯವೇ ಇರುತ್ತದೆ. ಹೊರಗಿನವರು ಮೂಲ ದಾಖಲೆಗಳನ್ನು ಬಯಸಿದಾಗ ಇರುವ ಒಂದೇ ಒಂದು ದಾಖಲೆಯನ್ನು ಅಂಚೆಯ ಮೂಲಕ ಕಳಿಸುವುದು ಅಪಾಯಕಾರಿ. ಅದರ ಫೋಟೋಸ್ಟ್ಯಾಟ್ ಅಥವಾ ಸೂಕ್ಷ್ಮ ಛಾಯಾ ಚಿತ್ರಣದ ಪ್ರತಿ ತಯಾರಿಸಿ ಕಳುಹಿಸಬಹುದು.

ಕೆಲವು ಪ್ರಮುಖ ಪತ್ರಗಳನ್ನೂ ಪತ್ರಮಾಲೆಗಳನ್ನೂ ಸೂಕ್ಷ್ಮ ಛಾಯಾ ಚಿತ್ರಣದ ಮೂಲಕ ಚಿತ್ರ ಪಟಲಗಳಲ್ಲಿ ಸಂಗ್ರಹಿಸಿಡಬಹುದು. ಬೇಕಾದಾಗ ಅವನ್ನು ಪ್ರಕ್ಷೇಪದ ಮೂಲಕ ಹಾಯಿಸಿ ಓದಿಕೊಳ್ಳಬಹುದು. ಅಂಥ ಪಟಲಗಳ ಸುರುಳಿಯನ್ನು ಡಬ್ಬಿಗಳಲ್ಲಿಟ್ಟು ರಕ್ಷಿಸಿಡಬಹುದು.

ಸಾರ್ವಜನಿಕ ಮತ್ತು ಸ್ಥಳೀಯ ಸಂಸ್ಥೆಗಳ ಯತ್ನ

ಆಧುನಿಕ ಇತಿಹಾಸದ ರಚನೆಗೆ ಸರ್ಕಾರದ ಕಾಗದ ಪತ್ರಗಳಂತೆ ಸಾರ್ವಜನಿಕರ ಬಳಿ ಇರುವ ಇತರ ದಾಖಲೆಗಳೂ ಉಪಯುಕ್ತ ಆಧಾರಗಳಾಗುತ್ತವೆ. ಪ್ರಮುಖ ವ್ಯಕ್ತಿಗಳು ನಡಸಿದ ಪತ್ರವ್ಯವಹಾರದಲ್ಲಿ ಆಚಾರ್ಯರ, ಧಾರ್ಮಿಕ ಪುರುಷರ, ದಾಸಿಗಳ ಮತ್ತು ಇತರರ ಐತಿಹಾಸಿಕ ಮಹತ್ವದ ಕಾರ್ಯವನ್ನು ಕುರಿತ ವಿವರಗಳಿರಬಹುದು. ಸರ್ಕಾರದ ಪತ್ರಾಗಾರದಲ್ಲಿ ಅವೆಲ್ಲ ದೊರಕುವುದು ಅಸಂಭವ. ಅವಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಿ ಇತಿಹಾಸ ಲೇಖಕರಿಗೆ ಒದಗಿಸುವ ಕಾರ್ಯವನ್ನು ಖಾಸಗಿ ಸಂಸ್ಥೆಗಳು ಕೈಗೊಳ್ಳಬಹುದು. ಅದಕ್ಕಾಗಿ ಅಮೆರಿಕದಲ್ಲಿ ಇತಿಹಾಸ ಸಂಘಗಳೆಂಬ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಅವನ್ನು ಸರ್ಕಾರ ಪುರಸ್ಕರಿಸಿ ಅನುದಾನ ನೀಡುತ್ತಿದೆ. ಅಂಥ ಸಂಸ್ಥೆಗಳು ಭಾರತದಲ್ಲೂ ಸ್ಥಾಪನೆಯಾಗಬಹುದು. ಪೌರಸಭೆಗಳು ಮ್ಯೂಸಿಯಮ್ಮುಗಳನ್ನೇರ್ಪಡಿಸಿ ಆಯಾ ಪ್ರದೇಶದ ಕವಿ, ವಿಜ್ಞಾನಿ, ರಾಜಕಾರಣಿ ಧಾರ್ಮಿಕ ಪುರುಷರೇ ಮುಂತಾದವರ ಬಗ್ಗೆ ದಾಖಲೆ ಸಂಗ್ರಹಿಸಬಹುದು. ಅಲ್ಲಿ ನಿರ್ಮಾಣವಾದ ಯಂತ್ರೋಪಕರಣಗಳನ್ನೂ ಮೂಲರೂಪದಲ್ಲಿ ಪ್ರದರ್ಶಿಸಬಹುದು. ಇಂಗ್ಲೆಂಡಿನಲ್ಲೂ ಯೂರೋಪಿನ ಮಹಾನಗರಗಳಲ್ಲೂ ಇಂಥ ಮ್ಯೂಸಿಯಮ್‌ಗಳು ಬಗೆ ಬಗೆಯ ದಾಖಲೆಗಳನ್ನು ಸಂಗ್ರಹಿಸಿ ರಕ್ಷಿಸಿಟ್ಟಿರುವುವು.

ಉಪಸಂಹಾರ

ಒಟ್ಟಿನಲ್ಲಿ ಗತಕಾಲದ ಜನತೆಯ ಜೀವನದ ಇತಿಹಾಸಕ್ಕೆ ಸಂಬಂಧಿಸಿದ ಕಾಗದಪತ್ರಗಳು ಮುಂದಿನ ಇತಿಹಾಸಕಾರರಿಗೆ ಅಮೂಲ್ಯ ದಾಖಲೆಗಳಾಗುವುದರಿಂದ ಅಂಥ ಐತಿಹಾಸಿಕ ಪ್ರಾಮುಖ್ಯವುಳ್ಳ ಕಾಗದ ಪತ್ರಗಳು ಜನಾಂಗದ ಪವಿತ್ರ ಸಂಪತ್ತೆಂದು ಭಾವಿಸಿ ರಾಷ್ಟ್ರ ಅವನ್ನು ಕ್ರಮವಾಗಿ ಸಂಗ್ರಹಿಸಿ, ಶಾಸ್ತ್ರೀಯ ರೀತಿಯಲ್ಲಿ ಆಯ್ಕೆ ಮಾಡಿ, ವರ್ಗೀಕರಿಸಿ, ಸಂರಕ್ಷಿಸಿಡುವ ಬಗ್ಗೆ ಆಸಕ್ತವಹಿಸಬೇಕು.

ಯುರೋಪ್ಯ ಇತಿಹಾಸಕಾರರು ಭಾರತವನ್ನು 'ಬೌದ್ಧರ'. 'ಮುಸ್ಲಿಮರ'. 'ಬ್ರಿಟಿಷರ' ಇತ್ಯಾದಿ 'ಕಾಲ'ಗಳನ್ನಾಗಿ ವಿಭಜಿಸಿ ಇನ್ನೊಂದು ಜಟಿಲತೆ ತಂದಿದ್ದಾರೆ. ಅದರಿಂದ ನಾವಿನ್ನೂ ಪಾರಾಗಿಲ್ಲ. ಅವರನ್ನು ಹಿಂಬಾಲಿಸಿದ ನಮ್ಮ ಲೇಖಕರೂ ಅದನ್ನೇ ಪ್ರತಿಪಾದಿಸಿದ್ದಾರೆ. ಒಂದು ಕ್ಷಣ ಚಿಂತಿಸಿದರೆ ಸಾಕು. ಇಂಥ ನಿರ್ದಿಷ್ಟ ಕಾಲಗಳು ಇರಲಿಲ್ಲವೆಂಬುದು ಗೋಚರಿಸುತ್ತದೆ. ಭಾರತೀಯ ಇತಿಹಾಸವನ್ನು ಶ್ರದ್ಧೆಯಿಂದ ಅಧ್ಯಯನ ಮಾಡುವವರಾರೂ 'ಬೌದ್ಧಕಾಲ'ವೊಂದಿತ್ತೆಂದು ಹೇಳಲಾರರು; ಏಕೆಂದರೆ. ಕೆಲವು ಸಮ್ರಾಟರು ಮತ್ತು ರಾಜರು ಬೌದ್ಧಮತವನ್ನು ಅವಲಂಬಿಸಿದುದುಂಟು. ಆದರೆ ಭಾರತದ ಅಸಂಖ್ಯ ಜನ. ಅಶೋಕನ ಕಾಲದಲ್ಲಿಯೂ ಇಂದಿನ ಹಾಗೆಯೇ ಹಿಂದೂಗಳಾಗಿದ್ದರು. ಅಶೋಕನ ಶಿಲಾಶಾಸನಗಳೇ ಈ ಮಾತಿಗೆ ಸಾಕ್ಷಿಯಾಗಿವೆ. ಅವನ ನೀತಿಬೋಧೆ ಹಿಂದೂಗಳಿಗೂ ಬೌದ್ಧರಿಗೂ ಸಮಾನವಾಗಿಯೇ ಅನ್ವಯಿಸಿತ್ತು. 'ಮುಸ್ಲಿಂ ಕಾಲ' ಎಂಬುದನ್ನು ಕುರಿತು ಹೇಳುವುದಾದರೆ. ಗಂಗಾ ನದಿಯ ಕಣಿವೆ. ಬಂಗಾಳ. ಗುಜರಾತ್ ಮತ್ತು ದಖನ್ ಪ್ರಸ್ಥಭೂಮಿಯ ಉತ್ತರ ಭಾಗಗಳು ಮಾತ್ರ ಮುಸ್ಲಿಂ ದೊರೆಗಳ ಆಡಳಿತದಲ್ಲಿದ್ದುವು. ಮಧ್ಯಭಾರತದ ವಿಶಾಲಭಾಗಗಳು ಮತ್ತು ರಾಜಸ್ಥಾನ ಯಾವ ಕಾಲಕ್ಕೂ ಮುಸ್ಲಿಂ ಆಡಳಿತಕ್ಕೆ ಒಳಗಾಗಿರಲಿಲ್ಲ. ಮಲ್ಲಿಕ್ ಕಾಫೂರ್ ದಕ್ಷಿಣದ ರಾಜ್ಯಗಳ ಮೇಲೆ ದಾಳಿ ಮಾಡಿ. ಪ್ರಥಮ ತಲ್ಲಣವನ್ನು ಉಂಟುಮಾಡಿದ ತರುವಾಯ. ದಕ್ಷಿಣ ಭಾರತ ಬಲಿಷ್ಠ ಸಾಮ್ರಾಜ್ಯವಾಗಿ ವ್ಯವಸ್ಥೆಗೊಂಡಿತು. ಇದಲ್ಲದೆ. ಮಧ್ಯ ಏಷ್ಯಾದ ದಾಳಿಕಾರರ ಪ್ರಥಮ ತಲೆಮಾರಿನ ತರುವಾಯ. ಅವರು ಖಿಲ್ಜಿಗಳಾಗಿರಲಿ. ತುಘಲಕರಾಗಿರಲಿ. ಮೊಗಲರಾಗಿರಲಿ, ಎಲ್ಲರೂ ತಮ್ಮ ತಾಯ್ನಾಡಿನೊಂದಿಗೆ ಸಂಪರ್ಕವನ್ನು ಕಳೆದುಕೊಂಡು. ಭಾರತೀಯರಂತೆಯೇ. ತಮ್ಮ ಅಧಿಕಾರ ಕೇಂದ್ರಗಳನ್ನು ಭಾರತದಲ್ಲೇ ಇಟ್ಟುಕೊಂಡು. ತಮ್ಮ ಪ್ರದೇಶಗಳಲ್ಲಿ ರಾಜ್ಯಭಾರ ನಡೆಸಿದರು. ಅವರು ಪಶ್ಚಿಮದ ಮುಸ್ಲಿಂ ರಾಜ್ಯಗಳೊಡನೆ ಯಾವ ಸಂಪರ್ಕವನ್ನೂ ಇಟ್ಟುಕೊಂಡಿರಲಿಲ್ಲವೆಂದೇ ಹೇಳಬೇಕು. ವಾಸ್ತವವಾಗಿ ಭಾರತ. ಬ್ರಿಟಿಷ್ ಪ್ರಭುತ್ವದ ನೂರೈವತ್ತು ವರ್ಷಗಳ ಕಾಲದಲ್ಲಿ ಮಾತ್ರ ವಿದೇಶವೊಂದರ ಆಳ್ವಿಕೆಗೆ ಒಳಗಾಗಿತ್ತೆನ್ನಬಹುದು. ಆದ್ದರಿಂದ 'ಬ್ರಿಟಿಷರ ಕಾಲ' ಎಂದು ಕರೆಯುವುದು ನ್ಯಾಯವಾದೀತು; ಏಕೆಂದರೆ. ಆ ಕಾಲದಲ್ಲಿ ಭಾರತಕ್ಕೆ ಸಂಬಂಧಪಟ್ಟ ನೀತಿಗಳು ಅತ್ಯಂತ ದೂರದಲ್ಲಿದ್ದ ಇನ್ನೊಂದು ದೇಶದ ಹಿತಾಸಕ್ತಿಗಳಿಗೆ ಅನುಗುಣವಾಗಿ ನಿರ್ಧಾರಿತವಾಗುತ್ತಿದ್ದುವು.[1]

—ಕೆ. ಎಂ. ಪಣಿಕ್ಕರ್

---

1 'ಭಾರತೀಯ ಇತಿಹಾಸ ಸಮೀಕ್ಷೆ'; ಅನುವಾದ: ಜಿ. ವಿ. ನಾರಾಯಣ ಮೂರ್ತಿ; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಪು. xii

ಡಾ. ಬಾ. ರಾ. ಗೋಪಾಲ್

ಬೀದರ್ ಜಿಲ್ಲೆಯ ಶಾಸನಗಳು-೫, ೬, ೭

ಬಸವ ಕಲ್ಯಾಣ ತಾಲ್ಲೂಕು ಬೀದರ್ ಜಿಲ್ಲೆಯಲ್ಲಿ ಈಗ ಸುಮಾರು ಏಳೆಂಟು ವರ್ಷಗಳ ಕೆಳಗೆ ರೂಪಿತವಾಯಿತು. ಇದಕ್ಕೆ ಬೇರೆ ತಾಲ್ಲೂಕಿನ ಗ್ರಾಮಗಳು ಕೆಲವನ್ನು ಸೇರಿಸಲಾಯಿತು. ಹಿಂದೆ ಭಾಲ್ಕಿ ತಾಲ್ಲೂಕಿಗೆ ಸೇರಿದ್ದ ಗ್ರಾಮ ಗೊರಟ. ಈಗ ಬಸವ ಕಲ್ಯಾಣ ತಾಲ್ಲೂಕಿಗೆ ಸೇರಿದೆ. ಈ ಗ್ರಾಮದಲ್ಲಿ ಹಲವಾರು ಸಣ್ಣ ದೊಡ್ಡ ಶಾಸನಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಕೆಲವಂತೂ ಒಡೆದಿವೆ. ಒಂದು ಶಾಸನಕಲ್ಲಂತೂ ಮನೆಯೊಂದರ ಹಾಸುಗಲ್ಲಾಗಿ ಪರಿವರ್ತಿತವಾಗಿತ್ತು.

ಕನಕಟನಕೆರೆ ಒಂದು ಹೊಲದ ಹೆಸರು. ಕನಕಟೆ ಎಂಬ ಅಪ್ಪಹೆಸರುಳ್ಳ ರೈತರೊಬ್ಬರಿಗೆ ಸೇರಿದ ಭೂಮಿ ಅದು. ಅಲ್ಲಿನ ಮಣ್ಣಿನ ದಿಬ್ಬದ ಮೇಲೆ ಎರಡು ನಿಶಿದಿಗಲ್ಲುಗಳು ನಿಂತಿದ್ದುವು. ಅವುಗಳಲ್ಲಿನ ಶಾಸನವನ್ನು ಇಲ್ಲಿ ಕೊಡಲಾಗಿದೆ. ಮೊದಲನೆಯ ಕಲ್ಲಿನ ಶಾಸನ ಸಂಪೂರ್ಣವಾಗಿದೆ. ಅಕ್ಷರಗಳು ಸ್ಪಷ್ಟವಾಗಿದ್ದರೂ ಒಂದೆರಡು ಕಡೆ ಕಲ್ಲು ಸವೆದಿರುವ ಕಾರಣ ಅಸ್ಪಷ್ಟತೆಗಳಿವೆ.

ಮೊದಲನೆಯ ಶಾಸನದ ಕಾಲ ಚಾಲುಕ್ಯ ಅರಸನಾದ ಭೂಲೋಕಮಲ್ಲನ ಆಳಿಕೆಯ ಐದನೆಯ ವರ್ಷದ ಸಾಧಾರಣ ಸಂವತ್ಸರ ಶ್ರಾವಣ ಮಾಸದ ಬಹುಳ ಪಕ್ಷದ ಸಪ್ತಮಿ ಸೋಮವಾರ. ಈ ತೇದಿಯ ವಿವರಗಳು ಕ್ರಿ.ಶ. ೧೧೩೦ನೆಯ ವರ್ಷದ ಜುಲೈ ೨೦ಕ್ಕೆ ಸರಿಹೊಂದುತ್ತವೆ.

ಆ ದಿನದಂದು ಜಿನಮುನಿಯಾದ ತ್ರಿಭುವನಸೇನ 'ಪರಮಾತ್ಮತತ್ತ್ವ'ವನ್ನು ಪಡೆದನೆಂದು ಶಾಸನದಲ್ಲಿ ಹೇಳಿದೆ. ಶಾಸನ ಪದ್ಯರೂಪದಲ್ಲಿದೆ; ತ್ರಿಭುವನಸೇನನನ್ನು ಸ್ತುತಿಸಿದೆ. ಈತ ಅಭಿನವ ಗಣಧರನೆಂದು ಕರೆಸಿಕೊಂಡಿದ್ದಾನೆ.

ಎರಡನೆಯ ಶಾಸನಕಲ್ಲಿನ ಎಡಭಾಗ ಒಡೆದು ಹೋಗಿದೆಯಾಗಿ ಶಾಸನಪಾಠ ಸಂಪೂರ್ಣವಾಗಿ ಲಭ್ಯವಾಗಿಲ್ಲ. ಇದರಲ್ಲಿ ಸಂವತ್ಸರ ಹಾಗೂ ಮಾಸದ ಹೆಸರುಗಳು ಉಳಿದಿವೆ. ಸಂವತ್ಸರದ ಹೆಸರು 'ಳಂಬಿ' ಎಂಬಷ್ಟು ಮಾತ್ರ ಲಭಿಸಿದೆ. ಇದು ವಿಳಂಬಿ ಅಥವಾ ಹೇವಿಳಂಬಿ ಆಗಿರಬಹುದು. ಮಾಸ ಚೈತ್ರ. ಬಹುಶಃ ಚಾಲುಕ್ಯ ವಿಕ್ರಮವರ್ಷದ ಕಾಲಗಣನೆ ಮಾಡಿದಂತೆ ತೋರುತ್ತದೆ. ಆದರೆ ವಿವರಗಳು ನಷ್ಟವಾಗಿವೆ. ಅಕ್ಷರಗಳು ಮೊದಲನೆಯ ಶಾಸನದ ಅಕ್ಷರಗಳನ್ನೇ ಹೋಲುತ್ತವೆ. ಇದು ಹನ್ನೆರಡನೆಯ ಶತಮಾನದ ಶಾಸನ. ಇದರಲ್ಲಿ ಬಾಹುಬ್ರತೀಂದ್ರ, ಅರ್ಹದ್ದೇವ, ವರ್ಧಮಾನ ಹಾಗೂ ಸಿಂಗಿ ಸೆಟ್ಟಿಯರ ಪ್ರಸ್ತಾಪವಿದೆ. ಈ ಶಾಸನ ಸಹ ಪದ್ಯರೂಪದಲ್ಲಿದೆ. ಜಿನಭಕ್ತನೊಬ್ಬ (ಯತಿ?) ಸುರೇಂದ್ರಾವಾಸವನ್ನು ಪಡೆದ ಸಂಗತಿಯನ್ನು ಶಾಸನ ತಿಳಿಸುತ್ತದೆ. ವಿವರಗಳು ಹಾಳಾಗಿವೆ.

ಇಲ್ಲಿ ಪ್ರಕಟವಾಗಿರುವ ಮೂರನೆಯ ಶಾಸನ ಅದೇ ಗ್ರಾಮದ ಹರಿಜನ ಚಾವಡಿಯ ಮುಂದೆ ನಿಂತಿರುವ ಕಲ್ಲಿನ ಮೇಲೆ ಕೆತ್ತಲ್ಪಟ್ಟಿದೆ. ಶಾಸನದ ಕಾಲ ಚಾಳುಕ್ಯ ವಿಕ್ರಮ ವರ್ಷದ ೩೭ನೆಯ ವರ್ಷದ ನಂದನ ಸಂವತ್ಸರದ ಪುಷ್ಯ ಶುದ್ಧ ಚತುರ್ಥಿ ಸೋಮವಾರ, ಉತ್ತರಾಯಣ ಸಂಕ್ರಾಂತಿ. ಈ ವಿವರಗಳು ಕ್ರಿ.ಶ. ೧೧೧೨ನೆಯ ಡಿಸೆಂಬರ್ ೨೩ಕ್ಕೆ ಸರಿಹೊಂದುತ್ತವೆ.

ಆ ದಿನದಂದು ಸಾವಾಸಿ ಮಾಣಿಕ(ಕ್ಯ) ಭಟ್ಟ ಮತ್ತು ಸೇನಬೋವ ಗಂಗರಸರು ಕೂಡಿ ಗ್ರಾಮದಲ್ಲಿನ ಕುಂಭೇಶ್ವರ ದೇವರಿಗೆ ಜೋಳದ ಹೇಜುಂಡೊಂದನ್ನು ದಾನವಾಗಿ ಬಿಟ್ಟ ಉಲ್ಲೇಖ ಶಾಸನದಲ್ಲಿದೆ. ಮಾಣಿಕ್ಯ ಭಟ್ಟನು ಸಾವಾಸಿ ಪೊಮ್ಮಣ್ಣಯ್ಯನ ಹೆಗ್ಗಡೆ. ಸಾವಾಸಿ ಎಂಬುದು ಸಹವಾಸಿ ಎಂಬುದರ ರೂಪಾಂತರ.

ಈ ಪೊಮ್ಮಣಯ್ಯ ಛತ್ರವೇಂಟೆಯ ದಂಡನಾಯಕನೆಂದು ಹೇಳಿದೆ. ಅಂದರೆ ಈತ ಒಬ್ಬ ಸುಂಕಾಧಿಕಾರಿ. ದಂಡನಾಯಕರು ಕೇವಲ ಸೇನೆಗೆ ಸಂಬಂಧಿಸಿದ ಕಾರ್ಯಗಳನ್ನಷ್ಟೇ ನೋಡಿಕೊಳ್ಳದೆ ರಾಜ್ಯದ ಇತರ ಆಡಳಿತಕ್ಕೂ ಸಂಬಂಧಿಸಿದ್ದರು. ಬಹುಶಃ ಯುದ್ಧಸಮಯದಲ್ಲಿ ದಂಡನಾಯಕ ಪದವಿಯನ್ನು ಪಡೆದಿದ್ದ ಈತ ಬೇರೆ ಸಂದರ್ಭದಲ್ಲಿ ಈ ಅಧಿಕಾರ ಪಡೆದಿದ್ದನೆನ್ನಬಹುದು. ರಾಜ್ಯಕ್ಕೆ ಸಲ್ಲಬೇಕಾದ ಬೆಳೆಯ (ಬತ್ತದ) ಭಾಗವನ್ನು ವಸೂಲು ಮಾಡುವ ಕೆಲಸ ಈತನದಾಗಿತ್ತೆನ್ನಬಹುದು. ಶಾಸನದಲ್ಲಿ ದೇವರ ಹೆಸರು ಕುಂಭೇರ ಎಂದು ಕಾಣಿಸುತ್ತದೆ. ೯ನೆಯ ಸಾಲಿನಲ್ಲಿ 'ಸ್ತ' ಎಂಬ ಒಂದು ಅಕ್ಷರದ ಅವಶೇಷಗಳನ್ನು ಗುರುತಿಸಬಹುದು.

ಶಾಸನ ಪಾಠ

೫ ಒಂದನೆಯ ನಿಶಿದಿಗಲ್ಲು

೧ *ಭೂಯಾದಾವೀರ ಸೇನಸ್ಯ ವೀರಸೇನಸ್ಯ ಶಾಸನಂ।
೨ ಭೂಯಾದಾವೀರಸೇನಸ್ಯ ವೀರಸೇನಸ್ಯ ಶಾಸನಂ॥
೩ ಅಭಿಭೂತ ಮನೋಭವಮಂ[ಂ]ದ ವಿಭವಂ ರಾದ್ಧಾಂತರ
೪ ತ್ನರೋಹಣ ಗಿರಿಯರಪ್ಪಭಿನವಗಣಧರನೆಸೆದಂ
೫ ತ್ರಿಭುವನಸೇನಂ ಮುನೀಂದ್ರತಾಮರಸೇನಂ ॥
೬ ಶ್ರೀಮಚ್ಚಾಳುಕ್ಯ ವಂಶಾಗ್ರಣಿಯೆನಿಸಿದ ಭೂಲೋಕ
೭ ವರ್ಷಂಗಳಯ್ವ ನಾಪುಂ ಸಾಧಾರಣಾಬ್ದಂ ಶ್ರವಣ ಬ
೮ ಹುಳದೊಳ್ಪತ್ತುಮಿ ಸೋಮವಾರಂ ತಾಮೆತ್ತಂ [ಕೂ]
೯ ಡಲೊಳ್ಪಿಂ ಸುರಗತಿಪಡೆದಬ್ಬಾರ್ವಿತಾತ್ಮಸ್ವರೂಪ
೧೦ ಕಾಮಪ್ರಧ್ವಂಸಕರೋ ಶ್ರೀ ತ್ರಿಭುವನವರಸೇನಾಖ್ಯ
೧೧ ಸಿದ್ಧಾಂತದೇವರ್॥ಅಸ್ಮಸ್ಸತ್ವದ ಬಲ್ಮೆಯಿನಿನ್ನೀತಿ ಭು
೧೨ ವನ ಸುಸೇನಮುನಿಸಂಸಾರ[ಕ್ಕ]ನ್ತಂ ಮಾಡಲ್ಸಲೆ ಲೋ
೧೩ ಕಾಸ್ತಿಕ ದೇವರೊಳು ಪುಟ್ಟಿದಂ ಮುದದಿಂದಂ॥ ಅಭಿನ
೧೪ ವ ರೂಪಯುವ್ವನವಿಳಾಸ[ಸ]ಮನ್ವಿತದೆ ವಸುಂಧ
೧೫ ರೀಪ್ರಭವ ಸುಖಾವಹಗಳು [ಮ?]ಡಾಂಬಿನ ಸೌ
೧೬ ಖ್ಯಮಿಾವೆಮುವೆಂದು. .ಶುಭಮೆನಿಪಂ
೧೭ ತರಾತ್ಮನೊಳೆನಿಂದು ಸುಬೋಧದೊಳೊನ್ದೆ
೧೮ ಚಿತ್ತಮೀತ್ರಿಭುವನಸೇನ ದಿವ್ಯಮುನಿಪಂ ಪಡೆ
೧೯ ದಂ ಪರಮಾತ್ಮಂ ತತ್ವಮಂ॥ ಅನವರತಂ ಶ್ರೀ ಮ
೨೦ ತ್ರಿ ,ಭುವಸೇನಮುನೀಂದ್ರನಮಳಚರಿತಂ
೨೧ ಶುದ್ಧಾತ್ಮನೊಳೊನ್ದಿಪ ಚಿತ್ತದಿ . ನ್ತನಿಮಿಷನಾ
೨೨ ದಂ . ಡೊಲ್ದು , ಲೋಕ . . ಕದೊಳು॥

೬ ಎರಡನೆಯ ನಿಶಿದಿಗಲ್ಲು

೧ *ಭೂಯಾದಾವೀರಸೇನ[ಸ್ಯ]......
೨ ಶನಂ ಭೂಯಾದಾವೀರಸೇ........
೩ ಶನಂ॥ ಜಿನನಾಥಂ ತನಗಿ.........
೪ ದ್ರ ಬಾಹುಬ್ರತೀಂದ್ರ.........
೫ ವಿದಂ ಗುರುಲಸತ್ಸ.........

೬ ಭೋನಿಧಿ ಸಿಂಗಿ ಸೆಟ್ಟಿ ಜನ.........
೭ ಗಡಂ ತನಗಿಂ ನಿ[ನ್ದೊ]ದವ.......
೮ ರ್ದ್ಧನ್ಯರ್ದ್ಧರಾಚಕ್ರದೊ.........
೯ ಯರಹದ್ದೇವನೆ ತನಗಿ........
೧೦ ನೀಂದ್ರುಂ ಭಾವಿಸೆ ಗುರುದಿ.......
೧೧ ಗ[ಪ್ಪು]ದೊ ವರ್ದ್ಧಮಾನನ.......
೧೨ ಮನದೊಳ್ನಿಂ.......
೧೩ ವ ಗೆ[ಲ್ದಾರ್ತ್ರ]ರೊಳಿಂದ್ರ.......
೧೪ ಸಿ ದೀಕ್ಷೆಯತೊ.......
೧೫ ನುಪ್ರೇಕ್ಷೆಯ ಮನ.......
೧೬ ನು ನೆನೆಯುತಂ ಗೋ.......
೧೭ ಯೊಳ್ಪಿನಿಂ ಭವ್ಯತೆ......
೧೮ ರೇಂದ್ರಾವಾಸಮಂ ಪೊ.......
೧೯ ಯ ವಿಕ್ರಮಾವ.......
೨೦ ಳಂಬಿ ಸಂವತ್ಸರ ಚೈತ್ರ......
೨೧ ದಿಗೆಯೊಳು [ಶ್ರೀ].....
೨೨ . ಪರಮ ಶ್ರೀ ಜಿನ......
೨೩ ಧ್ಯಾನದೊಳ್ತಿತ್ರಮ......
೨೪ ....

೭ ಹರಿಜನ ಚಾವಡಿಯ ಶಾಸನ

೧ *ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮ ವ
೨ ರಿಸದ ೩೭ನೆಯ ನಂದನ ಸಂ
೩ ವತ್ಸರದ ಪುಶ್ಯ ಸುದ್ಧ ೪ ಸೋಮ
೪ ವಾರ ಉತ್ತರಾಯಣ
೫ ಸಂಕ್ರಮಣದಂದು ಭತ್ತವೇಂಟೆ
೬ ಯ ದಣ್ಡನಾಯಕಂ ಸಾವಾಸಿ ಪೊಮ್ಮಣ
೭ [ಯ್ಯಂ]ಗಳ ಪೆರ್ಗ್ಗಡೆ ಸಾವಾಸಿ
೮ ಮಾಣಿಕ ಭಟ್ಟನುಂ ಸೇನಬೋ
೯ ವ ಗಂಗರಸನುವಿರ್ದ್ದು ಕುಂಭೇ[ಸ್ವ]
೧೦ ರ ದೇವರ ನಿವೇದ್ಯಕ್ಕಂ ಸೊಡರೆಣ್ಣೆ
೧೧ ಗಂ ದೆವಸವಳ ಮಂಡವದಲು
೧೨ ಬಿಟ್ಟ ಜೋಳದಹೇಱು ಒಂದು।
೧೩ ಈ ಧರ್ಮ್ಮವಂ ಮತ್ತೆ ಮಣ್ಡವಕ್ಕಾಧಿಕಾ[ರಿ]
೧೪ ಗಳಾಗಿ ಯಾರು ಬಂದಡಂ ತಪ್ಪ[ದೆ]
೧೫ ಪ್ರತಿಪಾಳಿಸುವ ವಕ್ರ
೧೬ ರಾಗಿ ಕಿಡಿಸಿದವರು ವಾರಣಾ
೧೭ [ಸಿ]ಯಲು ಸಹಸ್ರ ಕವಿಲೆಯಂ
೧೮ [ಬ್ರಾ]ಹ್ಮಣರುಮಂ ಕೊಂದ ಪಾತಕ
೧೯ [ರ]ಕ್ಕು*

ಕರ್ನಾಟಕದ ಶಾಸನಗಳನ್ನು ತಾಮ್ರಶಾಸನ ಮತ್ತು ಶಿಲಾಶಾಸನ ಎಂದು ಎರಡು ವಿಧವಾಗಿ ವಿಂಗಡಿಸಬಹುದು. ತಾಮ್ರಶಾಸನಗಳು ಸಾಮಾನ್ಯವಾಗಿ ರಾಜರಿಂದ ಮನ್ನಣೆ ಪಡೆದ ಮತ್ತು ವೇದ, ಶಾಸ್ತ್ರ, ಪುರಾಣ, ಇತಿಹಾಸಗಳಲ್ಲಿ ಪರಿಣತಿ ಹೊಂದಿದ ಬ್ರಾಹ್ಮಣ ವಿದ್ವಾಂಸರಿಗೆ ತಮ್ಮ ಕರ್ಮಾನುಷ್ಠಾನಕ್ಕಾಗಿ ಅಗ್ರಹಾರ ಗ್ರಾಮಗಳನ್ನೂ ಇತರ ದತ್ತಿಗಳನ್ನೂ ಬಿಟ್ಟ ವಿಷಯವನ್ನು ನಿರೂಪಿಸುತ್ತವೆ. ಶಿಲಾಶಾಸನಗಳು ರಾಜರೂ ಅವರ ಪರಿವಾರದವರೂ ನಿರ್ಮಿಸಿದ ದೇವಾಲಯಗಳ ಪೂಜೆ–ಪುರಸ್ಕಾರಗಳಿಗೂ ಜೀರ್ಣೋದ್ಧಾರಕ್ಕೂ ಬಿಟ್ಟ ದತ್ತಿಗಳ ವಿವರಗಳನ್ನು ತಿಳಿಸಲು ಬರೆದವುಗಳಾಗಿರುತ್ತವೆ. ಇಂಥ ಶಾಸನಗಳು ದೇವಾಲಯದ ವಿವಿಧ ಭಾಗಗಳಲ್ಲಿ ಗೋಡೆ, ಕಂಬ, ಅಸ್ತಿಭಾರ, ಬಾಗಿಲು, ಚಾವಣಿ, ಜೋಡಿಗೆ ಮುಂತಾದ ಕಡೆಗಳಲ್ಲಿಯೂ ಪ್ರತ್ಯೇಕವಾಗಿ ತಯಾರಿಸಿ ನಿಲ್ಲಿಸಿದ ಶಿಲಾಫಲಕಗಳ ಮೇಲೆಯೂ ಕೆತ್ತಲ್ಪಟ್ಟಿರುತ್ತವೆ. ಕರ್ನಾಟಕದಲ್ಲಿ ದೊರೆತ ಶಾಸನಗಳಲ್ಲಿ ೧೦೦ಕ್ಕೆ ೮೦ರಷ್ಟು ವ್ಯಕ್ತಿಗಳಿಗೆ ಅಥವಾ ದೇವಾಲಯಗಳಿಗೆ ಕೊಟ್ಟ ದಾನ ಶಾಸನಗಳಾಗಿರುತ್ತವೆ. ಉಳಿದವು ಕೋಟೆ ಕೊತ್ತಲ, ಕೆರೆ ಬಾವಿಗಳ ನಿರ್ಮಾಣ ಮತ್ತು ಅವುಗಳ ನಿರ್ಮಾಪಕರ ವಿಷಯವನ್ನು ತಿಳಿಸುವುದಕ್ಕಾಗಿಯೂ ರಾಜರ ವಿಜಯಯಾತ್ರೆಗಳನ್ನು ವರ್ಣಿಸುವುದಕ್ಕಾಗಿಯೂ ಕೆತ್ತಲ್ಪಟ್ಟಿರುತ್ತವೆ. ಅಲ್ಲದೆ ವೀರಗಲ್ಲು, ಮಾಸ್ತಿಕಲ್ಲು, ಗರುಡಗಲ್ಲು, ಜೈನರು ಸಲ್ಲೇಖನದಿಂದ ಮಡಿದುದನ್ನು ಸೂಚಿಸುವ ನಿಷಿದಿಗಲ್ಲು ಮುಂತಾದ ರೀತಿಯ ಶಾಸನಗಳೂ ಕರ್ನಾಟಕದಲ್ಲಿ ಹೇರಳವಾಗಿವೆ.[1]

---

1 'ಕರ್ನಾಟಕದ ಶಾಸನಗಳು', ಕನ್ನಡ ವಿಶ್ವಕೋಶ, ಸಂ. ೪, ಪು. ೧೬೪–೫

ಡಾ. ಕೆ. ಪದ್ಮ ಉಮಾಪತಿ

ಮಹಿಳೆ ಮತ್ತು ಆಹಾರ ಪೋಷಣೆ

ಮಾನವನಿಗೂ ಆಹಾರಕ್ಕೂ ಇರುವ ನಿಕಟ ಸಂಬಂಧವನ್ನು ಕುರಿತ ವಿಜ್ಞಾನವೇ ಆಹಾರ ಪೋಷಣೆ ವಿಜ್ಞಾನ. ಪೌಷ್ಟಿಕ ಆಹಾರ ಪೋಷಣೆ ಮಾನವನ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಯ ಹಾಗೂ ಆರೋಗ್ಯದ ಅಡಿಗಲ್ಲು. ನಮ್ಮ ದೇಹದ ಆರೋಗ್ಯಕ್ಕೆ ಬೇಕಾಗುವ ವಿವಿಧ ಪೋಷಕಾಂಶಗಳನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸುವ ಆಹಾರವನ್ನು "ಸರಿದೂಗಿಸಿದ ಆಹಾರ" ಎಂದು ಕರೆಯುತ್ತಾರೆ. ಈ ಬಗೆಯ ಆಹಾರ ಎಲ್ಲರಿಗೂ ಒಂದೇ ತೆರನಾಗಿರುವುದಿಲ್ಲ. ಇದು ವ್ಯಕ್ತಿಯ ವಯಸ್ಸು, ಲಿಂಗ, ಆರ್ಥಿಕ ಸ್ಥಿತಿ, ವ್ಯಾಯಾಮ, ಉದ್ಯೋಗ, ದೇಹದ ಸ್ಥಿತಿಗತಿಗಳಿಗೆ ಅನುಗುಣವಾಗಿ ಇರುತ್ತದೆ. ಭಾರತೀಯ ವೈದ್ಯಕೀಯ ಸಂಶೋಧನ ಪರಿಷತ್ತು ಭಾರತೀಯರಿಗೆ ಬೇಕಾಗುವ ಪೌಷ್ಟಿಕಾಂಶಗಳ ಪ್ರಮಾಣವನ್ನು ಸಂಶೋಧನೆಗಳ ಆಧಾರದ ಮೇಲೆ ನಿಗದಿ ಪಡಿಸಿದೆ. ವಯಸ್ಕರಿಗೆ ಅನ್ವಯಿಸುವ ಈ ವಿವರಗಳನ್ನು ಮಾತ್ರ ಸಂಗ್ರಹಿಸಿ ಪಟ್ಟಿ ೧ರಲ್ಲಿ ಕೊಡಲಾಗಿದೆ. ಸ್ತ್ರೀ ಮತ್ತು ಪುರುಷರಿಗೆ ಬೇಕಾಗುವ ವಿವಿಧ ಪೌಷ್ಟಿಕಾಂಶಗಳ ಪ್ರಮಾಣದಲ್ಲಿರುವ ವ್ಯತ್ಯಾಸವು ದೇಹ ಸುಯೋಜನೆ ಮತ್ತು ಶಾರೀರಿಕ ಆವಶ್ಯಕತೆಗಳಲ್ಲಿರುವ ಭಿನ್ನತೆಯನ್ನು ಪ್ರತಿಬಿಂಬಿಸುತ್ತದೆ. ಗರ್ಭಿಣಿ ಸ್ತ್ರೀ ಮತ್ತು ಶಿಶುವಿನ ತಾಯಂದಿರಿಗೆ ಅದೇ ವಯಸ್ಸಿನ ಮತ್ತು ಅಷ್ಟೇ ದುಡಿಮೆ ಮಾಡುವ ಸಾಧಾರಣ ಸ್ತ್ರೀಯರಿಗಿಂತಲೂ ಹೆಚ್ಚಿನ ಕ್ಯಾಲೊರಿ ಮತ್ತು ಪೌಷ್ಟಿಕಾಂಶಗಳ ಆವಶ್ಯಕತೆ ಇರುವ ಅಂಶವನ್ನು ಗಮನಿಸಬಹುದು.

ಭಾರತೀಯ ಮಹಿಳೆಯರಲ್ಲಿ ನ್ಯೂನಪೋಷಣೆ


ದೇಹದ ಆವಶ್ಯಕತೆಗಳಿಗನುಗುಣವಾಗಿ ಪೌಷ್ಟಿಕಾಂಶಗಳ ಪೂರೈಕೆ ಆಗದಿರುವುದೇ ನ್ಯೂನ ಪೋಷಣೆ. ಭಾರತದ ಬಹುಸಂಖ್ಯಾತ ಮಹಿಳೆಯರು ನ್ಯೂನಪೋಷಣೆಗೆ ತುತ್ತಾಗಿರುವರೆಂಬುದು ಅತ್ಯಂತ ಶೋಚನೀಯ. ಶೇಕಡ ೪೩ ಮಂದಿ ತಾಯಂದಿರು ಅನೇಕ ಪೌಷ್ಟಿಕಾಂಶಗಳ ಕೊರತೆಯಿಂದ ವ್ಯಾಧಿಪೀಡಿತರಾಗಿರುವರೆಂದು ದೇಶದ ವಿವಿಧ ಭಾಗಗಳಲ್ಲಿ ನಡೆಸಿದ ಸಮೀಕ್ಷೆಗಳಿಂದ ತಿಳಿದುಬಂದಿದೆ. ಇವುಗಳಲ್ಲಿ ಅತ್ಯಂತ ಮುಖ್ಯವಾದುದೆಂದರೆ 'ಅನಿಮಿಯಾ' ರೋಗ. ಇದು ಕಬ್ಬಿಣ ಲವಣದ ಕೊರತೆಯಿಂದ ಉಂಟಾಗುತ್ತದೆ. ಹೆಚ್ಚಿನ ರಕ್ತಸ್ರಾವ ಹಾಗೂ ಕೊಕ್ಕೆಹುಳು ರೋಗದಿಂದಲೂ 'ಅನಿಮಿಯಾ' ರೋಗ ಉಂಟಾಗುತ್ತದೆ. ಆರೋಗ್ಯ ಮತ್ತು ಕುಟುಂಬ ಯೋಜನಾ ಮಂತ್ರಿ ಶಾಖೆಯ ವರದಿಯಂತೆ ಭಾರತದಲ್ಲಿ ಮರಣಕ್ಕೆ ಇರುವ ಹತ್ತು ಪ್ರಮುಖ ಕಾರಣಗಳಲ್ಲಿ 'ಅನಿಮಿಯ' ಒಂದು.

ಜನನ ಕಾಲದಲ್ಲಿ ಮಕ್ಕಳ ಆರೋಗ್ಯಸ್ಥಿತಿಯು ತಾಯಿಯ ಆರೋಗ್ಯವನ್ನು ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಗರ್ಭಪಾತ, ಮೃತ ಶಿಶು ಜನನ, ಅಪ್ರಾಪ್ತ ಹೆರಿಗೆ, ಎಳೆ ಶಿಶು ಮರಣ ಇವೇ ಮುಂತಾದ ದುರ್ಘಟನೆಗಳಿಗೂ ತಾಯಿಯ ಆರೋಗ್ಯಸ್ಥಿತಿಗೂ ಸಂಬಂಧವಿರುವುದಾಗಿ ಪ್ರಪಂಚದ ನಾನಾ ಭಾಗಗಳಲ್ಲಿ ನಡೆಸಿರುವ ಸಂಶೋಧನೆಗಳಿಂದ ತಿಳಿದುಬಂದಿದೆ. ಈ ಕಾರಣಗಳು ಆವಶ್ಯಕತೆ ಇರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಗರ್ಭಧಾರಣೆಗೆ ಪ್ರೇರಕವಾಗಿವೆ. ನ್ಯೂನ ಪೋಷಣೆಯ ಪರಿಹಾರದಿಂದ ಜನಸಂಖ್ಯಾ ನಿಯಂತ್ರಣ ಹಾಗೂ ಕುಟುಂಬ ಯೋಜನಾ ಕಾರ್ಯ ಯಶಸ್ವಿಯಾಗಬಲ್ಲುದು. ಭಾರತದಲ್ಲಿ

ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಲ್ಲಿ ಜನಿಸುವ ಅಸಂಖ್ಯಾತ ಮಕ್ಕಳ ಜನನ ಕಾಲದ ದೇಹದ ತೂಕ ಮತ್ತು ಇತರ ಆರೋಗ್ಯ ಸ್ಥಿತಿಗಳು ಕನಿಷ್ಠಮಟ್ಟಕ್ಕಿಂತಲೂ ಕಡಮೆಯಾಗಿರುತ್ತವೆ (< ೨.೫ ಕೆಜಿ.) ಎಂದು ಸಮೀಕ್ಷೆಗಳಿಂದ ತಿಳಿದುಬರುತ್ತದೆ. ಈ ಸ್ಥಿತಿಗೆ ತಾಯಿಯ ನ್ಯೂನ ಪೋಷಣೆ ಬಹು ಮುಖ್ಯ ಕಾರಣವೆಂದು ಋಜುತಪಟ್ಟಿದೆ. ಗರ್ಭಧಾರಣೆಯ ಕೊನೆಯ ಮೂರು ತಿಂಗಳ ಅವಧಿಯಲ್ಲಾದರೂ ಉತ್ತಮ ಆಹಾರ ದೊರೆತರೆ, ಹುಟ್ಟುವ ಮಗುವಿನ ಆರೋಗ್ಯಸ್ಥಿತಿ ಬಹುಮಟ್ಟಿಗೆ ಸುಧಾರಿಸುವುದೆಂಬುದಕ್ಕೆ ಪ್ರಯೋಗಗಳ ಆಧಾರವಿದೆ. ಪ್ರಾಣಿಗಳ ಮೇಲೆ ನಡೆಸಿದ ಸಂಶೋಧನೆಗಳಿಂದ ಗರ್ಭಧಾರಣೆಯ ಕಾಲದಲ್ಲಿ ನ್ಯೂನ ಪೋಷಣೆಯಿಂದ ಮಗುವಿನ ಮಿದುಳಿನ ಬೆಳವಣಿಗೆ ಕುಂಠಿತವಾಗಬಹುದೆಂದು ತಿಳಿದುಬಂದಿದೆ.

ನ್ಯೂನಪೋಷಣೆಯಿಂದ ಹಾಲುಣಿಸುವುದಕ್ಕೆ ಹೆಚ್ಚಿನ ಆತಂಕ ಬರುವುದಿಲ್ಲವೆಂಬುದು ಅನೇಕರಿಗೆ ತಿಳಿದ ವಿಷಯ. ಪ್ರಕೃತಿದೇವಿ ಮಕ್ಕಳಿಗೆ ನೀಡುವ ಈ ರಕ್ಷಣೆ ತಾಯಿಗೆ ಮಾರಕವಾಗಬಲ್ಲುದು. ಸ್ತನಗ್ರಂಥಿಗಳಲ್ಲಿನ ಹಾಲಿನ ಉತ್ಪಾದನೆಗೆ ಬೇಕಾಗುವ ಅಂಶಗಳು ನ್ಯೂನ ಪೋಷಣೆಯ ಸ್ಥಿತಿಯಲ್ಲಿ, ತಾಯಿಯ ದೇಹ ಸಂಯೋಜನೆಯಲ್ಲಿರುವ ಪೌಷ್ಟಿಕಾಂಶಗಳಿಂದ ಪೂರೈಕೆಯಾಗುತ್ತದೆ. ಇದರಿಂದ ತಾಯಿಯ ಆರೋಗ್ಯ ಹದಗೆಡುವುದರಲ್ಲಿ ಸಂಶಯವಿಲ್ಲ.

ಮರಣ ಸಂಖ್ಯೆ, ಜೀವಿತ ಕಾಲ ನಿರೀಕ್ಷೆ, ರೋಗ ವ್ಯಾಪನ ಸಂಖ್ಯೆ ಇತ್ಯಾದಿ ಅಂಕಿ ಅಂಶಗಳು ಜನಸಮುದಾಯದ ಆರೋಗ್ಯ ಸ್ಥಿತಿಗತಿಗಳನ್ನು ತಕ್ಕಮಟ್ಟಿಗೆ ಪ್ರತಿಬಿಂಬಿಸುತ್ತವೆ. ಆಹಾರ ಪೋಷಣೆಗೂ ಆರೋಗ್ಯಕ್ಕೂ ನೇರವಾದ ಸಂಬಂಧವಿರುವುದರಿಂದ ಈ ರೀತಿಯ ಅಂಕಿಅಂಶಗಳಿಂದ ನ್ಯೂನ ಪೋಷಣೆಯ ವ್ಯಾಪ್ತಿಯನ್ನು ಸ್ವಲ್ಪಮಟ್ಟಿಗೆ ಅರಿತುಕೊಳ್ಳಬಹುದು. ಭಾರತೀಯ ಜನಸಂಖ್ಯೆಯಲ್ಲಿ ಮಹಿಳೆಯರ ಸಂಖ್ಯೆ ಇಳಿಮುಖವಾಗುತ್ತಿರುವುದು ಇತ್ತೀಚಿನ ಜನಗಣತಿಯಲ್ಲಿ ವ್ಯಕ್ತವಾಗಿದೆ. ೧೯೦೧ರಲ್ಲಿ ಪ್ರತಿ ೧,೦೦೦ ಮಂದಿ ಗಂಡಸರಿಗೆ ಮಹಿಳೆಯರ ಸಂಖ್ಯೆ ೯೭೨ ಆಗಿದ್ದು ೧೯೭೧ರಲ್ಲಿ ಈ ಸಂಖ್ಯೆ ೯೩೦ಕ್ಕೆ ಇಳಿದಿರುವುದು ಕುತೂಹಲಕಾರಿಯಾಗಿದೆ. ಬಾಲ್ಯಾವಸ್ಥೆ ಮತ್ತು ಸಂತಾನೋತ್ಪತ್ತಿ ಕಾಲದಲ್ಲಿ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಮರಣ ಹೊಂದುತ್ತಿರುವುದೇ ಇದಕ್ಕೆ ಮುಖ್ಯ ಕಾರಣವೆಂದು ತಿಳಿದು ಬಂದಿದೆ. (ಪಟ್ಟಿ ೨ನ್ನು ನೋಡಿ). ಭಾರತದಲ್ಲಿ ಮಾತೆಯರ ಮರಣ ಸಂಖ್ಯೆ ಪ್ರತಿ ಲಕ್ಷ ಜೀವಂತ ಶಿಶುಗಳ ಜನನಕ್ಕೆ ಇತರ ರಾಷ್ಟ್ರಗಳಲ್ಲಿರುವುದಕ್ಕಿಂತ ಬಹುಪಾಲು ಜಾಸ್ತಿ ಎಂಬುದನ್ನು ಈ ಚಿತ್ರ ಸ್ಪಷ್ಟಪಡಿಸುತ್ತದೆ:



ಭಾರತೀಯ ಯೋಜನಾ ಸಮಿತಿಯ ಅಂದಾಜಿನಂತೆ ೧೯೬೬–೭೧ರ ಅವಧಿಯಲ್ಲಿ ಭಾರತೀಯ ಮಹಿಳೆಯ ಜೀವಿತಕಾಲ ನಿರೀಕ್ಷೆ (Life-expectancy) ಸುಮಾರು ೫೨.೬ ವರ್ಷಗಳು.

ಈ ಸಂಖ್ಯೆ ಪುರುಷರಿಗೆ ಅಂದಾಜು ಮಾಡಿರುವುದಕ್ಕಿಂತಲೂ ೧.೨ ವರ್ಷಗಳು ಕಡಿಮೆ. ಒಟ್ಟಿನಲ್ಲಿ ಭಾರತೀಯರ ಜೀವಿತಕಾಲ ನಿರೀಕ್ಷೆ ಹೆಚ್ಚುತ್ತಿದ್ದರೂ ಸ್ತ್ರೀ ಮತ್ತು ಪುರುಷರ ಬದುಕಿನ ನಿರೀಕ್ಷಣೆಯಲ್ಲಿ ವ್ಯತ್ಯಾಸ ಕಂಡುಬರುತ್ತಲೇ ಇರುವುದು ಪರಿಶೀಲನಾರ್ಹ. ಆದರೆ, ಮುಂದುವರಿದ ರಾಷ್ಟ್ರಗಳಲ್ಲಿ ಸ್ತ್ರೀಯರು ಪುರುಷರಿಗಿಂತ ಹೆಚ್ಚು ಕಾಲ ಬಾಳುವ ನಿರೀಕ್ಷೆಯನು ಹೊಂದಿದ್ದಾರೆ. ಪಟ್ಟಿ ೩ರಲ್ಲಿ ಈ ವಿವರಗಳನ್ನು ಕಾಣಬಹುದು. ಭಾರತೀಯರಲ್ಲಿ ಕಾಣುವ ಹೆಚಿನ ಸ್ತ್ರೀ ಮರಣ ಸಂಖ್ಯೆ ಹಾಗೂ ಕಡಮೆ ಜೀವಿತ ಕಾಲ ನಿರೀಕ್ಷೆಗಳಿಗೆ ನ್ಯೂನ ಪೋಷಣೆ ಪರೋಕ್ಷವಾಗಿ ಕಾರಣವಾಗಿದೆ. ಅಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ಹೆರಿಗೆ, ಗರ್ಭಪಾತ ಇತ್ಯಾದಿಗಳು ಹಾನಿಕರವಾದ ಅನಿರ್ಮಲ ವಾತಾವರಣದಲ್ಲಿ ನಡೆಯುವುದರಿಂದ ಮಾತೆಯರು ಅನೇಕ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗಿ ಮರಣ ಹೊಂದುತ್ತಾರೆ.

ನ್ಯೂನಪೋಷಣೆಗೆ ಕಾರಣಗಳು

ಮಕ್ಕಳು, ಗರ್ಭಿಣಿ ಸ್ತ್ರೀ ಮತ್ತು ಶಿಶುವಿನ ಮಾತೆಯರನ್ನು ದುರ್ಬಲ ಪ್ರಜೆಗಳೆಂದು ಪರಿಗಣಿಸಲಾಗಿದೆ. ಏಕೆಂದರೆ, ಇವರಿಗೆ ಬೇಕಾಗುವ ಪೋಷಕಾಂಶಗಳ ಪ್ರಮಾಣ ಇತರರಿಗಿಂತ ಹೆಚ್ಚು. ಆದ್ದರಿಂದ, ಯಾವ ರೀತಿಯ ಆಹಾರದ ಕೊರತೆಯೇ ಆಗಲಿ ಇವರಿಗೆ ಮಿಂಚಿನ ವೇಗದಲ್ಲಿ ತಟ್ಟುತ್ತದೆ. ಬಡತನ, ಅಜ್ಞಾನ, ನಿರಕ್ಷರತೆ, ಅಶುಚಿತ್ವ, ಆಹಾರಾಭಾವ, ಮೂಢನಂಬಿಕೆಗಳು ಇತ್ಯಾದಿಗಳು ನ್ಯೂನ ಪೋಷಣೆ ಮತ್ತು ಅನಾರೋಗ್ಯಕ್ಕೆ ಹೆದ್ದಾರಿಗಳು. ಇವುಗಳಿಂದ ಎಲ್ಲರಿಗೂ ಹಾನಿಯಾದರೂ, ದುರ್ಬಲ ಗುಂಪಿಗೆ ಸೇರಿದವರ ಮೇಲಾಗುವ ಪರಿಣಾಮ ತೀವ್ರವಾಗಿರುತ್ತದೆ. ಅತಿ ಸಂತಾನ, ಬಹುಕಾಲದ ಆಹಾರದ ಕೊರತೆಯಿಂದಾಗಿ ಮಹಿಳೆ ತನ್ನ ದೇಹದಲ್ಲಿ ಶೇಖರವಾಗಿರುವ ಮತ್ತು ಸ್ವಭಾವತಃ ದೇಹದಲ್ಲಿರುವ ಪೋಷಕಾಂಶಗಳನ್ನು ಬರಿದುಮಾಡಿಕೊಂಡಿರುತ್ತಾಳೆ. ಇದರಿಂದ ರೋಗ ನಿರೋಧಕ ಶಕ್ತಿಯನ್ನು ಕಳೆದುಕೊಂಡಿರುತ್ತಾಳೆ. ಈ ಎಲ್ಲ ಕಾರಣಗಳಿಂದ, ಪುರುಷನಿಗಿಂತ ಸ್ತ್ರೀ ನ್ಯೂನಪೋಷಣೆಯ ದುಷ್ಪರಿಣಾಮಕ್ಕೆ ಒಳಗಾಗುವ ಸಂಭವ ಜಾಸ್ತಿ.

ಆಹಾರದ ಬಗ್ಗೆ ಅನೇಕ ರೀತಿಯ ಮೂಢನಂಬಿಕೆಗಳು, ಅಂಧಶ್ರದ್ಧೆಗಳು ನಮ್ಮ ಸಮಾಜದ ಎಲ್ಲ ವರ್ಗಗಳಲ್ಲೂ ಪ್ರಚಲಿತವಾಗಿವೆ. ಇವುಗಳ ರೂಪರೇಖೆಗಳು ಗರ್ಭಧಾರಣೆಯ ಮತ್ತು ಶಿಶು ಜನನದ ಕಾಲದಲ್ಲಿ ಅತಿರೇಕವಾಗುತ್ತದೆ ಎಂದರೆ ಉತ್ಪ್ರೇಕ್ಷೆ ಎನಿಸದು. ಇದರಿಂದ ಕಡಮೆ ಬೆಲೆಗೆ ದೊರಕುವ ಕೆಲವು ಪುಷ್ಟಿಕರ ಆಹಾರಗಳನ್ನು ಮಾತೆಯರು ವರ್ಜ್ಯಮಾಡುವರೆಂದು ಆಹಾರ ಸಮೀಕ್ಷೆಗಳಿಂದ ತಿಳಿದು ಬಂದಿದೆ. ಮಹಿಳೆಯ ನ್ಯೂನಪೋಷಣೆಗೆ ಪೂರಕವಾಗಿರುವ ಇನ್ನೂ ಅನೇಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳ ಬಗ್ಗೆ ಉಲ್ಲೇಖಿಸಿದೆ. ಭಾರತೀಯ ಗೃಹಿಣಿಯು ಸಾಮಾನ್ಯವಾಗಿ ಕುಟುಂಬದ ಸದಸ್ಯರೆಲ್ಲರ ಭೋಜನವಾದ ಬಳಿಕ ಊಟಮಾಡುವುದು ಒಂದು ಪ್ರಾಚೀನ ಪದ್ಧತಿ. ಇದರಿಂದ ಮಹಿಳೆಗೆ ಮಾನಸಿಕ ತೃಪ್ತಿ ಮತ್ತು ಸಂತೋಷಗಳು ಲಭಿಸಿದರೂ, ಆಕೆಯ ಆಹಾರ ಪೋಷಣೆ ಮಿತಿಗೊಳ್ಳಬಹುದೆಂದು ತಜ್ಞರ ಅಭಿಪ್ರಾಯ. ಇದು ಉದ್ದೇಶಪೂರ್ವಕವಲ್ಲದಿದ್ದರೂ, ಪದ್ಧತಿಯ ಸಹಜಗುಣದಿಂದಾಗಿ ಕೊನೆಯಲ್ಲಿ ಊಟ ಮಾಡುವವರಿಗೆ ಪ್ರಾರಂಭದಲ್ಲಿ ಊಟ ಮಾಡು ವವರಿಗಿಂತಲೂ ಕಡಿಮೆ ಪ್ರಮಾಣದ ಹಾಗೂ ಕಡಿಮೆ ಪೌಷ್ಟಿಕ ಗುಣಮಟ್ಟದ ಆಹಾರ ದೊರಕುವ ಸಾಧ್ಯತೆ ಇದೆ.

ಉಪವಾಸ, ಅರೆ ಉಪವಾಸ ಇತ್ಯಾದಿ ಆಹಾರ ಸೇವನೆಯನ್ನು ನಿಯಂತ್ರಣಗೊಳಿಸುವ ಧಾರ್ಮಿಕ ವ್ರತಗಳನ್ನು ಪರಂಪರೆಯಾಗಿ ಉಳಿಸಿಕೊಂಡು ಬರುತ್ತಿರುವ ಮಹಿಳೆ ಅನೇಕ ವೇಳೆ ಉಪವಾಸ ವನ್ನಷ್ಟೇ ಮಾಡಿ ಸಾಕಷ್ಟು ವಿಶ್ರಾಂತಿಯನ್ನು ಪಡೆಯುವುದಿಲ್ಲ. ಮೂಲತಃ ಇಂತಹ ವ್ರತ ನಿಯಮ ಕಾಲದಲ್ಲಿ ಜನರು ದೈನಂದಿನ ಕಾರ್ಯಗಳಲ್ಲಿ ತೊಡಗದೆ ಧ್ಯಾನ, ಪೂಜೆ ಮುಂತಾದ ಆಚರಣೆಗಳಲ್ಲಿ ತೊಡಗುತ್ತಿದ್ದರು. ಆದರೆ, ಅನೇಕ ರೀತಿಯ ಕೌಟುಂಬಿಕ ಬದಲಾವಣೆಗಳಿಂದ ಆಧುನಿಕ ಗೃಹಿಣಿ

ಮನೆಗೆಲಸಗಳನ್ನು ಮಾಡಿಕೊಂಡು ಉಪವಾಸ ವ್ರತಗಳನ್ನೂ ಮಾಡುತ್ತಾಳೆ. ಆಹಾರ ಪೋಷಣೆಯ ದೃಷ್ಟಿಯಲ್ಲಿ ಕೆಲವು ಶ್ರೀಮಂತ ಹಾಗೂ ಮಧ್ಯಮ ವರ್ಗದ ಮಹಿಳೆಯರಿಗೆ ಈ ಪದ್ಧತಿಗಳಿಂದ ಅನುಕೂಲವಾದರೂ, ಬಡ ಕುಟುಂಬದ ಹೆಣ್ಣು ಮಕ್ಕಳು ಎಚ್ಚರ ವಹಿಸದೆ ಅನುಸರಿಸುವ ಪದ್ಧತಿಗಳಿಂದ ನ್ಯೂನ ಪೋಷಣೆಗೆ ಗುರಿಯಾಗುವುದರಲ್ಲಿ ಸಂದೇಹವಿಲ್ಲ.

ನ್ಯೂನಪೋಷಣೆ ನಿವಾರಣಾ ಪ್ರಯತ್ನಗಳು

ಭಾರತದ ಪಂಚವಾರ್ಷಿಕ ಯೋಜನೆಗಳಲ್ಲಿ ಆಹಾರ ಉತ್ಪಾದನ ಕಾರ್ಯಕ್ರಮಗಳ ಜೊತೆಗೆ ಅನೇಕ ಆಹಾರ ಪೋಷಣಾ ಯೋಜನೆಗಳ ಬಗ್ಗೆಯೂ ವಿಶೇಷವಾದ ಗಮನವನ್ನು ಕೊಡಲಾಗುತ್ತಿದೆ. ಮಕ್ಕಳ ಹಾಗೂ ಗರ್ಭಿಣಿ ಸ್ತ್ರೀ ಮತ್ತು ಶಿಶುವಿನ ಮಾತೆಯರ ಆಹಾರ ಪೋಷಣೆಯ ಕಾರ್ಯಕ್ರಮಗಳಿಗೆ ಅಗ್ರಸ್ಥಾನವನ್ನು ನೀಡಲಾಗಿದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ 'ಅನಿಮಿಯಾ' ರೋಗವನ್ನು ತಡೆಗಟ್ಟುವ ಕಾರ್ಯಕ್ರಮವೊಂದು ಆರಂಭವಾಯಿತು. ಇದರಂತೆ ಕಬ್ಬಿಣ ಮತ್ತು ಫೋಲಿಕ್ ಆಮ್ಲದಿಂದ ಕೂಡಿದ ಮಾತ್ರೆಗಳನ್ನು ಮಕ್ಕಳಿಗೂ ಮಾತೆಯರಿಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಹಂಚಲಾಗುತ್ತಿದೆ. ಇದೇ ರೀತಿಯ ಮತ್ತೊಂದು ಕಾರ್ಯಕ್ರಮವೆಂದರೆ 'ಅನ್ವಯಿತ ಪೌಷ್ಟಿಕ ಆಹಾರ ಕಾರ್ಯಕ್ರಮ' (Applied Nutrition Programme) ದೇಹ ಸಂರಕ್ಷಣೆಗೆ ಬೇಕಾಗುವ ತರಕಾರಿ, ಹಣ್ಣು, ಕೋಳಿ, ಮೀನು ಮುಂತಾದ ಆಹಾರಗಳ ಉತ್ಪಾದನೆಯನ್ನು ಹೆಚ್ಚಿಸುವ ವಿಧಾನಗಳ ಮತ್ತು ಅವುಗಳ ಸೇವನೆಯ ಆವಶ್ಯಕತೆಯ ಬಗ್ಗೆ ಹಳ್ಳಿಯ ಜನರಿಗೆ ತಿಳಿವಳಿಕೆ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಇದರ ಸಾಧನೆಗಾಗಿ ಬಾಲವಾಡಿ ಮತ್ತು ಮಹಿಳಾ ಮಂಡಳಿಗಳ ಸ್ಥಾಪನೆಯಾಗುತ್ತಿದೆ. ಅಲ್ಲದೆ, ಪ್ರತಿ ರಾಜ್ಯದ ಅಭಿವೃದ್ಧಿ ಇಲಾಖೆಯ ನೇತೃತ್ವದಲ್ಲಿ, ಕಡಿಮೆ ಬೆಲೆಯ ಪುಷ್ಟಿಕರ ಆಹಾರ ವಿತರಣೆ ನಡೆಸಲಾಗುತ್ತಿದೆ. ಅಂಥ ಆಹಾರವನ್ನು ತಯಾರು ಮಾಡಿಕೊಳ್ಳುವ ವಿಧಾನಗಳ ಪ್ರದರ್ಶನಗಳನ್ನು ಮಹಿಳೆಯರಿಗಾಗಿ ಏರ್ಪಡಿಸಲಾಗುತ್ತದೆ. ಈ ರೀತಿಯ ಹಲವಾರು ಕಾರ್ಯಕ್ರಮಗಳು ಗುಪ್ತಗಾಮಿ ಮಹಿಳೆಯರಿಗಾಗಿ ಸಮಾಜ ಕ್ಷೇಮಾಭ್ಯುದಯ ವಿಭಾಗದ ನೇತೃತ್ವದಲ್ಲಿ ನಡೆಯುತ್ತಿವೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ೫೩೪.೨ ಕೋಟಿ ರೂಪಾಯಿಗಳನ್ನು ಆಹಾರ ಪೋಷಣೆ ಕಾರ್ಯಕ್ರಮಗಳಿಗೆ ಮೀಸಲಿಡಲಾಗಿದೆ. ಇಷ್ಟಾದರೂ ಈ ಕಾರ್ಯಕ್ರಮಗಳಿಂದ ಪ್ರಯೋಜನ ಪಡೆಯುತ್ತಿರುವವರ ಸಂಖ್ಯೆ ಬಹಳ ಕಡಿಮೆ. ನಮ್ಮ ರಾಜ್ಯದಲ್ಲಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳಿಂದ ಸು. ೧೭ ಮಂದಿ ಮಕ್ಕಳು ಮತ್ತು ತಾಯಂದಿರಿಗೆ ಮಾತ್ರ ಸಹಾಯ ದೊರಕಿದೆ. ಆದ್ದರಿಂದ ಪೌಷ್ಟಿಕ ಆಹಾರ ಕಾರ್ಯಕ್ರಮಗಳನ್ನು ಸರ್ಕಾರ ತೀವ್ರಗೊಳಿಸಬೇಕಾಗಿದೆ. ಕುಟುಂಬ ಯೋಜನೆ, ವಿದ್ಯಾಭ್ಯಾಸ, ಸಮಾಜ ಕಲ್ಯಾಣ, ನೈರ್ಮಲ್ಯ ಇತ್ಯಾದಿ ಎಲ್ಲ ಕಾರ್ಯಕ್ರಮಗಳಲ್ಲೂ ಪೌಷ್ಟಿಕ ಆಹಾರ ವಿಸ್ತರಣ ಕಾರ್ಯಕ್ಕೆ ಅವಕಾಶ ಕಲ್ಪಿಸಬೇಕಾಗಿದೆ. ಸುಶಿಕ್ಷಿತ ಮಹಿಳೆಯರು ಮಹಿಳಾಮಂಡಲಿ, ಯುವಕ ಸಂಘ ಮತ್ತು ಇತರ ಸುವ್ಯವಸ್ಥಿತ ಸಂಘ ಸಂಸ್ಥೆಗಳ ಮೂಲಕ ಅವಿದ್ಯಾವಂತ ಮಹಿಳೆಯರ ಕ್ಷೇಮಾಭ್ಯುದಯಕ್ಕೆ ದುಡಿಯಬೇಕು. ಬಡತನ, ಆಹಾರಾಭಾವ, ಅಜ್ಞಾನ, ಅಶುಚಿಯಾದ ವಾತಾವರಣ, ಸೋಂಕು ಜಾಡ್ಯಗಳು ಮುಂತಾದವುಗಳ ನಿರ್ಮೂಲ ಮಾಡುವ ಕಾರ್ಯಗಳು ನ್ಯೂನಪೋಷಣೆಯ ನಿವಾರಣೆಗೆ ನಾಂದಿಯಾಗುತ್ತವೆ. ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳೆಯರ ಆಹಾರ ಮತ್ತು ಇತರ ಸಮಸ್ಯೆಗಳು ಪರಿಹಾರವಾಗದಿದ್ದಲ್ಲಿ ರಾಷ್ಟ್ರದ ಪ್ರಗತಿ ಅಸಾಧ್ಯ.

ಪಟ್ಟಿ ೧

ಭಾರತೀಯ ವೈದ್ಯಕೀಯ ಮತ್ತು ಸಂಶೋಧನ ಪರಿಷತ್ತು ೧೯೬೮ರಲ್ಲಿ ಶಿಫಾರಸು ಮಾಡಿರುವ ಪ್ರಕಾರ ಸಾಧಾರಣ ದುಡಿಮೆ ಮಾಡುವ ವಯಸ್ಕರಿಗೆ ಒದಗಿಸಬೇಕಾದ ಕ್ಯಾಲೊರಿ ಮತ್ತು ಪೌಷ್ಟಿಕಾಂಶಗಳ ಪ್ರಮಾಣ[1]

ಕ್ಯಾಲೊರಿ ಮತ್ತು ಪೌಷ್ಟಿಕಾಂಶ	ಪುರುಷ	ಸ್ತ್ರೀ	ಗರ್ಭಿಣಿ ಸ್ತ್ರೀ	ಶಿಶುವಿನ ಮಾತೆ
ಕ್ಯಾಲೊರಿ	೨,೮೦೦	೨,೨೦೦	೨,೫೦೦	೨,೯೦೦
ಪ್ರೊಟೀನ್ (ಗ್ರಾಂ)	೫೫	೪೫	೫೫	೬೫
ಸುಣ್ಣ (ಗ್ರಾಂ)	೦.೪-೦.೫	೦.೪-೦.೫	೧.೦	೧.೦
ಕಬ್ಬಿಣ (ಮಿಗ್ರಾಂ)	೨೦	೩೦	೪೦	೩೦
'ಎ' ಜೀವಸತ್ವ (ಮೈಗ್ರಾಂ)	೭೫೦	೭೫೦	೭೫೦	೧,೭೫೦
ಥಯಮಿನ್ (ಮಿಗ್ರಾಂ)	೧.೪	೧.೧	೧.೩	೧.೫
ರೈಬೊಫ್ಲೇವಿನ್ (ಮಿಗ್ರಾಂ)	೧.೫	೧.೨	೧.೪	೧.೬
ನಯಸಿನ್ (ಮಿಗ್ರಾಂ.)	೧೦	೧೫	೧೭	೨೦
ಫೋಲಿಕ್ ಆಮ್ಲ (ಮೈಗ್ರಾಂ)	೧೦೦	೧೦೦	೧೫೦-೩೦೦	೧೫೦
ವೈಟಮಿನ್ ಬಿ (ಮೈಗ್ರಾಂ)	೧.೦	೧.೦	೧.೫	೧.೫
'ಸಿ' ಜೀವಸತ್ವ (ಮಿಗ್ರಾಂ)	೫೦	೫೦	೫೦	೮೦

ಪಟ್ಟಿ ೨

ಪ್ರತಿಯೊಂದು ರಾಷ್ಟ್ರದ ಪ್ರತಿ ನೂರು ಮಂದಿ ಪುರುಷರ ಮರಣಕ್ಕೆ ಸ್ತ್ರೀಯರ ಮರಣ ಸಂಖ್ಯೆ[2]

ರಾಷ್ಟ್ರ/ವಯೋಮಿತಿ	೧–೪	೫–೧೪	೧೫–೨೪	೨೫–೩೦	೪೦–೫೯
ಭಾರತ (೧೯೬೪)	೧೦೩.೯	೯೧.೮	೧೧೯.೪	೧೦೨.೪	೭೪.೭
ಶ್ರೀ ಲಂಕಾ (೧೯೬೮)	೧೦೭.೨	೯೦.೬	೯೫.೬	೮೭.೦	೫೬.೬
ಪಾಕಿಸ್ತಾನ (೧೯೬೫)	೧೫೩.೨	೧೧೮.೫	೧೪೪.೭	೧೨೮.೯	೫೮.೯
ಬರ್ಮ (೧೯೬೩)	೧೧೦.೬	೯೭.೫	೧೨೦.೭	೧೧೫.೦	೬೮.೩
ಜಪಾನ್ (೧೯೬೫)	೭೪.೫	೬೦.೪	೫೧.೫	೬೪.೩	೭೦.೦
ಬ್ರಿಟನ್ (೧೯೬೯)	೭೨.೪	೫೬.೬	೪೩.೭	೬೯.೦	೫೬.೫
ಅಮೆರಿಕ (೧೯೬೮)	೭೯.೨	೬೧.೬	೩೭.೩	೫೫.೧	೫೬.೦

1 Recommended Dietary Allowances and Balanced Diets, I.C.M.R. (1971)

2 Proceedings of the Nutrition Society of India, No. 17, p 63 (1974)

ಪಟ್ಟಿ ೩

ವಿವಿಧ ರಾಷ್ಟ್ರಗಳ ಪುರುಷ ಮತ್ತು ಸ್ತ್ರೀಯರ ಜೀವಿತ ಕಾಲದ ನಿರೀಕ್ಷಣೆ (ವರ್ಷಗಳಲ್ಲಿ)[3]

ರಾಷ್ಟ್ರ	ಪುರುಷ	ಸ್ತ್ರೀ
ಭಾರತ (೧೯೫೧–೧೯೬೦)	೪೧.೮೯	೪೦.೫೫
ಭಾರತ (೧೯೭೧–೧೯೭೬)	೫೧.೩೦	೪೯.೬೦
ಭಾರತ(೧೯೭೬–೧೯೮೧)	೫೩.೮೦	೫೨.೬೦
ಪಾಕಿಸ್ತಾನ (೧೯೬೨)	೫೩.೭೨	೪೮.೮೦
ಶ್ರೀ ಲಂಕಾ (೧೯೬೨)	೬೧.೯೦	೬೧.೪೦
ಜಪಾನ್ (೧೯೬೮)	೬೯.೦೫	೭೪.೩೦
ರಷ್ಯ (೧೯೬೭–೧೯೬೮)	೬೫.೦೦	೭೪.೦೦
ಬ್ರಿಟನ್ (೧೯೬೭–೧೯೬೯)	೬೮.೭೦	೭೪.೯೦
ಅಮೆರಿಕ (೧೯೬೮)	೬೬.೬೦	೭೪.೦೦

ಪಟ್ಟಿ ೪

ಭಾರತೀಯ ವೈದ್ಯಕೀಯ ಸಂಶೋಧನ ಪರಿಷತ್ತು ಸಲಹೆ ಮಾಡಿರುವ ಪ್ರಕಾರ ಸಾಧಾರಣ ದುಡಿಮೆ ಮಾಡುವ ವಯಸ್ಕರಿಗೆ ದೈನಂದಿನ ಆಹಾರದಲ್ಲಿರಬೇಕಾದ ವಿವಿಧ ಆಹಾರಗಳ ಪ್ರಮಾಣ[4]

ಆಹಾರಗಳು (ಗ್ರಾಂ.ಗಳಲ್ಲಿ)	ಪುರುಷ	ಸ್ತ್ರೀ	ಗರ್ಭಿಣಿ ಸ್ತ್ರೀ	ಶಿಶುವಿನ ಮಾತೆ
ಧಾನ್ಯಗಳು	೪೭೫	೩೫೦	೪೦೦	೪೫೦
ಬೇಳೆಕಾಳುಗಳು	೮೦	೭೦	೭೦	೮೦
	(೬೫)	(೫೫)	(೫೫)	(೬೫)
ಸೊಪ್ಪು	೧೨೫	೧೨೫	೧೫೦	೧೫೦
ಇತರ ತರಕಾರಿಗಳು	೧೭೫	೧೫೦	೧೫೦	೧೫೦
ಹಣ್ಣು	೩೦	೩೦	೩೦	೩೦
ಹಾಲು	೨೦೦	೨೦೦	೩೨೫	೩೨೫
	(೧೦೦)	(೧೦೦)	(೨೨೫)	(೨೨೫)
ಮೊಟ್ಟೆ	(೩೦)	(೩೦)	(೩೦)	(೩೦)
ಮಾಂಸ ಮತ್ತು ಮೀನು	(೩೦)	(೩೦)	(೩೦)	(೩೦)
ಕೊಬ್ಬು ಮತ್ತು ಎಣ್ಣೆ	೪೦	೩೫	೩೫	೫೦
ಸಕ್ಕರೆ ಮತ್ತು ಬೆಲ್ಲ	೪೦	೩೦	೪೦	೫೦

(ಆವರಣದಲ್ಲಿ ಕೊಟ್ಟಿರುವ ಅಂಕಿಗಳು ಮಾಂಸಾಹಾರಿಗಳಿಗೆ ಅನ್ವಯಿಸುತ್ತವೆ.)

[3] Proceedings of the Nutrition Society of India, No. 17, p. 62 (1974)

[4] Recommended Daily Allowances and Balanced Diets. I.C.M.R. (1971)

ಪುಸ್ತಕ ಲೋಕ

ಭಾರತದಲ್ಲಿ ಶೈಕ್ಷಣಿಕ ಪ್ರಯೋಗಗಳು : ಲೇ: ವಿ. ಎಸ್. ಕುಲಕರ್ಣಿ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟಗಳು: ೮+೬೮; ಬೆಲೆ: ೨೫ ಪೈಸೆ

ಕರ್ನಾಟಕದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮೊಟ್ಟಮೊದಲು ವಿಶ್ವವಿದ್ಯಾಲಯದಲ್ಲಿ ಕ್ರಮವಾದ ಶಿಕ್ಷಣ ಪಡೆಯಲಾಗದ ಜನತೆಯ ಶಿಕ್ಷಣಕ್ಕಾಗಿ ತನ್ನ ಅಧಿಕಾರವ್ಯಾಪ್ತಿಯ ಪ್ರದೇಶಗಳಲ್ಲಿ ಉಪನ್ಯಾಸಗಳನ್ನು ಆರಂಭಿಸಿತು. ಈ ಪ್ರಚಾರೋಪನ್ಯಾಸಗಳಲ್ಲಿ ಜನತೆ ತೋರಿದ ಆಸಕ್ತಿಯಿಂದ ಪ್ರೋತ್ಸಾಹಗೊಂಡು ಆ ಉಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಅಚ್ಚು ಹಾಕಿಸಿ ಸುಲಭ ಬೆಲೆಗೆ ದೊರಕುವಂತೆ ಮಾಡಿತು. ಈ ಪುಸ್ತಕಗಳು ಲಕ್ಷಗಟ್ಟಲೆ ಮಾರಾಟವಾಗಿ ಜನತೆಯಲ್ಲಿ ಪರಿಣಾಮ ಕಾರಿಯಾಗಿ ಜ್ಞಾನ ಪ್ರಸಾರ ಮಾಡುತ್ತಿರುವ ಅಂಶ ವೇದ್ಯವೇ ಆಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಈ ಮೇಲ್ಪಂಕ್ತಿಯನ್ನು ಕರ್ನಾಟಕದ ಇತರ ವಿಶ್ವವಿದ್ಯಾಲಯಗಳೂ ಅನುಸರಿಸಿ ಅಷ್ಟೇ ಪರಿಣಾಮ ಕಾರಿಯಾಗಿ ತಮ್ಮ ತಮ್ಮ ಪ್ರಾದೇಶಿಕ ಎಲ್ಲೆಯಲ್ಲಿ ಜ್ಞಾನ ಪ್ರಚಾರ ಕಾರ್ಯವನ್ನು ಕೈಕೊಂಡಿವೆ. ಈ ಮುಂಬಿನಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಕೈಕೊಂಡಿರುವ ಪ್ರಕಟನಕಾರ್ಯದಲ್ಲಿ 'ಭಾರತದಲ್ಲಿ ಶೈಕ್ಷಣಿಕ ಪ್ರಯೋಗಗಳು' ಎಂಬ ಕಿರುಹೊತ್ತಗೆ ೭೫ನೆಯ ಪುಷ್ಪ.

ಜೀವನ ನಿತ್ಯಪರಿವರ್ತನೆಗೊಳಗಾಗಿರುವುದರಿಂದ ಅದಕ್ಕೆ ವ್ಯಕ್ತಿಗಳನ್ನು ಸಿದ್ಧಪಡಿಸತಕ್ಕ ಶಿಕ್ಷಣವೂ ಅಷ್ಟೇ ಗತಿಶೀಲತೆಯನ್ನು ತಳೆದಿರಬೇಕಾಗುತ್ತದೆ. ಎಂದರೆ ಶಿಕ್ಷಣಕ್ಕೆ ಸಂಬಂಧಿಸಿದ ತತ್ವ ಮತ್ತು ಅನುಷ್ಠಾನಗಳು ಜೀವನ ಪರಿವರ್ತನೆಯಾದಂತೆ ಅನುಕ್ರಮವಾದ ಮಾರ್ಪಾಟುಗಳನ್ನು ಹೊಂದು ತ್ತಿರುತ್ತವೆ. ಹೀಗೆ ಪ್ರಗತಿ ಹೊಂದುತ್ತಿರುವ ಜೀವನಕ್ಕೆ ಹೊಂದಿಕೊಳ್ಳುವಂತೆ ಮಾಡುವ ಯತ್ನವೇ ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಪ್ರಯೋಗಗಳು. ಪ್ಲೇಟೋವಿನಿಂದ ಹಿಡಿದು ಇಂದಿನ ವರೆಗೂ ನಡೆ ದಿರುವ ಪ್ರಯೋಗಗಳೆಲ್ಲ ಶಿಕ್ಷಣವನ್ನು ನಿತ್ಯ ಪ್ರಗತಿಗೇರುತ್ತಿರುವ ಜೀವನಕ್ಕೆ ಹೊಂದಿಸಲೆಂದೇ ನಡೆದಿದೆ. ಆದರೆ ಯಾವ ಪ್ರಯೋಗವೇ ಆಗಲಿ ಅದು ಉದ್ಘಾಟನೆಯಾದ ಸ್ವರೂಪದಲ್ಲಿ ಎಂದೆಂದಿಗೂ ಉಳಿ ಯುವಂತಿಲ್ಲ. ಏಕೆಂದರೆ ಜೀವನದಲ್ಲಾಗುವ ಬದಲಾವಣೆಗಳಿಗೆ ಹೊಂದಿಕೊಳ್ಳಲು ಮತ್ತೆ ಮಾರ್ಪಾಟು ಗಳು ಅನಿವಾರ್ಯವಾಗಿ ನೂತನ ಪ್ರಯೋಗಗಳಿಗೆ ಎಡೆಗೊಡಬೇಕಾಗುತ್ತದೆ. ಎಂದರೆ ಒಂದು ಪ್ರಯೋಗ ಮುಂದಿನ ಪ್ರಯೋಗಕ್ಕೆ ಎಡೆಮಾಡಿಕೊಡುತ್ತದೆ. ಆದ್ದರಿಂದ ಒಂದೆ ಅನುಷ್ಠಾನಕ್ಕೆ ಬಂದ ಯಾವ ಶೈಕ್ಷಣಿಕ ಪ್ರಯೋಗವಾಗಲಿ ಮೂಲರೂಪದಲ್ಲಿ ಇಂದು ಉಳಿದುಕೊಂಡಿಲ್ಲ. ಇದಿಷ್ಟರಿಂದ ಅನಾದಿಕಾಲದಿಂದ ನಡೆದಿರುವ ಪ್ರಯೋಗಗಳೆಲ್ಲ ವ್ಯರ್ಥವೆಂದು ಭಾವಿಸಬಾರದು: ಅವುಗಳ ಉತ್ತಮಾಂಶ ಗಳನ್ನು ಶಿಕ್ಷಣ ಮೈಗೂಡಿಸಿಕೊಂಡು ಮುನ್ನಡೆಯುತ್ತಿದೆ.

ಶೈಕ್ಷಣಿಕ ಪ್ರಯೋಗಗಳು ಎಲ್ಲ ಪ್ರಗತಿಪರ ರಾಷ್ಟ್ರಗಳಲ್ಲಿಯೂ ನಡೆಯುತ್ತಿವೆ. ಪ್ರಾಚೀನ ಕಾಲದಲ್ಲಿ ಆ ಪ್ರಯೋಗಗಳು ಜೀವನದ ಗತಿಶೀಲತೆಯನ್ನನುಸರಿಸಿ ತೀವ್ರಗತಿಯಲ್ಲೋ ಮಂದಗತಿಯಲ್ಲೋ ನಡೆಯುತ್ತಿದ್ದುವು. ವೈದಿಕ ಶಿಕ್ಷಣ. ಆಶ್ರಮಗಳ ಶಿಕ್ಷಣ, ಗುರುಕುಲ ಶಿಕ್ಷಣ. ಜೈನ ಮತ್ತು ಬೌದ್ಧ ಶಿಕ್ಷಣ ಪದ್ಧತಿಗಳು ಇವೇ ಮುಂತಾದವು ಪ್ರಾಚೀನ ಭಾರತದಲ್ಲಿ ಅಂದಿಗಂದಿಗೆ ಪ್ರಚಾರಕ್ಕೆ ಬಂದಿದ್ದ ಶೈಕ್ಷಣಿಕ ಪ್ರಯೋಗಗಳು. ಬ್ರಹ್ಮಪುರಿ. ಅಗ್ರಹಾರ, ಬಸದಿ, ಸಂಘಾರಾಮ. ಚೈತ್ಯಾಲಯ, ಮಠ. ದೇವಾಲಯದ ವಿದ್ಯಾಪೀಠ, ಅಯ್ಯಗಳ ಶಾಲೆ–ಇವೂ ಆ ಮುಖವಾಗಿ ನಡೆದ ಪ್ರಯೋಗಗಳೇ. ಮಧ್ಯಯುಗಗಳಲ್ಲಿ ಪ್ರಾಥಮಿಕ ಹಂತದಲ್ಲಿ ಮಕ್ತಾಬ್‌ಗಳೂ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮದ್ರಸಾಗಳೂ ಪ್ರಚಾರಕ್ಕೆ ಬಂದ ಮುಸ್ಲಿಂ ಪದ್ಧತಿಯ ಪ್ರಯೋಗಗಳು. ಬ್ರಿಟಿಷರು ಆಧುನಿಕ ಕಾಲದಲ್ಲಿ ತಮ್ಮ ನಾಡಿನಲ್ಲಿ

ಅಸ್ತಿತ್ವದಲ್ಲಿದ್ದ ವಿದ್ಯಾಪದ್ಧತಿಯನ್ನು ಇಲ್ಲಿ ನಾಟಿ ಹಾಕಿದ್ದೂ ಒಂದು ವಿಶಿಷ್ಟ ರೀತಿಯ ಪ್ರಯೋಗವೇ. ಆದರೆ ಇಲ್ಲಿನ ಜನತೆ ಈ ಅನ್ಯ ದೇಶೀಯ ಪದ್ಧತಿಯನ್ನು ಮೊದಲು ಸ್ವಾಗತಿಸಿದರೂ ದಿನಕಳೆದಂತೆ ಅದನ್ನು ವಿರೋಧಿಸುತ್ತ ಬಂದರು. ಜೊತೆಗೆ ಇಲ್ಲಿನ ಜನಜೀವನಕ್ಕೊಪ್ಪುವ ಶಿಕ್ಷಣ ಪದ್ಧತಿಯನ್ನು ರೂಪಿಸಿಕೊಳ್ಳಲು ಎಲ್ಲ ಹಾಗಗಳಲ್ಲೂ ಪ್ರಯೋಗಗಳನ್ನು ನಡೆಸಲಾರಂಭಿಸಿದರು. ಅವನ್ನೆಲ್ಲ ಒಟ್ಟಾಗಿ ರಾಷ್ಟ್ರೀಯ ಶಿಕ್ಷಣದ ಪ್ರಯೋಗಗಳೆಂದು ಕರೆಯಬಹುದು. ಜಮಿಯಾ ಮಿಲಿಯ ಇಸ್ಲಾಮಿಯ. ಗುರುಕುಲ. ವಿಶ್ವವಿದ್ಯಾಲಯ. ದರೂಲ್ ಉಲೂಮ್ ದಿಯೋಬಂದ್. ದರೂಲ್ ಉಲೂಮ್‌ನದ್ವತುಲ್ ಉಲೇಮ. ವಿಶ್ವಭಾರತಿ. ವರ್ಧಾಶಿಕ್ಷಣ ಮುಂತಾದ ಪ್ರಯೋಗಗಳು ಆಧುನಿಕ ಭಾರತದಲ್ಲಿ ನಡೆದಿವೆ. ಅವುಗಳಲ್ಲಿ ವಿಶ್ವಭಾರತಿ ಮತ್ತು ವರ್ಧಾ ಶಿಕ್ಷಣ—ಇವೆರಡು ಪ್ರಯೋಗಗಳನ್ನು ಮಾತ್ರ ಪ್ರಕೃತ ಕೃತಿಯಲ್ಲಿ ಪರಿಗಣಿಸಲಾಗಿದೆ.

೧೯೬೭ರಲ್ಲಿ ಲೇಖಕರು ತಾವು ಮಾಡಿದ ಪ್ರಚಾರೋಪನ್ಯಾಸವೊಂದನ್ನು ವಿಸ್ತರಿಸಿ ಬರೆದಿರುವ ಈ ಲೇಖನದಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಆಧುನಿಕ ಯುಗದಲ್ಲಿ ಇಂಗ್ಲಿಷ್ ಶಿಕ್ಷಣ ಪದ್ಧತಿಯ ಫಲವಾಗಿ ಮೂಡಿಕೊಂಡ ಕಹಿ ಫಲಗಳನ್ನು ನಿವಾರಿಸಲೆಂದು ಹುಟ್ಟಿಕೊಂಡ ಶುದ್ಧ ಸ್ವದೇಶೀ ಶಿಕ್ಷಣ ಪ್ರಯೋಗಗಳೆಂದು ಆರಂಭವಾದ ವಿಶ್ವಭಾರತಿ ಮತ್ತು ವರ್ಧಾ ಶಿಕ್ಷಣ ಕೇವಲ ವೈಯಕ್ತಿಕ ಪ್ರಯೋಗಗಳಾಗಿದ್ದು ಸ್ವಾತಂತ್ರ್ಯಾನಂತರ ವಿಸ್ತರಿಸಲು ಅನುವಾದುವೆಂದು ಸೂಚಿಸಿರುವರು. ಎರಡನೆಯ ಅಧ್ಯಾಯದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ದೇಶವಾದ್ಯಂತ ವಿಸ್ತರಿಸಿದ ಅನ್ಯ ಶಿಕ್ಷಣ ಪದ್ಧತಿಯಿಂದ ಉದ್ಭವಿಸಿದ ಕಹಿಫಲಗಳನ್ನು ಮಾತ್ರ ವಿವರವಾಗಿ ಪರಿಶೀಲಿಸಿದೆ. ೧೮೫೪ರ ವುಡ್ಸ್ ಪತ್ರ. ೧೮೮೨ರ ಹಂಟರ್ ಆಯೋಗದ ವರದಿ. ೧೯೦೨ರ ವಿಶ್ವವಿದ್ಯಾನಿಲಯ ಆಯೋಗದ ವರದಿ. ೧೯೧೭ರ ಕಲ್ಕತ್ತ ವಿಶ್ವವಿದ್ಯಾನಿಲಯದ ಆಯೋಗದ ವರದಿ. ೧೯೨೯ರ ಹಾರ್ಟಾಗ್ ಸಮಿತಿ ವರದಿ. ೧೯೩೪ರ ಸಪ್ರು ಸಮಿತಿ ವರದಿ. ೧೯೩೭ರ ಆ್ಯಬಟ್-ವುಡ್ಸ ವರದಿ. ೧೯೪೪ರ ಸಾರ್ಜೆಂಟ್ ಸಮಿತಿ ವರದಿ ಮುಂತಾದವು ಎತ್ತಿ ಹಿಡಿದಿರುವ ಬ್ರಿಟಿಷ್ ಶಿಕ್ಷಣದಲ್ಲಿನ ದೋಷಗಳನು ಪರಿಶೀಲಿಸಿದೆ. ಮೂರನೆಯ ಅಧ್ಯಾಯದಲ್ಲಿ ವರ್ಧಾ ಶಿಕ್ಷಣವನ್ನು. ನಾಲ್ಕನೆಯ ಅಧ್ಯಾಯದಲ್ಲಿ ವಿಶ್ವಭಾರತಿ ಶಿಕ್ಷಣ ವಿಧಾನವನ್ನು ಪರಿಶೀಲಿಸಿದೆ. ಐದನೆಯ ಅಧ್ಯಾಯದಲ್ಲಿ ಸ್ವತಂತ್ರ ಭಾರತದಲ್ಲಿ ವಿವಿಧ ಅಂತಸ್ತಿನ ಶಿಕ್ಷಣ ವಿಸ್ತರಿಸಿರುವ ಅಂಶವನ್ನು ಅಂಕಿಅಂಶಗಳ ಆಧಾರದ ಮೇಲೆ ವಿವರಿಸಿರುವರು. ಆರನೆಯ ಅಧ್ಯಾಯದಲ್ಲಿ ಮುಖ್ಯವಾಗಿ ಕೊಠಾರಿ ಶಿಕ್ಷಣ ಆಯೋಗದ ವರದಿಯಲ್ಲಿ ಸೂಚಿಸಿರುವ ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ಪರಿಶೀಲಿಸಿ ಅವನ್ನು ಕಾರ್ಯಗತ ಮಾಡುವ ಅಗತ್ಯವನ್ನು ಒತ್ತಿ ಹೇಳಿದೆ. ಕೊನೆಯ ಅಧ್ಯಾಯದಲ್ಲಿ ಇಂದಿನ ಶಿಕ್ಷಣ ಪದ್ಧತಿಯನ್ನು ಆಮೂಲಾಗ್ರವಾಗಿ ಸುಧಾರಿಸುವ ಅಗತ್ಯವನ್ನು ಒತ್ತಿ ಹೇಳಿರುವರು. ಸುಧಾರಿಸುವ ಮಾರ್ಗವನ್ನು ಮಾತ್ರ ಸೂಚಿಸುವ ಯತ್ನ ಮಾಡಿಲ್ಲ.

'ಭಾರತದಲ್ಲಿ ಶೈಕ್ಷಣಿಕ ಪ್ರಯೋಗ' ಎಂಬ ಹೆಸರಿನಿಂದ ಕರೆದಿರುವ ಈ ಕೃತಿಯಲ್ಲಿ ಕೇವಲ ಎರಡು ಪ್ರಯೋಗಗಳನ್ನು ಮಾತ್ರ ಪರಿಶೀಲಿಸಿದೆ. ಅನಾದಿ ಕಾಲದಿಂದಲೂ ನಡೆದಿರುವ ಇತರ ಕೆಲವು ಪ್ರಮುಖ ಪ್ರಯೋಗಗಳನ್ನಾದರೂ ಸಂಕ್ಷಿಪ್ತವಾಗಿ ಸೂಚಿಸಬಹುದಾಗಿತ್ತು. ಅಥವಾ ಪುಸ್ತಕಕ್ಕೆ 'ವರ್ಧಾ ಶಿಕ್ಷಣ ಮತ್ತು ವಿಶ್ವಭಾರತಿ' ಎಂಬ ಶೀರ್ಷಿಕೆಯನ್ನು ಕೊಡಬಹುದಾಗಿತ್ತು. ಹಾಗೆ ಮಾಡದ್ದರಿಂದ ಓದುಗರು ಇವೆರಡೇ ನಮ್ಮ ದೇಶದಲ್ಲಿ ನಡೆದಿರುವ ಶಿಕ್ಷಣ ಪ್ರಯೋಗಗಳಿರಬಹುದೆಂದು ಭಾವಿಸಲು ಅವಕಾಶವಾಗುತ್ತದೆ. ಒಟ್ಟಿನಲ್ಲಿ ಬ್ರಿಟಿಷ್ ಶಿಕ್ಷಣದಿಂದ ಆಗಿರುವ ಅನರ್ಥಗಳನ್ನೂ ಅವನ್ನು ನಿವಾರಿಸಲು ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ಆಚರಣೆಗೆ ತರುವ ಅಗತ್ಯವನ್ನೂ ಪರಿಚಯ ಮಾಡಿಕೊಳ್ಳಲು ಈ ಕೃತಿ ಸಹಾಯಮಾಡುತ್ತದೆ. ಭಾಷೆ ಸರಳವಾಗಿದ್ದು ವಿಷಯ ಸುಲಭವಾಗಿ ಅರ್ಥವಾಗುವಂತಿದೆ. ಸಾಮಾನ್ಯ ಜನರಿಗೆ ಶಿಕ್ಷಣದ ಬಗ್ಗೆ ಆಸಕ್ತಿ ಮೂಡುವಂತೆ ವಿಷಯವನ್ನು ಪ್ರತಿಪಾದಿಸಿದೆ.

—ಡಾ. ಎನ್. ಎಸ್. ವೀರಪ್ಪ

ಶಿಕ್ಷಣವೇತ್ತ ಡಾ. ಜಾನ್‌ಡ್ಯೂಯಿ : ಲೇ: ಟಿ. ಕೆ. ಹಿರೇಗಂಗೆ: ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟಗಳು ೮ + ೬೮ + ೨; ಬೆಲೆ: ೨೫ ಪೈಸೆ

ಜಾನ್ ಡ್ಯೂಯಿ ಈ ಶತಮಾನದಲ್ಲಿ ಅಮೆರಿಕದ ಹಾಗೂ ಪ್ರಪಂಚದ ಇತರ ದೇಶಗಳ ಶಿಕ್ಷಣ ರಂಗದ ಮೇಲೆ ಮಹತ್ತರ ಪ್ರಭಾವವನ್ನು ಬೀರಿ ಅದರ ತತ್ವ ಮತ್ತು ಅನುಷ್ಠಾನಗಳನ್ನು ಮಾರ್ಪಡಿಸಿರುವ ಯುಗಪ್ರವರ್ತಕ ಶಿಕ್ಷಣವೇತ್ತ. ಮೂಲತಃ ಅವನು ಲೌಕಿಕ ತತ್ವಜ್ಞಾನಿ. ನೂತನವಾಗಿ ರೂಢಿಸಿದ ತನ್ನ ಲೌಕಿಕ (ಫಲಪ್ರಮಾಣ) ವಾದದ (ಪ್ರಾಗ್ಮಾಟಿಸಂ) ಬೆಳಕಿನಲ್ಲಿ ಶಿಕ್ಷಣಕ್ಷೇತ್ರಕ್ಕೆ ಹೊಸ ತತ್ವದ ದೃಷ್ಟಿಯನ್ನು ರೂಢಿಸಿಕೊಟ್ಟು ಅದರ ಬೆಳಕಿನಲ್ಲಿ ಪ್ರಯೋಗಗಳನ್ನು ನಡೆಸಿ ಆ ನೂತನ ತತ್ವ ದೃಷ್ಟಿಯ ಸಾರ್ಥಕ್ಯವನ್ನು ತೋರಿಸಿಕೊಟ್ಟಿರುವನು. ಅವನ ತತ್ವದೃಷ್ಟಿಯನ್ನೂ ಅದರ ಮೌಲ್ಯ ಮಾಪನವನ್ನೂ ಕುರಿತು ಈ ಕಿರುಹೊತ್ತಗೆಯಲ್ಲಿ ವಿವೇಚಿಸಿದೆ.

ಇವರಲ್ಲಿ ಜೀವನ ಮತ್ತು ಕಾರ್ಯ, ಡ್ಯೂಯಿಯ ಮೂಲಭೂತ ತಾತ್ವಿಕ ಸಿದ್ಧಾಂತಗಳು, ಜಾನ್‌ಡ್ಯೂಯಿಯ ಶಿಕ್ಷಣ ಸಿದ್ಧಾಂತ, ಡ್ಯೂಯಿಯ ಪ್ರಾಯೋಗಿಕ ಪಾಠಶಾಲೆ ಮತ್ತು ಡ್ಯೂಯಿಯ ಶೈಕ್ಷಣಿಕ ಸಿದ್ಧಾಂತದ ತಾತ್ತ್ವಿಕ ವಿಮರ್ಶೆ ಎಂಬ ಐದು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಡ್ಯೂಯಿ ೧೮೫೯ರಲ್ಲಿ ಅಮೆರಿಕದ ಹಳ್ಳಿಯೊಂದರಲ್ಲಿ ಜನಿಸಿ ಸಾಮಾನ್ಯ ಬಾಲಕನಂತೆ ಯಾವ ನಿರ್ದಿಷ್ಟ ಗುರಿಯೂ ಇಲ್ಲದೆ ಶಾಲಾಕಾಲೇಜುಗಳ ಹಂತವನ್ನು ಮುಗಿಸಿ ವೆರ್‌ಮೌಂಟ್ ವಿಶ್ವವಿದ್ಯಾಲಯದ ಪದವೀಧರನಾದನೆಂಬುದನ್ನೂ ಅನಂತರ ಡಾರ್ವಿನ್, ಹಕ್ಸ್ಲಿ ಮುಂತಾದವರು ಪ್ರತಿಪಾದಿಸಿದ್ದ ವಿಕಾಸತತ್ವದಲ್ಲಿ ಆಸಕ್ತಿ ಬೆಳೆಸಿಕೊಂಡು, ಜೀವನದ ನೈತಿಕ ಸಂಕಲ್ಪಗಳಿಗೆ ಬದಲು ಬೌದ್ಧಿಕ ಸಂಕಲ್ಪಗಳ ಫಲವಾಗಿ ರೂಪುಗೊಳ್ಳುವದೆಂಬ ನೂತನ ದರ್ಶನವನ್ನು ಮಾಡಿಕೊಂಡನೆಂಬ ಅಂಶಗಳನ್ನು ಸೂಕ್ಷ್ಮವಾಗಿ ವಿವರಿಸಿರುವರು. ಅನಂತರ ಕೆಲಕಾಲ ಗ್ರಾಮಾಂತರ ಪಾಠಶಾಲೆಯೊಂದರಲ್ಲಿ ಅಧ್ಯಾಪಕನಾಗಿದ್ದು ಆ ಕಾಲದಲ್ಲಿ ತನ್ನ ನೂತನ ದರ್ಶನವನ್ನು ದೃಢಪಡಿಸಿಕೊಂಡು ಅದಕ್ಕೊಂದು ಶಾಸ್ತ್ರೀಯ ಸ್ವರೂಪವನ್ನು ಕೊಡಲು ನಿರತನಾಗಿ ತತ್ವಜ್ಞಾನವನ್ನು ಕುರಿತ ಮೂಲಭೂತ ಕೃತಿಗಳನ್ನು ಅಧ್ಯಯನ ಮಾಡಿದ್ದನ್ನೂ ಆಮೇಲೆ ಜಾನ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯಕ್ಕೆ ಸೇರಿ ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿ ಪಡೆದು ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ ಪಂಡಿತನಾಗಿದ್ದನ್ನೂ ಸೂಚಿಸಿರುವರು. ಅನಂತರ ೧೮೯೪ರಲ್ಲಿ ಷಿಕಾಗೊ ವಿಶ್ವವಿದ್ಯಾಲಯದ ತತ್ವಶಾಸ್ತ್ರ ಶಾಖೆಯ ಮುಖ್ಯಸ್ಥನಾಗಿ ೧೯೩೦ರ ವರೆಗೂ ಕೆಲಸ ಮಾಡಿ ಆಮೇಲೆ ಕೊಲಂಬಿಯ ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಾಪಕ (ಪ್ರೊಫೆಸರ್ ಎಮೆರಿಟಸ್) ಆಗಿದ್ದುಕೊಂಡು ೧೯೫೨ರಲ್ಲಿ ಕಾಲವಾದ ಅಂಶವನ್ನು ವಿವರಿಸಿರುವರು.

ಎರಡನೆಯ ಅಧ್ಯಾಯದಲ್ಲಿ ಅವನ ಮೂಲಭೂತ ತಾತ್ತ್ವಿಕ ಸಿದ್ಧಾಂತವನ್ನು ವಿವರಿಸಿದೆ. ಆದರ್ಶವಾದಿಯಾದ ಹೆಗೆಲ್ಲನ ನೆರಳಿನಲ್ಲಿ ಡ್ಯೂಯಿ ತನ್ನ ತತ್ವಜ್ಞಾನವನ್ನು ಪ್ರಾರಂಭಿಸಿ ಅನಂತರ ಅವನು ಲೌಕಿಕವಾದಿಯಾಗಿ ಪರಿವರ್ತನೆ ಹೊಂದಿದ್ದನ್ನು ಸೂಚಿಸಿರುವರು. 'ತತ್ವಜ್ಞಾನದ ಮುಖ್ಯ ಕೆಲಸ ಜಗತ್ತು ಹೇಗೆ ಸೃಷ್ಟಿಯಾಯಿತು ಎಂಬುದನ್ನು ಶೋಧಿಸುವುದಲ್ಲ; ಆದರೆ ಅದನ್ನು ಹೇಗೆ ನಾವು ಹಿಡಿತದಲ್ಲಿಟ್ಟುಕೊಂಡು ಸುಧಾರಿಸಬಹುದು ಎಂಬುದೇ ಆಗಿದೆ. ಇದು ಡ್ಯೂಯಿಯ ಮೂಲಭೂತ ಭಾವನೆ. ಪ್ರಜಾಪ್ರಭುತ್ವ, ಔದ್ಯೋಗಿಕ ಪ್ರಗತಿ, ವೈಜ್ಞಾನಿಕ ದೃಷ್ಟಿ—ಈ ಮೂರಂಶಗಳು ಪ್ರಧಾನವಾಗಿ ಕಾಣುವ ಆಧುನಿಕ ಸಮಾಜ ಜೀವನದಲ್ಲಿ ಬಗೆ ಬಗೆಯ ಘರ್ಷಣೆಗಳಿರುವ ಅಂಶವನ್ನೂ ಇಂಥ ಸಮಾಜದಲ್ಲಿ ವ್ಯಕ್ತಿ ಮುನ್ನಡೆದು ತನ್ನ ಸೃಜನಾತ್ಮಕ ಬುದ್ಧಿಶಕ್ತಿಯಿಂದ ನಿಸರ್ಗವನ್ನು ನಿಯಂತ್ರಿಸಿಕೊಂಡು ಹೋಗಲು ಹೇಗೆ ಸಾಧ್ಯವೆಂಬುದನ್ನೂ ತತ್ವಜ್ಞಾನ ಸೂಚಿಸಬೇಕೆಂಬುದು ಡ್ಯೂಯಿಯ ಅಭಿಮತ. 'ಕೇವಲ ಬುದ್ಧಿ' ಎಲ್ಲೂ ಅಸ್ತಿತ್ವದಲ್ಲಿರುವುದು ಸಾಧ್ಯವಿಲ್ಲ; ಜ್ಞಾನ ಚಟುವಟಿಕೆಗಳ ಫಲವಾಗಿ ಸಿದ್ಧಿಸುವುದು' ಎಂದು ಪ್ರತಿಪಾದಿಸಿ ಅವನು ಜ್ಞಾನ ಮತ್ತು ಮನಸ್ಸಿನ ಅಥವಾ ಬುದ್ಧಿಯ ಲೌಕಿಕ ಸಿದ್ಧಾಂತವನ್ನು ತನ್ನ ಶಿಕ್ಷಣ ಸಿದ್ಧಾಂತಕ್ಕೆ ತಳಹದಿಯನ್ನಾಗಿ ಮಾಡಿಕೊಂಡಿರುವನು. 'ಜೀವನದಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಗಳನ್ನು ಎದುರಿಸಲು ಚಟುವಟಿಕೆಯಿಂದಿರುವಾಗ ವ್ಯಕ್ತಿಯ ವಿಕಾಸ ಸಾಧ್ಯವಾಗುತ್ತದೆ: ವಸ್ತು ಮತ್ತು ಪರಿಸ್ಥಿತಿಗಳನ್ನು ಹಿಡಿತದಲ್ಲಿಟ್ಟುಕೊಂಡು ಅವನ್ನು ಅಗತ್ಯಕ್ಕೆ ತಕ್ಕಂತೆ ನಿಯಂತ್ರಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಆದ್ದರಿಂದ ಮನನ, ಭಾವನೆ, ಇಚ್ಛೆ ಮುಂತಾದ ಮುಖಗಳನ್ನೊಳಗೊಂಡ ಮನಸ್ಸು ಆ ಕಾರ್ಯದಲ್ಲಿ ಒಂದು ಉಪಕರಣವಾಗಿ (ಸಾಧನ) ಕೆಲಸ ಮಾಡುತ್ತದೆ. ಆದ್ದರಿಂದ ಜ್ಞಾನ ಕ್ರಿಯೆಗಿಂತ

ಮುಂಚೆ ಬರುವುದಿಲ್ಲ: ಕ್ರಿಯೆಯಿಂದ ಲಭಿಸುವುದು. ಆತ್ಮಸಂತೋಷಕ್ಕಾಗಿ ಮಾಡುವ ಕ್ರಿಯೆಯಿಂದ ಅನುಭವ, ಜ್ಞಾನ, ಅಥವಾ ಕಲಿವು ಸಿದ್ಧಿಸುತ್ತದೆ. ಎಂದರೆ ಜ್ಞಾನ ಕ್ರಿಯೆಗೆ ಆಕಸ್ಮಿಕ ಹಾಗೂ ಅದರ ಸಹೋತ್ಪನ್ನವೆನಿಸುತ್ತದೆ. ಆದ್ದರಿಂದ ಜ್ಞಾನವನ್ನು ಅದನ್ನು ಉತ್ಪಾದಿಸುವ ಕ್ರಿಯೆಯಿಂದ ಬೇರ್ಪಡಿಸುವುದು ಯೋಗ್ಯವಲ್ಲ. ಹಾಗೆ ಮಾಡಿದರೆ ಜ್ಞಾನಕ್ಕೆ ಸಂತತವಾದ ಅಸ್ತಿತ್ವವಾಗಲಿ ಪ್ರಾಮುಖ್ಯವಾಗಲಿ ಇರದಾಗುತ್ತದೆ. ಮೂಲಕ್ರಿಯೆಯು ಉಂಟು ಮಾಡುವ ಪರಿಣಾಮದಿಂದ ಅನುಭವ ಬದಲಾಗುತ್ತ ಹೋಗುತ್ತದೆ. ನಮ್ಮ ಆಸೆ ಆಕಾಂಕ್ಷೆಗಳಿಗನುಗುಣವಾಗಿ ಪರಿಸರವನ್ನು ಪರಿವರ್ತನೆ ಮಾಡಿಕೊಂಡು ನಮ್ಮ ಅಸ್ತಿತ್ವವನ್ನು ಅರಿಯುವುದೇ ಜ್ಞಾನ. ಎಂದು ಸೂಚಿಸಿರುವನು. ಆದ್ದರಿಂದ ಅವನು ಕುಟುಂಬ ಮತ್ತು ಸಮಾಜ ಜೀವನದ ಎಲ್ಲ ಚಟುವಟಿಕೆಗಳೂ ಶಾಲಾ ಕಾರ್ಯಕ್ರಮದಲ್ಲಿ ಸೇರಬೇಕೆಂದು ವಾದಿಸಿರುವನು. ಎಂದರೆ ಜ್ಞಾನ ಒಂದು ಸಾಮಾಜಿಕ ಸಾಧನೆವಾಗುತ್ತದೆ.

ಚಿಂತನೆಯ ಬಗ್ಗೆ ವಿಶ್ಲೇಷಿಸುತ್ತ ಡ್ಯೂಯಿ. "ಅದು ತನ್ನಿಂದ ತಾನೇ ನಡೆಯುವುದಿಲ್ಲ: ಕೇವಲ ನಿರ್ವಾತದಲ್ಲಿ ನಡೆಯುವುದಿಲ್ಲ. ಇಂದ್ರಿಯಾನುಭವಗಳನ್ನೆಲ್ಲ ಒಟ್ಟುಗೂಡಿಸಿದರೂ ಅದು ನಡೆದಂತಾಗುವುದಿಲ್ಲ. ಪರಿಸ್ಥಿತಿಯಲ್ಲಿ ಬದಲಾವಣೆ ಆದಾಗ ಎಂದರೆ ಸಮಸ್ಯೆಯ ಪರಿಸ್ಥಿತಿಯಲ್ಲಿ ಚಿಂತನೆ ನಡೆಯುತ್ತದೆ. ಆ ಚಿಂತನೆ ಸಮಸ್ಯೆಯ ಅರಿವು. ಸಮಸ್ಯೆಯ ವಿಶ್ಲೇಷಣೆ. ಅದರ ಪರಿಹಾರಕ್ಕೆ ಸಂಭಾವ್ಯ ಸೂಚನೆಗಳ ವರ್ಣನೆ. ಅವುಗಳಲ್ಲಿ ಅತ್ಯಂತ ಸಂಭವನೀಯವಾದ್ದನ್ನು ಆಯ್ಕೆ ಮಾಡುವಿಕೆ. ಕೊನೆಗೆ ಪರೀಕ್ಷಿಸಿ ಅದನ್ನು ಸ್ವೀಕರಿಸುವುದು ಅಥವಾ ನಿರಾಕರಿಸುವುದು—ಈ ಐದು ಮೆಟ್ಟಿಲುಗಳಲ್ಲಿ ನಡೆಯಬೇಕು." ಎಂದು ಸೂಚಿಸಿ ಅನುಗಮನ ಪದ್ಧತಿಯನ್ನು ಪ್ರತಿಪಾದಿಸಿದ್ದಾನೆ. ಇದು ಅವನು ಸೂಚಿಸಿರುವ ಬೋಧನ ಕ್ರಮಕ್ಕೂ ಆಧಾರವಾಯಿತು.

ಮೂರನೆಯ ಅಧ್ಯಾಯದಲ್ಲಿ ಲೇಖಕರು ಡ್ಯೂಯಿ ತನ್ನ ಜ್ಞಾನ ಮೀಮಾಂಸೆಯನ್ನು ಹೇಗೆ ಶಿಕ್ಷಣ ಕ್ಷೇತ್ರಕ್ಕೆ ಅಳವಡಿಸಿದನೆಂಬುದನ್ನು ವಿವರಿಸಿರುವರು. ಶಿಕ್ಷಣತತ್ತ್ವ ಜೀವನತತ್ತ್ವವನ್ನು ಅವಲಂಬಿಸಿದೆಯೆಂದು ಸೂಚಿಸಿ ಅದು ಯಾವ ಸಾಮಾಜಿಕ ಮೌಲ್ಯ ಸಾಧನೀಯವೆಂಬ ಅಂಶವನ್ನೂ ತೋರಿಸಿಕೊಟ್ಟು ಅದನ್ನು ಅಭಿವೃದ್ಧಿಗೊಳಿಸುವ ಅಗತ್ಯವನ್ನು ಎತ್ತಿ ಹಿಡಿಯುತ್ತದೆಂದು ಡ್ಯೂಯಿ ಭಾವಿಸಿದ್ದ. ಆದ್ದರಿಂದ ಶಿಕ್ಷಣವನ್ನು ಧೃಷ್ಟ ದಾರಿಯಲಿಗೆ ಬಿಡುವುದು ಸೂಕ್ತವಲ್ಲವೆಂದೂ ಅದೂ ಕ್ರಮಬದ್ಧ ಯೋಜನೆಯಾಗಬೇಕೆಂದೂ ಸಲಹೆ ಮಾಡಿರುವನು. ವ್ಯಕ್ತಿಯು ಶಿಕ್ಷಣದಿಂದ ಅನುಭವ ಪುನರ್ರಚನೆಯಾಗುತ್ತ ಹೋಗಿ ನಾಗರಿಕತೆ ಪ್ರಗತಿಪಥದಲ್ಲಿ ಸಾಗಬೇಕು. "ವ್ಯಕ್ತಿಗಳಲ್ಲಿ ಈ ರೀತಿ ಸಿದ್ಧಿಸುವ ಸಾಮರ್ಥ್ಯದ ನಿರಂತರ ಉತ್ಕರ್ಷದ ಮೂಲಕ ಅನುಭವದ ನಿರಂತರ ಪುನರ್ರಚನೆಯೇ ಶಿಕ್ಷಣ ಎಂದು ಸ್ಪಷ್ಟೀಕರಿಸಿರುವನು. "ನಿರಂತರವೂ ಬದಲಾಗುತ್ತಿರುವ ಪ್ರಪಂಚದಲ್ಲಿ ನಾವು ಪಡೆಯುವ ಅನುಭವ ಮತ್ತೆಮತ್ತೆ ಸಂಸ್ಕರಿಸುತ್ತ, ಪುನರ್ವ್ಯವಸ್ಥೆಗೊಳ್ಳುತ್ತ, ಹೋಗುವುದರಿಂದ ಶಿಕ್ಷಣ" ಕೇವಲ ಒಂದು ಕ್ರಿಯೆಯೆಂದಲ್ಲ: ಅದು ಒಂದು ಪ್ರಕ್ರಿಯೆ. ಎಂದ ಮೇಲೆ ಶಿಕ್ಷಣ ಶಾಲೆಯಲ್ಲಿ ಮಾತ್ರ ಮುಗಿಯುವುದಲ್ಲ. ಇಡೀ ಜೀವನದಲ್ಲೇ ಸಾಗುತ್ತಿರುತ್ತದೆ. ಅಲ್ಲದೆ ಜೀವನಕ್ಕೆ ಶಿಕ್ಷಣ ಸಿದ್ಧತೆ ಮಾತ್ರವಲ್ಲ. ಶಿಕ್ಷಣವೇ ಜೀವನ"—ಇದು ಡ್ಯೂಯಿ ಶಿಕ್ಷಣದ ಬಗ್ಗೆ ನೀಡಿದ ನೂತನ ವ್ಯಾಖ್ಯೆ. ಶಿಕ್ಷಣಕ್ಕೆ ಹೊಸ ಅರ್ಥ ಕೊಟ್ಟಂತೆ ಅವನು ಅದರ ಗುರಿಗೂ ಹೊಸ ಅರ್ಥವನ್ನು ಸೂಚಿಸಿರುವನು. "ಪ್ರತಿ ಹಂತದಲ್ಲೂ ಅನುಭವವನ್ನು ಶ್ರೀಮಂತವಾಗಿಸುವುದೇ ಶಿಕ್ಷಣದ ಪ್ರಧಾನ ಗುರಿ; ಶಿಕ್ಷಣಕ್ಕೆ ಅಂತಿಮ ಗುರಿಯೆಂಬುದೇ ಇಲ್ಲ. ಅದು ಸತತವಾದ ಅನುಭವದ ಪುನರ್ರಚನೆಯಾಗಿರುತ್ತದೆ. ಎಂದರೆ ಬೆಳವಣಿಗೆಗೆ ಅಗತ್ಯವಾದ ಉದ್ಯಮ ಶಿಕ್ಷಣ, ಆದ್ದರಿಂದ ಅವಿರತ ಸಮಯೋಜನೆ ಮತ್ತು ಪ್ರತಿ ಹಂತದಲ್ಲೂ ಬೆಳವಣಿಗೆಯ ಸಾಮರ್ಥ್ಯವನ್ನು ಹೆಚ್ಚಿಸುವುದೇ ಶಿಕ್ಷಣದ ಗುರಿ." ಎಂದು ಸೂಚಿಸಿ "ಶಿಕ್ಷಣ ಜೀವನದ ಆದ್ಯಂತ ನಡೆಯಬೇಕೆಂಬ" ವಾದವನ್ನು ಎತ್ತಿ ಹಿಡಿದಿರುವನು. ಶಿಕ್ಷಣದ ಗುರಿ ವ್ಯಕ್ತಿಯ ಸಾಮರ್ಥ್ಯವನ್ನು ಸಮರ್ಥಿಸುವ ಹೊಣೆ ಹೊತ್ತಿರುವುದರಿಂದ ಶಿಕ್ಷಕ ನಿರ್ಧರಿಸುವ ಗುರಿ ಕಲಿವಿನ ಗುರಿಯಾಗಲಾರದೆಂದೂ ಅದು ಮಕ್ಕಳಿಂದಲೇ ಸೂಚಿತವಾಗಬೇಕೆಂದೂ ವಾದಿಸಿರುವನು. "ಮಗು ಕ್ರಿಯಾಶೀಲನಾಗಿದ್ದು ಆಸ್ತ್ಯಾಸನ್ನ ಗುರಿಗಳನ್ನು ನಿರ್ಧರಿಸಿಕೊಂಡು ಮುಂದೆ ಹೋದಂತೆ ಆ ಗುರಿಯನ್ನು ಸಮಾಯೋಜನೆ ಮಾಡಿ

ಕೊಂಡಾಗ ಶಿಕ್ಷಣದ ಪ್ರಕ್ರಿಯೆ ಬದುಕಿನ ಪ್ರಕ್ರಿಯೆಯೊಡನೆ ಏಕರೂಪದ್ದಾಗುತ್ತದೆ. ಶಿಕ್ಷಣವೇ ಜೀವನವಾಗುತ್ತದೆ"– ಶಿಕ್ಷಣದ ಗುರಿಯನ್ನು ಕುರಿತ ಈ ವ್ಯಾಖ್ಯೆ ಡ್ಯೂಯಿಯ ಸಿದ್ಧಾಂತದಿಂದ ಮೂಡಿಬರುವ ಉಪೋತ್ಪನ್ನವೆನ್ನಬಹುದು (ಬೈಪ್ರಾಡಕ್ಟ್). ಶಿಕ್ಷಣ ಮಕ್ಕಳ ವೈಯಕ್ತಿಕ ಚಟುವಟಿಕೆಯಿಂದ ಆರಂಭವಾಗಿ, ಅವರ ಮೂಲಭೂತ ಅಭಿರುಚಿಗಳು ಅಭಿವೃದ್ಧಿಯಾಗಿ, ಮುಂದೆ ಸಮಾಜದಲ್ಲೂ ವಯಸ್ಕ ಜೀವನದಲ್ಲೂ ಅದು ಮುಂದುವರಿಯಬೇಕು. ಭಾವನೆ, ಜ್ಞಾನ–ಇವು ಸಾಮಾಜಿಕವಾದವು. ಭಾಷೆ ಸಾಮಾಜಿಕ ಜೀವನಕ್ಕೆ ಸಾಧನ; ಆದ್ದರಿಂದಲೇ ಅದಕ್ಕೆ ಶಾಲೆಯಲ್ಲಿ ಪ್ರಾಮುಖ್ಯ. ಮಗುವಿನ ಶಕ್ತಿ ಸಾಮರ್ಥ್ಯಗಳು ಸಮಾಜ ಸಂಪರ್ಕದಿಂದ ವೃದ್ಧಿಯಾಗಬೇಕು; ಎಂದ ಮೇಲೆ ನಿಜವಾದ ಶಿಕ್ಷಣ ಸಾಮಾಜಿಕ ಕ್ರಿಯೆ. ಶಾಲೆ ಒಂದು ಸಮಾಜಕ್ಕೆ ಅಗತ್ಯ. ಎಂದರೆ ಶಾಲೆ ಸಾಮಾಜಿಕ ಸ್ವರೂಪದ್ದು. ಅಲ್ಲಿನ ಬೋಧನೆ ಒಂದು ಸಾಮಾಜಿಕ ಕ್ರಿಯೆ; ಪೂರ್ವಜರ ಅನುಭವವನ್ನು ಅರಿತು ಸಾಮಾಜಿಕ ಗುರಿ ಮುಟ್ಟಲು ನೆರವಾಗುವ ಒಂದು ಸಂಸ್ಥೆ. ಮಕ್ಕಳ ಚಟುವಟಿಕೆಗಳೇ ಶಿಕ್ಷಣಕ್ಕೆ ಸಮೂಲವಾದ್ದರಿಂದ ಆ ಚಟುವಟಿಕೆಗಳಿಗೆ ಸಿದ್ಧವಾದಾಗ ಮಾತ್ರ ಅವರ ಆ ಮುಖವಾದ ಶಿಕ್ಷಣ ಸಾಧ್ಯ. ಅವರ ಬೆಳವಣಿಗೆಯಲ್ಲಿ, ಆ ಚಟುವಟಿಕೆಗಳು ಸಂಬಂಧಿಸಿದ ಅಭಿರುಚಿಗಳು ಅಭಿವ್ಯಕ್ತವಾಗುವ ಕಾಲವನ್ನವಲಂಬಿಸಿ ಕಾರ್ಯಮುಖವಾಗಬಲ್ಲವು. ಮೂಲಭೂತ ಅಭಿರುಚಿಗಳಾದ ಸಂಪರ್ಕ (ಪ್ರವಹನ), ಶೋಧನೆ, ರಚನೆ, ಕಲಾತ್ಮಕ ಅಭಿವ್ಯಕ್ತಿ–ಈ ನಾಲ್ಕು ಮೂಲಭೂತ ಅಭಿರುಚಿಗಳನ್ನನುಸರಿಸಿ ಅವರ ಶಿಕ್ಷಣ ಸಾಗಬೇಕು.

ಡ್ಯೂಯಿಯ ದೃಷ್ಟಿಯಲ್ಲಿ ಸಮಾಜ ಒಂದು ಸಜೀವ ಸಮನ್ವಯ ಸಾಮೂಹಿಕ ವ್ಯಕ್ತಿ! ಪ್ರತ್ಯೇಕ ವ್ಯಕ್ತಿಗಳು ಅಲ್ಲಿ ಸುಮ್ಮನೆ ಕೂತಿಲ್ಲ: ಪರಸ್ಪರ ಪರಿಣಾಮ ಬೀರುವಂತೆ ಸೇರಿವೆ. ಸಮಾಜದ ಉದ್ದೇಶ, ಸ್ವರೂಪ, ಆಶೋತ್ತರ, ವ್ಯವಹಾರ ಸಂಬಂಧ–ಇವನ್ನೆಲ್ಲ ಮಗು ಅರಿಯುತ್ತದೆ. ಹೀಗೆ ಸಮಾಜದ ಪರಿಸ್ಥಿತಿಯನ್ನು ಅರಿಯುವುದೇ ಸಾಮಾಜಿಕ ಮನಸ್ಸು. ಸಾಮಾಜಿಕ ವ್ಯವಹಾರ, ಸಂಬಂಧ ಮತ್ತು ಕೂಡಿ ಬಾಳುವುದು–ಇವು ಸಾಮಾಜಿಕ ಜೀವನದ ಪರಿಣಾಮವೆ ಆಗಿವೆ. ಎಂದರೆ ಮಾನವನ ಮನಸ್ಸಿನ ಸ್ವಭಾವ ಮತ್ತು ಜ್ಞಾನ ಈ ಸಾಮಾಜಿಕ ಜೀವನದ ಪರಿಣಾಮ. ಆದ್ದರಿಂದ ಜ್ಞಾನ ಸಾಮಾಜಿಕ ಜೀವನದಿಂದ ಮಹತ್ತ್ವ ಪಡೆದಿದೆ; ಅಂಥ ಸಾಮಾಜಿಕ ವ್ಯವಹಾರದಲ್ಲಿ ಭಾಷೆ ಮುಖ್ಯ ಪಾತ್ರವಹಿಸುತ್ತದೆ. ಆದ್ದರಿಂದಲೇ ಶಿಕ್ಷಣ ಕ್ಷೇತ್ರದಲ್ಲಿ ಅದಕ್ಕೆ ಮುಖ್ಯ ಪಾತ್ರ. ಜೊತೆಗೆ ಮಗುವಿನ ಶಕ್ತಿ ಸಾಮರ್ಥ್ಯಗಳು ಸಮಾಜದ ಸಂಪರ್ಕದಿಂದಲೇ ವೃದ್ಧಿಯಾಗುವುದು; ಸಮಾಜದ ಸಜೀವ ಪರಿಸ್ಥಿತಿಯಿಂದ ಮಾತ್ರ ಇದು ಸಾಧ್ಯ.

ಶಿಕ್ಷಣ ಸಾಮಾಜಿಕ ಪ್ರಕ್ರಿಯೆ; ಶಾಲೆ ಒಂದು ಸಾಮಾಜಿಕ ಸಾಧನ; ಆದ್ದರಿಂದ ಅದು ಸಮಾಜವನ್ನು ಸೂಕ್ಷ್ಮವಾಗಿ ಪ್ರತಿನಿಧಿಸಬೇಕು ಎಂದರೆ ಅಲ್ಲಿನ ಕಲಿವು ಅಪರಿತ ರೀತಿಯದಾಗಿರಬೇಕು. ಸಾಂಪ್ರದಾಯಿಕ ಪಠ್ಯವಿಷಯಗಳು ಸಮಾಜ ಜೀವನದಲ್ಲಿ ಬಳಕೆಯಲ್ಲಿರುವಷ್ಟನ್ನು ಮಾತ್ರ ಕಲಿಸಬೇಕು. ಡ್ಯೂಯಿಯ ಕಾಲದ ವರೆಗೂ ಹರ್ಬಾರ್ಟನ ಆಸಕ್ತವಾದ ಶಿಕ್ಷಣದಲ್ಲಿ ಪ್ರಚಾರದಲ್ಲಿತ್ತು. ಅದನ್ನು ಅವಲಂಬಿಸಿದ್ದ ಫ್ರೊಬೆಲ್ಲನ ಸ್ವಯಂಚಟುವಟಿಕೆಯ ಸಿದ್ಧಾಂತವೂ ಸೇರಿ ಅಂದಿನ ಸಾಂಪ್ರದಾಯಿಕ ಶಿಕ್ಷಣಕ್ಕೆ ಸವಾಲು ಒಡ್ಡಿದ್ದುವು. ಸಂಪ್ರದಾಯ ಶರಣರು Soft education ಎಂದು ಅದನ್ನು ಹೀಯಾಳಿಸಿದರು. ಡ್ಯೂಯಿ ಈ ಗೊಂದಲವನ್ನು ತನ್ನ ನೂತನ ಅಭಿರುಚಿ ಸಿದ್ಧಾಂತದ ಬೆಳಕಿನಲ್ಲಿ ಪರಿಶೀಲಿಸಿ, 'ಎಲ್ಲಿ ಆಸಕ್ತಿ ಇಲ್ಲವೋ ಅಲ್ಲಿ ಸ್ವಯಂ ಆಸಕ್ತಿಯನ್ನು ಮೂಡಿಸಬೇಕು. ಆಸಕ್ತಿಯಿಲ್ಲದೆಡೆ ನೀಡುವ ಕಟು ಬಲುಮೆಯ ಶಿಕ್ಷಣ ಅಥವಾ ಕೃತಕ ಆಸಕ್ತಿಯ ಉದ್ದೀಪನ ಅನೈತಿಕಕಾರ್ಯ" ಎಂದು ಹೇಳಿ, ಅಲ್ಲೂ ನೈಜ ಆಸಕ್ತಿಯನ್ನು ಮೂಡಿಸಲು ಯತ್ನಿಸಬೇಕೆಂದು ಸೂಚಿಸಿ ಆ ವಾದಕ್ಕೆ ಇತಿಶ್ರೀ ಹಾಡಿದ. ಅದಕ್ಕಾಗಿ ಅವನು ಅಭಿಪ್ರೇರಣೆಯ ಸಿದ್ಧಾಂತ (Motivation theory) ಎಂಬ ಹೊಸ ಸಿದ್ಧಾಂತವನ್ನು ಬಳಕೆಗೆ ತಂದ. "ಮಕ್ಕಳ ಚಟುವಟಿಕೆಯಿಂದಲೇ ಎಲ್ಲ ಶಿಕ್ಷಣ ಆಗಬೇಕು. ಅವರಿಗೆ ಯಾವ ಅಂಶದಲ್ಲಿ ಅಭಿರುಚಿಯುಂಟೋ ಆ ವಿಚಾರಗಳಿಗೆ ಶಾಲೆಯಲ್ಲಿ ಅವಕಾಶ ಇರಬೇಕು. ಅಧ್ಯಾಪಕರು ಅವರಿಗೆ ಅಭಿರುಚಿಯಿರುವ ಅಂಶಗಳನ್ನು ಹುಡುಕಿ ಅವುಗಳ ಕಲಿವಿಗೆ ಆ ಮೂಲಕ ಅಭಿಪ್ರೇರಣೆ ದೊರಕಿಸಿಕೊಳ್ಳಬೇಕು", ಎಂದು ಸೂಚಿಸಿದ.

೪ನೆಯ ಅಧ್ಯಾಯದಲ್ಲಿ ಡ್ಯೂಯಿ ೧೮೯೬ರಲ್ಲಿ ಷಿಕಾಗೋದಲ್ಲಿ ತನ್ನ ನೂತನ ತತ್ತ್ವ ಸಿದ್ಧಾಂತಗಳ ಪ್ರಯೋಗಕ್ಕೂ ಪರಿಷ್ಕರಣಕ್ಕೂ ಒಂದು ಪ್ರಾಯೋಗಿಕ ಪಾಠಶಾಲೆಯನ್ನು ಆರಂಭಿಸಿದ ಅಂಶವನ್ನು ಲೇಖಕರು ಸೂಚಿಸಿರುವರು. ಅಲ್ಲಿ ನಿರ್ದಿಷ್ಟ ಪಠ್ಯ ವಿಷಯಗಳಾಗಲಿ ಪೀಠೋಪಕರಣಗಳಾಗಲಿ ಇರಲಿಲ್ಲ. ಆದರೆ ಅಲ್ಲಿ ಎಲ್ಲವನ್ನೂ ಮಗುವಿನ ದೈನಂದಿನ ಜೀವನದ ಚಟುವಟಿಕೆಗಳಿಂದಲೇ ಕಲಿಸುತ್ತಿದ್ದರು. ಇದೇ ಸಕ್ರಿಯಾ ಚಟುವಟಿಕೆ. (Activity programme) ಅನುಭವಗಳ ಪುನರ್ರಚನೆ, ಸ್ವಯಂ ಅಭಿವ್ಯಕ್ತಿ- ಇವು ಅಲ್ಲಿನ ಪ್ರಮುಖ ಲಕ್ಷಣಗಳು. ಅಲ್ಲಿ ನಾಲ್ಕರಿಂದ ೧೪ ವರ್ಷ ವಯೋಮಾನದ ಮಕ್ಕಳಿಗೆ ಪ್ರವೇಶಾವಕಾಶವಿತ್ತು. ಎಂದರೆ ಅವರನ್ನು ತರಗತಿಗಳಾಗಿ ವಿಂಗಡಿಸುತ್ತಿರಲಿಲ್ಲ. ಮನೆ-ಶಾಲೆ, ಶಾಲೆ-ಸಮಾಜ ಈ ಎರಡು ಮುಖವಾದ ಸಮನ್ವಯ ಕಾರ್ಯ ಅಲ್ಲಿ ನಡೆಯುತ್ತಿತ್ತು. ಸಮಾಜ ಜೀವನದಲ್ಲಿ ಕಂಡುಬರುವ ಉದ್ಯಮಗಳ ರೂಪದಲ್ಲಿ ಅಲ್ಲಿನ ಕಾರ್ಯಕ್ರಮ ಏರ್ಪಡುತ್ತಿದ್ದು, ಮಕ್ಕಳು ಅವುಗಳಲ್ಲಿ ಸ್ವಪ್ರೇರಣೆಯಿಂದ ಭಾಗವಹಿಸಿ ತಮ್ಮ ಚಟುವಟಿಕೆಗಳ ಮೂಲಕ ಅನುಭವ-ಜ್ಞಾನ ಸಾಧಿಸುತ್ತಿದ್ದರು. ಮುಂದಿನ ಸಮಾಜಜೀವನಕ್ಕೆ ಆ ಅನುಭವ-ಜ್ಞಾನ ಉಪಯುಕ್ತವೆನಿಸಿದ್ದು ಕ್ರಮಕ್ರಮವಾಗಿ ಅದು ಪುನರ್ರಚನೆಯಾಗಲು ಅನುಕೂಲವೆನಿಸಿತ್ತು. ಎಂದರೆ ಅಲ್ಲಿನ ಶಿಕ್ಷಣ ಸಮಸ್ಯೆಗಳನ್ನು (ಉದ್ಯಮ. ಯೋಜನೆ) ಪರಿಹರಿಸುವ ಕಾರ್ಯಗಳನ್ನೊಳಗೊಂಡಿತು. ಆ ಕಾರ್ಯದಲ್ಲಿ ಅನುಸರಿಸುತ್ತಿದ್ದ ಬೋಧನ ಕ್ರಮ ಹರ್ಬಾರ್ಟನ ಪಂಚ ಸೋಪಾನದ ಪಾಠಕ್ರಮವನ್ನು ಸ್ಥೂಲವಾಗಿ ಅನುಸರಿಸಿತ್ತು. ಚಟುವಟಿಕೆ. ಸಮಸ್ಯೆಯ ಗ್ರಹಿಕೆ. ದತ್ತಾಂಶ ಸಂಗ್ರಹ. ಪ್ರಾಕ್ಕಲ್ಪನೆ. ಪರೀಕ್ಷಣ—ಈ ಐದು ಹಂತಗಳನ್ನು ಅದಕ್ಕಾಗಿ ಅಳವಡಿಸಿಕೊಳ್ಳಲಾಗಿತ್ತು. ಹರ್ಬಾರ್ಟನ ಕ್ರಮದಲ್ಲಾದರೆ ಪೂರ್ವಸಿದ್ಧತೆ. ವಿಷಯ ನಿರೂಪಣೆ. ತುಲನೆ. ಸಾಮಾನ್ಯೀಕರಣ. ಅನ್ವಯೀಕರಣ—ಈ ಐದು ಹಂತಗಳಿರುತ್ತಿದ್ದುವು. ಡ್ಯೂಯಿ. ಫ್ರೊಬೆಲ್-ಇಬ್ಬರೂ ಅಭಿರುಚಿ ಸಿದ್ಧಾಂತವನ್ನು ಒಪ್ಪಿದ್ದರು. ವೈಯಕ್ತಿಕ ಭಿನ್ನತೆ, ಶಿಶು ಜೀವನದ ವ್ಯಾಸಂಗದ ಅಗತ್ಯ-ಇವು ಶಿಕ್ಷಣದ ಪ್ರಗತಿಗೆ ಅಗತ್ಯವೆಂದೂ ಒಪ್ಪಿದ್ದರು. ಆದರೆ ಡ್ಯೂಯಿ ಫ್ರೊಬೆಲ್ಲನ ರಹಸ್ಯ ಸಿದ್ಧಾಂತವನ್ನಾಗಲಿ ಆಧ್ಯಾತ್ಮಿಕ ಹಾಗೂ ಸಾಂಕೇತಿಕ ಅಂಶಗಳನ್ನಾಗಲಿ ಮಕ್ಕಳ ಆಟಿಕೆಗಳಿಗೆ ಅಂಟಿಸುವುದನ್ನು ಒಪ್ಪಲಿಲ್ಲ. ಅದು ಅವನ ವಾಸ್ತವ ಹಾಗೂ ಕ್ರಿಯಾವಾದಗಳಿಗೆ ಒಪ್ಪದ ಅಂಶಗಳಾಗಿದ್ದುವು.

ಲೇಖಕರು. ಹರ್ಬಾರ್ಟ್ ಮತ್ತು ಫ್ರೊಬೆಲ್ಲರ ತತ್ತ್ವಗಳು ಡ್ಯೂಯಿಯ ತತ್ತ್ವಚಿಂತನೆಯನ್ನು ಪೋಷಿಸಿರುವ ಅಂಶವನ್ನೂ ಅವರವರಿಗೆ ಇದ್ದ ಸೈದ್ಧಾಂತಿಕ ಭೇದವನ್ನೂ ಸೂಕ್ಷ್ಮವಾಗಿ ವಿವರಿಸಿರುವರು.

ಕೊನೆಯ ಅಧ್ಯಾಯದಲ್ಲಿ ಲೇಖಕರು ಅಮೆರಿಕದಲ್ಲಿ ಹಾಗೂ ಇತರ ದೇಶಗಳಲ್ಲಿ ಸಂಪ್ರದಾಯಬದ್ಧ ಶಿಕ್ಷಣ ಕ್ಷೇತ್ರದಲ್ಲಿ ಡ್ಯೂಯಿ ನೂತನವಾಗಿ ಎಬ್ಬಿಸಿದ ಬಿರುಗಾಳಿಯನ್ನೂ ಸಮಕಾಲೀನ ತತ್ತ್ವಚಿಂತಕರು ಅವನ ವಾದವನ್ನು ವಿಮರ್ಶಿಸಿ ಟೀಕಿಸಿರುವ ಅಂಶವನ್ನೂ ಪರಿಶೀಲಿಸಿರುವರು. ಅವನ ವಾದವನ್ನು ಕ್ರಿಯಾವಾದಿಗಳು ಅಥವಾ ಫಲಪ್ರಮಾಣವಾದಿಗಳು (ಲೌಕಿಕವಾದಿಗಳು) ಮತ್ತು ಪ್ರಯೋಗವಾದಿಗಳು ಸ್ವಾಗತಿಸಿದರು. ಆದರೆ ಧ್ಯೇಯವಾದಿಗಳೂ ವಾಸ್ತವವಾದಿಗಳೂ ನವೀನ ವಿದ್ಯಾವಾದಿಗಳೂ ಅದನ್ನು ಬಲವಾಗಿ ಟೀಕಿಸಿದರು. ವಾಸ್ತವವಾದಿಗಳು ಡ್ಯೂಯಿಯ ಅಭಿರುಚಿ ಸಿದ್ಧಾಂತವನ್ನು ಒಪ್ಪದೆ. "ಮಕ್ಕಳಿಗೆ ಅಭಿರುಚಿ ಇರಲಿ ಇಲ್ಲದಿರಲಿ ಜನಾಂಗದ ಸಂಸ್ಕೃತಿ ಸಂಪತ್ತನ್ನು ಅವರು ಅರಿಯಲೇ ಬೇಕು. ಅದಕ್ಕೆ ಅಗತ್ಯವಾದರೆ ಕೃತಕ ಆಸಕ್ತಿಯನ್ನು ಮೂಡಿಸಬೇಕು." ಎಂದು ವಾದಿಸಿದರು. ಮಕ್ಕಳ ಸ್ವಾಭಾವಿಕ ಆಸಕ್ತಿಗೆ ಬಿಟ್ಟರೆ ಅದು ಸಾಧ್ಯವಾಗದೆಂದೂ ಶಾಲೆ ಶಿಸ್ತಿನ ಕಡಿವಾಣವನ್ನು ಹಾಕಬೇಕೆಂದೂ ಒತ್ತಾಯಪಡಿಸಿದರು. ಧ್ಯೇಯವಾದಿಗಳು ಶಿಕ್ಷಣದಲ್ಲಿ ಮಗುವೇ ಕೇಂದ್ರವೆಂಬುದನ್ನು ಒಪ್ಪದೆ ದೇವರೇ ಕೇಂದ್ರವೆಂದು ವಾದಿಸಿ "ಶಿಕ್ಷಣದ ಗುರಿ ಸಾಮಾಜಿಕವಲ್ಲ: ಅನಂತ ರೂಪದ ಸತ್ಯದೆಡೆಗೆ ಸಾಗುವುದು ಅಗತ್ಯ". ಎಂದರು. ಸತ್ಯ ಡ್ಯೂಯಿಗೆ ಅಂತಿಮ ರೂಪದ್ದಲ್ಲ. ಧ್ಯೇಯವಾದಿಗಳಿಗೆ ಅದು ಅಂತಿಮ ರೂಪದ್ದೆನಿಸಿದ್ದುದರಿಂದ ಅವರ ಭಾಗಕ್ಕೆ ಬುದ್ಧಿ ಕೇವಲ ವ್ಯಕ್ತಿ ಸಂಬಂಧಿ ಮಾತ್ರವಲ್ಲ ; ವಿಶ್ವಾತ್ಮನ ಅಂಶವಾಗಿತ್ತು. ಶಿಕ್ಷಣದಲ್ಲಿ ಅಭಿರುಚಿ ಮತ್ತು ಪ್ರಯತ್ನ ಪೂರಕವೆಂಬುದನ್ನು ಅವರು ತಿರಸ್ಕರಿಸಿ ಅವರು ಶಿಕ್ಷಣದಲ್ಲಿ ಪ್ರಯತ್ನ ಮತ್ತು ಶಿಸ್ತಿಗೆ ಮಹತ್ವ ನೀಡಿರುವರು. ಕೆಲ ಅಂಶ ಮಕ್ಕಳಿಗೆ ಕಹಿಯಾದರೂ ಕಲಿಸಲೇಬೇಕು. ಆಧ್ಯಾತ್ಮಿಕ, ಧಾರ್ಮಿಕ ಮತ್ತು ಸೌಂದರ್ಯೋಪಾಸಕ ಅಂಶಗಳನ್ನು

ಡ್ಯೂಯಿಯ ಸಿದ್ಧಾಂತ ಪುರಸ್ಕರಿಸಿರಲಿಲ್ಲ. ಏಕೆಂದರೆ ಅವು ಸಮಾಜದಲ್ಲಿ ಉತ್ಪಾದಕ ಅಂಶವಾಗಿರಲಿಲ್ಲ. ಧ್ಯೇಯವಾದಿಗಳು ವ್ಯಕ್ತಿಯ ಶಿಕ್ಷಣಕ್ಕೆ ವೃತ್ತಿಯ ಬಣ್ಣ ಕೊಡುವುದನ್ನು ವಿರೋಧಿಸಿ ವ್ಯಕ್ತಿಯ ಪರಿಪೂರ್ಣ ಬೆಳವಣಿಗೆಗೆ ಮಾತ್ರ ಗಮನ ಕೊಡುವ ಅಗತ್ಯವನ್ನು ಎತ್ತಿ ಹಿಡಿದು ಸ್ವಂತಂತ್ರ ವ್ಯಕ್ತಿತ್ವ ಬೆಳೆಸಬೇಕೆಂದು ವಾದಿಸಿದರು. ವ್ಯಕ್ತಿಯನ್ನು ಘನವಾದ ಸತ್ಯದ ಕಡೆ ನಡೆಸುವುದೇ ಶಿಕ್ಷಣದ ಅಂತಿಮ ಧ್ಯೇಯವೆಂದು ಹೇಳಿ ಡ್ಯೂಯಿಯ ಅತ್ಯಾಸನ್ನ ಗುರಿಗಳ ಸಿದ್ಧಾಂತವನ್ನು ಅಲ್ಲಗಳೆದಿರುವರು. ಕ್ಯಾಥೊಲಿಕ್ ಪಂಥದವರು ಶಿಕ್ಷಣದ ಗುರಿ ಅಧ್ಯಾತ್ಮವೆಂದು ಸೂಚಿಸಿ ಡ್ಯೂಯಿಯ ವಾದವನ್ನು ಖಂಡಿಸಿರುವರು. ಅವರು ಮಾನವನ ಆತ್ಮಶಾಂತಿಗೆ ನೆರವಾಗುವ ಧಾರ್ಮಿಕ ಶಿಕ್ಷಣ ಅಗತ್ಯವೆನ್ನುವರು. ಧಾರ್ಮಿಕ ಶಿಕ್ಷಣಕ್ಕೆ ಬೆನ್ನು ತಿರುಗಿಸಿದ್ದ ಡ್ಯೂಯಿಯ ಸಿದ್ಧಾಂತವನ್ನು ಅವರೂ ಬಲವಾಗಿ ಖಂಡಿಸಿದರು.

ನವೀನ ವಿದ್ಯಾವಾದಿಗಳೂ ಡ್ಯೂಯಿಯ ಸಿದ್ಧಾಂತವನ್ನು ಪ್ರತಿಭಟಿಸಿರುವರು. ಶಿಕ್ಷಣ ವ್ಯಕ್ತಿಯಲ್ಲಿ ಸದ್ಗುಣವನ್ನು ಬೆಳೆಸುವ ಗುರಿ ಹೊಂದಿರಬೇಕೆಂದು ವಾದಿಸಿ ವ್ಯಕ್ತಿಗೆ ತಾನು ಕಲಿಯಬೇಕಾದ ಅಂಶವನ್ನು ಅವನ ಅಪ್ರಬುದ್ಧ ಇಚ್ಛೆಗೇ ಬಿಡಕೂಡದು ಎಂದು ಹೇಳಿ ವ್ಯಕ್ತಿಯ ಅಭಿರುಚಿ ಸಿದ್ಧಾಂತವನ್ನೂ ಬುದ್ಧಿಯ ಸಾಮಾಜಿಕ ಸಿದ್ಧಾಂತವನ್ನೂ ಟೀಕಿಸಿರುವನು.

ಒಟ್ಟಿನಲ್ಲಿ ಡ್ಯೂಯಿಯ ಸಿದ್ಧಾಂತ ಹೊಸ ದೃಷ್ಟಿಯನ್ನು ಹರಡಿದ್ದಲ್ಲದೆ ಹೊಸಹೊಸ ಆಲೋಚನೆಗೂ ಅವಕಾಶ ಮಾಡಿಕೊಟ್ಟಿತು. ಅದರಲ್ಲಿ ಭಿನ್ನ ಪಂಥದವರು ಒಪ್ಪದ ಅಂಶಗಳಿರ ಬಹುದು. ಆದರೆ ಆ ಸಿದ್ಧಾಂತದ ಸ್ವೋಪಜ್ಞತೆಯನ್ನೂ ನಾವೀನ್ಯವನ್ನೂ ಎಲ್ಲರೂ ಮನ್ನಿಸುವರು. ತಮ್ಮ ತತ್ವದೃಷ್ಟಿಯನ್ನೂ ಶಿಕ್ಷಣಕ್ಕೆ ಸಂಬಂಧಿಸಿದ ಹೊಸ ಜ್ಞಾನವನ್ನೂ ಕುರಿತ ಅನೇಕ ಕೃತಿಗಳನು ಡ್ಯೂಯಿ ಪ್ರಕಟಿಸಿದ್ದಾನೆ. ಅವುಗಳಲ್ಲಿ **How We Think, The School and Society, Democracy and Education, 'Interest and Effort in Education** ಮತ್ತು **Human Nature and Conduct** ಎಂಬುವು ಮುಖ್ಯವಾದವು.

ಟಿ. ಕೆ. ಹಿರೇಗಂಗೆಯವರು ಈ ಪುಸ್ತಕದಲ್ಲಿ ಡ್ಯೂಯಿಯ ಸಿದ್ಧಾಂತದಂಥ ಬಹು ಜಟಿಲವೂ ಪಾರಿಭಾಷಿಕವೂ ಆದ ವಿಷಯವನ್ನು ತಿಳಿಯಾದ ಮಾತಿನಲ್ಲಿ ಸ್ಪಷ್ಟವಾಗಿ ಪರಿಚಯ ಮಾಡಿಕೊಡುವ ಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ಈ ವಿಷಯವನ್ನು ಕುರಿತ ಕನ್ನಡ ಕೃತಿಗಳಲ್ಲಿ ಇದಕ್ಕೇ ಅಗ್ರಸ್ಥಾನ. ಲೇಖಕರು ಶಿಕ್ಷಣದ ಬಗ್ಗೆ ಇನ್ನೂ ಅನೇಕ ಕೃತಿಗಳನ್ನು ರಚಿಸಿದರೆ ಕನ್ನಡಿಗರಿಗೆ ಮಹದುಪಕಾರ ವಾಗುತ್ತದೆ. ಶಿಕ್ಷಣಶಾಸ್ತ್ರವನ್ನು ಬರೆಯತಕ್ಕವರಲ್ಲಿ ಇಂಥ ಉತ್ತಮ ಲೇಖಕರಿರುವುದು ಹೆಮ್ಮೆಯ ವಿಷಯ.

—**ಡಾ. ಎನ್. ಎಸ್. ವೀರಪ್ಪ**

ಐಹೊಳೆ: ಸಂಸ್ಕೃತಿ ಮತ್ತು ಕಲೆ: ಲೇ: ಎ. ಎಂ. ಅಣ್ಣಿಗೇರಿ; ಪ್ರ: ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ; ಪುಟಗಳು: ೧೬+೧೮೪; ಚಿತ್ರಗಳು: ೨೨; ಬೆಲೆ: ಸಾಮಾನ್ಯ ಪ್ರತಿ ರೂ.೧೦

ಶ್ರೀ ಅಣ್ಣಿಗೇರಿಯವರು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಹಲವಾರು ವರ್ಷಗಳು ಸಂಶೋಧಕರಾಗಿ ದುಡಿದು ಕರ್ನಾಟಕ ಶಾಸನಗಳ ಒಂದು ಸಂಪುಟವನ್ನು ಸಹ ಅಲ್ಲಿದ್ದಾಗ ಪ್ರಕಟಿಸಿದ್ದಾರೆ. ಆ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದ ಬಳಿಕ ಕರ್ನಾಟಕ ಸರಕಾರದ ಪುರಾತತ್ವ ಇಲಾಖೆಯಲ್ಲಿ ಸಂಶೋಧನ ಸಹಾಯಕರಾಗಿ ಕೆಲಸಮಾಡಿ ಉತ್ತರ ಕರ್ನಾಟಕದ ಹಲವಾರು ಭಾಗಗಳ ಸಂಪೂರ್ಣ ಪರಿಚಯ ಪಡೆದಿದ್ದಾರೆ. ಇಂತಹವರಿಗೆ ಐಹೊಳೆಯನ್ನು ಕುರಿತು ವಿಸ್ತಾರವಾಗಿ ಬರೆಯಬೇಕೆಂಬ ಹೆಬ್ಬಯಕೆ ೧೦–೧೫ ವರ್ಷಗಳಿಂದ ಇದ್ದುದು ಸಹಜವಾಗಿಯೇ ಇದೆ. ಅವರೇ ಹೇಳಿರುವಂತೆ ಐಹೊಳೆ ಯನ್ನು ಕುರಿತಾದ ವಿಸ್ತಾರವಾದ ಗ್ರಂಥ ದಿವಂಗತ ಆರ್. ಎಸ್. ಗುಪ್ತರವರ **Art and Architecture of Aihole** ಈ ಗ್ರಂಥದಲ್ಲಿ ಹಲವಾರು ನ್ಯೂನತೆಗಳು ಕಾಣಿಸಿಕೊಂಡಿವೆ. ಇದು ಆ ಗ್ರಂಥಕರ್ತರ ದೃಷ್ಟಿಕೋನದ ಪರಿಣಾಮವೆಂದೂ ಹೇಳಬಹುದು. ಚಾಲುಕ್ಯ ಶಿಲ್ಪ ಮತ್ತು ಶಾಸನಗಳನ್ನು ವಿಶೇಷವಾಗಿ ಅಭ್ಯಾಸಮಾಡಿದ್ದು ಹೆಚ್ಚಿನ ಸಂಗತಿಗಳನ್ನು ಹೇಳಬಲ್ಲೆನೆಂಬ ವಿಶ್ವಾಸ

ವಿದ್ದುದರಿಂದ ಈ ಕಾರ್ಯದಲ್ಲಿ ತೊಡಗಿದುದಾಗಿಯೂ ಅಣ್ಣಿಗೇರಿಯವರು ಹೇಳಿಕೊಂಡಿದ್ದಾರೆ. ಇದರಲ್ಲಿ ಅವರು ಬಹುಮಟ್ಟಿಗೆ ಯಶಸ್ವಿಗಳಾಗಿದ್ದಾರೆ ಎಂಬುದು ನಿಜ. ಐಹೊಳೆಯನ್ನು ಕುರಿತು ಕನ್ನಡದಲ್ಲಿ ಇನ್ನೊಂದು ಕಿರಿದಾದ ಪುಸ್ತಕ–ಐ.ಬಿ.ಹೆಚ್‌ರವರ ಪ್ರಕಾಶನ–ಈ ಪುಸ್ತಕ ಪ್ರಕಟಗೊಂಡ ಸಮಯಕ್ಕೇ ಹೊರಬಂದಿತು. ಇದನ್ನು ಬರೆದ ಪ್ರಸ್ತುತ ವಿಮರ್ಶಕನಿಗಾಗಲೀ ಅಣ್ಣಿಗೇರಿಯವರಿಗಾಗಲೀ ಈ ವಿಷಯ ಪರಸ್ಪರ ತಿಳಿದಿರಲಿಲ್ಲ.

ಅಣ್ಣಿಗೇರಿಯವರ ಈ ಗ್ರಂಥ ಹೆಚ್ಚು ವಿಸ್ತಾರವಾದದ್ದಾಗಿದೆ. ಐಹೊಳೆಯ ದೇವಾಲಯಗಳಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಲೇಖಕರು ಇದರಲ್ಲಿ ನೀಡಿದ್ದಾರೆ. ಅಲ್ಲಿನ ವಾಸ್ತುಶಿಲ್ಪ ಮೂರ್ತಿ ಶಿಲ್ಪ ಹಾಗೂ ಶಾಸನಗಳನ್ನು ಕುರಿತು ದೀರ್ಘವಾದ ವಿವರಣೆಗಳಿವೆ. ಇದರಲ್ಲಿನ ೨೨ ಚಿತ್ರಗಳು ಈ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ. ಆದರೆ ಒಂದೆರಡು ವಿಷಯಗಳಲ್ಲಿ ಲೇಖಕರು ಹೇಳಿರುವ ಮಾತುಗಳು ಸಂದೇಹಾಸ್ಪದಗಳಾಗಿವೆ. ಐಹೊಳೆ ಗ್ರಾಮದ ಸಾಮಾನ್ಯ ವಿವರಣೆ ನೀಡುವ ಸಂದರ್ಭದಲ್ಲಿ (ಪು. ೧) "ಅಯ್ಯಾವೊಳೆ ಎಂಬುದನ್ನು ಸಂಸ್ಕೃತದಲ್ಲಿ ಅಹಿಹೊಳೆ ಮಾಡಿ ಅದಕ್ಕೆ ಅಹಿಚ್ಛತ್ರಪುರವೆಂದು ಕರೆದಿದ್ದಾರೆ." ಎನ್ನುತ್ತಾರೆ ಲೇಖಕರು. ಇದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ಪ್ರಸ್ತಾಪಿಸಿಲ್ಲ. ಈ ವಿವರಣೆ ನೀಡಿದವರು ಯಾರು ಎಂಬುದನ್ನು ಸೂಚಿಸಬಹುದಿತ್ತು.. ಅಯ್ಯಾವೊಳೆಯ ಸಂಸ್ಕೃತರೂಪ ಶಾಸನಗಳಲ್ಲಿ ಹೇಳಿಧಂತೆಯೇ ಆರ್ಯಪುರ ಎಂಬುದು ಸರಿ.

ಗುಡಿಗಳ ಊರು ಎನಿಸಿದ ಇಲ್ಲಿ ಇಷ್ಟು ಗುಡಿಗಳನ್ನು ಕಟ್ಟಲು ಕಾರಣಗಳನ್ನು ಸೂಚಿಸುವಾಗ (ಪು. ೧೭) ಇದು ಧಾರ್ಮಿಕ ಸ್ಥಾನವಾಗಿದ್ದು, ಧಾರ್ಮಿಕ ಜೀವನದಲ್ಲಿ ಆಸಕ್ತಿಯುಳ್ಳ ಶ್ರೀಮಂತ ಪಟ್ಟಣವಾಗಿತ್ತು. ಅಯ್ಯಾವೊಳೆ ಸಂಘದವರು ತಮ್ಮ ಊರಿನಲ್ಲಿ ಹಲವು ಅದ್ಭುತ ಗುಡಿಗಳನ್ನು ಕಟ್ಟಿರಬೇಕು, ಎಂದಿದ್ದಾರೆ. ಆದರೆ ಇದು ಅಷ್ಟು ಸಮರ್ಪಕವಾದ ಕಾರಣವಲ್ಲ. ಇಂತಹ ಹಲವಾರು ಧಾರ್ಮಿಕ ಸ್ಥಾನಗಳು ಕರ್ನಾಟಕದಲ್ಲಿವೆ. ಅಲ್ಲೆಲ್ಲಾ ನೂರಕ್ಕೂ ಮೀರಿದ ಸಣ್ಣ, ದೊಡ್ಡ, ಭಿನ್ನ ಶೈಲಿಗಳ ದೇವಾಲಯಗಳು ಕಾಣುವುದಿಲ್ಲವಲ್ಲ? ವಾಸ್ತವಿಕವಾಗಿ ಐಹೊಳೆಯಲ್ಲಿ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಕಲಾಶಾಲೆಯೊಂದಿದ್ದಿರಬಹುದು. ಜ್ಯೋತಿರ್ಲಿಂಗ ಗುಡಿಗಳ ಗುಂಪಿನಲ್ಲಿ ಈಗ ಕೇವಲ ಎರಡು ಮಂಟಪಗಳ ರೂಪದಲ್ಲಿರುವ ಕಟ್ಟಡಗಳು ಇಲ್ಲಿನ ಅತ್ಯಂತ ಪ್ರಾಚೀನ ಕಟ್ಟಡಗಳೆಂದೂ ಶ್ರೀ ಸೌಂದರರಾಜನ್ ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿನ ಶಾಸನಗಳಲ್ಲಿ ಕಂಡುಬರುವ ಹಲವಾರು ಹೆಸರುಗಳು ಶಿಲ್ಪಿಗಳದ್ದಾಗಿರಬಹುದೆಂದು ಊಹಿಸಲಾಗಿದೆ. ಇಲ್ಲಿ ರೂಪಿಸಲಾದ ಶೈಲಿಗಳನ್ನೇ ವಿಸ್ತರಿಸಿ ಪಟ್ಟದಕಲ್ಲು, ಮಹಾಕೂಟ ಮುಂತಾದ ಕಡೆಗಳಲ್ಲಿ ದೇವಾಲಯಗಳನ್ನು ಕಟ್ಟಿರುವುದನ್ನು ಗಮನಿಸಿದರೆ ಇದು ಒಂದು ಪ್ರಾಯೋಗಿಕ ಕಲಾಶಾಲೆಯಾಗಿದ್ದಿರಬಹುದೆನಿಸುತ್ತದೆ.

ಮೂರ್ತಿಶಿಲ್ಪಗಳನ್ನು ಕುರಿತು ಹೇಳುವಾಗ ಚಾಲುಕ್ಯರ ಕಾಲದಲ್ಲಿ ಮೂರ್ತಿಗಳನ್ನು ಎರಡು ಪ್ರಕಾರವಾಗಿ ತಯಾರಿಸುತ್ತಿದ್ದರು. ಒಂದು, ಬೇರೆ ಸ್ಥಳದಲ್ಲಿ ಅವುಗಳನ್ನು ಕಟೆದು ಗೋಡೆಗಳಲ್ಲಿ ತಂದು ಇಡುವುದು. ಮತ್ತೊಂದು, ಗೋಡೆಯಲ್ಲಿ ಕಟ್ಟಿದ ಕಲ್ಲನ್ನೇ ಹೊಡೆದು ಮೂರ್ತಿಗಳನ್ನು ತಯಾರಿಸುವುದು–ಎಂದಿದ್ದಾರೆ. ಆದರೆ ಈ ಪದ್ಧತಿ ಚಾಲುಕ್ಯರ ಕಾಲದ್ದೇ ಏಕಾಗಬೇಕು? ಈ ಗ್ರಂಥದ ಹೆಸರಿನ ಬಗ್ಗೆ ಒಂದು ಸಂದೇಹ ಉಂಟಾಗುತ್ತದೆ. ಸಾಂಸ್ಕೃತಿಕ ಹಿನ್ನೆಲೆ ಎಂಬ ಶೀರ್ಷಿಕೆಯಡಿಯಲ್ಲಿ (ಪು. ೮–೧೫) ಇದೊಂದು ಮಹಾಗ್ರಹಾರವಾಗಿತ್ತು, ಇಲ್ಲಿ ಅಯ್ನೂರ್ವರು ಮಹಾಜನರಿದ್ದರು. ಗೋಸಹಸ್ರ ದಾನಗಳನ್ನು ಮಾಡಲಾಗುತ್ತಿತ್ತು ಎಂಬುದನ್ನು ಹೊರಡುಪಡಿಸಿದ್ದಾರೆ. ಹೆಚ್ಚಾಗಿ ಸಂಸ್ಕೃತಿಯ ಪ್ರಸ್ತಾಪವೇ ಬರುವುದಿಲ್ಲ. ಇವು ಐಹೊಳೆಗೆ ವಿಶಿಷ್ಟವಾದ ವಿಷಯಗಳಲ್ಲ.

ಇವು ವಿಷಯಗಳನ್ನು ಅರ್ಥೈಸುವುದರಲ್ಲಿ ವಿಮರ್ಶಕನಿಗೆ ಕಂಡುಬಂದ ಸಂದೇಹಗಳು. ಈ ಅಭಿಪ್ರಾಯಗಳು ಹೇಗಿದ್ದರೂ, ಇತಿಹಾಸದ ವಿದ್ಯಾರ್ಥಿಗಳಿಗೆ ಇದೊಂದು ಪೂರಕ ಗ್ರಂಥವಷ್ಟೇ ಅಲ್ಲದೆ, ಜನಸಾಮಾನ್ಯರಿಗೂ ಇದು ಉಪಯುಕ್ತವೆನ್ನುವುದರಲ್ಲಿ ಸಂದೇಹವಿಲ್ಲ. ಇದಕ್ಕಾಗಿ ಅಣ್ಣಿಗೇರಿಯವರು ಅಭಿನಂದನಾರ್ಹರು.

—ಡಾ. ಬಾ. ರಾ. ಗೋಪಾಲ್

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್
' ಪ್ರಸಾರಾಂಗ '
ಮಾನಸ ಗಂಗೋತ್ರಿ, ಮೈಸೂರು–೫೭೦೦೬